JJ-S1 SKS
(B) 25233

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ

13TH SESSION

ಸಂಪುಟ - ೭ (ಕ್ರಮಾಂಕ - ೨)

Volume - 7 (No. 2)

(೧೪ ಜುಲೈ ೨೦೦೯)

(14th July 2009)

ಭಾಗ-೨

Part-II

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

(B) 25233

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ

13TH SESSION

ಸಂಪುಟ – ೭ (ಕ್ರಮಾಂಕ – ೨)

Volume - 7 (No. 2)

(೧೪ ಜುಲೈ ೨೦೦೯)

(14th July 2009)

ಭಾಗ–೨

Part-II

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನ ಸಭೆ ಮೂರನೇ ಅಧಿವೇಶನ
ಶ್ರೀ ಜಗದೀಶ್ ಶೆಟ್ಟರ್
ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ
(ಹದಿಮೂರನೇ ವಿಧಾನಸಭೆ-ಮೂರನೇ ಅಧಿವೇಶನ)
ಮಂಗಳವಾರ 14 ನೇ ಜುಲೈ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ/ಮಧ್ಯಾಹ್ನ 11-00 ಗಂಟೆಗೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು/ಉಪಾಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು
ಪೀಠವನ್ನು ಅಲಂಕರಿಸಿದ್ದರು

ಮಂಗಳವಾರ 14-07-2009

ವಿಷಯಾನುಕ್ರಮಣಿಕೆ

1. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು** **573-580**

ವಿಷಯ: ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬೇಡಿಕೆ ಸಮೀಕ್ಷೆ ನಡೆಸದೇ ಎಕರೆಗೆ 50 ಲಕ್ಷ ರೂಪಾಯಿಗಳನ್ನು ನೀಡಿ ಜಮೀನು ಖರೀದಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಬಿ.ಎಸ್.ಯಡಿಯೂರಪ್ಪ
ಶ್ರೀ ಸಿದ್ದರಾಮಯ್ಯ
ಶ್ರೀ ಎಸ್. ಸುರೇಶ್ ಕುಮಾರ್

2. **ಪ್ರಶ್ನೋತ್ತರ** **580-644**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಶ್ರೀ ಸುನಿಲ್ ವಿ.ಹೆಗಡೆ (ಪ್ರಶ್ನೆ ಸಂಖ್ಯೆ 387)
ಶ್ರೀ ದಿನಕರ್ ಕೇಶವ ಶೆಟ್ಟಿ (ಪ್ರಶ್ನೆ ಸಂಖ್ಯೆ 489)
ಶ್ರೀ ಎ.ಮಂಜು (ಪ್ರಶ್ನೆ ಸಂಖ್ಯೆ 479)
ಶ್ರೀ ಎನ್.ಸಂಪಂಗಿ (ಪ್ರಶ್ನೆ ಸಂಖ್ಯೆ 361)
ಶ್ರೀ ಕೆ.ಜೆ.ಜಾರ್ಜ್ (ಪ್ರಶ್ನೆ ಸಂಖ್ಯೆ 54)
ಶ್ರೀಮತಿ ಕಲ್ಪನ ಸಿದ್ದರಾಜು (ಪ್ರಶ್ನೆ ಸಂಖ್ಯೆ 380)
ಶ್ರೀ ಬಿ.ಕೆ.ಸಂಗಮೇಶ್ವರ್ (ಪ್ರಶ್ನೆ ಸಂಖ್ಯೆ 599)
ಶ್ರೀ ಹೆಚ್.ಸಿ.ಬಾಲಕೃಷ್ಣ (ಪ್ರಶ್ನೆ ಸಂಖ್ಯೆ 487)
ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಪ್ರಶ್ನೆ ಸಂಖ್ಯೆ 369)
ಶ್ರೀ ಸುಭಾಷ್ ಆರ್. ಗುತ್ತೇದಾರ್ (ಪ್ರಶ್ನೆ ಸಂಖ್ಯೆ 227)
ಶ್ರೀ ತಿಪ್ಪೇಸ್ವಾಮಿ (ಪ್ರಶ್ನೆ ಸಂಖ್ಯೆ 203)
ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಪ್ರಶ್ನೆ ಸಂಖ್ಯೆ 491)
ಶ್ರೀ ಎಸ್.ಆರ್.ಮಹೇಶ್ (ಪ್ರಶ್ನೆ ಸಂಖ್ಯೆ 207)
ಶ್ರೀ ಎನ್.ಯೋಗೀಶ್ ಭಟ್ (ಪ್ರಶ್ನೆ ಸಂಖ್ಯೆ 382)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (ಅನುಬಂಧ)

3. **ಸಭೆಯ ಮುಂದಿಡಲಾದ ಕಾಗದ ಪತ್ರಗಳು** **644-660**

4. ಚುನಾವಣಾ ಪ್ರಸ್ತಾವ 660–663
ವಿಷಯ: ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ.

5. ನಿಲುವಳಿ ಸೂಚನೆ–ಮಂಡನೆಗೆ ಅನುಮತಿ ಕೋರಿಕೆ 663–688
ವಿಷಯ: ಕರ್ನಾಟಕ ಗೃಹ ಮಂಡಳಿಯ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬೇಡಿಕೆ ಸಮೀಕ್ಷೆ ನಡೆಸದೇ ಎಕರೆಗೆ 50 ಲಕ್ಷ ರೂಪಾಯಿಗಳನ್ನು ನೀಡಿ ಜಮೀನು ಖರೀದಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ಬಗ್ಗೆ.
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಎಂ.ಶ್ರೀನಿವಾಸ್
ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಬಿ.ಎಸ್.ಯಡಿಯೂರಪ್ಪ
(ಮಾನ್ಯ ಮುಖ್ಯಮಂತ್ರಿಗಳು)
ಶ್ರೀ ಬಸವರಾಜ ಬೊಮ್ಮಾಯಿ
ಶ್ರೀ ಸಿದ್ದರಾಮಯ್ಯ
ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು
ಶ್ರೀ ಆರ್.ಅಶೋಕ್
ಶ್ರೀ ಕೆ.ಎಸ್.ಈಶ್ವರಪ್ಪ
ಶ್ರೀ ಡಿ.ಕೆ. ಶಿವಕುಮಾರ್
ಶ್ರೀ ಎಸ್.ಸುರೇಶ್ ಕುಮಾರ್
ಶ್ರೀ ವಿ.ಸೋಮಣ್ಣ
ಶ್ರೀ ಸಿ.ಎಸ್.ಪುಟ್ಟೇಗೌಡ
(ನಿಯಮ 69ರ ಅಡಿ ಪರಿವರ್ತಿಸಿ ಚರ್ಚೆಗೆ ಅವಕಾಶ ನೀಡಲಾಯಿತು)

6. <u>ನಿಯಮ 69ರ ಅಡಿ ಚರ್ಚೆ</u> 688–757
ವಿಷಯ: ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎಕರೆಗೆ 50 ಲಕ್ಷ ರೂಪಾಯಿಗಳನ್ನು ನೀಡಿ ಜಮೀನು ಖರೀದಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ.
ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಸಿದ್ದರಾಮಯ್ಯ
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಬಂಡೆಪ್ಪ ಕಾಶೆಂಪೂರ್
ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮುಜರಾಯಿ ಸಚಿವರು)
ಶ್ರೀ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು.

7. ಅನುಬಂಧ 757–1213

1. ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ : ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನಲ್ಲಿ ಬೇಡಿಕೆ ಸಮೀಕ್ಷೆ ನಡೆಸದೇ ಎಕರೆಗೆ 50 ಲಕ್ಷ ರೂ.ಗಳನ್ನೂ ನೀಡಿ ಜಮೀನು ಖರೀದಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಬಗ್ಗೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರಗಳು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಪ್ರಸ್ತಾಪ ಮಾಡುತ್ತಿರುವ ವಿಷಯ ಪತ್ರಿಕೆಯಲ್ಲಿಯೂ ಬಂದಿದೆ. ಕರ್ನಾಟಕ ಗೃಹ ಮಂಡಳಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ...

ಅಧ್ಯಕ್ಷರು: ರೇವಣ್ಣನವರೆ, ಮೊದಲು ಪ್ರಶ್ನೋತ್ತರ ಮುಗಿಯಲಿ. ಇದು ಮುಗಿದ ಮೇಲೆ ತಾವು ವಿಷಯ ಪ್ರಸ್ತಾಪಿಸಲು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಾನೀಗ submission ಮಾಡುತ್ತಿದ್ದೇನೆ. ದಯವಿಟ್ಟು submission ಮಾಡುವುದಕ್ಕೆ ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮೊದಲು ಪ್ರಶ್ನೋತ್ತರ ಆಗಲಿ. ಆಮೇಲೆ ಬೇರೆ ವಿಷಯ ಪ್ರಸ್ತಾಪವಾಗಲಿ.

ಶ್ರೀ ಹೆಚ್.ಡಿ. ರೇವಣ್ಣ: ಐದು ನಿಮಿಷ submission ಮಾಡುವುದಕ್ಕೆ ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಮೊದಲು ಪ್ರಶ್ನೋತ್ತರವಾಗಲಿ.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್: ಪ್ರತೀ ದಿವಸ ಇದೇ ಆಯಿತು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ Speaker ರವರು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮೊದಲು question hour ಮುಗಿಯಲಿ.

(ಗೊಂದಲ)

ಅಧ್ಯಕ್ಷರು: ಏನು ವಿಷಯ ಎಂದು ಒಂದೆರಡು ನಿಮಿಷದಲ್ಲಿ ಹೇಳಿ. ಉಳಿದ ವಿಷಯವನ್ನು ಪ್ರಶ್ನೋತ್ತರದ ನಂತರ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ವೆಂಕಟಾಪುರ, ಸಗಟೂರು, ಬಳುವಳ್ಳಿ, ಹೊಸಪೇಟೆ

ಮತ್ತಿತರ ಗ್ರಾಮಗಳಲ್ಲಿ ವಿವಿಧ survey no. 2ರಿಂದ 390 ರಲ್ಲಿ ವಸತಿ ನಿವೇಶನಕ್ಕೆ ಯಾವುದೇ ಸಮೀಕ್ಷೆ ಮಾಡದೇ 2ರಿಂದ 3 ಲಕ್ಷ ರೂ.ಗಳವರೆಗೆ ಬೆಲೆ ಬಾಳುವ ಜಮೀನುಗಳನ್ನು ಎಕರೆಗೆ 50 ಲಕ್ಷ ರೂಪಾಯಿಗಳಂತೆ ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿ): ರೇವಣ್ಣನವರೆ ಒಂದು ನಿಮಿಷ, ಆಮೇಲೆ ಓದುವಿರಂತೆ. ನಾನು ಬೇಡ ಎಂದು ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ನಿಂತಿದ್ದಾರೆ. ಅವರು ಏನು ಹೇಳುತ್ತಾರೆನ್ನುವುದನ್ನು ಕೇಳೋಣ.(ಗೊಂದಲ) ಆಮೇಲೆ ನೀವು ಹೇಳುವಿರಂತೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಅತ್ಯಂತ ವಿನಯದಿಂದ ಹೇಳುವುದೇನೆಂದರೆ, ನಾವೇ ಮಾಡಿರುವ rules ಅನ್ನು amend ಮಾಡಿ ತಾವು ಯಾವುದೇ ಅಧಿಕಾರವನ್ನು ಯಾರಿಗೆ ಬೇಕಾದರೂ ಕೊಡುವುದಕ್ಕೆ ತಮಗೆ ಅಧಿಕಾರವಿದೆ. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. Half an hour ಸದನವನ್ನು adjourn ಮಾಡಿ ನಿಮ್ಮ ಕೊಠಡಿಗೆ ಕರೆಸಿ. Parliamentನಲ್ಲಿ ಒಂದು system ಇದೆ. Question hour ಎಂದರೆ one hour correct ಆಗಿ ನಡೆಸುತ್ತಾರೆ. ಒಂದು ನಿಮಿಷ ಕೂಡ ಆ ಕಡೆ ಈ ಕಡೆ ಮಾಡುವುದಿಲ್ಲ. ಆಮೇಲೆ ಉಳಿದೆಲ್ಲ ಸಂಗತಿಗಳನ್ನು ತೆಗೆದುಕೊಳ್ಳುತ್ತಾರೆ. ಈ ಮೇಲ್ಪಂಕ್ತಿ ಹಾಕಿರುವಂಥ Parliament system ಅನ್ನು ನಾವಿಲ್ಲಿ introduce ಮಾಡಬೇಕು ಅಥವಾ ತಪ್ಪದೇ ಜಾರಿಗೆ ತರಬೇಕು. ಇಲ್ಲವೆನ್ನುವುದಾದರೆ, ನಿಮ್ಮ ಕೊಠಡಿಯಲ್ಲಿ ತೀರ್ಮಾನ ಮಾಡಿ. ಪ್ರತಿಪಕ್ಷದವರು ಪ್ರತಿ ನಿತ್ಯ ಒಂದು ನಿಲುವಳಿ ಸೂಚನೆ ತಂದಮೇಲೆ ಅದನ್ನು ಚರ್ಚೆ ಮಾಡಿದ ಮೇಲೆಯೇ question hour ತೆಗೆದುಕೊಳ್ಳಿ ಎಂದು ನೀವು ತೀರ್ಮಾನ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. ಖಂಡಿತ ವಿರೋಧ ಮಾಡುವುದಿಲ್ಲ. ಆದರೆ, ಪ್ರತಿನಿತ್ಯ ಯಾವುದ ವಿಷಯ ಇರಬಹುದು, "ಇದು ಪ್ರಮುಖವಾದ ಅಂಶವಿದೆ," ಎಂದು ವಿಶೇಷ ಕಾರಣವಿದ್ದಾಗ preliminary submission ಗೆ ಅವಕಾಶ ಮಾಡಿಕೊಡುವುದು, ಇವೆಲ್ಲ ನಡೆದುಕೊಂಡು ಬಂದಿರುವ ಸಂಪ್ರದಾಯ. ನಾನು ಬೇಡವೆಂದು ಹೇಳುವುದಿಲ್ಲ. ನಿತ್ಯ ಅದು ಇದ್ದರೆ ಅಲ್ಲಿಗೆ ಈ system ಗೆ ಏನು ಅರ್ಥ ಬರುತ್ತದೆ? ಹಾಗಾದರೆ ನಾವೇನು ಮೇಲ್ಪಂಕ್ತಿ ಹಾಕಿಕೊಡುತ್ತೇವೆ? ನಾನು ಏನು ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ಅಧ್ಯಕ್ಷರೆ, ತಾವು ಎಲ್ಲರನ್ನೂ ತಮ್ಮ ಕೊಠಡಿಗೆ ಕರೆಸಿ. Parliament ನಲ್ಲಿ ಏನು system ಇದೆ, ಅದು ಇಲ್ಲಿ ಕಟ್ಟುನಿಟ್ಟಾಗಿ

ಪಾಲನೆಯಾಗಬೇಕೆಂದು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. Preliminary submission ಎಂದರೆ ಏನರ್ಥ? ನೀವು ಅನುಮತಿ ಕೊಡುವುದಕ್ಕೆ ಮುಂಚೆಯೇ ಓದುವುದಕ್ಕೆ ಹೇಗೆ ಅವಕಾಶವಿದೆ? ನೀವು ಅನುಮತಿ ಕೊಟ್ಟಮೇಲೆ ಓದಿದರೆ ನನ್ನ ಅಭ್ಯಂತರವೇನಿಲ್ಲ. ಇಲ್ಲದಿದ್ದರೆ ಈ ವ್ಯವಸ್ಥೆಗಳೇ ಬುಡಮೇಲಾಗುತ್ತವೆ. ನಾವಂತೂ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ, ಬೇಕಾದರೆ ಪ್ರತಿಪಕ್ಷದ ನಾಯಕರು ಹೇಳಲಿ. ಇದು ಪದ್ಧತಿಯೇ ಅಲ್ಲ. ನಾನು ವಿನಂತಿ ಮಾಡುತ್ತೇನೆ, ಇಲ್ಲದ ಹೊಸ ಸಂಪ್ರದಾಯಗಳನ್ನು ಇಲ್ಲಿ ಹಾಕುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ನಿನ್ನೆಯೂ ಚರ್ಚೆಯಾಯಿತು. ಇವತ್ತೂ ಕೂಡ ಅದೇ ವಿಚಾರವನ್ನು ಮಾನ್ಯ ಕಾನೂನು ಮಂತ್ರಿಯವರು ಪ್ರಸ್ತಾಪಿಸಿದ್ದಾರೆ. ಈಶ್ವರಪ್ಪನವರು ಕೂಡ ಪ್ರಸ್ತಾಪಿಸಿದ್ದರು. ಮಾನ್ಯ ಮುಖ್ಯಮಂತ್ರಿಯವರು ಈ ಸದನದ ನಾಯಕರು. ಅವರೂ ಕೂಡ ಹೇಳಿದ್ದಾರೆ. ನಾನು ತಿಳಿದುಕೊಂಡಿರುವ ಮಟ್ಟಿಗೆ ನಾನು ಈ ಸದನದಲ್ಲಿ 25 ವರ್ಷಗಳಿಂದ ನೋಡುತ್ತಿದ್ದೇನೆ. Rule 60 ಎಂದು ಇರುವುದು, ಒಂದು ನಿರ್ದಿಷ್ಟವಾದ ವಿಚಾರ, ಸಾರ್ವಜನಿಕ ಮಹತ್ವದ ವಿಚಾರ, ಅತ್ಯಂತ ಜರೂರಾದ ವಿಚಾರಗಳನ್ನು ಪ್ರಸ್ತಾಪಿಸಲು ಒಂದು ಗಂಟೆ ಮುಂಚಿತವಾಗಿ ಯಾವುದೇ ದಿನ ಸದನ ಸೇರುವುದಕ್ಕಿಂತ ಮುಂಚಿತವಾಗಿ ಮಾನ್ಯ ಅಧ್ಯಕ್ಷರಿಗೆ, ಕಾನೂನು ಮಂತ್ರಿಯವರಿಗೆ, ಮುಖ್ಯಮಂತ್ರಿಯವರಿಗೆ notice ಕೊಡಬೇಕು. ಅದನ್ನು ಅವತ್ತೇ ಪ್ರಸ್ತಾಪ ಮಾಡುತ್ತೇವೆನ್ನುವ ಕಾರಣಕ್ಕೋಸ್ಕರ ಅವರ ಗಮನಕ್ಕೆ ಹೋಗಬೇಕೆನ್ನುವ ಕಾರಣಕ್ಕೆ notice ಕೊಡುತ್ತೇವೆ. Assembly ಪ್ರಾರಂಭವಾದ ಮೊದಲಲ್ಲೇ ಪ್ರಸ್ತಾಪಿಸಲು ಅವಕಾಶ ಸಿಗಬೇಕೆಂದು ವಿಷಯ ಪ್ರಸ್ತಾಪಿಸುವುದಿದೆ. ಏನು ತೀರ್ಮಾನ ಮಾಡಬೇಕು ಎಂಬುದು ಸಭಾಧ್ಯಕ್ಷರಾದ ತಮಗೆ ಬಿಟ್ಟಿದ್ದು. you have got all residuary powers under the rules.

ಅಧ್ಯಕ್ಷರು: ನಿನ್ನೆ ನಾನು ತಮಗೆ request ಮಾಡಿದ್ದೇನೆ. ನಾನು ಚರ್ಚೆಗೆ, preliminary submission ಗೆ ಅವಕಾಶ ಕೊಡುವುದಿಲ್ಲವೆಂದು ಎಂದೂ ಹೇಳಿಲ್ಲ. ಅವಕಾಶ ಕೊಡುತ್ತೇನೆ. ಆದರೆ, ಒಂದೇ ಒಂದು condition ಏನೆಂದರೆ ಮೊದಲು question hour ಮುಗಿಯಲಿ. ಆ ವ್ಯವಸ್ಥೆ ಎಲ್ಲಾ ಕಡೆಯೂ ಇದೆ.

ಶ್ರೀ ಸಿದ್ದರಾಮಯ್ಯ: ನಿಮಗೇ ತೀರ್ಮಾನ ಕೊಡುವುದಕ್ಕೆ ಅಧಿಕಾರವಿದೆ. I don't come in your way.

ಅಧ್ಯಕ್ಷರು: ಈ ಸದನದ proceedings ಅನ್ನು ನೀವು ನೋಡಿದರೆ ತಿಳಿಯುತ್ತೀರಿ.

ಶ್ರೀ ಸಿದ್ದರಾಮಯ್ಯ: As I understood, Rule 60 ರಡಿಯಲ್ಲಿ ನೀವು ಪ್ರಸ್ತಾಪ ಮಾಡುವುದಕ್ಕೇ ಬಿಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಅದು ಯಾವಾಗ ಎಂದರೆ, Question hour ಆದ ಮೇಲೆ.

ಶ್ರೀ ಸಿದ್ದರಾಮಯ್ಯ: Before the question hour.....

ಅಧ್ಯಕ್ಷರು: Question hour ಆದ ಮೇಲೆ.

ಶ್ರೀ ಸಿದ್ದರಾಮಯ್ಯ: Before the Assembly commences, before the sitting commence under Rule 60, That is my understanding. ಅದರ ಬಗ್ಗೆ why should have Rule 60? ಹಾಗಾದರೆ, ರೂಲ್ 69 ಅಷ್ಟೇ ಸಾಕಾಗಿತ್ತು. Why Rule 60 is there? Rule 60 is there because ನಾನು ಹಿಂದಿನಿಂದ ನೋಡಿಕೊಂಡು ಬಂದಿದ್ದೇನೆ, Adjournment Motion ಎಂದೇ ವಿಶೇಷವಾಗಿ ಇಟ್ಟಿರುವುದು. ಇದರ ಮೇಲೆ ಅನೇಕ ನಿರ್ಣಯಗಳೆಲ್ಲ ಆಗಿವೆ. ಸದನದ ಎಲ್ಲಾ ಕಲಾಪಗಳನ್ನು ಕೂಡ ಮುಂದಕ್ಕೆ ಹಾಕಿ ಇದಕ್ಕೆ ಹೆಚ್ಚು ಮಹತ್ವವಿರುವುದರಿಂದ ಹೆಚ್ಚು ಚರ್ಚೆ ಮಾಡಬೇಕೆನ್ನುವ ಕಾರಣಕ್ಕೋಸ್ಕರವೇ before the question hour this has to be taken up. ಯಾವ Member move ಮಾಡಿರುತ್ತಾರೆ, ಅದಕ್ಕೆ ಒಬ್ಬರು ಸಹಿ ಮಾಡಿರಲಿ, ಹೆಚ್ಚು ಜನ ಸದಸ್ಯರು ಸಹಿ ಮಾಡಿರಲಿ, ಅವರು Move ಮಾಡಲಿಕ್ಕೆ ಅವಕಾಶವಿರಬೇಕು. ನಿಮ್ಮ ಗಮನ ಸೆಳೆಯಲಿಕ್ಕೆ, ನಿಮ್ಮ ಅನುಮತಿ ಕೋರಲಿಕ್ಕೆ ಅವಕಾಶವಿರಬೇಕು. ನೀವು ತೀರ್ಮಾನ ಮಾಡುವುದು ಬೇರೆ. Question hour ಆದ ಮೇಲೆ ತೆಗೆದುಕೊಳ್ಳುತ್ತೇನೆ, ಅದನ್ನು ರೂಲ್ 69ಕ್ಕೆ convert ಮಾಡುತ್ತೇನೆಂದು ಹೇಳುವುದು it is left to you. The power is vested in you. The question is, ನಾವು ಪ್ರಸ್ತಾಪಿಸುವುದೇ ಆಗಬಾರದೆಂದು ಅಡ್ಡ ಬರುವುದಿದೆಯಲ್ಲ, that is very bad. Rules and Regulations ಬಗ್ಗೆ ಬೇಕಾದರೆ ಕುಳಿತುಕೊಂಡು ಚರ್ಚೆ ಮಾಡೋಣ. ಇನ್ನೊಂದು ಸಾರಿ ಬೇಕಾದರೆ ಈ ವಿಷಯ Rules Committee ಗೆ ಹೋಗಲಿ. ಅಲ್ಲಿ ಚರ್ಚೆ ಮಾಡೋಣ. ಯಾವುದನ್ನು ತೆಗೆದುಕೊಳ್ಳಬೇಕು, ಯಾವಾಗ ತೆಗೆದುಕೊಳ್ಳಬಾರದೆಂದು ಅಲ್ಲಿ ಚರ್ಚೆ ಮಾಡೋಣ. Let it be referred to the Rules Committee. But, before that, what I have understood, what is the practice, what is the convention here? ಇದು ಅತ್ಯಂತ ಮಹತ್ವದ್ದು. ನೀವು ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆಮೇಲೆ, Question hour ಆದ ಮೇಲೆ

ತೆಗೆದುಕೊಳ್ಳುತ್ತೇನೆ. Rule 69 ಗೆ convert ಮಾಡುತ್ತೇನೆಂದು ನೀವು ತೀರ್ಮಾನ ಮಾಡುವುದು ಮಾಡಿ. ಅದನ್ನು ಹೇಳುವುದು it is left to you because you have got all the powers. ಆದರೆ, ನಮ್ಮ right ಅನ್ನು ಮೊಟಕು ಮಾಡಿದ ಹಾಗಾಗುತ್ತದೆ. ಅದಾಗಬಾರದು.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: Rights ಇದ್ದ ಹಾಗೆ ಒಂದಷ್ಟು duties ಕೂಡ ಇವೆ.

ಶ್ರೀ ಹೆಚ್.ಡಿ.ರೇವಣ್ಣ: ನನಗೆ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆ. ದಯವಿಟ್ಟು, ಕಾನೂನು ಸಚಿವರು yield ಆಗಬೇಕು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ right ಅನ್ನು protect ಮಾಡಬೇಕು ಎಂದು ಹೇಳುವ ಹಾಗೆ ನಾವು ಇಲ್ಲಿ ನಮ್ಮ ಕರ್ತವ್ಯಗಳನ್ನು ಮಾಡಬೇಕು. ಎರಡನೆಯದಾಗಿ, ಸನ್ಮಾನ್ಯ ಅಧ್ಯಕ್ಷರೆ, ನಿಮ್ಮ ಮುಖಾಂತರ ಪ್ರತಿಪಕ್ಷಗಳ ನಾಯಕರಿಗೆ ಕೇಳುವುದೇನೆಂದರೆ....

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಸಭಾಧ್ಯಕ್ಷರು ಅನುಮತಿ ಕೊಟ್ಟಮೇಲೆ ....

(ಗೊಂದಲ)

SRI. S. Suresh Kumar: Rule 64 is very clear. If Hon'ble Speaker gives his consent under rule 60 and holds that the matter proposed to be discussed is in order, shall after the questions and before the list of business entered upon call the Member concerned who shall raise in his place and ask for leave to move for the Adjournment of the House. It is very clear Rule 64ರ ಪ್ರಕಾರ question hour ಆದಮೇಲೆ ನಿಮಗೆ ಅನಿಸಿದರೆ, ಇದು ನಿಯಮ 60ರ ಪ್ರಕಾರ correct ಇದ್ದರೆ ಮಾಡಬೇಕಾಗುತ್ತದೆ. ಇನ್ನೊಂದಿದೆ. Rule 62 ಪ್ರಕಾರ ಯಾವುದೇ Motion ಅನ್ನು ನಿಯಮ 60ರ ಕಡೆ Adjournment Motion ತೆಗೆದುಕೊಳ್ಳಬೇಕೆಂದರೆ, the motion shall be restricted to a specific matter of recent occurrence. ಯಾವುದೇ Adjournment Motion ತರುವಾಗ ಇನ್ನ್ಯಾವುದೂ ಪರ್ಯಾಯವಿಲ್ಲ, urgent ಆಗಿ ಎತ್ತಿಕೊಳ್ಳಬೇಕು ಎಂದು ಅನ್ನಿಸುವ ವಿಷಯಕ್ಕೆ ಮಾಡಬೇಕು. ಈಗ it is not a recent

occurrence. ಅವರ Motion ಪ್ರಕಾರ ಇದು ಫೆಬ್ರವರಿಯಲ್ಲಿ ಆಗಿರುವುದಿದೆ. There are adquate other methods. ಹಾಗಿರುವಾಗ, ಮೊದಲನೆಯದಾಗಿ ಇದು Adjournment Motion ಆಗುವುದಿಲ್ಲ. ಆಕಸ್ಮಾತ್, ಆಗುತ್ತದೆಯೋ, ಇಲ್ಲವೋ ಎನ್ನುವ ತೀರ್ಮಾನವನ್ನು ನೀವು ಪ್ರಶ್ನೋತ್ತರವಾದ ಮೇಲೆ ಕೊಡಬೇಕು. ಪ್ರತಿ ದಿವಸ ಹೀಗೇ ಆಗುತ್ತಿದ್ದರೆ, ಇಡೀ ಸದನದ ಸದಸ್ಯರ ಹಕ್ಕಿನ ಬಗ್ಗೆಯೂ ನಾವು ಯೋಚನೇ ಮಾಡಬೇಕು. ನಮ್ಮ ಒಬ್ಬರ ಹಕ್ಕಲ್ಲ. ನಾವ್ಯಾರು ಪ್ರಸ್ತಾಪ ಮಾಡುತ್ತೇವೆ, ಅದೇ ತರಹ ಯಾವ ಸದಸ್ಯರು question ಕಳುಹಿಸಿದ್ದಾರೆ, ಅವರ ಹಕ್ಕಿನ ಬಗ್ಗೆಯೂ ಯೋಚನೆ ಮಾಡಬೇಕು. ನೀವು ಹೇಳಿದ ಹಾಗೆ, ಈ ರೂಲ್ ಬಗ್ಗೆ Rules Committee ಯಲ್ಲಿ ಚರ್ಚೆ ಮಾಡಲಿ. ಆದರೆ, ನಮ್ಮದೊಂದು ಪದ್ಧತಿಯನ್ನೂ ನಾವು ಅಳವಡಿಸಬೇಕು. ಸದನದ ವ್ಯವಹಾರ, ನಡವಳಿಕೆ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ: ಹೊಸ ಸಂಪ್ರದಾಯಗಳನ್ನು ಮತ್ತೆ ಸೃಷ್ಟಿ ಮಾಡುವುದು ಬೇಡ. ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತುಕೊಂಡು ಈಗ ಹೌದು ಎನ್ನುತ್ತಿದ್ದಾರೆ. ಆದರೆ, ಅವರು ಈ ಕಡೆ ಕುಳಿತಿದ್ದಾಗ Adjournment Motion ಪ್ರಸ್ತಾಪವಾಗಿದೆ ಎಂಬುದನ್ನು ತೆಗೆದು ತೋರಿಸಲೆ? ಈ ರೀತಿ ಪ್ರಸ್ತಾಪಿಸಿರುವುದನ್ನು ತೆಗೆದು ತೋರಿಸಲೆ? ಇವರಿಗೆ ಬೇಕೆಂದಾಗ ಬೇಕು. ಇವರು ಸರ್ಕಾರದಲ್ಲಿದ್ದಾರೆ. ಅದು duty ಅಲ್ಲವೋ? you are more duty bound to the Legislature than us. Because you are in power. You are answerable to the Legislature. ನಮಗೂ ಡ್ಯೂಟಿಗಳು ಗೊತ್ತಿವೆ. ಹಕ್ಕುಗಳು ಯಾವಾಗಲೂ ಡ್ಯೂಟಿಗಳ ಜೊತೆಯಲ್ಲಿಯೇ ಹೋಗುತ್ತವೆ. They go together. ನಮಗೂ ಕೂಡ ಇವೆಲ್ಲದರ ಬಗ್ಗೆ ಪರಿಜ್ಞಾನವಿದೆ. ಡ್ಯೂಟಿಗಳೂ ಗೊತ್ತಿವೆ, ಹಕ್ಕಗಳೂ ಗೊತ್ತಿವೆ, Fundamental Rights ಗೊತ್ತಿವೆ, Part III of the Constitution, Part IV of the consitution, ನಮಗೆ ಎಲ್ಲಾ ಗೊತ್ತಿದೆ. ನಾವು ಓದಿಕೊಂಡಿದ್ದೇವೆ. ಅದು ಬೇರೆ ವಿಚಾರ. ನಾನೇಕೆ ಇದನ್ನು ಹೇಳುತ್ತಿದ್ದೇನೆಂದರೆ, ಹಿಂದಿನಿಂದ ನಡೆದುಕೊಂಡು ಬಂದಿರುವುದಿದೆ. ಅವರು ಪ್ರಸ್ತಾಪ ಮಾಡಲಿ. ಆಮೇಲೆ, ನೀವು ಅವರಿಗೆ ಏನು ಹೇಳಬೇಕೋ ಹೇಳಿ.

ಅಧ್ಯಕ್ಷರು: No, No, ವಿರೋದ ಪಕ್ಷದ ನಾಯಕರಲ್ಲಿ ನಾನೇನು ಹೇಳುತ್ತೇನೆಂದರೆ...

ಶ್ರೀ ಸಿದ್ದರಾಮಯ್ಯ: ಆಮೇಲೆ ನೀವು ತೀರ್ಮಾನ ಕೊಡಿ. ಕಾನೂನು ಮಂತ್ರಿಗಳಿಗೆ ಇನ್ನೊಂದು ವಿಷಯ ಹೇಳುತ್ತೇನೆ. ಪ್ರತಿದಿನ ತರಬಾರದೆಂದು ಎಲ್ಲಿದೆ?

Every day we can bring. ಒಂದು ದಿನಕ್ಕೆ ಒಂದು Adjournment Motion ಗಿಂತ ಹೆಚ್ಚು ತರಬಾರದು. ಆದರೆ, ಪ್ರತಿ ದಿನ ಒಂದು Adjournment Motion ತರಲಿಕ್ಕೆ ಅವಕಾಶವಿದೆ. That is what Rule says.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರೇವಣ್ಣರವರಲ್ಲಿ ನನ್ನದೊಂದು ವಿನಂತಿ ಇದೆ, ನಿನ್ನೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ನಾನು ಹೇಳಿದ್ದೇನೆ. Question hour ಆದಮೇಲೆ ನೀವು preliminary submission ಮಾಡುವುದಕ್ಕೆ ನಾನು ಅವಕಾಶ ಕೊಟ್ಟೇ ಕೊಡುತ್ತೇನೆ. ಆದರೆ, ಈಗ ಮೊದಲು question hour ಮುಗಿಸೋಣ. ಇದರಲ್ಲಿಯೇ 15 minutes ಕಳೆದುಹೋಯಿತು.

ಶ್ರೀ ಹೆಚ್.ಡಿ. ರೇವಣ್ಣ: Submission ಮಾಡುವುದಕ್ಕೆ ಅನುಮತಿ ಕೊಟ್ಟು...

(ಗೊಂದಲ)

ಅಧ್ಯಕ್ಷರು: ಪದೇ ಪದೇ ಅದನ್ನೆ ಮಾಡುವುದಾಗುತ್ತದೆ. Question hour ಆದಮೇಲೆ ಅವಕಾಶ ಕೊಡುತ್ತೇನಲ್ಲ. ರೇವಣ್ಣನವರೆ, ಒಂದು ತಾಸಿನಲ್ಲಿ ಏನು difference ಆಗುತ್ತದೆ? ಈಗ submission ಮಾಡುವುದನ್ನೇ after one hour submit ಮಾಡಿ. ಪದೇ ಹೀಗೇ ವಾದ ಮಾಡುವುದಾಗುತ್ತದೆ. ಇದರಲ್ಲಿಯೇ ಟೈಂ ಹೋಗುತ್ತದೆ. ಎಲ್ಲರೂ question hour ಗೆ wait ಮಾಡುತ್ತಿದ್ದಾರೆ. ಮೊದಲು question hour ಮುಗಿಯಲಿ. **(ಗೊಂದಲ)** Question hour ಮುಗಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. Question hour is one hour. One hour ಆದಮೇಲೆ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಒಂದು ಗಂಟೆಯಾದ ಮೇಲೆ ನಿಮ್ಮದು ತೆಗೆದುಕೊಳ್ಳೋಣ. ನೀವು ನಂತರ Preliminary Submission ಮಾಡಿ. ಒಂದು ಗಂಟೆಯಲ್ಲಿ ಏನು difference ಆಗುತ್ತದೆ? ನಿಮಗೆ submission ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ನಾನು ಹೇಳಿಲ್ಲ. ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನನಗೆ ಎರಡು ನಿಮಿಷ ಅವಕಾಶ ಕೊಡಿ ಸಾರ್. ತಾವೇ ಅನುಮತಿ ಕೊಟ್ಟಿದ್ದೀರಿ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಕೊಡಿ, ಈಗ ಸಬ್‌ಮಿಷನ್ ಮಾಡುವುದಕ್ಕೆ ಬಿಡಿ.

ಅಧ್ಯಕ್ಷರು: ಏಕೆ ಅವಸರ ಮಾಡುತ್ತೀರಿ? ನನಗೆ ಅರ್ಥವಾಗುತ್ತಿಲ್ಲ. ರೇವಣ್ಣನವರೆ, ಪ್ರಶ್ನೋತ್ತರ ವೇಳೆ ಮುಗಿಯಲಿ. ನೀವು ಹಿಂದಿನ proceedings

ನೋಡಿ. ಪ್ರಶ್ನೋತ್ತರ ವೇಳೆಯಾದ ತಕ್ಷಣ ಕೊಡುತ್ತೇನೆ. ಈಗ ಪ್ರಶ್ನೋತ್ತರ. ಮೊದಲನೆ ಪ್ರಶ್ನೆ ಸುನೀಲ್ ವಿ.ಹೆಗಡೆಯವರು, ಕೇಳಿ.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಜೊಯಿಡಾ ತಾಲ್ಲೂಕಿನಲ್ಲಿ ಪಟ್ಟಣ ಪಂಚಾಯ್ತಿ ರಚನೆ ಬಗ್ಗೆ.

46(387) ಶ್ರೀ.ಸುನೀಲ್ ವಿ.ಹೆಗಡೆ(ಹಳಿಯಾಳ್)

ಶ್ರೀ ಎಸ್.ಸುರೇಶ್‌ಕುಮಾರ್ (ಪೌರಾಡಳಿತ ಸಚಿವರು)

ಅ. ಜೋಯಿಡಾ ತಾಲ್ಲೂಕಿನಲ್ಲಿ ಪಟ್ಟಣ ಪಂಚಾಯತಿಯನ್ನು ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

ಆ. ಹಾಗಿದ್ದಲ್ಲಿ, ಎಂದಿನಿಂದ ಇದನ್ನು ಜಾರಿಗೆ ತರಲಾಗುವುದು;

ಉದ್ಭವಿಸುವುದಿಲ್ಲ

ಇ. ಪಟ್ಟಣ ಪಂಚಾಯಿತಿಯನ್ನು ರಚಿಸಲು ಸರ್ಕಾರ ಜನಸಂಖ್ಯೆ ಆಧಾರವನ್ನು ನಿಗಧಿಪಡಿಸಿದೆಯೇ;

ಹೌದು

ಈ. ಹಾಗಿದ್ದಲ್ಲಿ, ಎಷ್ಟು ಜನಸಂಖ್ಯೆಗೆ ಒಂದು ಪಟ್ಟಣ ಪಂಚಾಯಿತಿಯನ್ನು ರಚಿಸಲಾಗುವುದು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;

2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂಸಹ ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಉ. ಜೋಯಿಡಾ ಪಟ್ಟಣವು 10 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದು ನಿಜವಲ್ಲವೇ;

ಜೋಯಿಡಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 2001ರ ಜನಗಣತಿ ಪ್ರಕಾರ 2904 ಜನಸಂಖ್ಯೆ ಇರುತ್ತದೆ.

ಊ. ಹಾಗಿದ್ದಲ್ಲಿ, ಜೋಯಿಡಾದಲ್ಲಿ ಪಟ್ಟಣ ಪಂಚಾಯಿತಿಯನ್ನು ರಚಿಸಲು ಇರುವ ತೊಂದರೆಗಳೇನು; (ವಿವರಗಳನ್ನು ನೀಡುವುದು)?

ಸರ್ಕಾರವು ಈ ಪ್ರಸ್ತಾವನೆಯನ್ನು ಈ ಮೇಲೆ ಪ್ರಶ್ನೆ 'ಈ' ರಲ್ಲಿ ತಿಳಿಸಿರುವ ನಿಯಮಗಳನ್ವಯ ಪರಿಶೀಲಿಸಲಾಗುವುದು.

ಶ್ರೀ ಸುನೀಲ್ ವಿ.ಹೆಗಡೆ : ಮಾನ್ಯ ಅಧ್ಯಕ್ಷರೆ, ಜೋಯಿಡಾ ತಾಲ್ಲೂಕು ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಕನ್ಸಿಡರ್ ಮಾಡಿದ್ದಾರೆ. ನನಗೆ ಅನ್ನಿಸುತ್ತದೆ, ಇಡೀ ಕರ್ನಾಟಕ ರಾಜ್ಯದಲ್ಲಿ ಜೋಯಿಡಾ ತಾಲ್ಲೂಕಿನ ಹಾಗೆ ಬೇರೆ ಯಾವುದೇ ತಾಲ್ಲೂಕಿನಲ್ಲಿ ಒಂದು ಪಟ್ಟಣ ಪಂಚಾಯಿತಿ ಇರಲಿ, ಪುರಸಭೆ ಇರಲಿ, ಇದು ಯಾವುದೇ ಇಲ್ಲ ಎಂದರೆ ಅದು ಜೋಯಿಡಾ ತಾಲ್ಲೂಕು. ಸನ್ಮಾನ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಹೊಸ ಪಟ್ಟಣ ಪಂಚಾಯಿತಿಗಳನ್ನು ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಹತ್ತು ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರಬೇಕು, ಪ್ರತಿ ಚದರ ಕಿ.ಮಿ.ಗೆ ನಾನೂರು ಜನಸಂಖ್ಯೆಗಿಂತ ಜಾಸ್ತಿ ಇರಬೇಕು ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಜೋಯಿಡಾ ತಾಲ್ಲೂಕಿನ ಶೇಕಡ 83% ರಷ್ಟು ಭಾಗ ಅರಣ್ಯ ಪ್ರದೇಶದಿಂದ ಕೂಡಿರುವುದರಿಂದ ಇಲ್ಲಿ ಜನಸಂಖ್ಯೆ ಬಹಳ scattered ಆಗಿ ಇರುವುದರಿಂದ ಮತ್ತು ಜೋಯಿಡಾ ತಾಲ್ಲೂಕು ಪ್ಲೇಸ್ ಆಗುವುದರಿಂದ ಇಲ್ಲಿ ಪಟ್ಟಣ ಪಂಚಾಯಿತಿ ಅವಶ್ಯಕತೆ ಬಹಳವಿದೆ. ಜೋಯಿಡಾ ತಾಲ್ಲೂಕು ಕೇಂದ್ರಕ್ಕೆ ಪಟ್ಟಣ ಪಂಚಾಯಿತಿ ಮಾಡಬೇಕೆಂದು ಮನವಿ ಸಹ ಕೊಟ್ಟಿದ್ದೇನೆ. ಅದೇ ರೀತಿ ಜೋಯಿಡಾ ತಾಲ್ಲೂಕಿನ ರಾಮನಗರ ಇದು ಗೋವಾ High Way ನಲ್ಲಿರುವುದರಿಂದ, 2001 ರ ಗಣತಿಯಂತೆ ನಾಲ್ಕು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇದ್ದು, ಈಗ ಅದು 5 ರಿಂದ

6 ಸಾವಿರ ಜನಸಂಖ್ಯೆಗೆ ಏರಿದೆ. ಹೀಗಾಗಿ ಜೋಯಿಡಾಕ್ಕೆ ಜನಸಂಖ್ಯೆಯ ಮಿತಿ ಸಡಿಲಗೊಳಿಸಿ, ಕೆಲವೊಂದು ಸರಕಾರದ ಕಾಯಿದೆಗಳನ್ನು ಸಡಿಲಗೊಳಿಸಿ, ರಾಮನಗರ ಒಂದು ಪಟ್ಟಣ ಪಂಚಾಯಿತಿ ಮತ್ತು ಜೋಯಿಡಾ ತಾಲ್ಲೂಕು ಕೇಂದ್ರವನ್ನು ಪಟ್ಟಣ ಪಂಚಾಯತಿಯಾಗಿ ಮಾಡಲು ಸಚಿವರು ಸಹಕರಿಸುತ್ತಾರೆಂದು ತಿಳಿಯಬಯಸುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜೋಯಿಡಾ ತಾಲ್ಲೂಕು ನಂಜುಂಡಪ್ಪವರದಿಯಲ್ಲಿ ತಿಳಿಸಿರುವಂತೆ ಹಿಂದುಳಿದ ತಾಲ್ಲೂಕು ಎಂದು ಹೇಳಿದರು. ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿಸಬೇಕಾದರೆ ಕಾನೂನಿನಲ್ಲಿ ಮೂರು ಮುಖ್ಯವಾದ ಮಾನದಂಡಗಳನ್ನು ಇಟ್ಟುಕೊಂಡು ಮಾಡಬೇಕೆಂದು ಅವಕಾಶವಿದೆ. (1) ಜನಸಂಖ್ಯೆ ಹತ್ತು ಸಾವಿರಕ್ಕಿಂತ ಮೇಲೆ ಇರಬೇಕು ಮತ್ತು 20 ಸಾವಿರದೊಳಗಡೆ ಇರಬೇಕು, ಅಂದರೆ 20 ಸಾವಿರಕ್ಕಿಂತ ಜಾಸ್ತಿ ಮೀರಿರಬಾರದು. (2) ಜನಸಂಖ್ಯೆ ಪ್ರತಿ ಚದರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕೂ ನೂರಕ್ಕಿಂತ ಕಡಿಮೆಯಿಲ್ಲದಂತೆ ಜನ ವಾಸ ಮಾಡುತ್ತಿರಬೇಕು. (3) ಕೃಷಿಯೇತರ ಅಂದರೆ non agricultural income 50% ಮೇಲೆ ಇರಬೇಕು. ಈ ಎಲ್ಲಾ ಮಾನದಂಡದಲ್ಲಿ ನಿಮ್ಮ ಜೋಯಿಡಾ ಕವರ್ ಆಗುವುದಿಲ್ಲ. ಮೊದಲನೆಯದಾಗಿ 2001 ರ ಜನಗಣತಿ ಆಧಾರದ ಪ್ರಕಾರ ತಮ್ಮಲ್ಲಿ 2900 ಜನಸಂಖ್ಯೆ ಇರುವುದರಿಂದ, ಏಕೆಂದರೆ, 10 ಸಾವಿರ ದಾಟಿರುವುದಿಲ್ಲ, ಆದರೂ ತಾವು ಹೇಳಿದ ಹಾಗೆ ನಂಜುಂಡಪ್ಪ ವರದಿಯಲ್ಲಿ ತಮ್ಮ ತಾಲ್ಲೂಕು ಬರುವುದರಿಂದ, ಕಾರವಾರ ಜಿಲ್ಲಾಧಿಕಾರಿಯವರು ಒಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಜೋಯಿಡಾ ತಾಲ್ಲೂಕನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತನೆ ಮಾಡಬೇಕೆಂದು ಅವರು ಕೇಳಿದ್ದಾರೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಇದಕ್ಕಾಗಿ DMA ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೇವೆ. ಅವರು ಈಗ ಇದರ ಬಗ್ಗೆ ಸ್ಟಡಿ ಮಾಡುತ್ತಿದ್ದಾರೆ. ಅಲ್ಲಿಂದ ವರದಿ ಬಂದ ನಂತರ ಖಂಡಿತವಾಗಿ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸುನೀಲ್ ವಿ.ಹೆಗಡೆ: ನಾನು ಏನು ಕೇಳುತ್ತೇನೆಂದರೆ, ರಾಮನಗರ, ಇದು ನಮ್ಮ ಸೂಪಾ ಡ್ಯಾಂ ಮುಳುಗಡೆಯಾದ ನಂತರ ಶಿಫ್ಟ್ ಆದ ಗ್ರಾಮಪಂಚಾಯಿತಿ. ಇಲ್ಲಿ ಕುಡಿಯುವುದಕ್ಕೆ ನೀರಿನ ಸಮಸ್ಯೆ ಜೊತೆಗೆ ಬೇರೆ ಎಲ್ಲಾ ಸಮಸ್ಯೆಯಿದೆ. ಗ್ರಾಮ ಪಂಚಾಯಿತಿಯಿಂದ ಸುಧಾರಣೆಯಾಗುತ್ತಿಲ್ಲ. ಜನರಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಅದನ್ನು ಸಹ ಪಟ್ಟಣ ಪಂಚಾಯಿತಿ ಮಾಡುವ ನಿಟ್ಟಿನಲ್ಲಿ ಪರಿಗಣಿಸಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಇದು ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ. because I told that there is proposal with the concerned department ಆ ಮಂತ್ರಿಗಳ ಜೊತೆಗೆ ಇವೆ. ಯಾವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮಾಡಬೇಕು, ಯಾವ ಪಟ್ಟಣ ಪಂಚಾಯಿತಿಗಳನ್ನು ಮುನಿಸಿ ಪಾಲಿಟಿಗಳಾಗಿ ಮಾಡಬೇಕೆನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ನಾವು ಕೂಡ ಟಿ.ನರಸೀಪುರವನ್ನು ಮುನಿಸಿಪಾಲಿಟಿಯನ್ನಾಗಿ ಮಾಡಬೇಕೆಂದು ಹೇಳಿದ್ದೇವೆ. ನೀವು ಮಾಡುವಾಗ ಇಡೀ ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳು ಯಾವ್ಯಾವು ನಾರ್ಮ್ಸ್‌ದೊಳಗೆ ಅರ್ಹತೆಗೆ ಬಂದಿವೆ, those which are qualifying under the norms, under the guidelines ಆ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಬೇಕು. ಯಾವ ಪಟ್ಟಣ ಪಂಚಾಯಿತಿಗಳು ಆ ನಾರ್ಮ್ಸ್‌ದೊಳಗೆ ಬರುತ್ತವೆ, ಏಕೆಂದರೆ, ಆ ಪಟ್ಟಣ ಪಂಚಾಯತಿಗಳಿಗೆ ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳನ್ನು ಸೇರಿಸಿಕೊಂಡು ಮುನಿಸಿ ಪಾಲಿಟಿಯನ್ನಾಗಿ ಮಾಡಬೇಕೆಂದು ಇದೆ. ಈ ತರಹದ ಅನೇಕ ಪಟ್ಟಣ ಪಂಚಾಯಿತಿಗಳಿವೆ. ಪಟ್ಟಣ ಪಂಚಾಯಿತಿಗಳನ್ನು ಮುನಿಸಿ ಪಾಲಿಟಿಯನ್ನಾಗಿ ಮಾಡುವಾಗ, ಈ ನಾರ್ಮ್ಸ್‌ಗಳು, ಗೈಡ್‌ಲೈನ್ಸ್, ಕಾನೂನು ಚೌಕಟ್ಟಿನೊಳಗೆ ಏನು ಇವೆ, ಅದನ್ನು ಅನುಸರಿಸಿ ಮಾಡಬೇಕು. ಅದು ಬಿಟ್ಟು ಯಾರೋ ಹೇಳಿದರು, ನಮ್ಮ ಪಕ್ಷದವರು ಹೇಳಿದರು, ಇನ್ಯಾವುದೋ ಪಕ್ಷದವರು ಹೇಳಿದರು, ಸ್ನೇಹಿತರು ಹೇಳಿದರು ಎಂದು ಇದನ್ನು ಮಾನದಂಡವನ್ನಾಗಿ ಇಟ್ಟುಕೊಳ್ಳದೇ, ಏನು ನಮ್ಮಲ್ಲಿ ನಾರ್ಮ್ಸ್ ಇದೆ, ಗೈಡ್‌ಲೈನ್ಸ್ ಇದೆ, ಅದನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಮಾಡಬೇಕೆಂಬುದು ನನ್ನ ಸಲಹೆ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಣ್ಣನವರು ಒಂದು ಸಲಹೆ ಕೊಟ್ಟಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು 247 ಪ್ರದೇಶಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಕಳುಹಿಸಿ, ಇಂಥ ಪ್ರಸ್ತಾವನೆಗಳು ಇವೆ, ಯಾವುದನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆಂದು ಅವರ ಅಭಿಪ್ರಾಯ ಕೇಳಿದ್ದಾರೆ. ಅವರು ನಮ್ಮ ಅಭಿಪ್ರಾಯ ಕೇಳಿದ್ದಾರೆ. ಈಗಾಗಲೇ ನಮ್ಮ ಕಾರ್ಯದರ್ಶಿ, Director of Municipal Administration ರವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಏಕೆಂದರೆ ಬಂದಿರತಕ್ಕಂಥ 247 ಪ್ರಸ್ತಾವನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಎಲ್ಲವೂ ನಿಗದಿತ ಮಾನದಂಡದೊಳಗೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇನು ಸಲಹೆ ಕೊಟ್ಟಿದ್ದಾರೆ, ಅದನ್ನು

ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಅಕ್ಟೋಬರ್-ನವೆಂಬರ್ ನಲ್ಲಿ ಖಂಡಿತವಾಗಿ ಸರ್ಕಾರ ಅಂತಿಮವಾಗಿ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು: ಸಾಕು ಬಿಡಿ ಹೆಗಡೆಯವರೆ, guidelines ಪ್ರಕಾರ ಕೊಟ್ಟರೆ ಮಾಡುತ್ತೇವೆಂದು ಹೇಳಿದ್ದೀರಲ್ಲಾ ಬಿಡಿ, ಜನರಲ್ ಅಗಿ ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಸುನೀಲ್ ವಿ.ಹೆಗಡೆ: ಜೋಯಿಡಾ ತಾಲ್ಲೂಕಿಗೆ ಜನಸಂಖ್ಯೆಯ ಮಿತಿಯನ್ನು ಸಡಿಲಗೊಳಿಸಬೇಕಾಗುತ್ತದೆ. ಏಕೆಂದರೆ, ಅಲ್ಲಿ 83% ಗುಡ್ಡಗಾಡು ಪ್ರದೇಶವಿರುವುದರಿಂದ ಈ ಗೈಡ್‌ಲೈನ್ಸ್‌ನಲ್ಲಿ ಸಡಿಲಿಕೆ ಕೊಟ್ಟಿಲ್ಲವೆಂದರೆ ಜೋಯಿಡಾ ತಾಲ್ಲೂಕು ಯಾವಾಗಲೂ ಪಟ್ಟಣ ಪಂಚಾಯಿತಿ ಆಗಲಿಕ್ಕೆ ಸಾಧ್ಯವಿಲ್ಲ. ದಯವಿಟ್ಟು ಜೋಯಿಡಾ ತಾಲ್ಲೂಕಿಗೆ ಹಿಂದುಳಿದ ತಾಲ್ಲೂಕಿಗೆ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು: ಅದನ್ನು ಪರಿಶೀಲಿಸಿರಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಇದನ್ನು ನಾವು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

47(489) ಶ್ರೀ.ದಿನಕರ ಕೇಶವ ಶೆಟ್ಟಿ (ಕುಮಟ)

ಪೌರಾಡಳಿತ ಸಚಿವರು

ಅ) ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯತಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯವರು ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿರುತ್ತಾರೆ.

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;
3. ಕೃಷಿಯೇತರ ಚುಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂಸಹ, ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು 247 ಪ್ರದೇಶಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿದ್ದು, ಈ ಬಗ್ಗೆ ನಿಯಮಾನುಸಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಇ) ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾರ್ಪಡಿಸಲು ಜನಸಂಖ್ಯೆಯನ್ನು ನಿಗಧಿಪಡಿಸಲಾಗಿದೆಯೇ;

ಮೇಲಿನಂತೆ

ಈ) ಹಾಗಿದ್ದಲ್ಲಿ, ಪಟ್ಟಣ ಪಂಚಾಯಿತಿಯನ್ನಾಗಿ ಮಾರ್ಪಡಿಸಲು ಎಷ್ಟು ಜನಸಂಖ್ಯೆ ಇರಬೇಕು?

ಮೇಲಿನಂತೆ

ಸಂಖ್ಯೆ:ನಇ 7 ಎಲ್ಎಕ್ಯೂ 2009

ಶ್ರೀ ದಿನಕರ ಕೇಶವ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಮೊದಲನೇ ಬಾರಿಗೆ ಆಯ್ಕೆಯಾಗಿ ಇವತ್ತು ಪ್ರಥಮ ಬಾರಿಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಹೀಗಾಗಿ ವೈಯಕ್ತಿಕವಾಗಿ ಮತ್ತು ಇಡೀ ನಮ್ಮ ತಾಲ್ಲೂಕಿನ ಕ್ಷೇತ್ರದ ಜನತೆಯ ಪರವಾಗಿ ಸಭಾಧ್ಯಕ್ಷರಿಗೆ ಅನಂತ ಅನಂತ ಧನ್ಯವಾದಗಳನ್ನು. ಈ ಒಂದು ಸಂದರ್ಭದಲ್ಲಿ ಹೇಳುವುದರ ಜೊತೆಗೆ, ಗೋಕರ್ಣ ಬಹಳ ಪವಿತ್ರವಾದ ಸ್ಥಳ. ಈ ಒಂದು ಕ್ಷೇತ್ರಕ್ಕೆ "ದಕ್ಷಿಣದ ಕಾಶಿ" ಎಂದು ಕರೆಯುವ ಪರಂಪರೆ ಇದೆ. ಕಾಶಿಗಿಂತ ಗೋಕರ್ಣವೇ ಒಂದು ಗುಲಗುಂಜಿ ಜಾಸ್ತಿ ಎನ್ನುವ ಅಭಿಪ್ರಾಯ ಇದೆ. ಇದಕ್ಕೆ ಮೂಲ ಕಾರಣ ಗೋಕರ್ಣದಲ್ಲಿ ಸಮುದ್ರವಿರುವುದರಿಂದ ಇದು ಹೆಚ್ಚು ಪವಿತ್ರವಾದ ಪ್ರದೇಶ ಎನ್ನುವುದನ್ನು ಪುರಾಣ ಪ್ರಸಿದ್ಧವಾದ ಈ ಒಂದು ಹೇಳಿಕೆಯನ್ನು ಕೇಳಿದ್ದೇನೆ. ಅಷ್ಟಲ್ಲದೇ, ಇಲ್ಲಿ ಸುಮಾರು 12,953 ಜನಸಂಖ್ಯೆ ಇದ್ದು, ಸುಮಾರು 3,500 ಕುಟುಂಬಗಳು ಇಲ್ಲಿ ವಾಸಿಸುತ್ತವೆ. ಅಷ್ಟಲ್ಲದೆ ಇಲ್ಲಿ ಪ್ರತಿನಿತ್ಯ ಸುಮಾರು ಎರಡೂವರೆಯಿಂದ ಮೂರು ಸಾವಿರ ಸಂಖ್ಯೆಯಷ್ಟು ಪ್ರವಾಸಿಗರು ಆಗಮಿಸುತ್ತಾರೆ. ಅಷ್ಟಲ್ಲದೆ, ಡಿಸೆಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಸುಮಾರು 15 ರಿಂದ 20 ಸಾವಿರದಷ್ಟು ವಿದೇಶಿಯರು ಇಲ್ಲಿಗೆ ಆಗಮಿಸುತ್ತಾರೆ. ಇದರ ಜೊತೆಗೆ ಇಲ್ಲಿ ಈ ಯಾತ್ರಾ ಸ್ಥಳವು ತುಂಬಾ ಐತಿಹಾಸಿಕ ಸ್ಥಳವಾಗಿದೆ. ಹೀಗಾಗಿ ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆನ್ನುವುದು ನನ್ನ ವೈಯಕ್ತಿಕ ಹಾಗೂ ನನ್ನ ಕ್ಷೇತ್ರದ ಜನತೆಯ ಅಭಿಪ್ರಾಯವಾಗಿದೆ. ಇಲ್ಲಿ ಸಾರ್ವಜನಿಕರ ಮೂಲಭೂತ ಸೌಕರ್ಯಗಳಾದ ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ಸಾರ್ವಜನಿಕರಿಗೆ ಉತ್ತಮ

ರಸ್ತೆ, ಉತ್ತಮ ನೈರ್ಮಲ್ಯ ವ್ಯವಸ್ಥೆ ಕಾಪಾಡಲು ಗೋಕರ್ಣ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಸನ್ಮಾನ್ಯ ಸಭಾಧ್ಯಕ್ಷರೆ, ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಅಲ್ಲಿ ಜನ ಸಂಖ್ಯೆ 10,000 ಮೀರಿದೆ. ಆದ್ದರಿಂದ, ನಾವು ಮಾಡಿರುವ ಮಾನದಂಡದೊಳಗೆ ಇದು ಬರುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ನಾನು ಈಗಾಗಲೇ ಹೇಳಿದ ಹಾಗೆ ಇದರ ಬಗ್ಗೆ ಆರ್.ಡಿ.ಪಿ.ಆರ್. ನಿಂದ 247 ಪ್ರಸ್ತಾವನೆ ಬಂದಿದೆ. ಇವೆಲ್ಲವನ್ನು ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಏಕೆಂದರೆ, ಇದಕ್ಕೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದುಕೊಂಡು ಸರ್ಕಾರ ಮುಂದಿರುವ ನಿಮ್ಮ ಪ್ರಸ್ತಾವನೆಯನ್ನು ಖಂಡಿತಾ ಪರಿಶೀಲನೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಪಟ್ಟಣ ಪಂಚಾಯತ್‌ನ್ನು ಪುರಸಭೆಯನ್ನಾಗಿ ಮಾಡುವ ಬಗ್ಗೆ

49(479) ಶ್ರೀ.ಮಂಜು ಎ (ಅರಕಲಗೂಡು)

ಶ್ರೀ ಎಸ್. ಸುರೇಶ್ ಕುಮಾರ್(ಪೌರಾಡಳಿತ ಸಚಿವರು)

ಅ) ಅರಕಲಗೂಡು ಪಟ್ಟಣ ಪಂಚಾಯತ್‌ನ್ನು ಪುರಸಭೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಕರ್ನಾಟಕ ಪುರಸಭೆ ಕಾಯ್ದೆ 1964ರ ನಿಯಮ 3 ಮತ್ತು 9 ರನ್ವಯ ಅವಕಾಶವಿರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಉದ್ಭವಿಸುವುದಿಲ್ಲ.

ಶ್ರೀ ಎ.ಮಂಜು:- ಮಾನ್ಯ ಅಧ್ಯಕ್ಷರೆ, ಅರಕಲಗೂಡು ಪಟ್ಟಣ ಪಂಚಾಯತಿಯ ಪುರಸಭೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಕರ್ನಾಟಕ ಪುರಸಭೆ ಕಾಯ್ದೆ 1964ರ ನಿಯಮ 3 ಮತ್ತು 9ರನ್ವಯ ಅವಕಾಶವಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅರಕಲಗೂಡು ತಾಲ್ಲೂಕಿನ ಹೆಡ್‌ಕ್ವಾರ್ಟರ್ ಆಗಿದೆ. 2001ರ ಜನಗಣತಿ ಪ್ರಕಾರ ನಿಯಮ 3 ಮತ್ತು 9ರನ್ವಯ 20 ಸಾವಿರ ಜನಸಂಖ್ಯೆ ಇರಬೇಕಾಗುತ್ತದೆ. ಇಲ್ಲಿ 3 ಕಿ.ಮೀ. ಅಂತರವನ್ನು ಇದಕ್ಕೆ ಒಳಪಡಿಸಿಕೊಂಡರೆ 22 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ಪ್ರದೇಶವಾಗುತ್ತದೆ. ಇದು ಈಗಾಗಲೇ ತಾಲ್ಲೂಕು

ಹೆಡ್‌ಕ್ವಾರ್ಟರ್ ಆಗಿರುವುದರಿಂದ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಪರಿಗಣಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಸನ್ಮಾನ್ಯ ಸಭಾಧ್ಯಕ್ಷರೆ, ಇದ್ದಂಥ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಮಾನ್ಯ ಸದಸ್ಯರು ಮನವಿ ಮಾಡಿಕೊಂಡಿದ್ದಾರೆ. ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮಾಡಬೇಕಾದರೆ ಜನಸಂಖ್ಯೆ 20 ಸಾವಿರದ ಮೇಲೆ ಮತ್ತು 50 ಸಾವಿರದ ಒಳಗೆ ಇರಬೇಕಾಗುತ್ತದೆ. ಈ ಮಾನದಂಡ ಅಲ್ಲಿ ಅನ್ವಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿನ 152 ತಾಲ್ಲೂಕುಗಳಲ್ಲಿ ಈಗಾಗಲೇ ತಾಲ್ಲೂಕು ಕಛೇರಿಗಳಿದ್ದರೂ ಸಹ ಅಲ್ಲಿ ಪಟ್ಟಣ ಪಂಚಾಯತಿಗಳೂ ಸಹ ಇವೆ. ತಾಲ್ಲೂಕು ಪ್ಲೇಸ್‌ನಲ್ಲಿ ಈಗಾಗಲೇ ಪಟ್ಟಣ ಪಂಚಾಯತಿ ಇರುವಂಥ ಕಡೆ ಪುರಸಭೆಯನ್ನಾಗಿ ಪರಿವರ್ತನೆ ಮಾಡುವ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡುತ್ತಿದೆ. ಮತ್ತೆ ಇದರ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದೇವೆ. ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಇದರ ಬಗ್ಗೆ ಸರ್ಕಾರ ಅಂತಿಮವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಏಕೆಂದರೆ, ತಾಲ್ಲೂಕು ಪ್ಲೇಸ್‌ನಲ್ಲಿ ಪಟ್ಟಣ ಪಂಚಾಯತ್ ಇದ್ದರೂ ಕೂಡ ಅಲ್ಲಿ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಹೆಚ್ಚಿನ ಅನುದಾನ ಬರಬೇಕೆಂಬುದರ ಬಗ್ಗೆ ಸರ್ಕಾರದ ಚಿಂತನೆ ಖಂಡಿತ ಇದೆ. ಆದ್ದರಿಂದ, ಮಾನ್ಯ ಸದಸ್ಯರ ಬೇಡಿಕೆಯ ಬಗ್ಗೆ ಸರ್ಕಾರ ಖಂಡಿತ ಪರಿಶೀಲನೆ ಮಾಡುತ್ತದೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಮಂಜು:- ಮಾನ್ಯ ಅಧ್ಯಕ್ಷರೆ, ಜನಸಂಖ್ಯೆ ಆಧಾರದ ಮೇಲೆ ಅವರು ಹೇಳಿರುವ ಅಂಕಿ-ಅಂಶಗಳ ಪ್ರಕಾರ ವರ್ಷಕ್ಕೆ 5% ಜಾಸ್ತಿ ಮಾಡಿಕೊಳ್ಳುತ್ತಾ ಅವರ ಆಧಾರದ ಮೇಲೆ ಲೆಕ್ಕ ಹಾಕಿಕೊಳ್ಳಬೇಕೆಂದು ತೀರ್ಮಾನ ಇರತಕ್ಕಂಥದ್ದು ಮಾನ್ಯ ಸಚಿವರಿಗೆ ಗೊತ್ತಿರಬೇಕು. 2001 ರಿಂದ 5% ನಂತೆ ಲೆಕ್ಕ ಹಾಕಿದರೆ 22,000 ಜನ ಸಂಖ್ಯೆಗಿಂತ ಹೆಚ್ಚು ಇರುತ್ತದೆ. ಇದರ ಆಧಾರದ ಮೇಲೆ ಪುರಸಭೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಇಲ್ಲಿಯೇ ಘೋಷಣೆ ಮಾಡಬಹುದು. ಏಕೆಂದರೆ, ಜನಸಂಖ್ಯೆಯ ಆಧಾರದ ಪ್ರಕರವೇ ಇದು ನಿಯಮಾನುಸಾರ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ, ದಯವಿಟ್ಟು ಘೋಷಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಅರಕಲಗೂಡು ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮಾಡಬೇಕೆಂದು ಮಾನ್ಯ ಮಂಜುರವರು ಕೇಳಿದ್ದಾರೆ. ಇದನ್ನು ನಿಜವಾಗಿಯೂ ಕೂಡ ಮಾಡಬೇಕಾಗಿದೆ. ಏಕೆಂದರೆ, ಅರಕಲಗೂಡು ಪಟ್ಟಣಕ್ಕೆ ಹೊಂದಿಕೊಂಡಂತೆ ಇರುವ ಅರ್ಧ ಕಿ.ಮೀ. ಒಳಗಡೆ ಸುಮಾರು 10,000 ಜನಸಂಖ್ಯೆ ಇದ್ದಾರೆ. ಇಲ್ಲಿರತಕ್ಕಂಥ ಜನಸಂಖ್ಯೆಯನ್ನು

ತೆಗೆದುಕೊಂಡು ಪುರಸಭೆಯನ್ನಾಗಿ ಮಾಡುವುದಕ್ಕೆ ಮೊದಲ ಆದ್ಯತೆ ಕೊಡಬೇಕೆಂದು ಮಾನ್ಯ ಪೌರಾಡಳಿತ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಸನ್ಮಾನ್ಯ ಸಭಾಧ್ಯಕ್ಷರೆ, ವರ್ಷಕ್ಕೆ 5%ನಷ್ಟು ಜನಸಂಖ್ಯೆಯನ್ನು ಸೇರಿಸಿಕೊಳ್ಳುತ್ತಾ ಹೋಗಬೇಕೆಂದು ನಿಯಮ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. 2001ರ ಜನಗಣತಿ ಆಧಾರದ ಮೇಲೆ ನಾವು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಾವು 2011ರವರೆಗೆ ಕಾಯಬೇಕಾಗುತ್ತದೆ. ಅಲ್ಲಿಯವರೆಗೆ ಕಾಯುವುದು ಬೇಡ. ಈಗಾಗಲೇ ಸರ್ಕಾರದ ಕಾರ್ಯದರ್ಶಿಯವರ ಮಟ್ಟದಲ್ಲಿ ಒಂದು ಡಿಎಂಎ ಕಮಿಟಿ ಮಾಡಿ ಇದರ ಬಗ್ಗೆ ಈಗಾಗಲೇ ಸ್ಟಡಿ ಮಾಡಲಾಗುತ್ತಿದೆ. ಆದಷ್ಟು ಶೀಘ್ರವಾಗಿ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಮಂಜು:- ಹಾಗಿದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲಾಗುತ್ತದೆಂದು ಪ್ರಶ್ನೆ ಕೇಳಿದ್ದೆ. ಉದ್ಭವಿಸುವುದಿಲ್ಲವೆಂದು ಮಾನ್ಯ ಸಚಿವರು ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು:- ಇರುವ ಗೈಡ್‌ಲೈನ್ಸ್ ಪ್ರಕಾರ ಬರುವುದಿಲ್ಲವೆಂದು ಮೊದಲು ಉತ್ತರ ಕೊಟ್ಟಿದ್ದಾರೆ. ಆದರೆ, ಪರಿಶೀಲನೆ ಮಾಡುತ್ತೇನೆಂದು ಈಗ ಉತ್ತರ ಹೇಳಿದ್ದಾರೆ.

ಶ್ರೀ ಎ.ಮಂಜು:- ಪರಿಶೀಲನೆ ಮಾಡುತ್ತೇನೆ ಎಂದು ಹೇಳುವುದಕ್ಕಿಂತ ಈಗ ಮಾಡುತ್ತೇವೆಂದು ಹೇಳಬೇಕು.

ಅಧ್ಯಕ್ಷರು:- ಅಂಕಿ-ಸಂಖ್ಯೆ ತೆಗೆದುಕೊಂಡು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಸಧ್ಯಕ್ಕೆ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎ.ಮಂಜು:- ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದಂಥ ಪ್ರಶ್ನೆಯಾಗಿದೆ. ತಮ್ಮ ಮುಖಾಂತರ ಕೇಳುವುದೇನೆಂದರೆ, ನಾವು ಮೊದಲಿನಿಂದಲೂ ವಂಚಿತರಾಗಿದ್ದೇವೆ. ಮತ್ತೆ ಈಗ ವಂಚಿತರಾಗುವುದು ಬೇಕಾಗಿಲ್ಲ 5% ಹೆಚ್ಚು ಮಾಡಿಕೊಳ್ಳುವುದಕ್ಕೆ ಅವಕಾಶ ಇದ್ದರೆ ಅದರ ಪ್ರಕಾರ ಮಾಡಿ. ನಿಯಮ ಬಿಟ್ಟು ಮಾಡಿ ಎಂದು ನಾನೇನು ಕೇಳುತ್ತಿಲ್ಲ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಇದರ ಬಗ್ಗೆ ಸರ್ಕಾರ ಖಂಡಿತ ಚಿಂತನೆ ಮಾಡುತ್ತದೆ. ಇದರ ಬಗ್ಗೆ ಎಲ್ಲಾ ರೀತಿಯಾದ ಅಂಕಿ-ಸಂಖ್ಯೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಕಾರ್ಯದರ್ಶಿಯವರ ಮಟ್ಟದಲ್ಲಿ ಡಿಎಂಎ ಕಮಿಟಿ ಮಾಡಿ ಪರಿಶೀಲನೆ ಮಾಡುತ್ತಿದ್ದೇವೆ. ಈಗಿರುವ ಗ್ರಾಮಪಂಚಾಯತಿಯ ಪಟ್ಟಣ ಪಂಚಾಯತ್ ಮಾಡಬೇಕೆಂಬ ಮತ್ತು ಪಟ್ಟಣ ಪಂಚಾಯತಿಯ ಪುರಸಭೆಯನ್ನಾಗಿ ಮಾಡಬೇಕೆಂಬ ಪ್ರಸ್ತಾವನೆ ಕೂಡ ನಮ್ಮ

ಮುಂದೆ ಇದೆ. ಆದ್ದರಿಂದ, ಖಂಡಿತವಾಗಿ ಇದರ ಬಗ್ಗೆ ಗಂಭೀರವಾಗಿ ನಾವು ಪರಿಶೀಲನೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಯು.ಟಿ.ಖಾದರ್:- ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತಿಯು ಮೇಲ್ದರ್ಜೆಗೆ ಏರಿಸುವ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಏಕೆಂದರೆ, ಹಲವಾರು ಗ್ರಾಮ ಪಂಚಾಯತಿಗಳಲ್ಲಿ ಇನ್ನು ಚುನಾವಣೆಯಾಗಿಲ್ಲ. ಕಾರಣವೇನೆಂದರೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್ ಆಗುತ್ತದೆಂದು ನೋಟಿಫೈ ಮಾಡಿರುವುದರಿಂದ ಗ್ರಾಮಪಂಚಾಯತ್ ಆಗಲಿ ಅಥವಾ ಪಟ್ಟಣ ಪಂಚಾಯತ್ ಇದುವರೆಗೂ ಆಗದೆ ಇರುವುದರಿಂದ ಅಲ್ಲಿನ ಜನರು ಮೂಲಭೂತ ಸೌಕರ್ಯಗಳಿಂದ ಅಂದರೆ, ವಿದ್ಯುತ್, ಕುಡಿಯುವ ನೀರು ಮತ್ತು ಇತರೇ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಯಾವಾಗ ಆಗುತ್ತದೆಂಬುದರ ಬಗ್ಗೆ ಸ್ಪಷ್ಟವಾದ ತೀರ್ಮಾನ ಹೇಳಬೇಕು. ಇಲ್ಲದಿದ್ದರೆ ಗ್ರಾಮಪಂಚಾಯತಿ ಚುನಾವಣೆಯನ್ನಾದರೂ ಮಾಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿನ ಸೋಮೇಶ್ವರ ಗ್ರಾಮ ಪಂಚಾಯತಿಯ ಇದೇ ಪರಿಸ್ಥಿತಿ ಆಗಿದೆ.

ಶ್ರೀ ವೈ.ಎನ್.ರುದ್ರೇಶ್‌ಗೌಡ:- ಮಾನ್ಯ ಮಂಜುರವರು ಹೇಳಿರುವ ಹಾಗೆ ಅರಕಲಗೂಡು ಹೆಡ್‌ಕ್ವಾರ್ಟರ್ ಆಗಿರುವುದರಿಂದ ದಯವಿಟ್ಟು ಅರಕಲಗೂಡನ್ನು ಪುರಸಭೆಯಾಗಿ ಕನ್ವರ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಪುರಸಭೆ ವ್ಯಾಪ್ತಿಯಲ್ಲಿ ಟೌನ್ ಪ್ಲಾನಿಂಗ್‌ನಿಂದ ನೋಟಿಫಿಕೇಷನ್ ಮಾಡಿಸಿದ್ದಾರೆ. ನಗರಗಳು ಬೆಳೆದಂತೆ ಕೆಲವೊಂದು ಗ್ರಾಮಗಳು ಸಹ ನಗರಕ್ಕೆ ಸೇರಿಕೊಂಡಿವೆ. ಇದರಿಂದ ಗ್ರಾಮಪಂಚಾಯತ್ ವ್ಯಾಪ್ತಿಯಿಂದ ಇಂಥ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ. ಈ ಕಡೆ ಪುರಸಭೆಯಿಂದಲೂ ಕೂಡ ಈ ಗ್ರಾಮಗಳಿಗೆ ಮೂಲಭೂತ ಸೌಕರ್ಯ ಸಿಗುತ್ತಿಲ್ಲ. ಆದ್ದರಿಂದ, ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಜನಸಂಖ್ಯೆಯ ಆಧಾರದ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಕೆಲವೊಂದು ಪಟ್ಟಣ ಪಂಚಾಯತಿಯ ಪುರಸಭೆಯನ್ನಾಗಿ ಮಾಡುವುದನ್ನಾಗಲಿ ಅಥವಾ ಗ್ರಾಮ ಪಂಚಾಯತಿಯ ಪಟ್ಟಣ ಪಂಚಾಯತ್ ಮಾಡುವುದಕ್ಕಾಗಿ ಈಗ ಇರತಕ್ಕಂಥ ಕಾನೂನನ್ನು ತಿದ್ದುಪಡಿ ಮಾಡಿ ಅನುಕೂಲ ಮಾಡಿಕೊಡುವಂಥ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬೇಳೂರು ಗೋಪಾಲಕೃಷ್ಣ:- ಇವತ್ತಿನ ದಿವಸ ಗ್ರಾಮ ಪಂಚಾಯತಿಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಹೆಚ್ಚಾಗಿದೆ. ಆದ್ದರಿಂದ, ಗ್ರಾಮಪಂಚಾಯತಿಗಳನ್ನು ಪಟ್ಟಣ ಪಂಚಾಯತಿ ಮಾಡುವುದಕ್ಕೆ ಮತ್ತು ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವುದಕ್ಕೆ ನಿಗದಿ ಮಾಡಿರುವ

ಜನಸಂಖ್ಯೆ ಆಧಾರವನ್ನು ಸಡಿಲಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಪಟ್ಟಣ ಪಂಚಾಯತಿಯನ್ನಾಗಿ ಮಾಡುವುದರಿಂದ ಹೆಚ್ಚಿನ ಅನುದಾನ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಪಟ್ಟಣ ಪಂಚಾಯತಿ ಮಾಡುವುದು ಒಳ್ಳೆಯದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುವಾಗ ಇದರ ಬಗ್ಗೆ ಖಂಡಿತ ಪರಿಶೀಲನೆ ಮಾಡುತ್ತದೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಬಾಗೇಪಲ್ಲಿಯಲ್ಲಿ ಶುದ್ಧೀಕರಿಸದ ನೀರನ್ನು ಸರಬರಾಜು ಮಾಡುತ್ತಿರುವ ಬಗ್ಗೆ

50(361) ಶ್ರೀ ಸಂಪಂಗಿ.ಎನ್(ಬಾಗೇಪಲ್ಲಿ)

ಶ್ರೀ ಎಸ್. ಸುರೇಶ್ ಕುಮಾರ್(ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು)

ಅ) ಬಾಗೇಪಲ್ಲಿ ಚುನಾವಣಾ ಕ್ಷೇತ್ರದ ಗುಡಿಬಂಡೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಶುದ್ಧೀಕರಿಸದ ನೀರನ್ನು ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗುಡಿಬಂಡೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಶುದ್ಧೀಕರಿಸಿದ ನೀರನ್ನು ಪೂರೈಸಲಾಗುತ್ತಿದೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಉದ್ಭವಿಸುವುದಿಲ್ಲ.

ಶ್ರೀ ಎನ್.ಸಂಪಂಗಿ:- ಮಾನ್ಯ ಅಧ್ಯಕ್ಷರೆ, ಗುಡಿಬಂಡೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಶುದ್ಧೀಕರಿಸಿದ ನೀರನ್ನು ಪೂರೈಸಲಾಗುತ್ತಿದೆ ಎಂದು ಮಾನ್ಯ ಸಚಿವರು ಬಹಳ ಚೆನ್ನಾಗಿ ಉತ್ತರಿಸಿದ್ದಾರೆ. ಇವರು ನೀಡಿರುವ ಉತ್ತರದ ಪ್ರಕಾರ ನಾವು ಪ್ರಶ್ನೆ ಕೇಳತಕ್ಕಂಥ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಅಂದರೆ, ಅಲ್ಲಿ ಶುದ್ಧೀಕರಿಸಿದ ನೀರನ್ನು ಪೂರೈಸುತ್ತಿದ್ದರೆ ನಾವು ಪ್ರಶ್ನೆಯನ್ನು ಕೇಳತಕ್ಕಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಸಚಿವರಾಗಿರುವಂಥವರು ಅಲ್ಲಿನ ಅಧಿಕಾರಿಗಳನ್ನು ಕರೆಸಿ ಏನು ನಡೆಯುತ್ತಿದೆ ಎಂದು ಕೇಳಬೇಕು. ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ, ಗುಡಿಬಂಡೆ ಮತ್ತು ಬಾಗೇಪಲ್ಲಿ ಪಟ್ಟಣಗಳಿಗೆ ಯಾವ ಕೆರೆಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಮತ್ತು ಆ ಕೆರೆಯ ನೀರನ್ನು ಸರಬರಾಜು ಮಾಡುವ ಶುದ್ಧೀಕರಣ ಘಟಕಕ್ಕೆ ಎಷ್ಟು ಹಣ ಒದಗಿಸುತ್ತಿದ್ದಾರೆಂದು ಹಾಗೂ ಅಲ್ಲಿ ಯಾವ

ರೀತಿಯಾಗಿ ನೀರು ಶುದ್ಧೀಕರಣ ಮಾಡಿ ಅಲ್ಲಿನ ಪೂರೈಸಲಾಗುತ್ತಿದೆ ಎಂಬ ಮಾಹಿತಿಯನ್ನು ಸದನಕ್ಕೆ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಸನ್ಮಾನ್ಯ ಸಭಾಧ್ಯಕ್ಷ ಜಿಲ್ಲೆಯಲ್ಲಿರುವ ಗುಡಿಬಂಡೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಬಾಗೇಪಲ್ಲಿ ಹಾಗೂ ಇಂಟರ್‌ನಲ್‌ನಲ್ಲಿ ಬರತಕ್ಕಂಥ ಕೆಲವು ಹಳ್ಳಿಗಳಿಗೆ ಚಿತ್ರಾವತಿ ನದಿ ಅಣೆಕಟ್ಟಿನಿಂದ ನೀರು ಸರಬರಾಜು ಮಾಡಲಾಗುತ್ತಿದೆ. ನಾನು ಮಾಹಿತಿ ತೆಗೆದುಕೊಂಡ ಪ್ರಕಾರ ಗುಡಿಬಂಡೆ ಪಟ್ಟಣಕ್ಕೆ ಪ್ರತಿದಿವಸ 6 ಲಕ್ಷ ಲೀಟರ್‌ನ್ನು ಕೊಡುತ್ತಿದ್ದಾರೆ.

ಅಲ್ಲಿ ಶುದ್ಧೀಕರಣದ ಬಗ್ಗೆ ಈಗಾಗಲೇ ಅಲ್ಲಿ ಸಂಬಂಧಪಟ್ಟ ಪುರಸಭೆಯಿಂದ ದುಡ್ಡನ್ನು ಖರ್ಚು ಮಾಡಿ ಶುದ್ಧೀಕರಣ ಮಾಡಿ ನೀರನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ತಮಗೆ ಸ್ಪಷ್ಟವಾಗಿ ಏನಾಗಬೇಕು ಎಂದು ಹೇಳಿದರೆ ಸರ್ಕಾರದ ಕಡೆಯಿಂದ ಸರಿ ಮಾಡಿಕೊಡಲಾಗುವುದು. ನನಗೆ ತಿಳಿದಂಥ ಮಾಹಿತಿ ಪ್ರಕಾರ ಪ್ರತಿ ದಿವಸ 6 ಲಕ್ಷ ಲೀಟರ್ ನೀರನ್ನು ಶುದ್ಧೀಕರಣ ಮಾಡಿಕೊಡುತ್ತಿದ್ದೇವೆಂದು ನನಗೆ ಬಂದಂಥ ಮಾಹಿತಿಯಾಗಿದೆ. ಆದುದರಿಂದ ಅದನ್ನು ಬಿಟ್ಟು ಬೇರೆ ಇನ್ನೇನು ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ಬಗ್ಗೆ ಸಲಹೆಯನ್ನು ಕೊಟ್ಟರೆ ಖಂಡಿತ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎನ್. ಸಂಪಂಗಿ:- ಸಾರ್, ಈ ಒಂದು ಪರಗೋಡು ಯೋಜನೆಯಲ್ಲಿ ಪರಗೋಡನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಒಂದು ಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ತಾವು ಕೂಡ ಕೇಂದ್ರ ಸರ್ಕಾರದ ಜೊತೆ ಒತ್ತಾಯ ಮಾಡಲು ಬಂದಿದ್ದಿರಿ. ಕೇವಲ ಕುಡಿಯುವ ನೀರಿಗೋಸ್ಕರವಾಗಿಯೇ ಅಲ್ಲಿ ದೊಡ್ಡ ಹೋರಾಟವಾಯಿತು. ತಾವು ಕೂಡ ದೆಹಲಿಗೆ ಬಂದಿದ್ದೀರಿ. ಪರಗೋಡನ್ನು ಉಳಿಸಿಕೊಂಡು ಆಂಧ್ರಪ್ರದೇಶದ ವಿರುದ್ಧ ದೊಡ್ಡ ಹೋರಾಟ ಮಾಡಿ ಒಂದು ಕೆರೆಯನ್ನು ನಿರ್ಮಾಣ ಮಾಡಿ ಆ ನೀರನ್ನು ಕೇವಲ ಕುಡಿಯುವ ನೀರಿಗೆ, ಅಂದರೆ ಅದನ್ನು ಬಾಗೇಪಲ್ಲಿ ಪಟ್ಟಣ, ಗುಡಿಬಂಡೆ ಪಟ್ಟಣ ಮತ್ತು 128 ಹಳ್ಳಿಗಳಿಗೆ ಎಂದು ನಾವು ಮಾಡಿಸಿದೆವು. ಇವತ್ತು ಇವರು ಪಟ್ಟಣಕ್ಕೆ ನೀರು ಕೊಡುತ್ತಿದ್ದಾರೆ, ಆ ನೀರು ಶುದ್ಧೀಕರಣದ ಘಟಕಕ್ಕೆ ಹೋಗದೇ ನೇರವಾಗಿ ಪೈಪ್‌ಲೈನ್‌ಗಳ ಮೂಲಕ ಬಾಗೇಪಲ್ಲಿ ಪಟ್ಟಣಕ್ಕೆ ಮತ್ತು ಗುಡಿಬಂಡೆ ಪಟ್ಟಣಕ್ಕೆ ನೀರನ್ನು ಕೊಡುತ್ತಿದ್ದಾರೆ. ನೀರು ಶುದ್ಧೀಕರಣ ಘಟಕಕ್ಕೆ ಹೋಗುತ್ತಲೇ ಇಲ್ಲ. ಇವರಿಗೆ ಆಲಂ ತೆಗೆದುಕೊಳ್ಳುವುದಕ್ಕೂ ಕೂಡ ಹಣವಿಲ್ಲ. ಮರಳನ್ನು ತೆಗೆದು ಸುಮಾರು ಮೂರು ತಿಂಗಳಾಗಿದೆ. ಆ ಮರಳನ್ನು ಮಂಗಳೂರಿನಿಂದ ತರಿಸಬೇಕು. ಮಂಗಳೂರಿನಿಂದ ಮರಳನ್ನು ತರಿಸಲು ಇವರ ಹತ್ತಿರ ಅಲ್ಲಿ ಹಣವಿಲ್ಲ. ಇದಲ್ಲದೇ ನೀರನ್ನು ಪೂರೈಕೆ ಮಾಡುವುದಕ್ಕೆ ಇವರು

ಹೊಸ ಪೈಪ್‌ಲೈನ್‌ಗಳನ್ನು ಹಾಕಬೇಕಾಗಿತ್ತು. ಆದರೆ ಇವರು ಹಳೆಯ ಪೈಪ್‌ಗಳೇನಿವೆ, ಅದರ ಮೂಲಕವೇ ಬೋರ್‌ವೆಲ್ ನೀರನ್ನು ಕೊಡುತ್ತಿದ್ದಾರೆ. ಇದರಲ್ಲಿ ಫ್ಲೋರೈಡ್ content ಜಾಸ್ತಿ ಇದೆ. ಆದುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿರುವುದು ನನಗೋಸ್ಕರ ಅಲ್ಲ. ಕ್ಷೇತ್ರದ ತೊಂಭತ್ತು ಸಾವಿರ ಜನರು ಇಂದು ಫ್ಲೋರೈಡ್‌ನಿಂದಾಗಿ ಕಾಯಿಲೆಗೆ ತುತ್ತಾಗಿದ್ದಾರೆ. ಅದಕ್ಕನುಗುಣವಾಗಿ ಈ ಒಂದು ಕೆರೆಯನ್ನು ನಿರ್ಮಾಣ ಮಾಡಿದ್ದೇವೆ. ಇವತ್ತು ಅದರ ಪ್ರಕಾರ ಶುದ್ಧವಾದ ನೀರನ್ನು ಕೊಡಬೇಕಾಗಿತ್ತು. ಆದರೆ ಕೊಡದೇ ಜನಗಳಿಗೆ ವಂಚನೆ ಮಾಡಲಾಗುತ್ತಿದೆ. ಅಧಿಕಾರಿಗಳ ಬೇಜವಾಬ್ದಾರಿಯಿಂದ ಈ ರೀತಿಯಾಗಿದೆ. ಈಗಾಗಲೇ 2007ರಲ್ಲಿ ಸಚಿವರ ಸಮ್ಮುಖದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆಸಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರು ಈಗಾಗಲ್ತೇ ಆ ಕೆರೆಯನ್ನು ಶುದ್ಧಿಕರಣ ಮಾಡಬೇಕಾಗಿತ್ತು. ಆದರೆ ಇವತ್ತಿನವರೆವಿಗೂ ಶುದ್ಧಿಕರಣ ಮಾಡಿಲ್ಲ. ಆ ಕರೆಯಲ್ಲಿ ಮಕ್ಕಳು ಈಜಾಡುವುದಕ್ಕೆ ಹೋಗಿ ಸತ್ತಿದ್ದಾರೆ. ಈಗ ಅಲ್ಲಿ ಮೀನು ಸಾಕಾಣಿಕೆಗೆ ಪರ್ಮಿಶನ್‌ನ್ನು ಕೊಟ್ಟಿದ್ದಾರೆ. ಈಗ ಅಲ್ಲಿ ಮೀನು ಹಿಡಿಯುವ ಗುತ್ತಿಗೆದಾರರು ಗೊಬ್ಬರವನ್ನು ತಂದು ಆ ನೀರಿಗೆ ಹಾಕುತ್ತಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರು ನಿರ್ಮಾಣ ಮಾಡಿದ ಪರಗೋಡು ದೊಡ್ಡ ಕೆರೆಯನ್ನು ರಕ್ಷಣೆ ಮಾಡಬೇಕು ಮತ್ತು ಅಲ್ಲಿಯ ನೀರನ್ನು ಶುದ್ಧೀಕರಣ ಘಟಕಕ್ಕೆ ತಂದಾಗ ಅಲ್ಲಿ ಶುದ್ಧೀಕರಣ ಮಾಡುವುದಕ್ಕಾಗಿಯೇ ವಿಶೇಷ ಅನುದಾನವನ್ನು ಸರ್ಕಾರ ಕೊಡಬೇಕು. ಇದರ ಜೊತೆಗೆ ಬಾಗೇಪಲ್ಲಿ ಪಟ್ಟಣ ಮತ್ತು ಗುಡಿಬಂಡೆಗಳಲ್ಲಿ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಬೇಕು ಮತ್ತು ಹೊಸ ಪೈಪ್‌ಲೈನ್‌ಗಳನ್ನು ಹಾಕಿ ಅದರ ಮೂಲಕ ನೀರನ್ನು ಕೊಡಬೇಕು. ಇದು ನನ್ನ ಕೋರಿಕೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನನಗೆ ಬಂದಂಥ ಮಾಹಿತಿ ಪ್ರಕಾರ ನೀರು ಸರಬರಾಜು ಮಂಡಳಿಯವರು ಇರಬಹುದು, ಇವರು ಸರಿಯಾದ ನಿರ್ವಹಣೆ ಮಾಡುವುದಕ್ಕೆ ಆಗಲಿಲ್ಲವೆಂದು ಹೇಳುವ ಮಾಹಿತಿ ಬಂದಿದೆ. ಈಗ ನಾವು ಒಂದು ವಿಷಯವನ್ನು ಚರ್ಚೆ ಮಾಡಿದ್ದೇವೆ. ಈಗ ಒಂದು ಕಮಿಟಿಯನ್ನು ಮಾಡಿದ್ದೇವೆ. ಚಿಕ್ಕಬಳ್ಳಾಪುರ ಅಸಿಸ್ಟೆಂಟ್ ಕಮಿಶನರ್ ಅಧ್ಯಕ್ಷತೆಯಲ್ಲಿ, ಎರಡು ಪುರಸಭೆ ಚೀಫ್ ಆಫೀಸರ್ ಮತ್ತು ತಾಲ್ಲೂಕು ಪಂಚಾಯತಿ ಎಕ್ಸಿಕ್ಯುಟಿವ್ ಆಫೀಸರ್ ಸೇರಿದಂತೆ ನಾಲ್ಕು ಜನರಿರುವ ಒಂದು ಕಮಿಟಿಯನ್ನು ಮಾಡಿದ್ದೇವೆ. ಈ ಸಮಿತಿ ಇದರ ಉಸ್ತುವಾರಿಯನ್ನು ವಹಿಸಬೇಕೆಂದು ಹೇಳಿದ್ದೇವೆ. ಏಕೆಂದರೆ ಯಾರೂ ಕೂಡ ನೋಡುತ್ತಿಲ್ಲವೆಂದು ಕಂಪ್ಲೆಂಟ್ ಬರುವುದರಿಂದ ಈ ರೀತಿಯಾಗಿದೆ. ಆದುದರಿಂದ ಅಸಿಸ್ಟೆಂಟ್ ಕಮಿಶನರ್, ಇಬ್ಬರು ಚೀಫ್ ಆಫೀಸರ್, ತಾಲ್ಲೂಕು ಪಂಚಾಯಿತಿಯ ಎಕ್ಸಿಕ್ಯೂಟಿವ್ ಆಫೀಸರ್ ಸೇರಿದಂತೆ ನಾಲ್ಕು ಜನರಿರುವ ಒಂದು ಸಮಿತಿಯನ್ನು

ಮಾಡಿ ಅವರಿಗೆ ಉಸ್ತುವಾರಿಯನ್ನು ವಹಿಸುತ್ತೇವೆ. ತಾವೇನು ದುಡ್ಡಿನ ಬಗ್ಗೆ ಹೇಳಿದ್ದೀರಿ, ಅದರ ಬಗ್ಗೆ ಕಮಿಶನರ್ ಜೊತೆ ಚರ್ಚೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯ ಜನರಿಗೆ ಶುದ್ಧವಾದ ನೀರನ್ನು ಪೂರೈಕೆ ಮಾಡಲು ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತದೆ. ನಾಲ್ಕು ಜನರಿರುವ ಸಮಿತಿ ಏನಿದೆ, ಆ ಸಮಿತಿಗೆ ತಮ್ಮ ಸಲಹೆಗಳನ್ನೂ ಕೂಡ ಕೊಡಿ. ಇನ್ನು ಮುಂದೆ ಖಂಡಿತ ಹಿಂದೆ ಆದಂತೆ ಆಗಲು ಅವಕಾಶ ಕೊಡುವುದಿಲ್ಲವೆಂದು ಹೇಳಬಯಸುತ್ತೇನೆ.

ಸರ್ವಜ್ಞನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಮೇಲ್ ಸೇತುವೆ ಮತ್ತು ಅಂಡರ್‌ಪಾಸ್ ನಿರ್ಮಾಣದ ಬಗ್ಗೆ

51(54) ಶ್ರೀ ಜಾರ್ಜ್ ಕೆ.ಜೆ(ಸರ್ವಜ್ಞನಗರ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)

ಅ) ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಮೇಲ್‌ಸೇತುವೆ ಮತ್ತು ಅಂಡರ್‌ಪಾಸ್‌ಗಳನ್ನು (ರೈಲ್ವೆ ಸೇರಿ) ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಸದರಿ ಕ್ಷೇತ್ರದ ಲಿಂಗರಾಜಪುರದ ರೈಲ್ವೆ ಮೇಲ್ಸೇತುವೆ ಸ್ಥಳದಲ್ಲಿ ಒಂದು ರೈಲ್ವೆ ಕೆಳಸೇತುವೆಯನ್ನು ಸಹಾ ನಿರ್ಮಿಸಲು ಉದ್ದೇಶಿಸಿದ್ದು, ಜೆ.ಎ.ಡಿಯನ್ನು ತಯಾರಿಸಲು ಮೆ:ಸ್ಟೂಪ್ ಕನ್ಸಲ್‌ಟೆನ್ಸಿ ರವರಿಗೆ ಪತ್ರವನ್ನು ಬರೆಯಲಾಗಿದೆ. ಈ ಕಾಮಗಾರಿಯನ್ನು ರೈಲ್ವೆ ಇಲಾಖೆಯ ವತಿಯಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಾಗವಾರ ರಸ್ತೆ ಹಾಗೂ ಹೊರವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಜೆ.ಎನ್.ಎನ್.ಯು.ಆರ್.ಎಂ ಅಡಿಯಲ್ಲಿ ಮೇಲ್ಸೇತುವೆ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಸದರಿ ಕಾಮಗಾರಿಗೆ ಪಾಲಿಕೆಯ ಆಡಳಿತಗಾರರ ಅನುಮೋದನೆ ಪಡೆದು, ನಂತರ ಟೆಂಡರ್ ಕರೆದು ಪ್ರಾರಂಭಿಸಲಾಗುವುದು.

ಕಬ್ಬನ್ ರಸ್ತೆಯಿಂದ ಹೊರವರ್ತುಲ ರಸ್ತೆಯವರೆಗೆ ಸಿಗ್ನಲ್ ಮುಕ್ತ ಕಾರಿಡಾರ್ ಕಾಮಗಾರಿಯನ್ನು ನಿರ್ಮಿಸಲು ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಕಾರಿಡಾರ್‌ನಲ್ಲಿ ಬರುವ ಎರಡು ಜಂಕ್ಷನ್‌ಗಳ ಬಳಿ ಅಂಡರ್ ಪಾಸ್ ನಿರ್ಮಿಸಲು ಕ್ರಮ ತೆಗೆದುಕೊಂಡಿದ್ದು, ವಿವರಗಳು ಈ ಕೆಳಕಂಡಂತಿದೆ.

1. ಕಬ್ಬನ್ ರೋಡ್‌ನಿಂದ ಹೊರವರ್ತುಲ ರಸ್ತೆ ವಯಾ ಕಾಮರಾಜ ರಸ್ತೆ ಬುದ್ಧವಿಹಾರ್ ರಸ್ತೆ ಹಾಗೂ ಹೆಣ್ಣೂರು ರಸ್ತೆ.
2. ಹೊರವರ್ತುಲ ರಸ್ತೆಗೆ ಸಂಬಂಧಿಸಿದ ಮೈಸೂರು ರಸ್ತೆಯಿಂದ ಸಿಲ್ಕ್‌ಬೋರ್ಡ್ ಜೆಂಕ್ಷನ್ ವರೆಗೆ.

ಈ ಅಂಡರ್ ಪಾಸ್ ಕಾಮಗಾರಿಗಳನ್ನು ಮುಂದಿನ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಅನುಷ್ಠಾನಗೊಳಿಸಲು ಯೋಜಿಸಿದೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಈ ಉತ್ತರದಲ್ಲಿ ಕೆಲವು ಲೋಪದೋಷಗಳಿವೆ, ಏಕೆಂದರೆ ನನ್ನ ಕ್ಷೇತ್ರದಲ್ಲಿ ನಾಗವಾರ roadನಲ್ಲಿ overbridge ಬರುತ್ತಿದೆ. ಆದರೆ ಅವರು ಈ ವಿಚಾರದ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಅದೇ ರೀತಿಯಲ್ಲಿ ಈಗಾಗಲೇ ಲಿಂಗರಾಜಪುರ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಈಗ ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಿದೆ. ಲಿಂಗರಾಜಪುರ ಮತ್ತು ಬಾಣಸವಾಡಿಯಲ್ಲಿ ಎರಡು ಫ್ಲೈಓವರ್‌ಗಳನ್ನು ರೈಲ್ವೆಯವರು ಮಾಡಿದ್ದಾರೆ. ಅದನ್ನು unscientific ಆಗಿ ಮಾಡಿದ್ದಾರೆ. ಇದರಿಂದ ಜನರಿಗೆ ಉಪಕಾರಕ್ಕಿಂತ ದೊಡ್ಡ ಅಪಕಾರವೇ ಆಗುತ್ತಿದೆ. ಅಲ್ಲಿ ಆ ಬ್ರಿಡ್ಜ್ ಕೆಳಗಡೆ ಸುಮಾರು 35 ರಿಂದ 40 ಸಾವಿರ ಜನರು ವಾಸಿಸುತ್ತಿದ್ದಾರೆ. ಅವರಿಗೆ ಅಲ್ಲಿ ದಾಟುವುದಕ್ಕೆ ಅವಕಾಶವೇ ಇಲ್ಲ. ಅಲ್ಲಿ ಮಕ್ಕಳುಗಳು ಇದ್ದಾರೆ, ಶಾಲೆ ಇದೆ. ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಿ ಈ ಬಗ್ಗೆ agitate ಮಾಡುತ್ತಿದ್ದಾರೆ. ಈಗ ಅವರಿಗೆ ನಾವು ಶಾಂತಿಯಿಂದ ಇರುವಂತೆ ಸಮಾಧಾನ ಮಾಡಿದ್ದೇವೆ. ಆದುದರಿಂದ ಆದಷ್ಟು ಬೇಗ ಲಿಂಗರಾಜಪುರಂ ಕೆಳಗಡೆ ಅಂಡರ್‌ಬ್ರಿಡ್ಜ್ ಆಗಬೇಕು. ಅದನ್ನು ರೈಲ್ವೆಯವರು ಮಾಡುತ್ತಾರೆಂದು ಬಿಟ್ಟರೆ ಆಗುವುದಿಲ್ಲ. ನೀವೇ ಈ ಬಗ್ಗೆ ಆಸಕ್ತಿ ವಹಿಸಿ ತಮ್ಮ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಅದೇ ರೀತಿಯಲ್ಲಿ ಬಾಣಸವಾಡಿಯಲ್ಲಿ ಕೂಡ Road under bridge ಬರುತ್ತದೆ. ಅಲ್ಲಿಯೂ ಕೂಡ ವಾಹನಗಳು ಬಲಗಡೆ ತೆಗೆದುಕೊಳ್ಳುವುದಕ್ಕೆ ಜಾಗವಿಲ್ಲ, ಅಲ್ಲಿ ವೆಹಿಕಲ್ ಸಾಕಷ್ಟು ಇದ್ದು, ಇದರಿಂದ ತೊಂದರೆಯಾಗುತ್ತಿದೆ. ಇನ್ನು ನಾಗವಾರದಲ್ಲಿ ಕೂಡ ಒಂದೊಂದು ಬಾರಿ ರೈಲ್ವೆ ಲೆವೆಲ್ ಕ್ರಾಸಿಂಗ್ ಕ್ಲೋಸ್ ಆದರೆ ಸುಮಾರು ಒಂದು ಗಂಟೆ, ಎರಡು ಗಂಟೆಯತನಕ ವಾಹನಗಳು ಕ್ರಾಸ್ ಮಾಡಲು ಟ್ರಾಫಿಕ್ ಜಾಮ್‌ನಿಂದ ತೊಂದರೆಯಾಗುತ್ತಿದೆ. ಆದುದರಿಂದ ಅಲ್ಲಿಯೂ ಕೂಡ ನಾನು ಹೇಳಿರುವಂತೆ ಮಾಡಬೇಕಾಗಿದೆ. ಇನ್ನೊಂದು ವಿಚಾರವೆಂದರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಕಬ್ಬನ್ ರೋಡ್‌ನಿಂದ ರಿಂಗ್ ರೋಡ್‌ತನಕ ನಾವು traffic free road ಆಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ

ಬಾಣಸವಾಡಿ, ಲಿಂಗರಾಜಪುರಂ ಓವರ್‌ಬ್ರಿಡ್ಜ್ ಮೂಲಕ ಹೋಗಬೇಕಾಗಿದೆ. ಆದರೆ ಆ ಬ್ರಿಡ್ಜ್‌ಗಳು ಒಂದು ಸಣ್ಣ ಸೇತುವೆ ಇದ್ದಂತಿವೆ. ಆದುದರಿಂದ ನಾನು ಹೇಳುವುದೇನೆಂದರೆ, ರೈಲ್ವೆ ಓವರ್‌ಬ್ರಿಡ್ಜ್‌ಗಳನ್ನು ಅಗಲ ಮಾಡಬೇಕು. ಮೊದಲು ಈ ಕೆಲಸವನ್ನು ತಾವು ಮಾಡಿಸಬೇಕು. ಇನ್ನು ರೋಡ್ ಅಗಲ ಮಾಡುವುದಕ್ಕೆ ಅಕ್ಕಪಕ್ಕ ಇರುವ ಮನೆಗಳನ್ನು ಒಡೆದುಹಾಕುತ್ತೀರಿ. ಆದರೆ ಲೆವೆಲ್ ಕ್ರಾಸಿಂಗ್‌ನಲ್ಲಿ ಮಾತ್ರ ಬಾಟಲ್‌ನೆಕ್ ಆಗಿರುತ್ತದೆ. ಆದುದರಿಂದ ದಯವಿಟ್ಟು ಯಾವುದೇ ಕಾಮಗಾರಿಯನ್ನು ತೆಗೆದುಕೊಂಡರೂ ಕೂಡ ಸಂಪೂರ್ಣವಾಗಿ ಅದರ ಬಗ್ಗೆ ಅವಲೋಕನವನ್ನು ಮಾಡಿಕೊಂಡು ಕಾಮಗಾರಿ ಕೆಲಸವನ್ನು ಮಾಡಿಸಬೇಕೆಂದು ತಮಗೆ ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಬ್ಬನ್ ರಸ್ತೆಯಿಂದ ಹೊರ ವರ್ತುಲ ರಸ್ತೆಯವರೆವಿಗೆ, ಕಾಮರಾಜ ರಸ್ತೆ., ಬುದ್ಧವಿಹಾರ್ ರಸ್ತೆ, ಹೆಣ್ಣೂರ್ ರಸ್ತೆ ಮತ್ತು ಹೊರವರ್ತುಲ ರಸ್ತೆಗೆ ಸೇರಿದಂತೆ ಮೈಸೂರು ರಸ್ತೆಯಿಂದ ಸಿಲ್ಕ್ ಬೋರ್ಡ್ ರಸ್ತೆಯವರೆವಿಗೆ ಏನಾಗಿದೆ ಎಂಬ ಬಗ್ಗೆ ಉತ್ತರದಲ್ಲಿ ಹೇಳಿದೆ. ಮುಂದಿನ ಸಾಲಿನಲ್ಲಿ ಕೆಲಸ ಮಾಡುತ್ತೇವೆ. ಅಷ್ಟರಲ್ಲಿ ಫಾರ್ಮಾಲಿಟಿಸ್‌ಗಳನ್ನು ಮುಗಿಸುತ್ತೇವೆ. ಇನ್ನು ಎರಡನೆಯದಾಗಿ ನೀವು ಲಿಂಗರಾಜಪುರಂ ಬಗ್ಗೆ ಪ್ರಸ್ತಾಪ ಮಾಡಿ ಅಲ್ಲಿ ಅಂಡರ್‌ಪಾಸ್ ಆಗಬೇಕೆಂದು ಹೇಳಿದ್ದೀರಿ. ಈಗಾಗಲೇ ಒಂದು ವಾರದಲ್ಲಿ GAD ಯನ್ನು ರೆಡಿ ಮಾಡಿಸಿ, ನಿಮಗೆ ಗೊತ್ತಿದೆ, ಇದನ್ನೆಲ್ಲಾ ರೈಲ್ವೆಯವರೇ ಮಾಡಬೇಕು, ನಮ್ಮ ಕಡೆಯಿಂದ ಹಣವನ್ನು ಏನು ಡೆಪಾಸಿಟ್ ಮಾಡಬೇಕಾಗಿದೆ, ಆ ಹಣವನ್ನು ನಾವು ಡೆಪಾಸಿಟ್ ಮಾಡುತ್ತೇವೆ. ಇನ್ನು Nagavara fly over will be taken up on ring road ಇದಕ್ಕೆ ಆದ್ಯತೆಯನ್ನು ಕೊಡುತ್ತೇವೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಬಿ.ಬಿ.ಎಂ.ಪಿ. ಯಿಂದ ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. 2005-06ರಲ್ಲಿ 595 ಕೋಟಿ ರೂಪಾಯಿಗಳನ್ನು ಮಾಡಿದ್ದೇವೆ. 2006-07 ರಲ್ಲಿ 610 ಕೋಟಿ ಖರ್ಚು ಮಾಡಿದ್ದರೆ, 2007-08 ರಲ್ಲಿ 1180 ಕೋಟಿ ಮತ್ತು 2008-09 ರಲ್ಲಿ 1500 ಕೋಟಿ. ಈಗ 2009-10 ರಲ್ಲಿ 2300 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಅಂದರೆ ಸಮಗ್ರವಾಗಿ ಅಭಿವೃದ್ಧಿ ಮಾಡುವುದಕ್ಕೆ ವಿಶೇಷವಾದ ಗಮನವನ್ನು ಕೊಡುತ್ತಿದ್ದೇವೆ. ಇನ್ನು ಸರ್ವಜ್ಞ ನಗರಕ್ಕೂ ಕೂಡ 2008-09ರಲ್ಲಿ 24 ಕೋಟಿ 78 ಲಕ್ಷ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೆವು. ಅಲ್ಲಿ ಕೆಲವು ಕಾಮಗಾರಿ ಪೂರ್ಣವಾಗಿದೆ, ಕೆಲವು ಕಾಮಗಾರಿ ಇನ್ನೂ ಪ್ರಾರಂಭದ ಹಂತದಲ್ಲಿದೆ. 2009-10 ರಲ್ಲಿಯೂ ಕೂಡ 27 ಕೋಟಿ 80 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಆದ್ಯತೆ ಮೇಲೆ ನೀವೇನು ಕೆಲಸಗಳನ್ನು ಹೇಳಿದ್ದೀರಿ, ಅದರ ಕಡೆಗೆ ಗಮನ ಕೊಡುತ್ತೇನೆ. ಈಗೇನು

ಲಿಂಗರಾಜಪುರಂ ಬಗ್ಗೆ ಹೇಳಿದ್ದೀರಿ, ನಾನು ಹೇಳುತ್ತೇನೆ, ಒಂದು ವಾರದಲ್ಲಿ ಅದರ ಕೆಲಸವನ್ನು ಮಾಡುವುದಕ್ಕೆ ಹಣವನ್ನು _ ಡೆಪಾಸಿಟ್ ಮಾಡುವುದಕ್ಕೆ ಕ್ರಮವನ್ನುತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಾಣಸವಾಡಿ ವಿಚಾರದಲ್ಲಿ ಏನನ್ನೂ ಹೇಳಲೇ ಇಲ್ಲ. ದಯವಿಟ್ಟು ಬಾಣಸವಾಡಿ ವಿಚಾರದಲ್ಲಿಯೂ ಕೂಡ ತಮ್ಮ ಅಧಿಕಾರಿಗಳನ್ನು ಕರೆಸಿಕೊಂಡು ಆದಷ್ಟು ಬೇಗ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ನನ್ನ ಕ್ಷೇತ್ರದಲ್ಲಿ ಎರಡು ಸಿ.ಎಂ.ಸಿ. ವಾರ್ಡ್‌ಗಳು ಬರುತ್ತಿವೆ. ಆದರೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಬಿ.ಡಿ.ಎ.ಯಿಂದ ಏನು ಕೆಲಸಗಳನ್ನು ಮಾಡಲು ನಾವು ಆದೇಶವನ್ನು ಕೊಟ್ಟಿದ್ದೀರಿ, ಅದರಲ್ಲಿ ನನ್ನ ಕ್ಷೇತ್ರದಲ್ಲಿ ಬರುವ ಈ ಎರಡು ವಾರ್ಡ್‌ಗಳು ಬಿಟ್ಟುಹೋಗಿವೆ. ಆ ವಾರ್ಡ್‌ಗಳು ಕೂಡ ಬಹಳಷ್ಟು ಬ್ಯಾಕ್‌ವರ್ಡ್ ಆಗಿವೆ. ಆದುದರಿಂದ ಈ ಎರಡು ವಾರ್ಡ್‌ಗಳಲ್ಲಿಯೂ ಕೂಡ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ತಾವು ಬಿ.ಡಿ.ಎ. ಗೆ ಆದೇಶವನ್ನು ಕೊಡಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಮಾನ್ಯ ಜಾರ್ಜ್‌ರವರೆ, ನಿಮ್ಮ ಕ್ಷೇತ್ರದ ಬಗ್ಗೆ ಸುಮಾರು ಐದಾರು ಬಾರಿ ಜೊತೆ ಮೀಟಿಂಗ್ ಮಾಡಿದ್ದೇವೆ. ಅಲ್ಲಿ ಏನು ಎರಡು ವಾರ್ಡ್‌ಗಳು ಬಿಟ್ಟುಹೋಗಿತ್ತೋ ಅದರ ಬಗ್ಗೆ ಮೊನ್ನೆ ತಾನೆ ಕಾರ್ಪೋರೇಷನ್ ಅಧಿಕಾರಿಗಳನ್ನೆಲ್ಲಾ, ಚೀಫ್ ಇಂಜನಿಯರ್‌ಗಳನ್ನೆಲ್ಲಾ ಕರೆದು 25 ಕೋಟಿ 40 ಲಕ್ಷ ರೂ.ಗಳ ಹಣ ಬೇಕಾಗುತ್ತದೆ ಎಂದರು ಯಾವುದೇ ಕಾರಣಕ್ಕೆ ಅದನ್ನು ಬಿಡುವುದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಗೊತ್ತಿದೆ. ಆ ವಿಚಾರದ ಬಗ್ಗೆ ಹೇಳುವುದಾದರೆ ಅದು ಕೊನೆಯಲ್ಲಿರುವ ಜಾಗವಾಗಿದೆ. ನಾನು ಮತ್ತು ನೀವುಗಳು ಸೇರಿಕೊಂಡು ಅಲ್ಲಿ ವಿಸಿಟ್ ಮಾಡಿದ್ದೇವೆ. ನಾವು 2-3 ಬಾರಿ ತಮ್ಮ ಕ್ಷೇತ್ರಕ್ಕೆ ಬಂದಿದ್ದೇವೆ. ಹಾಗಾಗಿ ತಾವು ಏನು ಅಂದುಕೊಂಡಿದ್ದೀರಿ, ಎಲ್ಲಾ ಕೆಲಸಗಳು ಅಲ್ಲಿ ಅಗುತ್ತದೆ.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಮುಖ್ಯಮಂತ್ರಿಗಳೆ, ನಮ್ಮ ಸಿಎಂಸಿ ವಾರ್ಡ್‌ನಲ್ಲಿ ಹೆಚ್‌ಬಿಆರ್ ಲೇಔಟ್ ಎಂದು ಬರುತ್ತದೆ. ಅದು ಬಿಡಿಎಗೆ ಸೇರಿದ ಲೇಔಟ್ ಆಗಿದೆ. ಅದು ಆಗಲಿಲ್ಲ, ಈ ಸಂಬಂಧ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅದು ಬರುತ್ತಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಬಿಡಿಎರವರನ್ನು ಸಹ ಕರೆದಿದ್ದೆವು. ನಾನು ಸಹ ಇನ್_ಚಾರ್ಜ್ ಮಂತ್ರಿಯಾಗಿರುವುದರಿಂದ ಅದರ ಬಗ್ಗೆ ನಮಗೆ ಗೊತ್ತಿದೆ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇದ್ದಾರೆ.

ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು: ನಾನು ಹೇಳುತ್ತಿದ್ದೇನೆ. ಮಾನ್ಯ ರೋಷನ್ ಬೇಗ್‌ರವರೆ, ನಾನು ಇನ್‌ಚಾರ್ಜ್ ಮಂತ್ರಿಯಾಗಿರುವುದರಿಂದ ಆ ಬಗ್ಗೆ ಗೊತ್ತಿದೆ.

ನೀವು ಮಧ್ಯ ಪ್ರವೇಶ ಮಾಡಿ ಪರವಾಗಿಲ್ಲ. ಈ ಬಗ್ಗೆ ನನಗೆ ಎಲ್ಲಾ ಗೊತ್ತಿದೆ. ನಾನು ಇನ್‌ಚಾರ್ಜ್ ಮಂತ್ರಿಯಾಗಿದ್ದೇನೆ. ಅಲ್ಲಿ ನಾವು ಮೀಟಿಂಗ್ ಮಾಡಿದ್ದೇವೆ. 5-6 ಸಾರಿ ಅವರನ್ನು ಕರೆದಿದ್ದೆವು, ಯಾರ್‍ಯಾರು ಉಸ್ತುವಾರಿ ಮಂತ್ರಿಗಳಾಗಿದ್ದಾಗ ಎಷ್ಟೆಷ್ಟು ಬಾರಿ ಹೋಗಿದ್ದಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ಪ್ರತಿಭೆಯನ್ನು ಆಮೇಲೆ ತೋರಿಸೋಣ. ಜಾರ್ಜ್‌ರವರೆ, ನಿಮ್ಮ ಎಲ್ಲಾ ಕೆಲಸಗಳನ್ನು ಮಾಡಿಕೊಟ್ಟಿದ್ದೇವೆ, ಅದನ್ನು ಸಮಾಧಾನಕರವಾಗಿ ಮಾಡುತ್ತಿದ್ದೇವೆ. You must appreciate the government.

ಶ್ರೀ ಕೆ.ಜೆ. ಜಾರ್ಜ್: ಕೆಲಸಗಳು ಆದ ಮೇಲೆ ಮಾಡುತ್ತೇವೆ. ಹೆಚ್‌ಬಿಆರ್ ಲೇಔಟ್‌ನಲ್ಲಿ ಕೆಲಸವನ್ನು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸದಸ್ಯರು ಹೇಳುವುದನ್ನು ನಾನು ಗಮನಿಸಿದ್ದೇನೆ. ನಾವು ಬೆಂಗಳೂರು ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಚಿಂತನೆಯನ್ನು ಮಾಡುತ್ತಿದ್ದೇವೆ. ನೀವು ಹೇಳಿರುವುದನ್ನು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಮಂಡ್ಯ-ಗುತ್ತಲು.ಮುತ್ತತ್ತಿ ಸೇತುವೆ ಕುಸಿದು ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ

52(380) ಶ್ರೀಮತಿ ಕಲ್ಪನಾ ಸಿದ್ದರಾಜು(ಮದ್ದೂರು)
ಶ್ರೀ ಸಿ.ಎಂ.ಉದಾಸಿ.(ಲೋಕೋಪಯೋಗಿ ಸಚಿವರು)

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಮಂಡ್ಯ-ಗುತ್ತಲು-ಮುತ್ತತ್ತಿ ರಸ್ತೆಯ ಗೌಡಯ್ಯನ ದೊಡ್ಡ ರಸ್ತೆ ಮಧ್ಯೆ ಇರುವ ಸೇತುವೆಯು ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಸೇತುವೆಯನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಸರ್ಕಾರದ ಆದೇಶ ಸಂಖ್ಯೆ:ಲೋಇ 57 ಸಿಬಿಆರ್ 2009 ದಿನಾಂಕ 27.6.2009ರಲ್ಲಿ 2009-10ನೇ ಸಾಲಿಗೆ ರೂ.80.00 ಲಕ್ಷ ಅನುದಾನ ಸೇತುವೆ ಪುನರ್ ನಿರ್ಮಿಸಲು ಬಿಡುಗಡೆ ಮಾಡಲಾಗಿದೆ.

ಇ) ಸೇತುವೆಯು ಕುಸಿದು ಬಿದ್ದಿರುವುದರಿಂದ ಜನಸಾಮಾನ್ಯರಿಗೆ ಹಾಗೂ ಸಂಚಾರ ವ್ಯವಸ್ಥೆಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ) ಈ ಸೇತುವೆಯ ಕಾಮಗಾರಿಗಾಗಿ ಸರ್ಕಾರ ಅಂದಾಜು ಪಟ್ಟಿ ತಯಾರಿಸಿದೆಯೇ;

ಹೌದು

ಉ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಈ ಸೇತುವೆ ಮರುನಿರ್ಮಾಣ ಕಾಮಗಾರಿಗೆ ರೂ.198.00 ಲಕ್ಷ ಅನುದಾನ ನಿಗದಿಪಡಿಸಿರುತ್ತದೆ.

ಊ. ಈ ಕಾಮಗಾರಿಯನ್ನು ಎಂದಿನಿಂದ ಕೈಗೊಳ್ಳಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಈ ಸೇತುವೆ ಮರುನಿರ್ಮಾಣ ಕಾಮಗಾರಿಗೆ ಟೆಂಡರ್ ಅಧಿಸೂಚನೆಯನ್ನು ದಿನಾಂಕ 27.6.2009ರಂದು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಿ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀಮತಿ ಕಲ್ಪನಾ ಸಿದ್ದರಾಜು: ಮಾನ್ಯ ಅಧ್ಯಕ್ಷರೆ, ಈ ಸೇತುವೆಯು ಕುಸಿದು 5 ತಿಂಗಳು ಆಗಿದೆ. ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಕಬ್ಬು ಫ್ಯಾಕ್ಟರಿಗೆ ಹೋಗಬೇಕಾದರೆ ಅದೇ ಸೇತುವೆಯ ಮುಖಾಂತರ ರೈತರುಗಳು ಹೋಗಬೇಕು. ಶಾಲಾಕಾಲೇಜುಗಳು ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಎಲ್ಲರೂ ಕೂಡ ಅಲ್ಲೇ ಓಡಾಡಬೇಕಾಗಿದೆ. ಬೇರೆ ಕಡೆ ರಸ್ತೆಯನ್ನು ಬಳಸಬೇಕಾದರೆ ಸುಮಾರು 15 ಕಿ.ಮಿ. ಆಗುತ್ತದೆ. ಆದಷ್ಟು ಬೇಗನೆ ಕಾಮಗಾರಿ ಕೆಲಸವನ್ನು ಪ್ರಾರಂಭಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮೊದಲನೆ ಪ್ರಶ್ನೆಗೆ ಉತ್ತರ ಬಂದಿದೆ ಎಂದು ಹೇಳುತ್ತಾರೆ. 2ನೇ ಪ್ರಶ್ನೆಯಲ್ಲಿ ಸರ್ಕಾರಿ ಆದೇಶ ಲೋಇ 57 ಸಿಬಿಆರ್ 2009, ದಿನಾಂಕ: 27.6.2009, 2009-10ನೇ ಸಾಲಿಗೆ ರೂ.80.00 ಲಕ್ಷರೂ ಅನುದಾನ ಸೇತುವೆ ಪುನರ್ ನಿರ್ಮಿಸಲು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿಯೇ 5ನೇ ಪ್ರಶ್ನೆಯಲ್ಲಿ 198 ಲಕ್ಷ ರೂಪಾಯಿಗಳ ಅನುದಾನ ನಿಗಧಿಪಡಿಸಿರುತ್ತೇವೆಂದು ಹೇಳುತ್ತೀರಿ ಈಗ 80 ಲಕ್ಷ ರೂಪಾಯಿಗಳು ಅಂದರೆ ಮೂರನೇ ಒಂದು ಭಾಗ ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸುತ್ತಾರೆ. ಆದರೆ ಟೆಂಡರ್‌ನ್ನು 27.6.2009ಕ್ಕೆ ಕರೆದಿದ್ದಾರೆ. ಈ ಸೇತುವೆಯೂ ಬಿದ್ದುಹೋಗಿ 5 ತಿಂಗಳುಗಳು ಆಗಿದೆ. ಅಲ್ಲಿ ರೈತರು ಬೆಳೆದಂತಹ ಕಬ್ಬನ್ನು transportation ಮಾಡುವುದಕ್ಕೆ ತೊಂದರೆಯಾಗಿದೆ. ಶಾಲಾಮಕ್ಕಳು ಓಡಾಡುವುದಕ್ಕೆ ತೊಂದರೆಯೂ ಇನ್ನೊಂದು ಕಡೆ ಆಗಿದೆ. ಜನಸಾಮಾನ್ಯರು ಹಳ್ಳಿಯವರು ಹೊರಗಡೆಗೆ ಆ ಕಡೆಯಿಂದ ಈ ಕಡೆಗೆ

ಹೋಗಬೇಕಾದರೆ ಅವರಿಗೂ ಸಹ ತೊಂದರೆಯಾಗಿದೆ. ಇವರು ಟೆಂಡರ್ ಕರೆದು ಬ್ರಿಡ್ಜ್ ಆಗುವುದಕ್ಕೆ ಇನ್ನೊಂದು ವರ್ಷ ಬೇಕಾಗುತ್ತದೆ. ದಯಮಾಡಿ ಕೂಡಲೇ ಸಂಬಂಧಪಟ್ಟಂತಹ ಕಾರ್ಯಪಾಲಕ ಅಭಿಯಂತರರವರಿಗೆ ಡೀವಿಯೇಷನ್ ಬ್ರಿಡ್ಜ್ ಮಾಡಿ ರಸ್ತೆಯನ್ನು ಸುಗಮ ಮಾಡುವುದಕ್ಕೆ ಅವಕಾಶವನ್ನು ಇಷ್ಟು ಹೊತ್ತಿಗೆ ಮಾಡಬೇಕಾಗಿತ್ತು. ಅದಕ್ಕಾಗಿ 5 ತಿಂಗಳ ಕಾಲ ಬೇಕಾಗಿರಲಿಲ್ಲ. ಅವರು ಏನಾದರೂ ಮದ್ದೂರಿನ ಉಪಚುನಾವಣೆಯಲ್ಲಿ ಗೆದ್ದರು ಎನ್ನುವ ಕಾರಣಕೊಸ್ಕರ ನಿಧಾನವಾಗಿದೆಯೇ, ಪಾಪ ಉದಾಸಿಯವರ ಬುದ್ದಿ ಆ ರೀತಿಯಿಲ್ಲ. ಅವರು ಒಳ್ಳೆಯವರೆ, ಒಳ್ಳೆಯ ಸ್ವಭಾವವಿದೆ. ಏಕೆಂದರೆ ಮಾನ್ಯ ಸದಸ್ಯರು ಹೊಸದಾಗಿ ಆಯ್ಕೆಯಾಗಿದ್ದಾರೆ. ಕೂಡಲೇ 15 ದಿವಸದೊಳಗೆ ಡೀವಿಯೇಷನ್ ಬೇಗ ಮಾಡಿ ರೈತರುಗಳು ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕೆ, ಶಾಲಾಮಕ್ಕಳು ಓಡಾಡುವುದಕ್ಕೆ, ಜನಸಾಮಾನ್ಯರು ಓಡಾಡುವುದಕ್ಕೆ ಹಾಗೂ ಬಸ್ಸುಗಳು ಓಡಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ. ಇದರ ಜೊತೆಗೆ ಅದು ಜಿಲ್ಲಾ ಮುಖ್ಯ ರಸ್ತೆಯಾಗಿದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮದ್ದೂರು ತಾಲ್ಲೂಕಿನ, ಮಂಡ್ಯ-ಗುತ್ತಲು-ಮುತ್ತತ್ತಿ ರಸ್ತೆಯು 14, 10 ಕಿ.ಮೀನಲ್ಲಿ ಕವರ್ ಮಾಡಿರುವಂತಹ ಸೇತುವೆಯಾಗಿದೆ. ಈ ಸೇತುವೆಯು 28.2.2009ದಂದು ಕುಸಿದಿದೆ. ಆದರೆ ಇದು ನೀರಾವರಿ ಇಲಾಖೆಯಿಂದ ನಿರ್ಮಾಣವಾಗಿರುವಂತಹ ಸೇತುವೆಯಾಗಿರುವುದರಿಂದ ನೀರಾವರಿ ಇಲಾಖೆಯವರ ಜೊತೆಗೆ ಮೊದಲು ಸಂಪರ್ಕವನ್ನು ಮಾಡಲಾಗಿತ್ತು. ಆ ಕಾರಣದಿಂದ ಅದು ವಿಳಂಬವಾಗಿ 27.6.2009ಕ್ಕೆ ಟೆಂಡರ್‌ನ್ನು ಕರೆದಿದ್ದೇವೆ. ಆ ಟೆಂಡರ್ ಪ್ರಕ್ರಿಯೆಯೂ 10.7.2009ಕ್ಕೆ ಲಾಸ್ಟ್ ಡೇಟ್ ಇದೆ. 20ನೇ ತಾರೀಖಿಗೆ work order issue ಮಾಡುವಂತಹ ಕೆಲಸವು ನಡೆಯುತ್ತಿದೆ. ಇವತ್ತು 196 ಲಕ್ಷ ರೂಪಾಯಿಗಳಿಗೆ ಸೇತುವೆಗೆ ಟೆಂಡರ್‌ನ್ನು ಕರೆಯಲಾಗಿದೆ. ಅದು ಬೇಗನೆ ಆಗುತ್ತದೆ. ಈ ಮಧ್ಯದಲ್ಲಿ ಸೇತುವೆಯೂ ನಿರ್ಮಾಣ ಆಗುವವರೆಗೆ ಸನ್ಮಾನ್ಯ ರೇವಣ್ಣನವರು ಮಾತನಾಡಿದ ಹಾಗೆ ರೋಡ್‌ನಲ್ಲಿ ಡೀವಿಯೇಷನ್ ರಸ್ತೆಯನ್ನು ಮಾಡಿಕೊಡುವುದರ ಬಗ್ಗೆ ಸೂಕ್ತ ಸಲಹೆಯನ್ನು ಕೊಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಅವರು ಒಂದು ಮಾತನ್ನು ಹೇಳಿದರು. ಉದಾಸಿಯವರು ಅಂತಹ ಮನುಷ್ಯರಲ್ಲ ಎಂದು ಹೇಳಬೇಕಾದಾಗ ಈ ಮಾತುಗಳನ್ನು ನನಗೆ ಯಾರೋ ಹೇಳುತ್ತಿದ್ದರು. "ನಮಗೆ ಯಾಕೆ ಬೇಕ್ರಿ ರಾಧವ್ವ ಕದ್ದು ಬಸಿರಾದ ಸುದ್ದಿ "ಅಂತ ನೀರು ಹಿಡಿಯಬೇಕಾದಾಗ ಮಾತನಾಡಿದರಂತೆ. ನಮಗ್ಯಾಕೆ ಬೇಕವ್ವ ಎಂದು ಹೇಳಿಬಿಟ್ಟರೆ ಉದಾಸಿಯವರು ಪೂರ್ವಾಗ್ರಹಪೀಡಿತರಾಗಿ ಮಾತನಾಡಿದರು ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿದರು ಎನ್ನುವ ಹಾಗೆ ಆಗುತ್ತದೆ. ಆದಕ್ಕಾಗಿ

ನಾನು ಹೇಳುವುದಿಷ್ಟೆ, ನಾನು ಪೂರ್ವಾಗ್ರಹಪೀಡಿತರಾಗುವುದಕ್ಕೆ ಕಾರಣವಿಲ್ಲ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದಾಗ ನಿಮ್ಮಿಂದ ನಾನು ಅನೇಕ ವಿಚಾರಗಳನ್ನು ಕಲಿತಿದ್ದೇನೆ. ಹಾಗೆ ಕಲಿತಿರುವುದರಿಂದ ದಾರಿ ತೋರುವ ಪ್ರಯತ್ನವನ್ನು ಮಾಡಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು: ಹಿಂದಿನ ಪಿಡಬ್ಲ್ಯೂಡಿ ಮಿನಿಸ್ಟರ್‌ರವರೆ, ನಿಮಗೂ ಮತ್ತು ಅವರಿಗೂ ಸೇರಿದೆ. ಹಿಂದಿನ ಲೋಕೋಪಯೋಗಿ ಮಂತ್ರಿಗಳು ಮತ್ತು ಇಂದಿನ ಲೋಕೋಪಯೋಗಿ ಮಂತ್ರಿಗಳಿಗೂ ಸೇರಿದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಅವರನ್ನು ಹೊಗಳಿದರೂ ಕೂಡ ಅದನ್ನು ತಪ್ಪು ಗ್ರಹಿಸಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದು ನೀರಾವರಿ ಇಲಾಖೆಗೆ ಸೇರಿದೆ ಸೇತುವೆ ಎಂದು ಅವರು ಹೇಳುತ್ತಾರೆ. ಆದರೆ ಈ ರಸ್ತೆ ಇರುವುದು ಎಂಡಿಆರ್, Major District Road ಎಂದು ನಾನು ದಯಮಾಡಿ ಅವರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಕೂಡಲೇ ಮಾಡಿ, ಅಮೇಲೆ ನನ್ನಿಂದ ಕಲಿತಿರುವುದನ್ನು ಇನ್ನು ಸ್ವಲ್ಪ ಜಾಸ್ತಿ ಮಾಡಲಿ. ನಾನು ಬೇಡವೆಂದು ಹೇಳುವುದಿಲ್ಲ. ಅದಕ್ಕಾಗಿ ದಯಮಾಡಿ ಮಾನ್ಯ ಉದಾಸಿಯವರು ಇದಕ್ಕೆ ಉದಾಸೀನ ಮಾಡುವುದು ಬೇಡ, 15 ದಿವಸದಲ್ಲಿ ಡೀವಿಯೇಷನ್ ರೋಡ್‌ನ್ನು ಮಾಡಿಕೊಡಲಿ.

ಅಧ್ಯಕ್ಷರು: ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಉದಾಸಿ: ಅತೀ ಶೀಘ್ರದಲ್ಲಿಯೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: O.K.

ಶ್ರೀ ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಮತನಾಡುತ್ತೇನೆ.

ಅಧ್ಯಕ್ಷರು: ಬೇಡ. ಈಗ ಎಲ್ಲವೂ ಮುಗಿದಿದೆ.

ಶ್ರೀ ರುದ್ರೇಶ್‌ಗೌಡ: ಈ ಬಗ್ಗೆ MDR ನಲ್ಲಿ ಸೇತುವೆ ಹಾಳಾಗಿ ಹೋದಾಗ ನಾವು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಗಮನಕ್ಕೆ ತಂದಾಗ ರಾಜ್ಯ ಸರ್ಕಾರದವರು ಅಧಿಕಾರವನ್ನು ಕೊಟ್ಟಿರುವುದಿಲ್ಲ. ಇವರಿಗೆ ಪವರ್‌ನ್ನು ಕೊಟ್ಟರೆ Major District Road ನಲ್ಲಿ ಗೋಡೆಗಳು ಕುಸಿದಾಗ, ಸೇತುವೆಗಳು ಹಾಳಾದಾಗ immediate workನ್ನು ತೆಗೆದುಕೊಳ್ಳುವಂತಹ ಅಧಿಕಾರವನ್ನು Superintending Engineerರವರಿಗೆ ಕೊಡಬೇಕೆಂದು ಸನ್ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಹೊಸ ಸೇತುವೆ ನಿರ್ಮಾಣ ಕುರಿತು.

53(599) ಶ್ರೀ.ಸಂಗಮೇಶ್ವರ ಬಿ.ಕೆ.(ಭದ್ರಾವತಿ)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ತರೀಕೆರೆ ಮಾರ್ಗವಾಗಿ ಭದ್ರಾವತಿಯಿಂದ ಶಿವಮೊಗ್ಗಕ್ಕೆ ಹೋಗುವ ಎಲ್ಲಾ ವಾಹನಗಳು ಭದ್ರಾವತಿ ಸೇತುವೆ ಮೇಲೆ ಹಾದು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗಮನಕ್ಕೆ ಬಂದಿದೆ.

ಆ) ಈ ಮಾರ್ಗದಲ್ಲಿರುವ ಭದ್ರಾವತಿ ಸೇತುವೆ ಹಳೆಯದಾಗಿದ್ದು ಹೊಸ ಸೇತುವೆಯನ್ನು ನಿರ್ಮಾಣ ಮಾಡಲು ಸುಮಾರು ಹತ್ತು ಬಾರಿ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಗಮನಕ್ಕೆ ಬಂದಿದೆ.

ಇ) ಹಾಗಿದ್ದಲ್ಲಿ, ಎಂದಿನಿಂದ ಹೊಸ ಸೇತುವೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು;

ಹೊಸ ಸೇತುವೆ ನಿರ್ಮಾಣಕ್ಕೆ ರೂ.500.00 ಲಕ್ಷಗಳ ಅವಶ್ಯಕತೆಯಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಭದ್ರಾವತಿ ನಗರದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಲೋಕೋಪಯೋಗಿ ರಸ್ತೆಗಳು ಹಾಳಾಗಿದ್ದು, ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೇ;

ಭದ್ರಾವತಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ರಾಜ್ಯ ಹೆದ್ದಾರಿ 108 ಕಿಮೀ. ಜಿಲ್ಲಾ ಮುಖ್ಯ ರಸ್ತೆ 205 ಕಿಮೀ. ಒಟ್ಟು 313 ಕಿಮೀ. ಲೋಕೋಪಯೋಗಿ ಇಲಾಖೆಯ ರಸ್ತೆ ಇರುತ್ತದೆ. 2008-09ನೇ ಸಾಲಿನಲ್ಲಿ 3054 ಯೋಜನೆ ಲೆಕ್ಕಶೀರ್ಷಿಕೆಯಲ್ಲಿ ರೂ.80.00 ಲಕ್ಷಗಳಲ್ಲಿ ಗುಂಡಿ. ಮುಚ್ಚಿಸಲಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ ಬಾಕಿ ಕಾಮಗಾರಿಗಳಿಗೆ 12ನೇ ಹಣಕಾಸು ಯೋಜನೆಯಲ್ಲಿ ಹಣ ಒದಗಿಸಿ ಪೂರ್ಣಗೊಳಿಸಲಾಗುವುದು.

ಉ) ಭದ್ರಾವತಿ ಮತಕ್ಷೇತ್ರದಲ್ಲಿ ಲೋಕೋಪಯೋಗಿ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೇ;

ಭದ್ರಾವತಿ ಮತಕ್ಷೇತ್ರದಲ್ಲಿ ಲೋಕೋಪಯೋಗಿ ವತಿಯಿಂದ ಕೈಗೊಂಡಿರುವ ಒಟ್ಟು ಆರು ರಸ್ತೆ ಕಾಮಗಾರಿಗಳು ಹಾಗೂ 4 ಸೇತುವೆ ಕಾಮಗಾರಿಗಳು ಹಾಗೂ 15 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು ಈಗ ಬಿಡುಗಡೆ ಮಾಡಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಿದ್ದು, ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಬಿ.ಕೆ.ಸಂಗಮೇಶ್ವರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಸಣ್ಣ ಸಣ್ಣ ಸೇತುವೆಗಳು ನಮ್ಮ ಭದ್ರಾವತಿ ಕ್ಷೇತ್ರದಲ್ಲಿ ಕಾರ್ಯ

ಪ್ರಾರಂಭವಾಗಿದೆ. ಅದಕ್ಕಾಗಿ ಪಿಡಬ್ಲ್ಯೂಡಿ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ. ಆದರೆ ಮುಖ್ಯವಾಗಿ ತಮ್ಮ ತುಮಕೂರು ಹೊನ್ನಾವರ 186ನೇ ಮೈಲಿಗಲ್ಲು ಮಾಧವಚಾರಿ ಸರ್ಕಲ್‌ನಲ್ಲಿ ಊರಿನ ಮಧ್ಯೆ ಇರತಕ್ಕಂತಹ 150 ವರ್ಷದ ಓಲ್ಡ್ ಬ್ರಿಡ್ಜ್ ಆ ಬ್ರಿಡ್ಜ್‌ನ ಮುಖಾಂತರ ವಿಐಎಸ್‌ಎಲ್ ಮತ್ತು ಎಂಪಿಎಂ ಕಾಗದ ಕಾರ್ಖಾನೆಯು ಮತ್ತು ವಿಐಎಸ್‌ಎಲ್ ಕಬ್ಬಿಣ ಕಾರ್ಖಾನೆಗೆ ಸುಮಾರು ಸಾವಿರಾರು ವೆಹಿಕಲ್‌ಗಳು ಓಡಾಡುತ್ತವೆ. ದಯವಿಟ್ಟು ಇದನ್ನು ಪಿಡಬ್ಲ್ಯೂಡಿ ಸಚಿವರು ಗಮನ ಹರಿಸಿ ಅದಷ್ಟು ಬೇಗನೇ ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಬ್ರಿಡ್ಜ್‌ಗೆ 5 ಕೋಟಿ ರೂಪಾಯಿಗಳ ಪ್ರಸ್ತಾವನೆ ಸರ್ಕಾರದಲ್ಲಿದೆ ಎಂದು ಹೇಳಿದ್ದಾರೆ. ಈ ಐದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಸುಮಾರು 12-13 ಕೋಟಿ ರೂಪಾಯಿಗಳ ಎಷ್ಟಿಮೇಟ್‌ನ್ನು ಇಂಜಿನಿಯರ್‌ರವರು ಮಾಡಿಕೊಟ್ಟಿದ್ದಾರೆ. ದಯವಿಟ್ಟು ನಮ್ಮ ಸಚಿವರು ಆ ಬಗ್ಗೆ ಗಮನವನ್ನು ಹರಿಸಿ ನನ್ನ ಕ್ಷೇತ್ರ ವ್ಯಾಪ್ತಿಗೆ ಬರುವಂತಹ 2 ಬ್ರಿಡ್ಜ್‌ಗಳ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭ ಮಾಡುವುದಕ್ಕೆ ಯಾವ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕೆಂದು ತಮ್ಮ ಮುಖಾಂತರ ನಮ್ಮ ಪಿಡಬ್ಲ್ಯೂಡಿ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವು ನಮ್ಮ ಗಮನಕ್ಕೆ ಬಂದಿದೆ. ಆ ಕಾರಣದಿಂದ ಕೆಆರ್‌ಡಿಸಿಎಲ್‌ನವರಲ್ಲಿ ಪ್ರಸ್ತಾವನೆಯನ್ನು ಮಂಡಿಸಿರುವುದು ಅತೀ ಶೀಘ್ರದಲ್ಲಿಯೇ ಸೇತುವೆ ನಿರ್ಮಾಣಕ್ಕೆ ಬೇಕಾಗಿರುವಂತಹ ಒಂದು ಟೆಂಡರ್‌ನ್ನು ಕರೆದು ವ್ಯವಸ್ಥೆ ಮಾಡಲಾಗುವುದು ಎಂಬ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಕೆ.ಸಂಗಮೇಶ್ವರ: ಪಿಡಬ್ಲ್ಯೂಡಿ ಕಾರ್ಯದರ್ಶಿಯವರನ್ನು ಮತ್ತು ಪಿಡಬ್ಲ್ಯೂಡಿ ಮಂತ್ರಿಯವರನ್ನು ಕೇಳಿ ಎಂದು ಹೇಳಿದ್ದಾರೆ. ದಯಮಾಡಿ ನಮ್ಮ ಬಗ್ಗೆ ಸ್ವಲ್ಪ ಅನುಕಂಪ ಇಟ್ಟು ಅದನ್ನು ಮಾಡಿಕೊಡಲಿ ಎಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಇದು ಒಂದು ಅತ್ಯಂತ ಪ್ರಮುಖವಾದಂಥ ಸೇತುವೆ ಎಂದು ನಮಗೆ ಗೊತ್ತಿದೆ. ಒಂದು ವೇಳೆ ಅಲ್ಲಿ ಸೇತುವೆ ಬಿದ್ದುಹೋದರೆ ಸಂಪರ್ಕ ರದ್ದಾದರೆ ಬಹಳಷ್ಟು ಸಮಸ್ಯೆಗಳು ಆಗಬಹುದು ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಮೊನ್ನೆ ಸ್ವತಃ ಅಲ್ಲಿಗೆ ಹೋಗಿದ್ದಾಗ ಆ ಸೇತುವೆಯನ್ನು ನೋಡಿಕೊಂಡು ಬಂದಿದ್ದೇನೆ. ಅದರ ಬಗ್ಗೆ ಶೀಘ್ರದಲ್ಲಿಯೇ ಕ್ರಮವನ್ನು ಕೈಗೊಳ್ಳುತ್ತೇನೆ.

ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ನಿರ್ಮಾಣದ ಬಗ್ಗೆ

58(487) **ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)**

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಬೆಂಗಳೂರು-ಮಾಗಡಿ ಮುಖ್ಯ ರಸ್ತೆಯ ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ನಿರ್ಮಾಣಕ್ಕೆ ಅಂದಾಜಿಸಿರುವ ಮೊತ್ತವೆಷ್ಟು;

ಈ ಸೇತುವೆ ನಿರ್ಮಾಣವನ್ನು ಕೆ.ಆರ್.ಡಿ.ಸಿ.ಎಲ್.ನ ಮೂರನೇ ಹಂತದ ಯೋಜನೆಯಲ್ಲಿ ರೂ.313.12 ಲಕ್ಷಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ.

ಆ) ಈ ಕಾಮಗಾರಿಯನ್ನು ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು;

ಈ ಸೇತುವೆಯ ಕಾಮಗಾರಿಯನ್ನು ಮೂರನೇ ಹಂತದ ಪ್ಯಾಕೇಜ್-3ರ ಅಡಿಯಲ್ಲಿ ವಹಿಸಲಾಗಿದ್ದು, ಪ್ಯಾಕೇಜಿನ ಗುತ್ತಿಗೆ ಅವಧಿಯು ಮೂರು ವರ್ಷದ್ದಾಗಿರುತ್ತದೆ. ಗುತ್ತಿಗೆ ಕರಾರಿನ ಪ್ರಕಾರ ಈ ಪ್ಯಾಕೇಜಿನ ಎಲ್ಲಾ ಸೇತುವೆ ಕಾಮಗಾರಿಗಳನ್ನು ಆಗಸ್ಟ್ 2009 ರಲ್ಲಿ ಪೂರ್ಣಗೊಳಿಸಬೇಕಾಗಿದೆ.

ಇ) ಇನ್ನು ಪೂರ್ಣಗೊಳ್ಳದೆ ಇರಲು ಕಾರಣಗಳೇನು;

ಈ ಸೇತುವೆಯ ನಿರ್ಮಾಣವು ಜುಲೈ 2008 ರಲ್ಲಿ ಪೂರ್ಣಗೊಂಡಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯವರಿಂದ ಭೂಮಿಯನ್ನು ಹಸ್ತಾಂತರಿಸುವಲ್ಲಿ ಆದ ವಿಳಂಬದಿಂದ ಕೂಡು ರಸ್ತೆಯ ನಿರ್ಮಾಣವು ಪೂರ್ಣಗೊಂಡಿರುವುದಿಲ್ಲ.

ಈ) ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಕೂಡು ರಸ್ತೆ ನಿರ್ಮಾಣ ಪ್ರಾರಂಭವಾಗಿದ್ದು, ಕಾಮಗಾರಿಯನ್ನು ಅಕ್ಟೋಬರ್ 2009 ರಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ಬಹುಶ: ಬೆಂಗಳೂರು-ಮಾಗಡಿ ಸಂಪರ್ಕಕ್ಕೆ ಬಹಳ ಅತ್ಯಾವಶ್ಯಕವಾಗಿರುವಂತಹ ಸೇತುವೆಯಾಗಿದೆ. ಬಹಳ ಹಳೆಯಾದಂತಹ ಸುಮಾರು 70-80 ವರ್ಷಗಳ ಹಿಂದೆ ಕಟ್ಟಿರುವಂತಹ ಸೇತುವೆಯಾಗಿದೆ. ಮಾನ್ಯ ಮಂತ್ರಿಗಳು ಸಹ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿದ್ದಾರೆ. ಅನೇಕ ಅಪಘಾತಗಳು ಕೂಡ ಈ ಸೇತುವೆಯಲ್ಲಿ ಆಗಿದೆ. ಸನ್ಮಾನ್ಯ ರೇವಣ್ಣನವರು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ಸೇತುವೆಯನ್ನು ನಿರ್ಮಾಣ ಮಾಡಬೇಕೆಂಬ ಕೆಲಸವನ್ನು ಪ್ರಾರಂಭ ಮಾಡಿದರು. 2009ರಲ್ಲಿ ಆಗಸ್ಟ್‌ನಲ್ಲಿಯೇ ಮುಗಿಸುತ್ತೇವೆನ್ನುವಂತಹ ಮಾತನ್ನು ಮಾನ್ಯ ಮಂತ್ರಿಗಳು ಸೇತುವೆಯ ಬಗ್ಗೆ ಹೇಳಿದ್ದಾರೆ. ಇನ್ನೊಂದು ಉತ್ತರವನ್ನು ಕೊಡುತ್ತಾ ಅಕ್ಟೋಬರ್ 2009ರಲ್ಲಿ ಪೂರ್ಣಗೊಳಿಸಲಾಗುವುದು. ಅಲ್ಲಿ ಜಾಗವನ್ನು ಬಿಡುವುದಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಅಲ್ಲಿ ಅಪ್ರೋಚ್ ರೋಡ್ ಮಾಡುವುದಕ್ಕೆ ಜಾಗವನ್ನು ಬಿಡಲಿಲ್ಲ. ಅಲ್ಲಿ ಎಲ್ಲಾ ಜಾಗವನ್ನು ಬಿಟ್ಟಿದ್ದಾರೆ. ಸುಮಾರು ದಿವಸಗಳ ಹಿಂದೆಯೇ ಬಿಟ್ಟಿದ್ದಾರೆ.

ಆದರೆ ಅಲ್ಲಿ ಕೆಲಸವನ್ನು ಮಾಡುತ್ತಿಲ್ಲ. ಅದು ಬೆಂಗಳೂರು–ಮಾಗಡಿಗೆ ಬಹಳ ಮುಖ್ಯವಾದ ಮತ್ತು ಅತ್ಯಾವಶ್ಯಕವಾದ ರಸ್ತೆಯಾಗಿದೆ. ಆದ್ದರಿಂದ ದಯಮಾಡಿ ಇದನ್ನು ಆದಷ್ಟು ಬೇಗನೆ ಮುಗಿಸಿಕೊಡುತ್ತಿರಾ, ಆಗಸ್ಟ್ 2009ರಲ್ಲಿಯೇ ಇದನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಸುಗಮಗೊಳಿಸುತ್ತೀರಾ ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇದು ಸಿಂಗಲ್ ಬ್ರಿಡ್ಜ್ ಆಗಿದ್ದು ಹಳೆಯದಾಗಿದೆ. ಸುಮಾರು 100 ವರ್ಷದ ಹಳೆಯ ಬ್ರಿಡ್ಜ್ ಆಗಿದೆ. ನಮ್ಮ ಮಾನ್ಯ ಸದಸ್ಯರಾದಂತಹ ಬಾಲಕೃಷ್ಣರವರು ಏನು ಹೇಳುತ್ತಿದ್ದಾರೆ, ಏಕೆಂದರೆ ಒಂದು ವೆಹಿಕಲ್ ಹೋದರೆ ಮತ್ತೊಂದು ವೆಹಿಕಲ್ ಹೋಗುವುದಕ್ಕಾಗುವುದಿಲ್ಲ. ಬ್ರಿಡ್ಜ್ ಎಲ್ಲವೂ ಕಂಪ್ಲೀಟ್ ಆಗಿದೆ. Only approach road ಆಗಬೇಕು. ಅದೇನು approach road ಆಗುವುದು ಅಲ್ಲಿ ಇನ್ನು 15 ದಿವಸಗಳ ಕೆಲಸವಿದೆ. ದಯಮಾಡಿ ಅಕ್ಟೋಬರ್‌ವರೆಗೆ ಕಾಯುವುದು ಬೇಡ. ಆಗಸ್ಟ್ end ಒಳಗಡೆಯೇ ಆ ಕೆಲಸವನ್ನು ಮುಗಿಸಿಕೊಡುವುದಕ್ಕೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಸೇತುವೆ ನಿರ್ಮಾಣದ ಕಾರ್ಯ ಸಂಪೂರ್ಣವಾಗಿ ಮುಗಿದಿದೆ. ರಸ್ತೆಗಳನ್ನು ನಿರ್ಮಾಣ ಮಾಡಬೇಕಾದಂತಹ ಕೆಲಸದಲ್ಲಿ ನಮಗೆ ಅಲ್ಲಿರಬೇಕಾದಂತಹ ಕೆಲವು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಭೂಮಿ ಹಸ್ತಾಂತರದ ವಿಳಂಬದಿಂದ ರಸ್ತೆ ನಿರ್ಮಾಣದ ಕಾರ್ಯ ವಿಳಂಬವಾಗಿದೆ. ಆ ಕೆಲಸವನ್ನು ಅತೀ ಶೀಘ್ರದಲ್ಲಿಯೇ ಮುಗಿಸಿಕೊಡುವಂತಹ ವ್ಯವಸ್ಥೆಯನ್ನು ನಾವು ಅವತ್ತಿನ ದಿನಾಂಕವನ್ನು ಗೊತ್ತುಪಡಿಸಿ ಅಕ್ಟೋಬರ್ ಕೊನೆಯೊಳಗಡೆ ಎಂದು ಗೊತ್ತುಪಡಿಸಿದ್ದೆವು. ಅದನ್ನು ಆಗಸ್ಟ್ 15 ರೊಳಗಾಗಿ ಮುಗಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಸೇಡಂ ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿ ಕುರಿತು

55(369) ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಥವಾ ನಿರ್ವಹಣೆಗೆ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಮಾಡಿರುವ ಖರ್ಚೆಷ್ಟು?

ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಥವಾ ನಿರ್ವಹಣೆಗೆ ಸರ್ಕಾರ 2007–08 ಮತ್ತು 2008–09ನೇ ಸಾಲಿನಲ್ಲಿ ಈ ಕೆಳಕಂಡಂತೆ ಖರ್ಚು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ವಿಭಾಗ	2007-08		2008-09	
		ರಾ.ಹೆ	ಜಿ.ಮು.ರ	ರಾ.ಹೆ	ಜಿ.ಮು.ರ
1	ಗುಲ್ಬರ್ಗಾ	–	103.93	–	100.53
2	ಯಾದಗಿರಿ	–	102.50	30.24	190.20
	ಒಟ್ಟು:		206.43	30.24	290.73

ಆ) ಯಾವ ಯಾವ ಬಾಬತ್ತಿನಲ್ಲಿ ಯಾವ ಯಾವ ರಸ್ತೆಗೆ ಎಷ್ಟು ಹಣ ಖರ್ಚು ಮಾಡಿದೆ. ವಿವರ ಒದಗಿಸುವುದು?

ಅನುಬಂಧ-1 ರಲ್ಲಿ ವಿವರಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-369

ಅನುಬಂಧ-1

2007-08 ಮತ್ತು 2008-09ನೇ ಸಾಲಿನಲ್ಲಿ ಸೇಡಂ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಮತ್ತು ನಿರ್ವಹಣೆಗಾಗಿ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಾಡಿರುವ ಖರ್ಚಿನ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	2007-08		2008-0-9	
			ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ರಾಜ್ಯ ಹೆದ್ದಾರಿ	ಜಿಲ್ಲಾಮುಖ್ಯ ರಸ್ತೆ
1	2	3	4	5	6	7
ಗುಲಬರ್ಗಾ ವಿಭಾಗ:						
1	5054 ಡಾ:ನಂಜುಂಡಪ್ಪ ವರದಿ	1) ನಿಡಗುಂದಾ ಚಂದಾಪೂರ ರಸ್ತೆ ಸುಧಾರಣೆ ಕಿಮೀ 5.00 ರಿಂದ 16.00ರ ವರೆಗೆ	–	45.00	–	27.53
		2) ನವದಗಿ ಸುರವಾರ ರಸ್ತೆ ಸುಧಾರಣೆ ಕಿಮೀ 5.00 ರಿಂದ 8.00 ಮತ್ತು 12.00 ರಿಂದ 16.00ರ ವರೆಗೆ	–	27.81	–	26.44
2	3054 (ಯೋಜನೆ)	3) ನಿಡಗುಂದಾ ಚಂದಾಪೂರ ರಸ್ತೆ ಸುಧಾರಣೆ.	–	14.81	–	6.22
3	3054-12ನೇ ಹಣಕಾಸು	4) ನವದಗಿ ಸುರವಾರ ರಸ್ತೆ ಸುಧಾರಣೆ ಕಿಮೀ 8.00 ರಿಂದ	–	9.31	–	11.97

		22.00ರ ವರೆಗೆ				
4	5053 ನಬಾರ್ಡ್	5) ಕುರ್ಚಖೇಡ ವೆಂಕಟಾಪೂರ ರಸ್ತೆ ಸುಧಾರಣೆ ಕಿಮೀ 0.00 ರಿಂದ 3.60	–	7.00	–	28.37
		ಒಟ್ಟು	**0.00**	**103.93**	**0.00**	**100.53**

<u>ಸೇಡಂ ಮತಕ್ಷೇತ್ರದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಕಾಮಗಾರಿಗಳಿಗೆ ಖರ್ಚು ಮಾಡಿದ ವಿವರ</u>

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	2007–08ನೇ ಸಾಲಿನ ಖರ್ಚು	2008–09ನೇ ಸಾಲಿನ ಖರ್ಚು
1	2	3	4
I. 3054 ರಸ್ತೆ ಮತ್ತು ಸೇತುವೆ (ಯೋಜನೆ)			
1	ಸೇಡಂ ತಾಲ್ಲೂಕಿನ ಬೆಟಗೇರಾ–ಸಿದ್ದಾಪೂರ ರಸ್ತೆ ಸುಧಾರಣೆ (ವಾರ್ಷಿಕ ನಿರ್ವಹಣೆ)	15.20	0.00
2	ಸೇಡಂ ತಾಲ್ಲೂಕಿನ ಮುಧೋಳ –ಹಂದರಕಿ ರಸ್ತೆ ಸುಧಾರಣೆ (ವಾರ್ಷಿಕ ನಿರ್ವಹಣೆ)	6.00	0.00
3	ಸೇಡಂ ತಾಲೂಕಿನ ಬೆಟಗೇರಾ–ಮೋತಕದಲ್ಲಿ ರಸ್ತೆ ಸುಧಾರಣೆ (ವಾರ್ಷಿಕ ನಿರ್ವಹಣೆ)	15.60	0.00
4	ಸೇಡಂ ತಾಲೂಕಿನ ಚಿತ್ತಾಪೂರ – ಮಳಖೇಡ ರಸ್ತೆ ಸುಧಾರಣೆ (ವಾರ್ಷಿಕ ನಿರ್ವಹಣೆ)	6.00	0.00
5	ಸೇಡಂ ತಾಲೂಕಿನ ಮುಧೋಳ ಕೂಡು ರಸ್ತೆ ಸುಧಾರಣೆ (ವಾರ್ಷಿಕ ನಿರ್ವಹಣೆ	3.85	0.00
6	ಸೇಡಂ ತಾಲೂಕಿನ ರಾಜ್ಯ ಹೆದ್ದಾರಿ–10 ಮುಧೋಳ ದಿಂದ ಯಲಗೇರಾ ಅಂಥ್ರಗಡಿಯವರೆಗೆ ಸುಧಾರಣೆ ಕಿ.ಮೀ. 3.00 ರಿಂದ 5.00ರ ವರೆಗೆ (ರಾಜ್ಯ ಹೆದ್ದಾರಿ–	0.00	1.00

	127)		
7	ಸೇಡಂ ತಾಲೂಕಿನ ರಾಜ್ಯ ಹೆದ್ದಾರಿ–10 ಮುಧೋಳ ದಿಂದ ಯಲಗೇರಾ ಅಂಧ್ರಗಡಿಯವರೆಗೆ ಸುಧಾರಣೆ ಕಿ.ಮೀ. 5.00 ರಿಂದ 8.00ರ ವರೆಗೆ (ರಾಜ್ಯ ಹೆದ್ದಾರಿ–127)	0.00	2.00
8	ಸೇಡಂ ತಾಲೂಕಿನ ರಾಜ್ಯ ಹೆದ್ದಾರಿ–10 ಮುಧೋಳ ದಿಂದ ಯಲಗೇರಾ ಅಂಧ್ರಗಡಿಯವರೆಗೆ ಸುಧಾರಣೆ ಕಿ.ಮೀ. 18.00 ರಿಂದ 20.00ರ ವರೆಗೆ (ರಾಜ್ಯ ಹೆದ್ದಾರಿ–127)	0.00	1.00
9	ಸೇಡಂ ತಾಲೂಕಿನ ರಾಜ್ಯ ಹೆದ್ದಾರಿ–10 ಮುಧೋಳ ದಿಂದ ಯಲಗೇರಾ ಅಂಧ್ರಗಡಿಯವರೆಗೆ ಸುಧಾರಣೆ ಕಿ.ಮೀ. 20.00 ರಿಂದ 22.00ರ ವರೆಗೆ (ರಾಜ್ಯ ಹೆದ್ದಾರಿ–127)	0.00	1.00
10	ಸೇಡಂ ತಾಲೂಕಿನ ರಾಜ್ಯ ಹೆದ್ದಾರಿ–10 ಆಂಧ್ರಪ್ರದೇಶಗಡಿಯಿಂದ ಪುಟಪಾಕ್ ದೋಸ್ಗಾ ರಸ್ತೆ ನಿರ್ವಹಣೆ (ರಾಜ್ಯ ಹೆದ್ದಾರಿ 126) ಕಿ.ಮೀ. 31.67 ರಿಂದ 35.67ರ ವರೆಗೆ	0.00	1.00
11	ಸೇಡಂ ತಾಲೂಕಿನ ಮಹಾರಾಷ್ಟ್ರ ಗಡಿಯಿಂದ ಮುರ್ಕಿ, ಔರಾದ, ಬೀದರ, ಚಿಂಚೋಳಿ. ಸೇಡಂ, ಹಂದರಕಿ ರಾಜ್ಯ ಹೆದ್ದಾರಿ–15 ಕೊಡುವುದು. (ರಾಜ್ಯ ಹೆದ್ದಾರಿ 122) ಕಿ.ಮೀ. 186.22 ರಿಂದ 187.00ರ ವರೆಗೆ	0.00	0.50
12	ಸದರ – ಕಿ.ಮೀ. 187.00 ರಿಂದ 188.00ರ ವರೆಗೆ	0.00	0.50
13	ಸದರ – ಕಿ.ಮೀ. 192.00 ರಿಂದ 194.00ರ ವರೆಗೆ	0.00	2.00
14	ಸದರ – ಕಿ.ಮೀ. 94.00 ರಿಂದ 195.00 ರ ವರೆಗೆ	0.00	2.00

15	ಸದರ – ಕಿ.ಮೀ. 205.00 ರಿಂದ 230.00ರ ವರೆಗೆ	0.00	2.00
16	ಸೇಡಂ ತಾಲೂಕಿನ ಸರಸಂಬಾ–ರಿಬ್ಬನ್‌ಪಲ್ಲಿ ರಸ್ತೆ ಕಿ.ಮೀ. 106.00 ರಿಂದ 10.00ರ ವರೆಗೆ ಸುಧಾರಣೆ (ಆಯ್ದ ಭಾಗಗಳಲ್ಲಿ) (ರಾಜ್ಯ ಹೆದ್ದಾರಿ–10)	0.00	5.00
17	ಸದರ – ಕಿ.ಮೀ. 110.00 ರಿಂದ 111.00ರ ವರೆಗೆ	0.00	5.00
18	ಸದರ – ಕಿ.ಮೀ. 111.00 ರಿಂದ 113.00ರ ವರೆಗೆ	0.00	5.00
	ಒಟ್ಟು:–	**46.65**	**28.00**
II. 5054 ರಸ್ತೆ ಮತ್ತು ಸೇತುವೆ (ಇತರೆ ರಸ್ತೆ ನಿರ್ಮಾಣ)			
1	ಸೇಡಂ ತಾಲೂಕಿನ ಬೆಟಗೇರಾ–ಮೋತಕಪಲ್ಲಿ ರಸ್ತೆ ಕಿ.ಮೀ. 2.00 ರಿಂದ 6.00, 6.00 ರಿಂದ 8.00, 20.00 ರಿಂದ 22.00 ಮತ್ತು 28.00 32.50 ರವೆಗೆ ಸುಧಾರಣೆ	2.11	0.00
2	ಸೇಡಂ ತಾಲೂಕಿನ ಮುಧೋಳ – ಹಂದರಕಿ ರಸ್ತೆ ಕಿ.ಮೀ. 3.00 ರಿಮದ 7.00 (3.00 ರಿಂದ 4.00 ಮತ್ತು 5.50 ರಿಂದ 8.00 ರವರೆಗೆ ಸುಧಾರಣೆ	0.00	2.76
	ಒಟ್ಟು:–	**2.11**	**2.76**
III. 5054 ರಸ್ತೆ ಮತ್ತು ಸೇತುವೆ (ನಬಾರ್ಡ ಕಾಮಗಾರಿಗಳು)			
1	ಸೇಡಂ ತಾಲೂಕಿನ ನೀಲಹಳ್ಳಿ ಹಿಂಗನಳ್ಳಿ ರಸ್ತೆ ಕಿ.ಮೀ. 0.00 ರಿಂದ 5.00 ರವರೆಗೆ ಸುಧಾರಣೆ	3.21	17.69
2	ಸೇಡಂ ತಾಲೂಕಿನ ವನಮಾರಪಲ್ಲಿ–ರಾಯಚೂರು ರಸ್ತೆ ಆಲಹಳ್ಳಿ ಕ್ರಾಸ್‌ದಿಂದ ವಗ್ದಾರಿ ರಿಬ್ಬನಪಲ್ಲಿ ರಸ್ತೆ ಕೂಡುವುದು.	19.11	56.34
3	ಸೇಡಂ ತಾಲೂಕಿನ ಗುಲಬರ್ಗಾ–ಕೂಡಂಗಲ್ ರಸ್ತೆಯಿಂದ ಇಮದಾಪೂರ ವಾಯಾ	0.00	15.97

	ಮದನಿಲಿಮಗನಾಳಿ ವರೆಗೆ ಸುಧಾರಣೆ		
4	ಸೇಡಂ ತಾಲೂಕಿನ ಮುಧೋಳ – ಯಾನಾಗುಂದಿ ರಸ್ತೆ ಕಿ.ಮೀ. 16.00 ರಿಮದ 18.00 ವರೆಗೆ ಸುಧಾರಣೆ	4.50	6.80
5	ಸೇಡಂ ತಾಲೂಕಿನ ಕಡತಾಲ–ಚಂದಾಪೂರ ರಸ್ತೆ ಕಿ.ಮೀ. 0.00 ರಿಂದ 6.00 ವರೆಗೆ ಸುಧಾರಣೆ	11.92	30.00
	ಒಟ್ಟು:–	**38.74**	**126.80**
IV. 3054 12ನೇ ಹಣಕಾಸು ಯೋಜನೆ			
1	ಸೇಡಂ ತಾಲೂಕಿನ ದೇಟಗೇರಾ–ಸಿದ್ದಾಪೂರ ರಸ್ತೆ ಕಿ.ಮೀ. 0.00 ರಿಂದ 2.00 ರವರೆಗೆ ಸುಧಾರಣೆ	15.00	0.00
2	ಸೇಡಂ ತಾಲೂಕಿನ ಮುಧೋಳ–ಯಾನಾಗುಂದಿ ರಸ್ತೆ ಕಿಮೀ. 1.60 ರಿಂದ 4.50 ರಲ್ಲಿ ತಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	1.80
3	ಸೇಡಂ ತಾಲೂಕಿನ ಮುಧೋಳ–ಯಾನಾಗುಂದಿ ರಸ್ತೆ ಕಿಮೀ. 6.00 ರಿಂದ 11.00 ರಲ್ಲಿ ತಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	2.00
4	ಸೇಡಂ ತಾಲೂಕಿನ ಮುಧೋಳ–ಯಾನಾಗುಂದಿ ರಸ್ತೆ ಕಿಮೀ. 12.00 ರಿಂದ 16.80 ರಲ್ಲಿ ತಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	2.00
5	ಸೇಡಂ ತಾಲೂಕಿನ ಮುಧೋಳ–ಯಾನಾಗುಂದಿ ರಸ್ತೆ ಕಿಮೀ. 2.00 ರಿಂದ 3.00 ರವರೆಗೆ ಮರು ಡಾಂಬರೀಕರಣ ಮಾಡುವುದು	–	4.00
6	ಸೇಡಂ ತಾಲೂಕಿನ ಗುರುಮಿಟಕಲ್–ಬುರಗಾಪಲ್ಲಿ ರಸ್ತೆ ಕಿಮೀ. 7.00 ರಿಂದ 12.00 ರವರೆಗೆ ತೆಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	2.79

7	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಪೂರ ರಸ್ತೆ ಕಿಮೀ. 0.00 ರಿಂದ 0.60 ರವರೆಗೆ ಮರು ಡಾಂಬರಿಕರಣ ಮಾಡುವುದು	–	4.90
8	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 2.20 ರಿಂದ 3.00 ರವರೆಗೆ ತಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	1.00
9	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 4.20 ರಿಂದ 6.50 ರವರೆಗೆ ತಗ್ಗು ಗುಂಡಿಗಳು ಹಾಗೂ ಜಂಗಲ್ ತೆಗೆಯುವುದು	–	2.00
10	ಸೇಡಂ ತಾಲೂಕಿನ ಬೆಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 7.00 ರಿಂದ 8.00 ರವರೆಗೆ ತಗ್ಗು ಗುಂಡಿಗಳು ಹಾಗೂ ಜುಗಲ್ ತೆಗೆಯುವುದು	–	1.00
11	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 8.50 ರಿಮದ 11.00 ರವರೆಗೆ ತಗ್ಗು ಗುಮಡಿಗಳು ಹಾಗೂ ಜುಗಲ್ ತೆಗೆಯುವುದು	–	2.00
12	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 12.00 ರಿಂದ 14.00 ರವರೆಗೆ ತಗ್ಗು ಗುಂಡಿಗಳು ಹಾಗೂ ಜುಗಲ್ ತೆಗೆಯುವುದು	–	1.00
13	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿ.ಮೀ. 14.50 ರಿಂದ 18.00 ರವರೆಗೆ ತಗ್ಗು ಗುಂಡಿಗಳು ಹಾಗೂ ಜುಗಲ್ ತೆಗೆಯುವುದು	–	2.00
14	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 19.00 ರಿಮದ 24.00 ರವರೆಗೆ ತಗ್ಗು ಗುಂಡಿಗಳು ಹಾಗೂ ಜುಗಲ್ ತೆಗೆಯುವುದು	–	2.00
15	ಸೇಡಂ ತಾಲೂಕಿನ ಬೇಟಗೇರಾ–ಸಿದ್ದಾಪೂರ ರಸ್ತೆ ಕಿಮೀ. 25.00 ರಿಂದ 26.20 ರವರೆಗೆ ತಗ್ಗು ಗುಂಡಿಗಳು ಹಾಗೂ ಜುಗಲ್ ತೆಗೆಯುವುದು	–	1.00
16	ಸೇಡಂ ತಾಲೂಕಿನ ಚಿತ್ತಾಪೂರ ಮುಳಖೇಡ ರಸ್ತೆಯ ಮೇಲೆ ಕಿಮೀ. 7.00 ಸಿ.ಡಿ. ನಿರ್ಮಾಣ	–	1.60

17	ಸೇಡಂ ತಾಲೂಕಿನ ಚಿತ್ತಾಪೂರ ಮಳಖೇಡ ರಸ್ತೆ ಕಿಮೀ. 6.20 ರಿಂದ 8.00 ರವರೆಗೆ ತಗ್ಗು ಗುಂಡಿಗಳು ಮುಚ್ಚುವುದು ಹಾಗೂ ಜುಗಲ್ ತೆಗೆಯುವುದು	–	1.00
18	ರಾಜ್ಯ ಹೆದ್ದಾರಿ-10 ರಲ್ಲಿ ಸೇಡಂ ಪಟ್ಟಣ ಪರಿಮಿತಿಯಲ್ಲಿ ಸ್ಕೆಡ ಬರ್ಮ ತೆಗೆಯುವುದು	–	0.55
	ಒಟ್ಟು:-	**15.00**	**32.64**
V. 3054 ರಾಜ್ಯ ಹೆದ್ದಾರಿಗಳ ನಿರ್ವಹಣೆ (ಯೋಜನೇತರ)			
1	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 114.00 ರಿಂದ 114.50 ರವರೆಗೆ ಅಯ್ದ ಭಾಗಗಳಲ್ಲಿ) ಡಾಂಬರೀಕರಣ	–	4.65
2	ಸೇಡಂ ತಾಲೂಕಿನ ಸರಸಂಬಾ-ರಿಬ್ಬನದಲ್ಲಿ ರಸ್ತೆ (ರಾ.ಹ-10) ಸರಪಳಿ 118.00 ರಲ್ಲಿ ಬರುವ ಸೇತುವೆ ಅಪೋಚಿಸ್ ದುರಸ್ತಿ	–	4.80
3	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 130.00 ರಿಮದ 130.40 ರವರೆಗೆ (ಆಯ್ದು ಭಾಗಗಳಲ್ಲಿ)	–	4.96
4	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 133.20 ರಿಮದ 134.00 ರವರೆಗೆ (ಆಯ್ದು ಭಾಗಗಳಲ್ಲಿ) ಡಾಂಬರೀಕರಣ	–	4.70
5	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 134.00 ರಿಂದ 139.60 ರವರೆಗೆ (ಆಯ್ದ ಭಾಗಗಳಲ್ಲಿ	–	4.65
6	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 140.70 ರಿಂದ 141.20 ರವರೆಗೆ (ಆಯ್ದ ಭಾಗಗಳಲ್ಲಿ) ಡಾಂಬರೀಕರಣ	–	4.00
7	ಸೇಡಂ ತಾಲೂಕಿನ ಸರಸಂಬಾ-ರಿಬ್ಬನಪಲ್ಲಿ ರಸ್ತೆ (ರಾ.ಹೆ-10) ಸರಪಳಿ 133.00 ರಿಂದ 114.00 ರವರೆಗೆ (ಆಯ್ದ ಭಾಗಗಳಲ್ಲಿ) ಡಾಂಬರೀಕರಣ	–	2.48
	ಒಟ್ಟು:-	–	**30.24**

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಪ್ರಶ್ನೆಯನ್ನು ಕೇಳಿರತಕ್ಕಂತಹ ಮೂಲ ಉದ್ದೇಶವನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಸೇಡಂ ಮತಕ್ಷೇತ್ರ ಡಾ:ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕಾಗಿದೆ. ಆ ತಾಲೂಕಿನಲ್ಲಿ ಅಲ್ಲಿರತಕ್ಕಂತಹ ರಸ್ತೆಗಳ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದರೆ ಇವತ್ತು ಮಾನ್ಯ ಸಚಿವರು ಒಂದು ಸಾರಿ ನಮ್ಮ ಮತ ಕ್ಷೇತ್ರಕ್ಕೆ ಬಂದು ಅಲ್ಲಿ ಓಡಾಡಬೇಕೆಂದು ನನ್ನ ಮನವಿಯಾಗಿದೆ. ಮಾನ್ಯ ಸಚಿವರೆ, ತಾವು ಇಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಈಗ ರಾಜ್ಯ ಹೆದ್ದಾರೆ 2007–08ರಲ್ಲಿ ಯಾವುದೇ ಖರ್ಚು ಮಾಡಿರುವುದಿಲ್ಲ. ಇಲ್ಲಿ ತಮ್ಮ ಉತ್ತರದಲ್ಲಿದೆ. 2008–09ರಲ್ಲಿ 30 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಆ ರಾಜ್ಯ ಹೆದ್ದಾರಿ ವಾಗ್ದರಿ–ರಿಬ್ಬನಪಲ್ಲಿ ರೋಡ್ ನಮ್ಮ ಗುಲ್ಬರ್ಗದಿಂದ ಸೇಡಂ, ಸೇಡಂನಿಂದ ರಿಬ್ಬನ್‌ಪಲ್ಲಿಗೆ ಹೋಗುವಂತಹ ರಸ್ತೆಯಾಗಿದೆ. ಅದು ಎಷ್ಟು ಹಾಳಾಗಿದೆ ಎಂದರೆ ಅಲ್ಲಿ ಹೋಗತಕ್ಕಂತಹ ಜನರು ದಿನನಿತ್ಯ ಇವತ್ತು ಸರ್ಕಾರಕ್ಕೂ ಬೈಯುತ್ತಾರೆ, ಎಂಎಲ್‌ಎಗೂ ಸಹ ಬೈಯ್ಯುತ್ತಾರೆ. ಈ ಮಟ್ಟಕ್ಕೆ ಹೋಗುವುದನ್ನು ನಾವು ಸರಿಯಾಗಿ ನಿರ್ವಹಣೆಯನ್ನು ಮಾಡದೇ ಹೋದರೆ ಸರಿಯಾಗುವುದಿಲ್ಲ. ಈ ರಸ್ತೆಯ ಬಗ್ಗೆ ಅಲ್ಲದೆ ನನ್ನದು ಇನ್ನೊಂದು ಪ್ರಶ್ನೆ ಇದೆ. ಅದರಲ್ಲಿ ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಪ್ರಶ್ನೆ unstarred ಆಗಿದೆ. ಅವರದು starred ಆಗಿದೆ. ನಾನು ಈ ಪ್ರಶ್ನೆಯನ್ನು ಕೇಳಿರುವಂತಹ ಉದ್ದೇಶವೇನೆಂದರೆ, ನಮ್ಮ ಇಲಾಖೆಯದು ಏನು ಇವತ್ತು ನಿಮ್ಮ ಪ್ಲಾನ್ ಇದೆ, ನಮ್ಮ ರಾಜ್ಯದಲ್ಲಿರತಕ್ಕಂತಹ State Highways ಗೆ ಮತ್ತು Major District Roadಗೆ ಒಂದು ಕಾಲಮಿತಿಯೊಳಗೆ ಇರುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿರುವುದಿಲ್ಲ. ನಿಮ್ಮ Major District Roadನಲ್ಲಿ 3054,5054 ರಲ್ಲಿ ನೀವು ಹಣವನ್ನು ಬಿಡುಗಡೆ ಮಾಡುತ್ತೀರಿ. ಅದು ಬಹಳ ಪಾರದರ್ಶಕವಾಗಿಲ್ಲ. ಅದನ್ನು ನೋಡದೆಯೇ ಹೇಳಬಾರದು. ಮಾನ್ಯ ಸಚಿವರು ಇವತ್ತು ಯಾವ ಯಾವ ಮತಕ್ಷೇತ್ರಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬ ಬಗ್ಗೆ ಪಾರದರ್ಶಕತೆ ಇಲ್ಲ. ನೀವು ಹಣವನ್ನು ಹೇಗೆ ಬಿಡುಗಡೆ ಮಾಡುತ್ತೀರಿ? ಎಷ್ಟು ಹಣ ಖರ್ಚಾಗಿದೆ ಎಂಬುದರ ಬಗ್ಗೆ ಪಾರದರ್ಶಕತೆ ಇಲ್ಲ. ಇವತ್ತು ಕೆಲಸ ಮಾಡಿರುವಂತಹ ನಿಮ್ಮ ಇಲಾಖೆಯಲ್ಲಿ ಇವತ್ತು ಯಾವ ರೀತಿಯಾಗಿ ಪೇಮೆಂಟ್ ಆಗಬೇಕೆನ್ನುವಂತಹದ್ದರಲ್ಲಿ ಪಾರದರ್ಶಕವಿಲ್ಲ. ಸುಮಾರು ಕೋಟಿ ರೂಪಾಯಿಗಳು 3054ರಲ್ಲಿ ನಮ್ಮ ದಕ್ಷಿಣ ಮತ್ತು ಉತ್ತರವಲಯದಲ್ಲಿ ಎರಡನ್ನು ಸೇರಿಸಿದರೆ 400 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇದೆ. ಯಾರು ಕೂಡ ಕೆಲಸವನ್ನು ಮಾಡುವುದಕ್ಕೆ ರೆಡಿ ಇಲ್ಲ.

ಅಧ್ಯಕ್ಷರು: ಡಾ:ಶರಣಪ್ರಕಾಸ್ ರುದ್ರಪ್ಪ ಪಾಟೀಲ್‌ರವರೆ, ನೀವು ನಿಮ್ಮ ಸೇಡಂ ಕ್ಷೇತ್ರಕ್ಕೆ ಸೀಮಿತವಾದಂತಹ ಪ್ರಶ್ನೆಯನ್ನು ಕೇಳಿ. ಇಡೀ ರಾಜ್ಯದ ಬಗ್ಗೆ ನೀವು

ಪ್ರಶ್ನೆಯನ್ನು ಕೇಳುವುದಕ್ಕೆ ಹೋಗುತ್ತೀರಿ. ಬಜೆಟ್ ಮೇಲೆ ಚರ್ಚೆ ಮಾಡುವಾಗ ತಾವು ಮಾತನಾಡಿ. ನಾನು ಬೇಡವೆಂದು ಹೇಳುವುದಿಲ್ಲ. ಸೇಡಂ ನಿಮ್ಮ ಗುಲ್ಬರ್ಗ ಜಿಲ್ಲೆಗೆ ಸಂಬಂಧಪಟ್ಟಿರುವುದರಿಂದ ಅದನ್ನು ಕೇಳಿ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾನು ನನ್ನ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳುತ್ತಿದ್ದೇನೆ. ಇಲ್ಲಿ ನನ್ನ ಉದ್ದೇಶವೇನೆಂದರೆ, ನೀವು ಎಂಡಿಆರ್‌ಗೆ state highwayಗೆ ಸಮರ್ಪಕವಾಗಿ ಹಣ ಲಭ್ಯತೆ ಸರ್ಕಾರವು ಮಾಡಿರುವುದಿಲ್ಲ. ನಮ್ಮ ಮತ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಕೊಡದಿರುವ ಬಗ್ಗೆ ಕೇಳುತ್ತಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರು ನಾನು ಅವರ ಕ್ಷೇತ್ರಕ್ಕೆ ಬಂದು ಹೋಗಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ರಸ್ತೆಗಳನ್ನು ನೋಡಬೇಕೆನ್ನುವಂತಹ ಉದ್ದೇಶದಿಂದ ಈ ಮಾತುಗಳನ್ನು ಹೇಳುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಆ ರಸ್ತೆಗಳಲ್ಲಿ ಅವರ ಕ್ಷೇತ್ರದಲ್ಲಿ 4 ಕೋಟಿ 39 ಲಕ್ಷರೂಪಾಯಿಗಳಷ್ಟು ಹಣ ಖರ್ಚಾಗಿದೆ. ಅದನ್ನು ಅವರು ಗಮನಿಸಿರಬೇಕೆಂದು ನಾನು ಭಾವಿಸಿಕೊಂಡಿದ್ದೇನೆ. ಇದು ಕೇವಲ ರಸ್ತೆಗಳಿಗೆ ಮಾತ್ರ ಸೀಮಿತವಾಗಿ ಖರ್ಚು ಮಾಡಬೇಕಾದ ಹೆದ್ದಾರಿ ರಸ್ತೆಗಳಿಗೆ ಸಂಬಂಧಿಸಿರುವುದು. ಕಟ್ಟಡಗಳಿಗೆ ಮತ್ತು ಉಳಿದ ಕಡೆಗಳಿಗೆ ಮತ್ತು maintenanceಗೆ ಖರ್ಚಾಗಿರುವ ಬಗ್ಗೆ ಬೇರೆ ಇದ್ದು ಅದು ತಮ್ಮ ಗಮನದಲ್ಲಿರಲಿ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಎಲ್ಲಾ ಕಡೆಯಲ್ಲಿಯೂ ಸೇತುವೆಗಳನ್ನು ಸಮಾನವಾಗಿ ನೋಡಿಕೊಂಡು ಬಂದಿದ್ದೇವೆ. ಅದರಲ್ಲಿಯೂ ಸಹಿತ ಈ 114 ತಾಲ್ಲೂಕುಗಳ ಪ್ರಶ್ನೆಯು ಬಂದಾಗ ಹಿಂದುಳಿದ ತಾಲ್ಲೂಕಿನ ಬಗ್ಗೆ ಬಂದಾಗ ಅದಕ್ಕೆ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡಿದ್ದೇವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಎಂಡಿಆರ್‌ನಲ್ಲಿ ಈ ವರ್ಷ 180 ಕಿಲೋಮೀಟರ್ ರಸ್ತೆಯದನ್ನು ಮೇಲ್ದರ್ಜೆಗೇರಿಸಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ 180 ಕಿಲೋಮೀಟರ್ ವಿಲೇಜ್ ರೋಡ್‌ನ್ನು ಎಂಡಿಆರ್ ಅನ್ನಾಗಿ ಮಾಡಿದ್ದೀರಿ. ಆದರೆ ಈ ವರ್ಷದಿಂದ ನಿಮ್ಮ ಬಜೆಟ್‌ನಲ್ಲಿ ಅದರ ಬಗ್ಗೆ ಏನು ಪ್ರಸ್ತಾವನೆಯೇ ಇಲ್ಲ. Rural development ಇದ್ದಾರೆ ಚೆನ್ನಾಗಿತ್ತೇನೋ ಎನ್ನುವಂತಹ ಭಾವನೆಯೂ ಬರುತ್ತಿದೆ. ಅದರ ಬಗ್ಗೆ ಸ್ಪಷ್ಟೀಕರಣವನ್ನು ಯಾವ ರೀತಿಯಾಗಿ ಮಾಡುತ್ತೀರೆಂದು ನಾನು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮೇಲ್ದರ್ಜೆಗೇರಿಸುವಂತಹ ರಸ್ತೆಗಳಿಗೆ ಸಹಿತ ಅನುದಾನವನ್ನು ಪ್ರತಿ ಕಿಲೋಮೀಟರ್‌ಗೆ 50 ಸಾವಿರ ರೂಪಾಯಿವರೆಗೆ ಹಣವನ್ನು ಬೇಕೆಂಬ ಪ್ರಸ್ತಾವನೆಯನ್ನು ನಾವು ಈಗಾಗಲೆ ಸಲ್ಲಿಸಿದ್ದೇವೆ. ಅತೀ ಶೀಘ್ರದಲ್ಲಿಯೇ ಅದಕ್ಕೆ ಹಣವು ಬಿಡುಗಡೆಯಾಗಿ ಅದನ್ನು ಸಹಿತ ದುರಸ್ತಿ ಕೆಲಸ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

ವಾಗ್ದರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ ರಸ್ತೆ ನಿರ್ಮಾಣದ ಬಗ್ಗೆ

56(227) ಶ್ರೀ. ಸುಬಾಷ ಆರ್.ಗುತ್ತೇದಾರ್(ಆಳಂದ್)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ (ಸಚಿವರು)

ಅ) ವಾಗ್ದರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಹೌದು.

ದಿನಾಂಕ 03–07–2009 ರಂದು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ನಿಯಮಾವಳಿಯಂತೆ ಗುತ್ತಿಗೆ ನಿಗಧಿಪಡಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಈ ಮೊದಲು ಬಿ.ಒ.ಟಿ. ಯಲ್ಲಿ ಪ್ರಾರಂಭಿಸುತ್ತೇವೆಂದು ಸರ್ಕಾರ ಹೇಳಿದ್ದು ನಿಜವೇ; ಈ ಕಾಮಗಾರಿಯನ್ನು ಪ್ರಾರಂಭಿಸಲು ಯಾವುದೇ ಗುತ್ತಿಗೆದಾರರು ಮುಂದೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಮೊದಲನೇ ಕರೆಯಲ್ಲಿ ಯಾವುದೇ ಗುತ್ತಿಗೆದಾರರು ಪ್ರತಿಕ್ರಿಯೆ ನೀಡಿರುವುದಿಲ್ಲ.

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; ವಿವರಗಳನ್ನು ನೀಡುವುದು;

ಯೋಜನೆಯ ಅನುಮೋದಿತ ಅಂದಾಜು ಮೊತ್ತವು 197.2 ಕೋಟಿ ರೂ.ಗಳಿದ್ದು, ಈ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಮಾರ್ಚ್ 2008ರಲ್ಲಿ ತಾತ್ವಿಕ ಅನುಮೋದನೆ ಪಡೆದು ನಂತರ ಟೆಂಡರ್ ಕರೆಯಲಾಗಿತ್ತು. ಈ ನಡುವಿನಲ್ಲಿ ಕಾಮಗಾರಿಯ ನಿರ್ಮಾಣ ಮೊತ್ತದಲ್ಲಿ ಹೆಚ್ಚಳವಾಗಿದ್ದರಿಂದ ಯಾವುದೇ ಗುತ್ತಿಗೆದಾರರು ಈ ಕಾಮಗಾರಿ ಕೈಗೊಳ್ಳಲು ಆಸಕ್ತಿ ತೋರಿರುವುದಿಲ್ಲ.

ಈ) ಮೇಲ್ಕಂಡ ರಸ್ತೆಯ ಕಾಮಗಾರಿಯನ್ನು ಸರ್ಕಾರದ ವತಿಯಿಂದ ನಬಾರ್ಡ್ ಅಥವಾ ವಿಶ್ವಬ್ಯಾಂಕಿನ ನೆರವಿನಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಈ ಕಾಮಗಾರಿಯನ್ನು ನಬಾರ್ಡ್ ಅಥವಾ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಕೇಂದ್ರ ಸರ್ಕಾರದ ವಿ.ಜಿ.ಎಫ್. ಯೋಜನೆಯಡಿ ಕೈಗೊಳ್ಳುವ ಬಗ್ಗೆ ಮರು ಪ್ರಸ್ತಾಪಿಸಲಾಗಿದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಇವರು ಯಾವ ರೀತಿಯಾಗಿ ಒದಗಿಸಿದ್ದಾರೆಂದರೆ, ವಾಗ್ದರಿ–ರಿಬ್ಬನ್‌ಪಲ್ಲಿ ರಾಜ್ಯ ಹೆದ್ದಾರೆ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಹಾಗಿದ್ದಲ್ಲಿ ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಕೇಳಿದರೆ "ಹೌದು" ಎಂದು

ಹೇಳುತ್ತಾರೆ. ಮತ್ತು ಇಂತಹ ತಾರೀಖಿಗೆ ಟೆಂಡರ್‌ನ್ನು ಕರೆದಿದ್ದೇವೆಂದು ಹೇಳುತ್ತಿದ್ದಾರೆ. ಇದರ ಹಿಂದೆಯೂ ಕೂಡ ಟೆಂಡರ್‌ನ್ನು ಕರೆದಿದ್ದರು. ಅದಕ್ಕೆ ಯಾರು ಕೂಡ ಬಂದಿಲ್ಲ. ಯಾರೂ ಕೂಡ ಟೆಂಡರ್‌ನ್ನು ಹಾಕಿರುವುದಿಲ್ಲ. ಈ ಟೆಂಡರ್ ಬಿಒಟಿ ದರದಲ್ಲಿ ಕರೆದಿದ್ದಾರೆ. ಅದಕ್ಕೆ ಯಾರೂ ಬರುತ್ತಿಲ್ಲ. ಈ ರೋಡ್ ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಜಾಯಿಂಟ್ ಆಗಿದೆ. ಇದರಿಂದ ಮಹಾರಾಷ್ಟ್ರದಿಂದ ಬರತಕ್ಕಂತಹ ವೆಹಿಕಲ್‌ಗಳು ಬಸ್ಸಿನಲ್ಲಾಗಲಿ, ಲಾರಿಯಲ್ಲಾಗಲಿ, ಮಹಾರಾಷ್ಟ್ರದಿಂದ ಮಲಗಿಕೊಂಡು ಬಂದರೆ ಕರ್ನಾಟಕ ರೋಡ್‌ಗೆ ಬಂದಾಗ ಅವರ ಮಲಗಿಕೊಂಡೇ ಇದ್ದು ಕರ್ನಾಟಕವೆಂದು ಹೇಳುತ್ತಾರೆ. ಅವರು ಕರ್ನಾಟಕ ರೋಡ್ ಎಂದು ಹೇಳುವುದಿಲ್ಲ. ನಾಟಕ್ ರೋಡ್ ಎಂದು ಹೇಳುತ್ತಾರೆ. ಈ ತರಹ ಒಂದು ಕರ್ನಾಟಕಕ್ಕೆ ಇವತ್ತು ಅವಮಾನ ಮಾಡತಕ್ಕಂತಹ ರೋಡ್ ಇದೆ. ಅದಕ್ಕಾಗಿ ತಾವು ಇದೊಂದು ಬಿಒಟಿಯಲ್ಲಿ ಕರೆದಿದ್ದೀರಿ, ಅದಕ್ಕಾಗಿ ಟೆಂಡರ್ ಹಾಕುವುದಕ್ಕೆ ಯಾರು ಕೂಡ ಬಂದಿರುವುದಿಲ್ಲ. ಈಗ ತಾವು ಮತ್ತೆ ಕರೆದಿದ್ದೀರಿ. ಯಾರು ಕೂಡ ಅದರಲ್ಲಿ ಬರುವುದಿಲ್ಲ. ಬೇರೆ ಒಂದು ನಬಾರ್ಡ್ ಅಥವಾ ವಿಶ್ವಬ್ಯಾಂಕ್ ಯಾವುದರಲ್ಲಾದರೂ ಹಾಕಿ ಟೆಂಡರ್‌ನ್ನು ಕರೆಯಬೇಕೆಂದು ಇವತ್ತು ಕೇಳಿಕೊಳ್ಳುತ್ತಿದ್ದೇನೆ. ಈ ಬಗ್ಗೆ ತಾವು ಏನು ಹೇಳಿದ್ದೀರಿ. ಅದಕ್ಕೆ VGF ಅದರಲ್ಲಿ ಗೈಡ್‌ಲೈನ್ಸ್‌ನ್ನು ಯಾವ ಫಂಡ್‌ನಲ್ಲಿ ಕರೆದಿದ್ದೀರೆಂದು ತಾವು ಹೇಳಿದ್ದೀರಿ. ಅದೇನೂ ರಾಜ್ಯದ ಬಜೆಟ್ಟೋ, ಏನು ಕೇಂದ್ರದ ಬಜೆಟ್ಟೋ ಯಾವ ರೀತಿಯಾಗಿ ಕರೆದಿದ್ದೀರಿ. ತಾವು ಈ ರೋಡ್‌ನ್ನು ನೋಡಿದ್ದೀರಿ. ತಾವು ಆ ರೋಡಿಗೆ ಬಂದಿದ್ದೀರಿ. ಏಕೆಂದರೆ, ಅಲ್ಲಿ ಸಿಮೆಂಟ್ ಫ್ಯಾಕ್ಟರಿ ಇದೆ. ಈ ಕಡೆಗೆ ಸಿಮೆಂಟ್ ಆಂಧ್ರಕ್ಕೂ ಹೋಗುತ್ತದೆ ಹಾಗೂ ಈ ಕಡೆಗೆ ಸಿಮೆಂಟ್ ಮಹಾರಾಷ್ಟ್ರಕ್ಕೂ ಹೋಗುತ್ತದೆ. ಈಗ ಶಹಾಬಾದ್ ಚಪ್ಪಡಿ ಕಲ್ಲುಗಳಿವೆ, ಅವುಗಳು ಕೂಡ ಇವತ್ತು ಬಹಳ heavy load ತೆಗೆದುಕೊಂಡು ಇವತ್ತು ಹೋಗುತ್ತಿವೆ. ಅದಕ್ಕೆ ಇವತ್ತು ಮಳೆಗಾಲ ಅಥವಾ ಏನೇ ಬಂತು ಎಂದರೂ ಸಹ ಗಾಡಿಗಳು ಓಡಡುವುದಕ್ಕೆ ಸರಿಯಾದ ರೋಡ್ ಇಲ್ಲ. ಇದಕ್ಕೆ ಆದಷ್ಟು ಬೇಗ ಟೆಂಡರ್ ಕರೆದು ಬೇರೆ ರೀತಿಯಲ್ಲಿ ಬೇಗ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಇವತ್ತು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕರೆ, ಈ ರಸ್ತೆ ಬಗ್ಗೆ ಹಾಗೂ ಅವರ ಆತಂಕದ ಬಗ್ಗೆ ನಾನು ಗಮನಿಸಿದ್ದೇನೆ. ಆ ರಸ್ತೆ ಬಗ್ಗೆ ಅನೇಕ ಜನ ಗುಲ್ಬರ್ಗದ ಶಾಸಕರು, ಅದರಲ್ಲಿ ಡಾ: ಶರಣಪ್ರಕಾಶ್ ಪಾಟೀಲ್ ಹಾಗೂ ಮೊದಲಾದಿಯಾಗಿ ಒಂದು ಎಲ್ಲರ ಬಯಕೆ ಇದು. ಅತೀ ಶೀಘ್ರದಲ್ಲಿ ಆಗಬೇಕು ಎನ್ನುವ ಬಯಕೆ ಇದೆ ಮತ್ತು ಅವರು ಹೇಳಿದ ಹಾಗೆ ಅತ್ಯಂತ ದಟ್ಟಣೆ ಇದ್ದಂಥ ಸ್ಥಳ ಅದು ಹಾಗೂ ಅನೇಕ ಕಾರ್ಖಾನೆಗಳಿಗೆ ಓಡಾಡುವಂಥ ರಸ್ತೆ ಅದು. ಅಲ್ಲಿ ಓಡಾಡುವ ವಾಹನಗಳ ಸಂಖ್ಯೆ ಹೆಚ್ಚು ಇದೆ. ವಾಗ್ದರಿ-ರಿಬ್ಬನಪಲ್ಲಿ ರಸ್ತೆಯನ್ನು

ನಾವು VGFನಲ್ಲಿ ಅಂದರೆ, Viability Gap funding ನಲ್ಲಿ 197 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಾಗ 13 ಜನ ಗುತ್ತಿಗೆದಾರರು ಪೂರ್ವಾ ರೀತಿಯನ್ನು ನಾವು qualify ಮಾಡಿದ್ದೇವೆ. ಆದರೆ ಇಲ್ಲಿ ನಾಲ್ಕು ಜನ ಗುತ್ತಿಗೆದಾರರು ಕೊನೆಗೆ ಬಂದು ಅದರಲ್ಲಿ ತೀರ್ಮಾನದಲ್ಲಿದ್ದರು. ಆದರೆ, ಕೊನೆಗೆ ಏನು ಬಂತು ಎಂದರೆ, ಅಲ್ಲಿ SR rateನ ವ್ಯತ್ಯಾಸದ ಬಗ್ಗೆ ಬಂದ ಮೇಲೆ ಅದರ ಬದಲಾವಣೆ ಮಾಡಬೇಕಾದಂಥ ಅವಕಾಶ ಬಂದಿದ್ದರಿಂದ ಈಗ ಕೇಂದ್ರ ಸರ್ಕಾರದ ಜೊತೆಗೆ ಚರ್ಚೆ ಮಾಡಿದಮೇಲೆ 247 ಕೋಟಿ ರೂಪಾಯಿಗಳಿಗೆ ಈ ರಸ್ತೆಯನ್ನು ನಿರ್ಮಾಣ ಮಾಡುವುದರ ಸಲುವಾಗಿ ಅನುಮತಿ ದೊರೆಯುತ್ತಿದೆ. ಅದನ್ನು ಟೆಂಡರ್ ಕರೆದು ನಾವು 30-07-2009ಕ್ಕೆ ಕೊನೆಯ ದಿನಾಂಕ ಇಟ್ಟು ಟೆಂಡರ್ ಕರೆಯುತ್ತಿದ್ದೇವೆ. 29-09-2009ರೊಳಗಾಗಿ ಇದರ ಅಂತಿಮ ತೀರ್ಮಾನವಾಗಿ ಕಾಮಗಾರಿಯನ್ನು ಪ್ರಾರಂಭ ಮಾಡುವಂಥ ವ್ಯವಸ್ಥೆ ಇದೆ. ಅವರಿಗೆ VGF funding ಎಂದರೆ ನಮಗೆ ಅರ್ಥವಾಗಲಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ಶೇಕಡಾ 20ರಷ್ಟು ಮತ್ತು ರಾಜ್ಯ ಸರ್ಕಾರದವರು ಶೇಕಡಾ 20ರಷ್ಟು ಹಣವನ್ನು ಗುತ್ತಿಗೆದಾರರಿಗೆ ಕೊಡಬೇಕಾಗುತ್ತದೆ. ಗುತ್ತಿಗೆದಾರರು ಶೇಕಡಾ 60ರಷ್ಟು ಹಣವನ್ನು ಅದರ ಮೇಲೆ ವ್ಯಯ ಮಾಡಬೇಕಾಗುತ್ತದೆ. ವ್ಯಯ ಮಾಡಿ ಅವರು ಟೋಲ್ ಮಾಡಿ, ಟೋಲ್ ಮೂಲಕ ಅವರ ತಮ್ಮ ಆದಾಯವನ್ನು ಅಥವಾ ಅವರು ತೊಡಗಿಸಿದ ಹಣವನ್ನು ಹಿಂಪಡೆಯುವುದಕ್ಕೆ ಅವಕಾಶವಿದೆ. ಇಂತಹ ಯೋಜನೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಆಗುತ್ತಿರಬೇಕಾದರೆ ನಮ್ಮಲ್ಲಿಯೂ ಸಹ ಪ್ರಾಯೋಗಿಕವಾಗಿ ಮೂರು ರಸ್ತೆಗಳನ್ನು ನಾವು ಗುರುತಿಸಿದ್ದೇವೆ. ಇದಕ್ಕೆ ಅನೇಕರು ಈಗಾಗಲೇ ತಮ್ಮ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ನನಗೆ ವಿಶ್ವಾಸವಿದೆ. ಇದು ಅತೀ ಶೀಘ್ರದಲ್ಲಿ 247 ಕೋಟಿ ರೂಪಾಯಿಗಳಿಗೆ ಇವತ್ತು ಏನು ಮೊದಲಿಗಿಂತ ಶೇಕಡಾ 26ರಷ್ಟು ಹೆಚ್ಚಿಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆಯುತ್ತಿರುವುದರಿಂದ ಈ ಕೆಲಸ ಅತಿ ಶೀಘ್ರದಲ್ಲಿ ಆಗುತ್ತದೆ ಎನ್ನುವುದನ್ನು ಅವರಿಗೆ ಭರವಸೆ ಕೊಡುವುದಕ್ಕೆ ನಾನು ಇಚ್ಚೆ ಪಡುತ್ತೇನೆ.

ಶ್ರೀ ಮಾಲೀಕಯ್ಯ ಗುತೇದಾರ್: ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಸಚಿವರಿಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಈಗಾಗಲೇ ತಾವು ಉತ್ತರ ಕೊಟ್ಟಿದ್ದೀರಿ. ಈಗಿನ ಅಂದಾಜು ಪಟ್ಟಿ ಪ್ರಕಾರ ಇದಕ್ಕೆ 237 ಕೋಟಿ ರೂಪಾಯಿಗಳ ಅಂದಾಜು ವೆಚ್ಚವಾಗಿದೆ. ಇದು ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹಾದು ಹೋಗತಕ್ಕಂಥ ಈ ರಸ್ತೆ, ಅಲ್ಲಿ ಅನೇಕ ಕಾರ್ಖಾನೆಗಳಿವೆ, ತುಂಬಾ heavy traffic ಅಲ್ಲಿ ಹೋಗುವುದರಿಂದ ರಸ್ತೆ ಬಹಳ ಹದಗೆಟ್ಟಿದೆ. ಮಾನ್ಯ ಸುಭಾಷ್ ಗುತ್ತೇದಾರ್‌ರವರು ಹೇಳಿದ ಹಾಗೆ

ಮಹಾರಾಷ್ಟ್ರದವರೆಗೆ ಉತ್ತಮವಾದ ರಸ್ತೆಯಿದೆ. ಮಹಾರಾಷ್ಟ್ರವಾದ ಮೇಲೆ ಕರ್ನಾಟಕಕ್ಕೆ enter ಆದಮೇಲೆ ನಮಗೆ ಬೈಯ್ಯುತ್ತಾರೆ. ಸರ್ಕಾರಕ್ಕೂ ಬೈಯ್ಯುತ್ತಾರೆ, ಅಲ್ಲಿ ಶಾಸಕರಿಗೂ ಬೈಯ್ಯುತ್ತಾರೆ. ಇದು ಅನೇಕ ಶಾಸಕರಿಗೆ ಸಂಬಂಧ ಪಟ್ಟ ರಸ್ತೆಯಾಗಿದೆ. ಚಿತ್ತಾಪುರ ಶಾಸಕರಿಗೆ ಬರುತ್ತದೆ. ಸೇಡಂ, ಅಫ್ಜಲ್‌ಪುರ ಮತ್ತು ಆಳಂದ್‌ಗೆ ಬರುತ್ತದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಆದಷ್ಟು ಬೇಗ, ಇದು ವಿಶ್ವಯೋಜನೆಯಲ್ಲಿ ಆಗಬಹುದಾಗಿತ್ತು. ವಿಶ್ವಯೋಜನೆಯಲ್ಲಿ ಪ್ರಮುಖವಾದ ರಸ್ತೆಗಳು ಆದವು. ನಿಮಗೆ ಬೇಕಾದಂಥವುಗಳಿಗೆ ಸಂಪೂರ್ಣ ರಾಜ್ಯ ಬಜೆಟ್ ಕೊಟ್ಟು ಸಂಪೂರ್ಣವಾಗಿ ಪೂರ್ತಿ ಮಾಡುತ್ತೀರಿ. ಇದಕ್ಕೆ ಕೇಂದ್ರದ ನೆರವನ್ನು ಏಕೆ ಕೋರಬೇಕಾಗಿತ್ತು? ಇಲ್ಲಿ ತಾರತಮ್ಯವಾಗುತ್ತದೆ. ನಮ್ಮ ಹಿಂದುಳಿದಂಥ ಪ್ರದೇಶಕ್ಕೆ ತಾವು ವಿಶೇಷವಾಗಿ ಮಾನ್ಯತೆ ಕೊಡಬೇಕಾದರೆ ಅಥವಾ ಕಾಳಜಿ ಇದ್ದರೆ ತಾವು ಕೂಡಲೇ ಶೀಘ್ರದಲ್ಲೇ ಇದನ್ನು ಟೆಂಡರ್ ಕರೆದು ಕೆಲಸವಾಗಬೇಕು ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸುಭಾಷ್‌ರವರೇ, ಮತ್ತೆ ತಾವು ಏನಾದರೂ ಕೇಳುವುದು ಇದ್ದರೆ ಕೇಳಿಬಿಡಿ.

(ಗೊಂದಲ)

ಶ್ರೀ ಸುಭಾಷ ಆರ್. ಗುತ್ತೇದಾರ್: ಈಗಾಲಾದರೂ ಬರುತ್ತದೆಯೇ ಎಂದು ಕೇಳುತ್ತೇನೆ. ಬಂದಿಲ್ಲವೆಂದರೆ ಏನು ಮಾಡುತ್ತೀರಿ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅದಕ್ಕೆ ಬಹಳ hopeful ಆಗಿ ಇದ್ದಾರೆ. ಏಕೆಂದರೆ, ಪುರಸ್ಕೃತ ಅಂದಾಜಾಗಿ ಈಗಾಗಲೇ 247 ಕೋಟಿ ಮಾಡಿದ್ದೇವೆ ಎಂದು hopeful ಆಗಿ ಇದ್ದಾರೆ. ಅದು ಬರದೇ ಇದ್ದರೆ ಹೇಗೆ? ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಇದಕ್ಕೂ ಕೂಡ ಯಾರೂ ಬರದೇ ಇದ್ದರೆ ನಿಮ್ಮ Viability Gap Funding ಏನು ಇದೆಯಲ್ಲಾ, 20% ರಾಜ್ಯ ಮತ್ತು 20% ಕೇಂದ್ರ ಎಂದು ಇದೆ. 20% ಕೇಂದ್ರ ಒಪ್ಪಿದ್ದಾರೆ. ನಿಮ್ಮ ಕಡೆಯಿಂದ ಅಂದರೆ ರಾಜ್ಯ ಸರ್ಕಾರದಿಂದ ಇನ್ನೂ ಒಂದು 20% ಹಣವನ್ನು ಕೂಡಿಸಿ, 60% Viability Gapಗೆ ನೀವು ಟೆಂಡರ್‌ನ್ನು ಕರೆಯತಕ್ಕಂಥಾದ್ದನ್ನು ನೀವು ಮಾಡಿದರೆ ಮಾತ್ರ ಇದಕ್ಕೆ ಏನಾದರೂ solution ಬರುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಇದರ ಮೇಲೆ ಒಂದು ವೇಳೆ ಬರಲಿಲ್ಲವೆಂದರೆ ಏನು ಮಾಡುತ್ತೀರಿ ಸಚಿವರು ಏನು ಮಾಡುತ್ತೀರಿ? ಬರಲಿಲ್ಲವೆಂದರೆ ಏನಾದರೂ ಮಾಡಲೇಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ಉದಾಸಿಯವರೇ ಹೇಳಿ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಇಬ್ಬರು ಗುತ್ತೇದಾರ್ ಸಹೋದರರು ಏನು ಹೇಳುತ್ತಿದ್ದಾರೆ ಅದು ಮತ್ತು ಡಾ:ಶರಣ

ಪ್ರಕಾಶ್ ಪಾಟೀಲ್ ಏನು ಹೇಳುತ್ತಿದ್ದಾರೆ, ಈ Viability Gap Funding ನಲ್ಲಿ ರಾಜ್ಯ ಶೇಕಡಾ 20ರಷ್ಟು, ಕೇಂದ್ರ ಸರ್ಕಾರದ ಶೇಕಡಾ 20ರಷ್ಟು ಹಣ ಕೊಡುವ ವ್ಯವಸ್ಥೆ ಇಟ್ಟುಕೊಂಡು, ಶೇಕಡಾ 60ರಷ್ಟು ಮಾತ್ರ ಗುತ್ತಿಗೆದಾರರು ಹಣ ತೊಡಗಿಸಬೇಕು. ಈ ಕಂಡೀಷನ್ ಮೇಲೆ ಟೆಂಡರ್ ಕರೆಯುವುದಕ್ಕೆ ವ್ಯವಸ್ಥೆ ಇದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ರಾಜ್ಯದ್ದು ಎಷ್ಟಿದೆ?

ಶ್ರೀ ಸಿ.ಎಂ.ಉದಾಸಿ: ರಾಜ್ಯದ್ದು 20% ಎಂದು ಹೇಳಿದ್ದೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಜಾಸ್ತಿ ಮಾಡಿ

ಶ್ರೀ ಸಿ.ಎಂ.ಉದಾಸಿ: ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಒಪ್ಪಿಕೊಳ್ಳುತ್ತಾರೆ. ಈಗ ಬಹಳ ಜನ ಒಪ್ಪಿಕೊಳ್ಳುತ್ತಾರೆ ಎನ್ನುವ ವಿಶ್ವಾಸವಿದೆ. ಇದು ಎರಡು ತಿಂಗಳಿಗೆ, 30-07-2009ಕ್ಕೆ ಟೆಂಡರ್ ಕರೆದಿದ್ದೂ ಇದೆ. ಅದು final ಆಗುತ್ತದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ಯಾರು ಬರಲಿಲ್ಲವೆಂದರೆ ಏನು ಮಾಡುತ್ತೀರಿ? ಒಪ್ಪಿಕೊಳ್ಳಲಿಲ್ಲವೆಂದರೆ ಏನೂ ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ಒಪ್ಪಿಕೊಳ್ಳಲಿಲ್ಲವೆಂದರೆ, ಮುಂದೆ ಸರ್ಕಾರ ರಸ್ತೆ ನಿರ್ಮಾಣಕ್ಕಾಗಿ ಯಾವುದಾದರೂ ಬೇರೆ ಮಾರ್ಗದಿಂದ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಚಿತ್ರದುರ್ಗ ಕೋಟೆ ಒತ್ತುವರಿ ತಡೆಗಟ್ಟುವ ಬಗ್ಗೆ

57(203) ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ಚಿತ್ರದುರ್ಗದ ಐತಿಹಾಸಿಕ ಕೋಟೆಯ ಜಾಗದಲ್ಲಿ ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ಒದಗಿಸುವುದು);

ಬಂದಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣದ ಸುಪರ್ದಿನಲ್ಲಿರುವ ಬುರಟನಹಟ್ಟಿ ಪ್ರದೇಶ, ಗಾರೆಬಾಗಿಲು ಹಾಗೂ ಇತರ ಪ್ರದೇಶಗಳಲ್ಲಿ ಒತ್ತುವರಿ ಕಂಡುಬರುತ್ತದೆ.

ಆ) ಈ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಒತ್ತುವರಿಯಾಗಿರುವ ಪ್ರದೇಶವನ್ನು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮೋಜಣಿದಾರರಿಂದ ಮೋಜಣಿ ಮಾಡಿಸಿ ಒತ್ತುವರಿಯಾಗಿರುವ ಪ್ರದೇಶವನ್ನು ಗುರುತಿಸಿ, ಒತ್ತುವರಿದಾರರನ್ನು ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಈಗಾಗಲೇ ಕ್ರಮ ವಹಿಸಿದೆ.

ಇ) ಹಾಲಿ ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ?

ಕೋಟೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದ 118 ಜನರಿಗೆ ಪುನರ್ ವಸತಿ ಕಲ್ಪಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಕ್ರಮ ಕೈಗೊಂಡಿರುತ್ತದೆ. ಒತ್ತುವರಿಯನ್ನು ತಡೆಗಟ್ಟಲು ತಡೆಗೋಡೆ ನಿರ್ಮಾಣ ಮಾಡಲು ಯೋಜನೆ ಇರುತ್ತದೆ.

ಶ್ರೀ ತಿಪ್ಪೇಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ನನಗೆ ಈ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿರುವುದು ಬಹಳ ಸಂತೋಷ. ಕಾರಣವಿಷ್ಟೆ, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು, ನಮ್ಮ ಜಿಲ್ಲೆಗೆ ಎರಡು ಸಮಸ್ಯೆಗಳಿದ್ದವು. ಒಂದು ಅಪ್ಪರ್ ಭದ್ರಾ, ಇನ್ನೊಂದು ಚಿತ್ರದುರ್ಗ ಕೋಟೆ. ಇಡೀ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಸಮಾಜದವರು ಮದಕರಿ ನಾಯಕರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರತಕ್ಕಂಥಾದ್ದು. ಅಲ್ಲಿಂದ ಇನ್ನೊಂದು ಸಮಸ್ಯೆ ಏನೆಂದರೆ, ನಮಗೆ ಸ್ವಾತಂತ್ರ್ಯ ಬಂದು ಇಲ್ಲಿಯವರೆವಿಗೂ ನಾವು ಅಪ್ಪರ್ ಭದ್ರಾ ಬೇಕು ಬೇಕು ಎಂದು ಕೇಳುತ್ತಿದ್ದೆವು. ಆದರೆ, ಹಿಂದಿನ ಸರ್ಕಾರಗಳಲ್ಲಿ ಯಾರು ಮಾಡಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಅಪ್ಪರ್ ಭದ್ರಾ ಮಾಡಿಕೊಟ್ಟು ನಮ್ಮ ಚಿತ್ರದುರ್ಗಕ್ಕೆ ಮರೆಯಲಾಗದ ನಾಯಕರಾಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ಸಮುದಾಯದ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಇದರ ಜೊತೆಗೆ ಈ ಕೋಟೆ ಹೇಗೆ ಎಂದರೆ, ಇಡೀ ಕರ್ನಾಟಕದಲ್ಲಿ ನಾಯಕ ಸಮುದಾಯಕ್ಕೆ ಸೇರಿರತಕ್ಕಂಥ ನಾಯಕರು ಈ ಕೋಟೆಯನ್ನು ಆಳಿರತಕ್ಕಂಥವರು. ಇವತ್ತು ಕರ್ನಾಟಕದ ಉದ್ದಗಲಕ್ಕೂ ನಮ್ಮ ನಾಯಕರು, ಯುವಕರು ಎಲ್ಲರೂ ಸಹ ಮದಕರಿ ನಾಯಕರ ಹೆಸರನ್ನು ಇಟ್ಟುಕೊಂಡು ಯುವಕ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತು ಆ ಕೋಟೆ ಮೇಲೆ ಏನು ಆಗಿದೆ ಎಂದರೆ, ಹಿಂದೆ ಎಲ್ಲಾ ಕಡೆ ಮನೆಗಳು ಬಂದಿವೆ. ಮನೆಗಳು ಬಂದು ಈ ಕೋಟೆಯನ್ನು ಆಕ್ರಮಣ ಮಾಡಿಕೊಂಡಿವೆ. ಈಗ ಏನು ನಮ್ಮ ಬಹುದಿನದ ಬೇಡಿಕೆಯಾದ ಅಪ್ಪರ್ ಭದ್ರಾವನ್ನು ತಂದು ಇಡೀ ಚಿತ್ರದುರ್ಗ ಜಿಲ್ಲೆಗೆ ಮಹಾನ್ ನಾಯಕರಾಗಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು, ಇಡೀ ಕರ್ನಾಟಕದ ನಾಯಕ ಸಮುದಾಯದ ಈ ಒಂದು ಹೆಮ್ಮೆಯ ನಾಯಕರಾಗಿರತಕ್ಕಂಥ ಮದಕರಿ ನಾಯಕರ ಕೋಟೆ ಮೇಲಿರತಕ್ಕಂಥ ಮನೆಗಳನ್ನು ತೆಗೆದು, ಬೇರೆ ಕಡೆ ಹಾಕಿ ಅವರಿಗೆ ಸುವ್ಯವಸ್ಥೆ ಮಾಡಿಕೊಡಿ. ಏಕೆಂದರೆ, ಅವರು ಆ ಜಾಗವನ್ನು ಬಿಡಿ ಎಂದರೆ ಬಿಡುವುದಿಲ್ಲ. ಅವರಿಗೆ ಬೇರೆ ಜಾಗ ಕೊಟ್ಟು, ಮನೆಗಳನ್ನು ಕಟ್ಟಿಸಿ ಕೊಟ್ಟರೆ ಜಾಗವನ್ನು ಬಿಡುತ್ತಾರೆ. ಅದು ಒಂದು ಬೇಡಿಕೆಯನ್ನು ಈಡೇರಿಸಿ ಇಡೀ ಕರ್ನಾಟಕದಲ್ಲಿ ಇರತಕ್ಕಂಥ ನಾಯಕರ ಹೆಮ್ಮೆಯ ನಾಯಕರಾಗಿರತಕ್ಕಂಥ ಮದಕರಿ ನಾಯಕರ ಕೋಟೆ ಉಳಿಸಿದಂಥ ಮಹಾನ್ ನಾಯಕರಾಗಲಿ. ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ

ನಾಯಕರು ನಮ್ಮ ಮುಖ್ಯಮಂತ್ರಿಗಳಿಗೆ ಧನ್ಯವಾದ ಹೇಳಿ, ಅವರ ಮಾರ್ಗದರ್ಶನದಲ್ಲಿ ನಡೆಯುತ್ತೇವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮಾತು ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು: ನಾನು ಸಲಹೆ ಕೊಡುತ್ತೇನೆ. ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ಇರುತ್ತಾರೆ, ಶೂರರು, ಧೀರರು ಇರುತ್ತಾರೆ. ಮದಕರಿ ನಾಯಕರು ಶೂರರು ಹಾಗೂ ಧೀರರು ಆಗಿದ್ದಾರೆ. ಆ ರೀತಿಯಾಗಿ ಅವರು ರಾಷ್ಟ್ರಕ್ಕೆ ಆದರ್ಶಪ್ರಾಯರು. ಅಂತಹವರನ್ನು ಯಾವುದೇ ಒಂದು ಸಮೂಹಕ್ಕೆ, ಯಾವುದೇ ಒಂದು ಸಮಾಜಕ್ಕೆ ಸೀಮಿತ ಮಾಡುವುದು ಬೇಡ. ಅವರೆಲ್ಲಾ ಇಡೀ ಸಮಾಜದ ವ್ಯಕ್ತಿಗಳು. ಯಾವುದೇ ಒಂದು ಸಮುದಾಯಕ್ಕೆ ಅಂತಹ ವ್ಯಕ್ತಿಗಳನ್ನು ಸೀಮಿತ ಮಾಡುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವೆಲ್ಲರೂ ಅದರ ಕಡೆಗೆ ಗಮನ ಕೊಡಬೇಕಾಗಿದೆ. ಯಾವುದೇ ವೀರರು, ಶರಣ-ಶರಣೆಯರನ್ನು ಯಾವುದೇ ಒಂದು ಸಮಾಜಕ್ಕೆ ಸೀಮಿತವಾಗಿ ನೋಡದೇ, ಇಡೀ ನಾಡಿನ ಸಂಪತ್ತು, ಎಲ್ಲಾ ಜನಾಂಗಕ್ಕೆ ಬೇಕಾದಂಥವರು ಎನ್ನುವ ಚಿಂತನೆಯನ್ನು ನಾವು ಮಾಡುವಂಥಾದ್ದು ಅತ್ಯಂತ ಅಗತ್ಯವಿದೆ. ನಮ್ಮ ಶಾಸಕರಾದ ತಿಪ್ಪೇಸ್ವಾಮಿಯವರ ವಿಶೇಷ ಶ್ರಮದಿಂದ ಇವತ್ತು ಪುರಾತತ್ವ ಅಧಿಕಾರ, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖೆ, ನನ್ನ ಉತ್ತರದಲ್ಲಿ ಸ್ವಲ್ಪ ಬದಲಾವಣೆಯಿದೆ. ಈಗ ಸಿಕ್ಕಿರುವಂಥ ಮಾಹಿತಿಯಂತೆ 13-07-2009ರಂದು ಸಂಬಂಧಪಟ್ಟ ಇಲಾಖೆಯವರು ಬರೆದ ಪತ್ರದಂತೆ 118 ಜನ ಅಲ್ಲ, 137 ಜನ ಅಲ್ಲಿ un-authorize ಆಗಿದ್ದರು ಅದರಲ್ಲಿ ಈಗಾಗಲೇ ನೂರು ಜನರನ್ನು ಅಲ್ಲಿಂದ shift ಮಾಡಲಾಗಿದೆ. ಇನ್ನು ಉಳಿದಂಥ 37 ಜನರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಬೇರೆ ಕಡೆ ವ್ಯವಸ್ಥೆ ಮಾಡುವಂಥಾದ್ದು. ಮತ್ತೆ ತಡೆಗೋಡೆ ನಿರ್ಮಾಣ ಬಹಳ ಭರದಿಂದ ಆಗಿದೆ. ಇನ್ನು ಸ್ವಲ್ಪ ಉಳಿದಿರುವ ಕಡೆ ಸಹ ವಿಶೇಷ ಗಮನ ಕೊಡುತ್ತೇವೆಂದು ಕೇಂದ್ರ ಸರ್ಕಾರದಿಂದ ಸಂಬಂಧಪಟ್ಟ ಇಲಾಖೆಯಿಂದ ಪತ್ರ ಬಂದಿದೆ. ಚಿತ್ರದುರ್ಗ ಪಾಳೇಗಾರರ ಕೋಟೆ ಸಂರಕ್ಷಣೆಗೆ ನಾವು ಸಂಪೂರ್ಣ ಭಾರತೀಯ ಪುರಾತತ್ವ ಸರ್ವೆ ಇಲಾಖೆಯಿಂದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇವರ ಅಭಿವೃದ್ಧಿಗೆ ಬದ್ಧರಾಗಿದ್ದೇವೆ. ಈ ಹಿಂದೆ 1 ಕೋಟಿ, 2 ಕೋಟಿ ಅನುದಾನ ಖರ್ಚು ಮಾಡುತ್ತಿದ್ದರು. ಆದರೆ, 2008-09ರಲ್ಲೂ ಸಹಾ ನಾವು ಹೆಚ್ಚು ಹಣವನ್ನು ಕೊಡುವುದಕ್ಕೆ ಆಗಿರಲಿಲ್ಲ. 2009-10ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸೇರಿ ಒಟ್ಟು 16 ಕೋಟಿ 38 ಲಕ್ಷ ರೂಪಾಯಿಗಳನ್ನು ಈ ಒಂದು ಪುರಾತನ ಸ್ಮಾರಕಗಳ ಸಂರಕ್ಷಣೆಗೆ ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ಎಲ್ಲೆಲ್ಲಿ ಆ ತರಹ ಇವೆ, ಅವುಗಳನ್ನು ನಮ್ಮ ಮಾನ್ಯ ಶಾಸಕ ಬಂಧುಗಳು ನಮ್ಮ ಗಮನವನ್ನು ಸೆಳೆದರೆ, ಖಂಡಿತ ಇಡೀ ರಾಜ್ಯದಲ್ಲಿ ಇವುಗಳಿಗೆ ವಿಶೇಷ ಗಮನವನ್ನು ಕೊಡುತ್ತೇನೆ. ಮುಂದೆ ಬರುವ ದಿವಸಗಳಲ್ಲಿಯೂ

ಇದಕ್ಕೆ ಹೆಚ್ಚು ಅನುದಾನ ಕೊಟ್ಟು, ಸ್ಮಾರಕಗಳನ್ನು ಕೋಟೆಗಳನ್ನು ಉಳಿಸಿ, ಬೆಳೆಸಿ, ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಸರ್ಕಾರ ಆದ್ಯತೆಯನ್ನು ಕೊಡುತ್ತದೆ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಈ ರಾಜ್ಯದ ಯಾರೇ ಚಿತ್ರದುರ್ಗಕ್ಕೆ ಬರಲಿ ಕೋಟೆಯ ದರ್ಶನ ಮಾಡಿ ಹೋಗುತ್ತಾರೆ. ಆದರೆ, ಅಲ್ಲಿ ಉಳಿಯುವುದಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಪ್ರವಾಸೋದ್ಯಮಿಗಳಿಗೆ ಉಳಿಯುವುದಕ್ಕೆ ಹೋಟೆಲ್ ವ್ಯವಸ್ಥೆ ಮಾಡಿದರೆ ತುಂಬಾ ಸಂತೋಷ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರವಾಸೋದ್ಯಮ ಸಚಿವರು ಇಲ್ಲೇ ಇದ್ದಾರೆ. ತಕ್ಷಣ ಸೂಚನೆ ಕೊಟ್ಟು, ಅಲ್ಲಿ ಪ್ರವಾಸೋದ್ಯಮಿಗಳು ಬರುವವರಿಗೆ ಉಳಿಯುವುದಕ್ಕೆ ವ್ಯವಸ್ಥೆ ಮಾಡುವಂಥಹ ಕಟ್ಟಡ ನಿರ್ಮಾಣ ಮಾಡುವುದಕ್ಕೆ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ತಿಪ್ಪೇಸ್ವಾಮಿ: ಧನ್ಯವಾದಗಳು.

ವೋಲ್ವೋ, ಕೋರನಾ, ಸ್ಲೀಪರ್ ಕೋಚ್ ಪ್ರಾರಂಭಿಸುವ ಬಗ್ಗೆ

58(491) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ(ಮುದ್ದೇಬಿಹಾಳ)
ಶ್ರೀ ಆರ್. ಅಶೋಕ್(ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪ್ರತಿನಿತ್ಯ ಒಟ್ಟು ಎಷ್ಟು ವೋಲ್ವೋ ಕೊರನಾ Sleeper ಕೋಚ್ ಬಸ್ಸ್ ಸಂಚರಿಸುತ್ತವೆ (ವಿವರ ನೀಡುವುದು;

ಸಂಸ್ಥೆಗಳು	ವೋಲ್ವೋ	ಕೋರೊನ Sleeper ಕೋಚ್
KSRTC	213	8
NWKRTC	6	14
NEKRTC	2	12
ಒಟ್ಟು	**221**	**34**

ವಿವರಗಳನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ಆ) ಇತಿಹಾಸ ಪ್ರಸಿದ್ಧ ಸ್ಥಳವಾಗಿರುವ ಬಿಜಾಪುರಕ್ಕೆ ಪ್ರಸ್ತುತ ವೋಲ್ವೋ ಕೊರನಾ Sleeper ಕೋಚ್ ಬಸ್ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

<u>i) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:</u>

ಬೆಂಗಳೂರಿನಿಂದ ಬಿಜಾಪುರಕ್ಕೆ ಯಾವುದೇ ಕರೋನಾ ಸ್ಲೀಪರ್ ಸಾರಿಗೆಯನ್ನು ಕಾರ್ಯಾಚರಣೆ ಮಾಡುತ್ತಿರುವುದಿಲ್ಲ. ಆದರೆ ಬಿಜಾಪುರ ಮಾರ್ಗ ಶಿರಡಿಗೆ ಒಂದು ದುಂಡುಸುತ್ತುವಳಿಯ ವೋಲ್ವೋ ಸಾರಿಗೆಯನ್ನು ಕಾರ್ಯಾಚರಣೆ

ಮಾಡಲಾಗುತ್ತಿದೆ. ಅಲ್ಲದೇ ಬೆಂಗಳೂರಿನಿಂದ ಬಿಜಾಪುರಕ್ಕೆ ಗುರುವಾರ, ಶುಕ್ರವಾರ, ಶನಿವಾರ ಹಾಗೂ ಭಾನುವಾರಗಳಂದು ಒಂದು ಹೆಚ್ಚಿನ ವೋಲ್ವೋ ಸಾರಿಗೆಯನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ii) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

ಕರೋನಾ ಸ್ಲೀಪರ್ ಕೋಚ್ ಬಸ್ಸಿನ ವ್ಯವಸ್ಥೆ ಹಾಲಿ ರದ್ದುಗೊಳಿಸಲಾಗಿದೆ.

ಇ) ಕಳೆದ ಒಂದು ವರ್ಷದಿಂದ ಸದರಿ ಸ್ಥಳಕ್ಕೆ ಬಸ್ಸಿನ ವ್ಯವಸ್ಥೆ ನಿಂತು ಹೋಗಿರುವುದು ನಿಜವಲ್ಲವೇ;

i) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:

ಬೆಂಗಳೂರು–ಬಿಜಾಪುರ ವೋಲ್ವೋ ಸಾರಿಗೆಯನ್ನು ದಿನಾಂಕ:8.12.2008 ರಿಂದ ಸ್ಥಗಿತಗೊಳಿಸಲಾಗಿದ್ದು, ದಿ:28.1.09ರಿಂದ ಪುನರಾಂಭಿಸಲಾಯಿತು.

ii) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

ಬಿಜಾಪುರದಿಂದ ಬೆಂಗಳೂರಿಗೆ ಕಾರ್ಯಾಚರಣೆಯಾಗುತ್ತಿದ್ದ ಸ್ಲೀಪರ್ ಕೋಚ್ ಸಾರಿಗೆಯನ್ನು ದಿನಾಂಕ:4.12.2008ರಿಂದ ಆದಾಯ ಕಡಿಮೆ ಬಂದ ಕಾರಣ ರದ್ದುಪಡಿಸಲಾಗಿರುತ್ತದೆ.

ಈ) ಹಾಗಿದ್ದಲ್ಲಿ, ಈ ಬಸ್ಸಿನ ಸೌಲಭ್ಯವನ್ನು ಎಂದಿನಿಂದ ಪ್ರಾರಂಬಿಸಲಾಗುವುದು?

i) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:

ದಿನಾಂಕ:28.1.2009ರಿಂದ ಪುನರಾರಂಭಿಸಲಾದ ಬೆಂಗಳೂರು–ಬಿಜಾಪುರ ವೋಲ್ವೋ ಸಾರಿಗೆಯನ್ನು ವಿರಳ ಜನಸಂದಣಿ ಕಾರಣ ದಿನಾಂಕ 5.7.09ರಿಂದ ವಾರಾಂತ್ಯ ದಿನಗಳಾದ ಗುರುವಾರ, ಶುಕ್ರವಾರ, ಶನಿವಾರ ಹಾಗೂ ಭಾನುವಾರಗಳಂದು ಕಾರ್ಯಾಚರಣೆ ಮಾಡಲಾಗುತ್ತಿದೆ.

ii) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

ಕರೋನಾ ಸ್ಲೀಪರ್‌ಕೋಚ್ ಸಾರಿಗೆಯ ಕಾರ್ಯಾಚರಣೆಯಿಂದ ಪ್ರತಿ ಕಿ.ಮೀ.ಗೆ ರೂ.7.23ರಂತೆ ದಿನಂಪ್ರತಿ ರೂ.7953.00 ಸಂಸ್ಥೆಗೆ ನಷ್ಟವಾಗುತ್ತಿದ್ದ ಹಿನ್ನಲೆಯಲ್ಲಿ ಸದರಿ ಸಾರಿಗೆಯನ್ನು ದಿನಾಂಕ:4.12.2008ರಿಂದ ರದ್ದುಪಡಿಸಲಾಗಿರುತ್ತದೆ. ಈ ಕಾರಣದಿಂದಾಗಿ ಬಿಜಾಪುರದಿಂದ ಸ್ಲೀಪರ್ ಕೋಚ್ ಸಾರಿಗೆಯನ್ನು ಕಾರ್ಯಾಚರಣೆ ಮಾಡುವುದು ಸಂಸ್ಥೆಯ ಆರ್ಥಿಕ ದೃಷ್ಟಿಯಿಂದ ಸಮಂಜಸವಾಗಿರುವುದಿಲ್ಲ.

ಅನುಬಂಧ

ANNEXURE
Details of AIRAVAT services

Sl. No.	Depot	Sch. No.	No. Of Sch.	Route	
				From	To
1	BNG-IV	1	1	Bangalore	Tirupathi
2	BNG-IV	2/3	2	Bangalore	Shirdi
3	BNG-IV	4	1	Bangalore	Tirupathi
4	BNG-IV	5	1	Bangalore	Siddapura
5	BNG-IV	6	1	Bangalore	Virajpet
6	BNG-IV	7	1	Bangalore	Tirupathi
7	BNG-IV	8	1	Bangalore	Pondicherry
8	BNG-IV	11	1	Bangalore	Chennai
9	BNG-IV	12	1	Bangalore	Mysore
10	BNG-IV	13/14	2	Bangalore	Chennai
11	BNG-IV	15/16	2	Bangalore	Bijapur
12	BNG-IV	17/18	2	Bangalore	Ernakulam
13	BNG-IV	19	1	Bangalore	Virajpet
14	BNG-IV	20/21	2	Bangalore	Mumbai
15	BNG-IV	22	1	Bangalore	Tirupathi
16	BNG-IV	23/24	2	Bangalore	Hyderabad
17	BNG-IV	25	1	Bangalore	Virajpet
18	BNG-IV	26	1	Bangalore	Madikeri
19	BNG-IV	27	1	Bangalore	Tirupathi
20	BNG-IV	28	1	Bangalore	Pondicherry
21	BNG-IV	31/32	2	Bangalore	Hyderabad
22	BNG-IV	33/34	2	Bangalore	Mumbai
23	BNG-IV	35	1	Bangalore	Puttaparthy
24	BNG-IV	36	1	Bangalore	Mysore
25	BNG-IV	37/38	2	Bangalore	Chennai
26	BNG-IV	39	1	Bangalore	Mysore
27	BNG-IV	40	1	Bangalore	Mysore
28	BNG-IV	41/42	2	Bangalore	Hyderabad
29	BNG-IV	44/45	2	Bangalore	Hyderabad

30	BNG-IV	46/47	2	Bangalore	Madurai
31	BNG-IV	49	1	Bangalore	Tirupathi
32	BNG-IV	50/51	2	Bangalore	Mumbai
33	BNG-IV	52/53	2	Bangalore	Panaji
34	BNG-IV	54/55	2	Bangalore	Hyderabad
35	BNG-IV	57/58	2	Bangalore	Bellary
36	BNG-IV	59/60	2	Bangalore	Bellary
37	BNG-IV	61	1	Bangalore	Chikkamagalur
38	BNG-IV	62/63	2	Bangalore	Chennai
39	BNG-IV	64/65	2	Bangalore	Mumbai
40	BNG-IV	66/67	2	Bangalore	Raichur
41	BNG-IV	68	1	Bangalore	Mysore
42	BNG-IV	69/70	2	Bangalore	Ernakulam
43	BNG-IV	71	1	Bangalore	Chennai
44	BNG-IV	72	1	Bangalore	Chennai
45	BNG-IV	73	1	Bangalore	Tirupathi
46	BNG-IV	74/75	2	Bangalore	Vijayawada
47	BNG-IV	76/77	2	Bangalore	Poona
48	BNG-IV	78	1	Bangalore	Mysore
49	BNG-IV	80	1	Bangalore	Mysore
50	BNG-IV	81/82	2	Bangalore	Coimbatore
51	BNG-IV	84/85	2	Bangalore	Poona
52	BNG-IV	86/87	2	Bangalore	Hyderabad
53	BNG-IV	89/90	2	Bangalore	Belgaum
54	BNG-IV	91/92	2	Bangalore	Chennai
55	BNG-IV	93/94	2	Bangalore	Secunderabad
56	BNG-IV	95/96	2	Bangalore	Chennai
57	BNG-IV	97	1	Bangalore	Chennai
58	BNG-IV	98	1	Bangalore	Chennai
59	BNG-IV	100	1	Bangalore	Chennai
60	BNG-IV	101	1	Bangalore	Chennai
61	BNG-IV	102/103	2	Bangalore	Bidar
62	BNG-IV	104	1	Bangalore	Puttaparthy
63	BNG-IV	107/108	2	Bangalore	Trivendrum

64	BNG-IV	109	1	Bangalore	Mysore
65	BNG-IV	110	1	Bangalore	Mysore
66	BNG-IV	112/113	2	Bangalore	Gangavati
67	BNG-IV	115	1	Bangalore	Mysore
68	BNG-IV	116	1	Bangalore	Chikkamagalur
69	BNG-IV	117	1	Bangalore	Chikkamagalur
70	BNG-IV	118/119	2	Bangalore	Kolhapura
71	BNG-IV	120	1	Bangalore	Shimoga
72	BNG-IV	121	1	Bangalore	Shimoga
73	BNG-IV	122	1	Bangalore	Shimoga
74	BNG-IV	123	1	Bangalore	Shimoga
75	BNG-IV	124/125	2	Bangalore	Kozhikode
76	BNG-IV	126/127	2	Bangalore	Trichy
77	BNG-IV	128	1	Bangalore	Tirupathi
78	BNG-IV	130/131	2	Bangalore	Poona
79	BNG-IV	132/133	2	Bangalore	Shirdi
80	BNG-IV	134/135	2	Bangalore	Sriharikota
81	BNG-IV	142/143	2	Bangalore	Palghat
82	BNG-IV	144/145	2	Bangalore	Ernakulam
83	BNG-IV	146/147	2	Bangalore	Trivendrum
84	BNG-IV	148/149	2	Bangalore	Mumbai
85	MYS 2	1/2	2	Mysore	Pune
86	MYS 2	3	1	Mysore	Bangalore
87	MYS 2	4	1	Mysore	Bangalore
88	MYS 2	11/12	2	Mysore	Chennai
89	MYS 2	15	1	Mysore	Bangalore
90	MYS 2	16	1	Mysore	Bangalore
91	MYS 2	17	1	Mysore	Bangalore
92	MYS 2	18	1	Mysore	Bangalore
93	MYS 2	21/22	2	Mysore	Tirupathi
94	MYS 2	34/35	2	Mysore	BNG/Bellary
95	MYS 2	42	1	Mysore	Bangalore
96	MYS 2	43	1	Mysore	Bangalore
97	MYS 2	54	1	Mysore/BNG	Virajpet

98	MYS 2	74	1	Mysore	Bangalore
99	MYS 2	75	1	Mysore	Bangalore
100	MYS 2	90	1	Mysore	Bangalore
101	MYS 2	92	1	Mysore	Bangalore
102	MYS 2	127/128	2	Mysore	Chennai
103	MYS 2	129/130	2	Mysore	Hyderabad
104	MYS 2	135	1	Mysore	Bangalore
105	MYS 2	136	1	Mysore	Bangalore
106	MYS 2	137	1	Mysore	Bangalore
107	MYS 2	138	1	Mysore	Bangalore
108	MYS 2	139	1	Mysore	Bangalore
109	MYS 2	140	1	Mysore	Bangalore
110	MYS 2	143/144	2	Mysore	BNG/Shimoga
111	MYS 2	145/146	2	Mysore	Bangalore
112	MYS 2	147/148	2	Mysore/BNG	Panaji
113	MYS 2	169	1	Mysore	Bangalore
114	MNG-1	58	1	Mangalore	Bangalore
115	MNG-1	59	1	Mangalore	Bangalore
116	MNG-1	82/83	2	Mangalore	Hyderabad
117	MNG-1	152	1	Mangalore	Bangalore
118	MNG-1	153	1	Mangalore	Bangalore
119	MNG-1	162/163	2	Mangalore	Chennai
120	MNG-2	17/18	2	Mangalore	Bangalore
121	MNG-2	26/27	2	Mangalore	Bangalore
122	MNG-2	63/64	2	Mangalore	Bangalore
123	MNG-2	77/78	2	Mangalore	Tirupathi
124	MNG-2	79/80	2	Mangalore	Mumbai
125	MNG-2	82/83	2	Mangalore	Bangalore
126	MNG-2	100/101	2	Mangalore	Poona/Nasik
127	MNG-2	102/103	2	Mangalore	Bangalore
128	MNG-2	104/105	2	Mangalore	Bangalore
129	MNG-2	106/107	2	Mangalore	Bangalore
130	MNG-2	108/109	2	Mangalore	Bangalore
131	MNG-2	126/127	2	Mangalore	Hyderabad

132	MNG 2	128/129	2	Mangalore	Bangalore
133	MNG 2	156/157	2	Mangalore	Mumbai
134	MNG 2	161/162	2	Mangalore	Poona
135	CDP	57/58	2	Coondapura	Bangalore
136	CDP	62/63	2	Coondapura	Bangalore
137	CDP	89/90	2	Coondapura	Bangalore
138	CDP	66/67	2	Coondapura	Chennai
139	CDP	68/69	2	Coondapura	Bangalore

Corona Services

Sl. No.	Depot	Sch. No.	No. Of Sch.	Route	
				From	To
1	BNG-IV	9/10	2	Bangalore	Sringeri
2	BNG-IV	29	1	Bangalore	Mysore
3	BNG-IV	30	1	Bangalore	Mysore
4	BNG-IV	105	1	Bangalore	Ooty
5	BNG-IV	106	1	Bangalore	Ooty
6	BNG-IV	111	1	Bangalore	Kalahasti
8	BNG-IV	129	1	Bangalore	Kalahasti

ಕ್ರಮ ಸಂಖ್ಯೆ	ಮಾರ್ಗ		ವಾಹನ ಮಾದರಿ	ವಾಹನಗಳ ಸಂಖ್ಯೆ
	ಎಲ್ಲಿಂದ	ಎಲ್ಲಿಗೆ		
NWKRTC				
1	ಹುಬ್ಬಳ್ಳಿ	ಬೋರಿವಿಲಿ	ಸ್ಲೀಪರ್	2
2	ಹುಬ್ಬಳ್ಳಿ	ಮುಂಬೈ (ಸೆಂಟ್ರಲ್)	ಸ್ಲೀಪರ್	2
3	ಹುಬ್ಬಳ್ಳಿ	ಪಿಂಪ್ರಿ	ಸ್ಲೀಪರ್	2
4	ಜಮಖಂಡಿ	ಬೆಂಗಳೂರು	ಸ್ಲೀಪರ್	2
5	ಬೆಳಗಾವಿ	ಬೆಂಗಳೂರು	ಸ್ಲೀಪರ್	4
6	ಶಿರಸಿ	ಬೆಂಗಳೂರು	ಸ್ಲೀಪರ್	2
7	ಹುಬ್ಬಳ್ಳಿ	ಬೆಂಗಳೂರು	ವೋಲ್ವೋ	2
8	ಹುಬ್ಬಳ್ಳಿ	ಹೈದ್ರಾಬಾದ್	ವೋಲ್ವೋ	2
9	ಬೆಳಗಾವಿ ಕೊಲ್ಲಾಪುರ	ಬೆಂಗಳೂರು	ವೋಲ್ವೋ	2

NEKRTC				
1	ಹೊಸಪೇಟೆ	ಬೆಂಗಳೂರು	ವೋಲ್ವೋ	2
2	ಗುಲಬರ್ಗಾ	ಬೆಂಗಳೂರು	ಕರೊನ ಸ್ಲೀಪರ್	2
3	ದೇವದುರ್ಗ	ಬೆಂಗಳೂರು	ಕರೋನ ಸ್ಲೀಪರ್	2
4	ಸಿಂಧನೂರು	ಬೆಂಗಳೂರು	ಕರೋನ ಸ್ಲೀಪರ್	2
5	ಗಂಗಾವತಿ	ಬೆಂಗಳೂರು	ಕರೋನ ಸ್ಲೀಪರ್	2
6	ಬಳ್ಳಾರಿ	ಬೆಂಗಳೂರು	ಕರೊನ ಸ್ಲೀಪರ್	2
7	ಬಳ್ಳಾರಿ	ಹೈದ್ರಾಬಾದ್	ಕರೊನ ಸ್ಲೀಪರ್	2

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ, ಬಿಜಾಪುರದಿಂದ ಸುಮಾರು 500 ಕಿ.ಮೀ ದೂರದಲ್ಲಿದ್ದೇವೆ. ನಮಗೆ ಸರಿಯಾದಂತಹ ರೈಲ್ವೆ ಸಂಪರ್ಕ ಕೂಡ ಇಲ್ಲ. ರೈಲ್ವೆ ಮುಖಾಂತರ ಹೋಗಬೇಕೆಂದರೆ, 15 ರಿಂದ 16 ತಾಸು ಬೇಕು. ನೀವು ಬಸ್‌ಗಳನ್ನು ಹಾಕಿ ಒಂದು ವರ್ಷ, ಎರಡು ವರ್ಷದಿಂದ ತೆಗೆದುಹಾಕಿದ್ದೀರಿ, ಈಗ ನಮ್ಮ ಗೋಳು ಯಾರ ಮುಂದೆಯೂ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಊರಿಗೆ ಹೋಗಬೇಕಾದರೆ, ಕಾರಿನ ಮುಖಾಂತರ ಹೋಗಬೇಕು, ಇಲ್ಲವೆಂದರೆ, ಸೊಲ್ಲಾಪುರಕ್ಕೆ ಹೋಗಬೇಕು. ಮಾನ್ಯ ಕಾರಜೋಳ ಅವರು ಸೊಲ್ಲಾಪುರಕ್ಕೆ ಹೋಗುತ್ತಾರೆ. ಸಾಮಾನ್ಯ ಜನರಿಗೆ ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂದು ನೋಡಬೇಕಾಗುತ್ತದೆ. ವೋಲ್ವೋ ಬಸ್‌ಗಳನ್ನು ಹಾಕಿದ್ದೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಬೆಂಗಳೂರು ಡಿಪೋ ಬಸ್ ಒಂದು ಬಿಡುತ್ತೀದ್ದಿರಿ. ಅಲ್ಲಿ ಬಿಜಾಪುರ ಬಸ್ ಡಿಪೋದಿಂದ ಒಂದು ವೋಲ್ವೋ ಬಸ್‌ಅನ್ನು ಬಿಡುತ್ತಿದ್ದೀರಿ. ತಾವು ತಮ್ಮ Reservation Charts ಅನ್ನು ಖುದ್ದಾಗಿ ತರಿಸಿಕೊಂಡು ನೋಡಬೇಕು. ಯಾವಾಗಲೂ ಬೆಂಗಳೂರು ಡಿಪೋನಿಂದ ಹೋಗುವಂತಹ ಬಸ್ ಅನ್ನು top priority ಮೇಲೆ ಕೊಟ್ಟು reservation ಅನ್ನು full ಮಾಡುತ್ತೀರಿ. ಈ ಬಿಜಾಪುರ ಬಸ್‌ಗಳಿಗೆ reservation quota full ಇದೆ ಎಂದು ನಿಮ್ಮ reservation ಅವರು ಹೇಳುತ್ತಾರೆ. ಹೋದರೆ ಬಸ್ ಖಾಲಿ ಇರುತ್ತದೆ. Oral ಆಗಿ ಬಸ್‌ಗೆ reservation ಇಲ್ಲವೆಂದು ಹೇಳುತ್ತಾರೆ. This is the same case with the sleeper bus also. ಅದು ಒಂದು ಕಾರಣ. ಎರಡನೆಯದು, KSRTC ದರ ಏನು ನಿಗದಿ ಮಾಡಿದ್ದೀರಿ, KSRTC ಬಸ್ ಟಿಕೆಟ್‌ನ ದರ ಏನಿದೆ, private fliers ಏನಿದ್ದಾರೆ, ಅವರಿಗಿಂತ ಸುಮಾರು ಒಂದೂವರೆ ಪಟ್ಟು ಜಾಸ್ತಿ ಇದೆ. ನೀವು competitive ಇಲ್ಲ. ಮೊದಲೇ compete ನಲ್ಲಿ ಇವತ್ತು private ಬೇಕಾದಷ್ಟು ಕಂಪನಿಗಳು

ಬಸ್‌ಗಳನ್ನು ಓಡಿಸುತ್ತಿದ್ದಾರೆ. ಅವರ ಜೊತೆ ಮುಂಚೆ ನೀವು competition ಮಾಡಬೇಕು. compete ಮಾಡಿ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯ ಕೊಟ್ಟರೆ, ಆಮೇಲೆ then they get accustomed to your buses. ಆಮೇಲೆ ನಿಮ್ಮ ಬಸ್ಸಿನಲ್ಲಿ ಹೆಚ್ಚು ಪ್ರಯಣ ಮಾಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಈ attitude ನಿಮ್ಮಲ್ಲಿ ಇಲ್ಲ. ನೀವು ಏನು ಮಾಡುತ್ತೀರೆಂದರೆ, ಸಾರಾಸಗಟಾಗಿ 650 ರಿಂದ 750 ರೂಪಾಯಿ ಒಂದು birth ಎಂದು ಹಾಕುತ್ತೀರಿ. ಬೇರೆಯವರು 500 ರೂಪಾಯಿಗೆ ಓಡಿಸುತ್ತಿದ್ದಾರೆ. 550 ರೂಪಾಯಿಗೆ A.C sleeper VRL ನವರು ಬಿಡುತ್ತಿದ್ದಾರೆ. ನಿಮ್ಮ ಬಸ್ಸಿಗೆ private ನವರು ಯಾರು ಬರುತ್ತಾರೆ? ಕೇವಲ ಪಾಸ್ ಇದ್ದವರು ಮಾತ್ರ ಬರಬೇಕು. ಹೀಗಾಗಿ ನಿಮ್ಮ ಬಸ್ಸಿಗೆ ಸರಿಯಾದಂಥ collection ಆಗದ ಕಾರಣ, 'loss making buses' ಎಂದು ನೀವು ತೆಗೆದುಹಾಕಿದ್ದೀರಿ. ಈ ಬಸ್‌ನಿಂದ ಬಿಜಾಪುರಕ್ಕೆ ಪ್ರಯಾಣ ಮಾಡಬೇಕೆನ್ನುವವರಿಗೆ ಇದರಿಂದ ಬಹಳಷ್ಟು ಅನಾನುಕೂಲವಾಗಿದೆ. ದಯವಿಟ್ಟು ತಾವು ಪುನ: ಈ ಬಸ್ ಅನ್ನು ಪ್ರಾರಂಭ ಮಾಡಬೇಕು. 500 ಕಿ.ಮೀ ಕುಳಿತುಕೊಂಡು ಹೋಗುವುದಕ್ಕೆ ವೋಲ್ವೋ ಬಸ್ ನಮಗೆ ಪರ್ಯಾಯ ವ್ಯವಸ್ಥೆ ಅಲ್ಲ. ವೋಲ್ವೋ ಬಸ್ಸಿನಲ್ಲಿ 42–45 ಸೀಟ್‌ಗಳನ್ನು ಮಾಡಿದ್ದೀರಿ. ಮುಂದೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. Practical ಆಗಿ ಆ ಬಸ್‌ನಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. Semi-sleeper ಅದು. ಆ ಬಸ್ಸಿನಲ್ಲಿ semi-sleeper ಮಾಡುವುದಕ್ಕೇ ಆಗುವುದಿಲ್ಲ ಅಷ್ಟೊಂದು congested. ಹೀಗಾಗಿ ನೀವು ಅಲ್ಲಿ ವೋಲ್ವೋ ಬಸ್ ಕೊಟ್ಟರೂ ಕೂಡ 36 ಸೀಟಿಗೇ ನೀವು ಸೀಮಿತ ಮಾಡಬೇಕಾಗುತ್ತದೆ. 36 seater ಬಸ್‌ಗಳನ್ನು ಬಿಟ್ಟರೇ comfortable ಆಗಿ ಮಲಗಿಕೊಂಡು recline ಮಾಡಿಕೊಂಡು ಹೋಗಬಹುದು. ಹೀಗಾಗಿ ತೊಂದರೆಗಳಿವೆ. ದಯಮಾಡಿ ಸಾರ್ವಜನಿಕರ ಹಿತದೃಷ್ಟಿಯಿಂದ ತಾವು ಬಸ್‌ಅನ್ನು resume ಮಾಡಿ. ನಮ್ಮ ಈಶಾನ್ಯ ವಲಯದಲ್ಲಿ ಬರತಕ್ಕಂಥ ಬಸ್‌ಗಳಿಗೆ ಹೆಚ್ಚು tyreಗಳನ್ನು, ಬಿಡಿ ಭಾಗಗಳನ್ನು, ಹೊಸ ಬಸ್‌ಗಳನ್ನು ಒದಗಿಸಬೇಕು. ಅಲ್ಲಿ ಏನಿದೆ ಎಂದರೆ, ಪ್ರತಿನಿತ್ಯ ನಮಗೆ ಜನ ಗಂಟುಬೀಳುತ್ತಾರೆ. All mode buses have very badly equipped spare parts. ನಿಮ್ಮಲ್ಲಿ spare parts ಗಳಂತೂ stock ಇರುವುದೇ ಇಲ್ಲ. ಈ ಪರಿಸ್ಥಿತಿಯಲ್ಲಿ ನೀವು ಏನು ಮಾಡುತ್ತೀರೆಂದರೆ, ಇದು ಈಶಾನ್ಯ ವಲಯವನ್ನು ಹಾನಿ ಮಾಡುತ್ತಿದೆ. ನಮ್ಮ KSRTC ಗೆ ಇದರಿಂದ ಉತ್ಪಾದನೆ ಇಲ್ಲವೆಂದು ನಮಗೆ ನೀವು ಬಸ್‌ಗಳನ್ನು ತೆಗೆದುಹಾಕುತ್ತೀರಿ. ಪಕ್ಕದ ಗುಲ್ಬರ್ಗಾಕ್ಕೆ loss making ಇದೆ ಎಂದು ರಿಯಾಯಿತಿ ಕೊಡುತ್ತಿದ್ದೀರಿ. Tax ಅನ್ನು

ತೆಗೆದು ಹಾಕಿದ್ದೀರಿ. ನಮಗೆ ಏನು ಮಾಡಿದ್ದೀರಿ? ಅದ್ದರಿಂದ ದಯವಿಟ್ಟು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೆಂದು ಹೇಳಬೇಕು.

ಶ್ರೀ ಆರ್.ಅಶೋಕ್(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿಗೆ ಬಸ್ ಪ್ರಯಾಣದ ವ್ಯವಸ್ಥೆ ಇತ್ತು. ಮಾನ್ಯ ನಾಡಗೌಡರು ಹೇಳಿದ ರೀತಿ ಅಲ್ಲಿ ಪ್ರತಿ ದಿನ 7 ಸಾವಿರ ರೂಪಾಯಿ ಲಾಸ್ ಆಗಿರುವ ಕಾರಣ, ಆ ಬಸ್ ವ್ಯವಸ್ಥೆಯನ್ನು ತೆಗೆದುಹಾಕಿ ವಾರಕ್ಕೆ ನಾಲ್ಕು ದಿನ ಮಾತ್ರ ವೋಲ್ವೋ ಬಸ್ಸಿನ ವ್ಯವಸ್ಥೆಯನ್ನು ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಹೆಚ್ಚು ಜನರು ಆ ಬಸ್‌ಗೆ ಬರುತ್ತಿಲ್ಲ, ಎಲ್ಲಾ private ಬಸ್‌ಗೆ ಹೋಗುತ್ತಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ನಾವೂ ಈಗ private ನವರ ಜೊತೆ compete ಮಾಡುತ್ತಿದ್ದೇವೆ. ಆ ತರಹ ಏನೂ ಬಿಟ್ಟಿಲ್ಲ. ಬೇರೆ ಬೇರೆ ಕಡೆ ಲಾಭದಾಯಕವಾಗಿದೆ. ವಾಯುವ್ಯ ಸಾರಿಗೆಯು ಕಳೆದ 5 ವರ್ಷದಿಂದ ಲಾಸ್‌ನಲ್ಲಿದೆ. ಸುಮಾರು 200 ಕೋಟಿಯಷ್ಟು ಲಾಸ್ ಆಗಿದೆ. ನಾನು ಬಂದ ಮೇಲೆ ಸುಧಾರಣೆ ಮಾಡುವ ದೃಷ್ಟಿಯಿಂದ ಈಗಾಗಲೇ ಅದಕ್ಕೆ ತನಿಖೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇನೆ. Re-alteration ಬಗ್ಗೆ ಹೇಳುವುದಾದರೆ, ಬಿಜಾಪುರದ ಒಂದು ಭಾಗವನ್ನು ಗುಲ್ಬರ್ಗಾಕ್ಕೆ ಸೇರಿಸುವ ವ್ಯವಸ್ಥೆಯನ್ನು ಮಾಡಿದ್ದೇನೆ. ಎಲ್ಲೆಲ್ಲಿ ಈ ತರಹ ಸಮಸ್ಯೆಯಾಗುತ್ತಿದೆ, ನಮಗೆ fleet ಬರುತ್ತಿಲ್ಲ, ಲಾಸ್ ಆಗುತ್ತಿದೆ. ಅದನ್ನು ಲಾಭ ಬರುವ ಕಡೆಯಿಂದ ನಾವು ಮಾಡುತ್ತಿದ್ದೇವೆ. ಜನರಿಗೆ ತೊಂದರೆ ಮಾಡಬೇಕೆನ್ನುವ ದೃಷ್ಟಿ ನಮ್ಮಲ್ಲಿಲ್ಲ. ಅದನ್ನು ಸರಿಮಾಡುತ್ತೇನೆ. ಹೊಸದಾಗಿ 10 sleeper ಬಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ KSRTC ಗೆ ಸೂಚನೆ ಮಾಡಿದ್ದೇನೆ. order ಮಾಡಿದ್ದಾರೆ. ಆದಷ್ಟು ಶೀಘ್ರವಾಗಿ ಬಸ್‌ಗಳು ಬರುತ್ತವೆ. ಮಾನ್ಯ ನಾಡಗೌಡರ ಬೇಡಿಕೆ ಮೇರೆಗೆ ಮೊದಲ ಆದ್ಯತೆಯನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಈಗ ಗರುಡ ಬಸ್‌ಗಳನ್ನು ತಾವು ತೆಗೆದುಕೊಂಡಿದ್ದೀರಿ, technically it is not very sound. ಬಿಡಿ ಭಾಗಗಳನ್ನು ತೆಗೆದುಕೊಂಡು ಎಲ್ಲವನ್ನೂ ಸೇರಿಸಿ ಒಂದು ಕಂಪನಿ manufacture ಮಾಡಿ ಕೊಡುತ್ತಿದೆ. ಹೀಗಾಗಿ, ಅದರಲ್ಲಿ break downs ಹೆಚ್ಚು ಇದೆ. So many times, I had to repair that bus very honestly. ಎರಡು ಸಲ ಮಧ್ಯೆ ನಿಂತಾಗ, ನಾನೇ ರಿಪೇರಿ ಮಾಡುವಂಥ ಪ್ರಸಂಗ ಬಂದಿತು. ಏಕೆಂದರೆ, ನಿಮ್ಮ driversಗೆ ಏನೂ ಮಾಹಿತಿಯೇ ಇಲ್ಲ. ಅದು technically ಅಷ್ಟೊಂದು sound ಇಲ್ಲ. Layland ದು ಕೆಲವು parts ಇದೆ. commings engine ಹಾಕಿದ್ದಾರೆ. ಏನೋನೋ ಮಾಡಿ ಮಾಡಿದ್ದಾರೆ. ಅದಕ್ಕೆ ಬೇರೆ ವೋಲ್ವೋದವರು sleeperಗೆ allow ಮಾಡುತ್ತಿಲ್ಲವೆಂದು ಗೊತ್ತಾಗಿದೆ. If you can prevail upon

that, design ಏನಾದರೂ change ಮಾಡಿ sleeper bus ಮಾಡಲಿಕ್ಕೆ ಸಾಧ್ಯವಿದ್ದರೆ ಅಥವಾ ಬೇರೆ ಯಾವುದಾದರೂ Tata maker ಅನ್ನು sleeper ಅಗಿ ಪರಿವರ್ತನೆ ಮಾಡಲಿಕ್ಕೆ ಸಾಧ್ಯವಿದ್ದರೆ, ಅಂತಹ ಒಂದು optionಗಳನ್ನು ಇಟ್ಟುಕೊಂಡು ತಾವು sleeper bus ಗಳನ್ನು procurement ಮಾಡಲಿಕ್ಕೆ ಪ್ರಯತ್ನ ಮಾಡಿ. ಏಕೆಂದರೆ quality-wise ಆ ಬಸ್‌ಗಳು ಅಷ್ಟೊಂದು ಸರಿಯಿಲ್ಲ.

ಶ್ರೀ ಆರ್.ಅಶೋಕ್: ಮಾನ್ಯ ನಾಡಗೌಡರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ತಾವು concession ಬೇರೆ ಭಾಗಕ್ಕೆ ಕೊಟ್ಟಿದ್ದೀರಿ, ಅದೇ ರೀತಿ ಈ ಭಾಗಕ್ಕೂ ಕೊಡಬೇಕೆಂದು ಹೇಳಿದ್ದೀರಿ. ಸಭೆಯನ್ನು ಕರೆಯುತ್ತಿದ್ದೇನೆ. ಈ ವಾರದಲ್ಲೇ ಅಧ್ಯಕ್ಷರ ಸಮಯವನ್ನು ನೋಡಿಕೊಂಡು fix ಮಾಡುತ್ತೇನೆ. ನಂಜುಂಡಪ್ಪ ವರದಿ ಪ್ರಕಾರ ಸರ್ಕಾರದಿಂದ 30 ಕೋಟಿ ರೂ. ಅನುದಾನ ಬಂದಿದೆ. ಅದನ್ನು ಯಾವ ರೀತಿ ಖರ್ಚು ಮಾಡಬೇಕು ಮತ್ತು ಏನು losses ಆಗುತ್ತಿದೆ. ಇದಕ್ಕೆ ಕರ್ನಾಟಕದಾದ್ಯಂತ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಆ ಭಾಗದ ಶಾಸಕರ ಸಭೆಯನ್ನು ನಾನು ಕರೆಯುತ್ತಿದ್ದೇನೆ. ಈ ವಾರದಲ್ಲಿಯೇ ಸನ್ಮಾನ್ಯ ಅಧ್ಯಕ್ಷರ ಸಮಯ ನೋಡಿಕೊಂಡು ಸಭೆಯ ದಿನಾಂಕ ನಿಗದಿ ಪಡಿಸುತ್ತೇನೆ. ಆ ಸಂದರ್ಭದಲ್ಲಿ ನಂಜುಂಡಪ್ಪನವರ ವರದಿ ರೀತ್ಯಾ ಬಂದಿರುವ ಹಣ ಮತ್ತು ಲಾಸ್ ಆಗುತ್ತಿರುವುದನ್ನು ಹೇಗೆ fulfill ಮಾಡುವುದು ಮತ್ತು ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಕೈಗೊಳ್ಳುತ್ತೇನೆ.

ಕೆ.ಆರ್.ನಗರ ತಾಲ್ಲೂಕಿನಲ್ಲಿ ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿರುವ ಬಗ್ಗೆ

59(207) ಶ್ರೀ ಮಹೇಶ್ ಎಸ್.ಅರ್.(ಕೃಷ್ಣರಾಜನಗರ)
ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಸಾಗರ್ ಕಟ್ಟೆ ಸೇತುವೆಯ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ;

ಈ ಕಾಮಗಾರಿಯು ಜುಲೈ 2007 ರಲ್ಲಿ ಸ್ಥಗಿತಗೊಂಡಿರುತ್ತದೆ.

ಇ) ಈ ಸೇತುವೆಯ ಕಾಮಗಾರಿಗಾಗಿ ಸರ್ಕಾರ ನಿಗಧಿಪಡಿಸಿದ್ದ ಅನುದಾನವೆಷ್ಟು;

ಈ ಸೇತುವೆಯ ಕಾಮಗಾರಿಗೆ 10.00 ಕೋಟಿ ರೂ.ಗಳನ್ನು ಅನುಮೋದಿಸಲಾಗಿದೆ. ಆದರೆ, ವಿವರವಾದ ವಿನ್ಯಾಸದ ಪ್ರಕಾರ ಅಂದಾಜು ಪಟ್ಟಿಯನ್ನು ತಯಾರಿಸಿದಾಗ ಸೇತುವೆಯ ಅಂದಾಜು ಮೊತ್ತವು 22.3 ಕೋಟಿ ರೂ.ಗಳಾಗಿರುತ್ತದೆ.

ಈ) ನಿಗದಿಪಡಿಸಿದ್ದ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆಯೇ;

ಈಗಾಗಲೇ ಈ ಕಾಮಗಾರಿಗೆ 7.00 ಕೋಟಿ ರೂ.ಗಳು ಬಿಡುಗಡೆಯಾಗಿದೆ.

ಉ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಹೆಚ್ಚಿನ ಅನುದಾನ ಅವಶ್ಯಕತೆಯ ಕಾರಣ ಕಾಮಗಾರಿಯನ್ನು ಮುಂದುವರಿಸಲಾಗಿರುವುದಿಲ್ಲ.

ಊ) ಸಾಗರ್ ಕಟ್ಟೆ ಸೇತುವೆಯ ಕಾಮಗಾರಿಯನ್ನು ಶೀಘ್ರವೇ ಪ್ರಾರಂಭಿಸಲಾಗುವುದೇ;

ಅನುದಾನದ ಲಭ್ಯತೆ ಮೇರೆಗೆ ಈ ಕಾಮಗಾರಿಯನ್ನು ಪುನರಾರಂಭಿಸುವ ಬಗ್ಗೆ ಪರಿಗಣಿಸಲಾಗುವುದು.

ಋ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು (ಗುತ್ತಿಗೆದಾರರ ವಿವರಗಳನ್ನು ನೀಡುವುದು)

ಈ ಕಾಮಗಾರಿಯನ್ನು ಅನುದಾನ ಲಭ್ಯತೆಯ ಮೇಲೆ ತೆಗೆದುಕೊಳ್ಳಲಾಗುವುದು. ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ:ಗ್ಯಾಮನ್ ಇಂಡಿಯ, ಮುಂಬೈ ಇವರಿಗೆ ವಹಿಸಿಕೊಡಲಾಗಿದೆ.

ಶ್ರೀ ಎಸ್.ಆರ್.ಮಹೇಶ್: ಮಾನ್ಯ ಅಧ್ಯಕ್ಷರೆ, ಕೆ.ಆರ್.ನಗರದಲ್ಲಿ ಹಿನ್ನೀರಿಗೆ ಕಟ್ಟುತ್ತಿರುವ ಸೇತುವೆ ಇದಾಗಿದೆ. ಇದು ದಿನಾಂಕ 25.9.2006ರಲ್ಲಿ ಹಿಂದಿನ ಮುಖ್ಯಮಂತ್ರಿಗಳಾಗಿದ್ದವರು ಶಂಕುಸ್ಥಾಪನೆ ಮಾಡಿರುವ ಸೇತುವೆಯಾಗಿದೆ. ಅವತ್ತಿನ ದಿವಸ ಸುಮಾರು 24 ಕೋಟಿ ರೂ.ಗಳನ್ನು ಮಂಜೂರು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ. ಈಗಾಗಲೇ 7 ಕೋಟಿ ರೂ.ಗಳನ್ನು ಗುತ್ತಿಗೆದಾರರಿಗೆ ಪಾವತಿಸಿದ್ದಾರೆ. ಒಟ್ಟು 13 ಪಿಲ್ಲರ್‌ಗಳ ಪೈಕಿ 9 ಪಿಲ್ಲರ್‌ಗಳ ಕಾಮಗಾರಿ ಪೂರ್ತಿಗೊಂಡಿದೆ. ಇನ್ನು 3 ಪಿಲ್ಲರ್‌ಗಳು ಅರ್ಧಂಬರ್ಧಕ್ಕೆ ನಿಂತಿವೆ. ದಯಮಾಡಿ ಇವತ್ತು ಮಾನ್ಯ ಸಚಿವರು ಯಾವಾಗ ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಅನುದಾನ ಲಭ್ಯತೆ ಮೇರೆಗೆ ಪ್ರಾರಂಭಿಸುವುದಾಗಿ ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಸುಮಾರು 2006ರಲ್ಲಿ ಕಾಮಗಾರಿ ಪ್ರಾರಂಭಗೊಂಡು 2007ರಲ್ಲಿ ಸ್ಥಗಿತಗೊಂಡಿದೆ. ಆದರೆ, ಇದುವರೆಗೂ ಸುಮಾರು 2–3 ವರ್ಷಗಳು ಮುಗಿಯುತ್ತಾ ಬಂದರೂ ಕಾಮಗಾರಿಗಳು ಪುನಃ ಪ್ರಾರಂಭವಾಗಿಲ್ಲ. ಮತ್ತೆ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿದ್ದಾರೆ. ಅವತ್ತು ಅದರ ವೆಚ್ಚ ಒಟ್ಟು 24 ಕೋಟಿ ರೂಪಾಯಿಗಳಾಗಿತ್ತು. ಈಗ ಹಿಂದೆ ಖರ್ಚಾಗಿರುವ 7 ಕೋಟಿ ರೂಪಾಯಿಗಳು ಅಲ್ಲದೇ 24 ಕೋಟಿ

ರೂಪಾಯಿಗಳ ಅಂದಾಜು ಪಟ್ಟಿಯನ್ನು ಈಗಾಗಲೇ ಕೊಟ್ಟಿದ್ದಾರೆ. ದಯಮಾಡಿ ಈ ಮೂರು ವರ್ಷಗಳಲ್ಲಿ ಮಾನ್ಯ ಸಚಿವರು ಅಲ್ಲಿಗೆ ಅನುದಾನವನ್ನು ಏತಕ್ಕಾಗಿ ಕೊಡಲಿಲ್ಲ? ಈ ಇಲಾಖೆಗೆ ಏತಕ್ಕೆ ಕೊಡಲಿಲ್ಲ? ಈ ಸಂದರ್ಭದಲ್ಲಿ ಮತ್ತೆ ನೀರು ತುಂಬಿದರೆ ಇನ್ನೂ ಒಂದು ವರ್ಷ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ದಯಮಾಡಿ ಅವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಹಾಸನ, ಮೈಸೂರು ಮತ್ತು ಮಂಗಳೂರಿಗೆ ಇದು ಸಂಪರ್ಕ ಸೇತುವೆಯಾಗಿರುತ್ತದೆ. ಈ ಭಾಗದಲ್ಲಿ ಕೆ.ಆರ್. ನಗರಕ್ಕೆ ಸುಮಾರು 20 ಕಿಲೋಮೀಟರ್‌ಗಳಷ್ಟು ಕಡಿಮೆಯಾಗುತ್ತದೆ. ಹಾಗಾಗಿ, ಇದನ್ನು ಆದ್ಯತೆ ಮೇರೆಗೆ ಈ ಸಲ ಬರುವ ಹಣದಲ್ಲಿ ದಯಮಾಡಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡಬೇಕೆಂದು ತಮ್ಮ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ಈ ಸೇತುವೆ ನಿರ್ಮಿಸುವ ಸಂದರ್ಭದಲ್ಲಿ 10 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಮಾಡಲು ಪ್ರಾರಂಭಿಸಿದ್ದರು. ಈಗಾಗಲೇ 7 ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೂ ಹಿನ್ನೀರಿನಲ್ಲಿರುವುದರಿಂದ ಸೇತುವೆಯನ್ನು ನಿರ್ಮಿಸಬೇಕಾಗಿರುವ ಅವಧಿ ಬೇಸಿಗೆ ಕಾಲದಲ್ಲಿ ಸೀಮಿತ ಅವಧಿಯಲ್ಲಿ ಲಭ್ಯವಾಗುತ್ತಿದೆ. ಆದರೆ, ಈಗ ಅವರು ಹೇಳಿದಂತೆ ಅದರ ಅಂದಾಜು 45 ಕೋಟಿ ರೂಪಾಯಿಗಳಿಗೆ ಹೋಗಬಹುದೆಂದೂ, 42.17 ಕೋಟಿ ರೂಪಾಯಿಗಳು ಆಗಬಹುದೆಂಬ ವಿಚಾರಕ್ಕೆ ಬರಲಾಗಿದೆ. ಮೊದಲಿನಿಂದಲೂ ಅಂದಾಜು ಮಾಡದೆ ಅಡಿಗಲ್ಲು ಸಮಾರಂಭ ನಡೆಸಿದ್ದರ ಪರಿಣಾಮ ಈ ಕೆಲಸ ಪ್ರಾರಂಭವಾಗಿದೆ ಎಂಬುದು ನಮ್ಮೆಲ್ಲರ ಗಮನಕ್ಕೆ ಬರುತ್ತಿದೆ. ಇವತ್ತು ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಾಂತ್ರಿಕ ಸಲಹಾ ಮಂಡಳಿ ಮುಂದೆ ಮಂಡಿಸಲಾಗಿದೆ. ಆದುದರಿಂದ, ಅವರಿಂದ ಮಾಹಿತಿ ಪಡೆದು ಅದಕ್ಕೆ ಅನುಮೋದನೆ ಪಡೆದುಕೊಂಡ ನಂತರ ಅತಿ ಶೀಘ್ರದಲ್ಲಿಯೇ ಈ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಆರ್.ಮಹೇಶ್: ಅಧ್ಯಕ್ಷರೆ, ಮಾನ್ಯ ಸಚಿವರು ಮಾತನಾಡುತ್ತಾ, ಈಗಾಗಲೇ 45 ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ವೆಚ್ಚವಾಗುತ್ತಿರುವುದಾಗಿ ಹೇಳಿದ್ದಾರೆ. ಆದರೆ, ಅವತ್ತು ಅದನ್ನು ಪ್ರಾರಂಭಿಸುವಂತಹ ಸಂದರ್ಭದಲ್ಲಿ ಇದ್ದದು 24 ಕೋಟಿ ರೂಪಾಯಿಗಳು ಮಾತ್ರ. ಈ ಸಲ ಹಿನ್ನೀರಿನಲ್ಲಿ ಪ್ರಾರಂಭವಾಗಿದ್ದರೆ ಶೇಕಡ 13ರಷ್ಟು ಮಾತ್ರ ಹೆಚ್ಚಿಗೆ ಆಗುತ್ತಿತ್ತು. ಶೇಕಡ 13ರಷ್ಟು ಹೆಚ್ಚಾಗಿದ್ದರೆ, 24 ಕೋಟಿ 48 ಲಕ್ಷ ರೂಪಾಯಿಗಳೆಂದು ಮೆ: ಗ್ಯಾಮನ್ ಇಂಡಿಯಾ, ಮುಂಬೈನವರು ಕಳುಹಿಸಿದ್ದಾರೆ, ಆದರೆ, ಇವರು ಮತ್ತೆ ಮುಂದಿನ ವರ್ಷಕ್ಕೆ ಮುಂದುವರೆಸಿಕೊಂಡು ಹೋದರೆ ಅವರು ಹೇಳಿದಂತೆ 45 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗುತ್ತದೆ. ಇದರಿಂದ ಸಾರ್ವಜನಿಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಜೊತೆಗೆ ಈಗ ಆಗುವ ಕೆಲಸಕ್ಕೂ ತೊಂದರೆಯಾಗುತ್ತದೆ. ಹಿಂದೆ 24 ಕೋಟಿ ರೂಪಾಯಿಗಳು ಇತ್ತು, ಈಗ

ಎರಡರಷ್ಟಾಗಿದೆ ಎಂದು ಇನ್ನೊಂದು ವರ್ಷಕ್ಕೆ ಮುಂದೂಡುವುದಾದರೆ ಇದೇ ರೀತಿ ಇಡೀ ರಾಜ್ಯದಲ್ಲಿರುವ ಸೇತುವೆಗಳ ಕಾಮಗಾರಿಗಳು ಅರ್ಧಂಬರ್ಧಕ್ಕೆ ನಿಲ್ಲುತ್ತವೆ. ಆದುದರಿಂದ, ದಯಮಾಡಿ ಈಗಲೇ ಇದನ್ನು ಪ್ರಾರಂಭಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಹಣಕಾಸಿನ ವಿಚಾರದಲ್ಲಿ ಮತ್ತು ಅದರ ಪರಿಷ್ಕೃತ ಅಂದಾಜು ತಾಂತ್ರಿಕ ಸಲಹಾ ಮಂಡಳಿ ಮುಂದಿರುವ ಸಂದರ್ಭದಲ್ಲಿ ಇವತ್ತು ಈ ಕುರಿತಂತೆ ಅಂತಿಮ ತೀರ್ಮಾನವಾಗಿಲ್ಲವೆಂಬುದನ್ನೂ ಅವರು ಗಮನಿಸಬೇಕು. ನಾನು ಈ ಮಾತನ್ನು ಹೇಳಿದಾಗ ಅವರು ಗಮನಿಸಲಿಲ್ಲವೆಂದು ಕಾಣುತ್ತದೆ. ಈ ವಿಷಯವು ತಾಂತ್ರಿಕ ಸಲಹಾ ಮಂಡಳಿ ಮುಂದಿರುವುದರಿಂದ ಅಂತಿಮವಾಗಿ ತೀರ್ಪು ಬಂದ ನಂತರ ಆ ಕಾರ್ಯಕ್ರಮವನ್ನು ಅತಿ ಶೀಘ್ರದಲ್ಲಿ ಮಾಡಿಸುವ ಕೆಲಸ ಮಾಡಿಸುತ್ತೇನೆ.

ವಿದ್ಯುನ್ಮಾನ ಆಡಳಿತ (E-Governance) ಜಾರಿಗೊಳಿಸುವುದು

60(382) ಶ್ರೀ ಯೋಗಿಶ್ ಭಟ್ ಎನ್.(ಮಂಗಳೂರು ನಗರ ದಕ್ಷಿಣ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ ವಿದ್ಯುನ್ಮಾನ ಆಡಳಿತ (E-Governance) ಜಾರಿಯಲ್ಲಿದೆಯೇ?

ಹೌದು

ಆ) ವಿದ್ಯುನ್ಮಾನ ಆಡಳಿತವನ್ನು (E-Governance) ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಹಂತದಲ್ಲಿ ಅನುಷ್ಠಾನವಾಗಿದೆ?

ಸರ್ಕಾರದ ಸೇವೆಗಳನ್ನು ಉತ್ತಮವಾಗಿ ಹಾಗೂ ತ್ವರಿತವಾಗಿ ವಿದ್ಯುನ್ಮಾನ ಮುಖೇನ ಜನರಿಗೆ ತಲುಪಿಸುವ ಸಲುವಾಗಿ ಎಲ್ಲ ಇಲಾಖೆಗಳಲ್ಲಿಯೂ ವಿದ್ಯುನ್ಮಾನ ಆಡಳಿತವನ್ನು ಜಾರಿಗೆ ತರಲು ಸರ್ಕಾರವು ಕಾರ್ಯೋನ್ಮುಖವಾಗಿದೆ. ಈ ದಿಶೆಯಲ್ಲಿ ಪ್ರಮುಖವಾದ ಇಲಾಖೆಗಳಲ್ಲಿ ಈಗಾಗಲೇ ಇ–ಆಡಳಿತವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಇವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಅನುಷ್ಠಾನ ಮಾಡದೇ ಇರುವ ಇಲಾಖೆಗಳು ಯಾವುವು?

ಈ) ಅನುಷ್ಟಾನವಾಗದೇ ಇರುವ ಇಲಾಖೆಗಳಲ್ಲಿ ಎಂದಿನಿಂದ ಅನುಷ್ಠಾನಗೊಳಿಸಲಾಗುವುದು?

ಸರ್ಕಾರದ ಎಲ್ಲ ಇಲಾಖೆಗಳಲ್ಲೂ ವಿದ್ಯುನ್ಮಾನ ಆಡಳಿತವನ್ನು ಅಳವಡಿಸುವ ಗುರಿಯನ್ನು ಸರ್ಕಾರವು ಹೊಂದಿದ್ದು, ಈ ಬಗ್ಗೆ ಒಂದು ವಿವರವಾದ ರೋಡ್ ಮ್ಯಾಪ್ ತಯಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆಯಾಯ ಇಲಾಖೆ ಅದರ ಕಾರ್ಯವ್ಯಾಪ್ತಿಯೊಳಗೆ ಬರುವ ಕಾರ್ಯಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವಿದ್ಯುನ್ಮಾನ ಆಡಳಿತ ಕ್ರಿಯಾಯೋಜನೆಗಳನ್ನು ತಯಾರಿಸಿ ಅದಕ್ಕೆ ಸಕ್ಷಮ

ಪ್ರಾಧಿಕಾರದ ಅನುಮೋದನೆ ಪಡೆಯುವ ಕಾರ್ಯವಿಧಾನವನ್ನು ದಿನಾಂಕ:07.01.2005ರ ಆದೇಶ ಸಂಖ್ಯೆ ಸಿಆಸುಇ 39 ಇಜಿವಿ 2004 ರನ್ವಯ ನಿಗಧಿಪಡಿಸಲಾಗಿದೆ.

ಅನುಬಂಧ-1

ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿದ್ಯುನ್ಮಾನ ಆಡಳಿತ ಜಾರಿಗೊಳಿಸಿರುವ ವಿವರಗಳು ಹಾಗೂ ಅವುಗಳ ಹಂತ

ಕ್ರಮ ಸಂಖ್ಯೆ	ಇಲಾಖೆ	ವಿದ್ಯುನ್ಮಾನ ಆಡಳಿತ ತಂತ್ರಾಂಶ	ಹಂತ
1.	ಸಿಆಸುಇ (ಇ-ಆಡಳಿತ)	ಎಲ್‌ಎಮ್‌ಎಸ್/ಎಫ್‌ಎಮ್‌ಎಸ್ (ಸಚಿವಾಲಯವಾಹಿನಿ)	ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಉಪಯೋಗಿಸಲಾಗುತ್ತಿದೆ.
		ಬೆಂಗಳೂರು ಒನ್ ಸೇವಾ ಕೇಂದ್ರಗಳು	53 ಸೇವಾ ಕೇಂದ್ರಗಳಲ್ಲಿ ಸರ್ಕಾರದ 28 ಸೇವೆಗಳನ್ನು ಬೆಂಗಳೂರಿನ ನಾಗರೀಕರಿಗೆ ಒದಗಿಸಲಾಗುತ್ತಿದೆ.
		ಮಾನವ ಸಂಪನ್ಮೂಲ ನಿರ್ವಹಣೆ ಯೋಜನೆ	ಈ ಯೋಜನೆಯ ಮೂಲಕ ರಾಜ್ಯ ಸರ್ಕಾರದ 5 ಲಕ್ಷ ಉದ್ಯೋಗಿಗಳಿಗೆ ಸೇವೆಯನ್ನು ಹಾಗೂ ವೇತನ ಪಾವತಿಯನ್ನು ಮಾಡಲಾಗುತ್ತಿದೆ.
		ಇ-ಪ್ರೋಕ್ಯೂರ್‌ಮೆಂಟ್	ರಾಜ್ಯಾದ್ಯಂತ 20 ಇಲಾಖಾ ಏಜೆನ್ಸಿಗಳು ಇ-ಪ್ರೋಕ್ಯೂರ್‌ಮೆಂಟ್ ಸೌಲಭ್ಯಗಳನ್ನು

			ಉಪಯೋಗಿಸುತ್ತಿದೆ.
		ನೆಮ್ಮದಿ	ರಾಜ್ಯದಾದ್ಯಂತ 60 ಸೇವೆಗಳನ್ನು 794 ನೆಮ್ಮದಿ ಕೇಂದ್ರಗಳಿಂದ ನೀಡಲಾಗುತ್ತಿದೆ.
		ರಾಜ್ಯದತ್ತ ಕೇಂದ್ರ	ಪ್ರಸ್ತುತ ರಾಜ್ಯದತ್ತ ಕೇಂದ್ರದಲ್ಲಿ 65 ಸರ್ವರ್‌ಗಳು ಇದ್ದು ಇವುಗಳನ್ನು 23 ಇಲಾಖೆಗಳು ಉಪಯೋಗಿಸುತ್ತಿವೆ.
2.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ	ಆಸ್ತಿ	1050 ಗ್ರಾಮ ಪಂಚಾಯತಿಗಳಲ್ಲಿ ಈ ತಂತ್ರಾಂಶವನ್ನು ಅಳವಡಿಸಲಾಗುತ್ತಿದೆ.
		ಸರಳಲೆಕ್ಕ	ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿರುತ್ತವೆ.
		NREGA	ತಾಲ್ಲೂಕುಗಳಲ್ಲಿ ವಿದ್ಯುನ್ಮಾನ ಮಾಹಿತಿ ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ.
		ಸರ್ವಕುಟುಂಬ ಸಮೀಕ್ಷೆ	ತಂತ್ರಾಂಶ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.
3.	ವಾಣಿಜ್ಯ ತೆರಿಗೆ ಇಲಾಖೆ	ಇ-ಬಿಲ್ಲುಗಳ ಪದ್ಧತಿ	ವಿ-ಸಾಫ್ಟ್ ಮತ್ತು ವಿಇಎಫ್‌ಎಸ್ ತಂತ್ರಾಂಶಗಳನ್ನು ಅಭಿವೃದ್ಧಿಗೊಳಿಸಿದ್ದು ಪ್ರಸ್ತುತ ಉಪಯೋಗಿಸಲಾಗುತ್ತಿದೆ.
4.	ಲೋಕೋಪಯೋಗಿ ಇಲಾಖೆ	ಜಿ.ಐ.ಎಸ್ ಅವಲಂಬಿತ ಆರ್.ಐ.ಎಸ್ (Road	ರಸ್ತೆಮಾಹಿತಿ ಪದ್ಧತಿ (RIS) ಡಾಟಾಬೇಸ್

		Information System)	ಜಿಪಿಎಸ್ ಮುಖಾಂತರ ಇಂದೀಕರಿಸುವ ಹಂತದಲ್ಲಿರುತ್ತದೆ.
5.	ರಿಮೋಟ್ ಸೆನ್ಸಿಂಗ್	G.I.S.	ಅರಣ್ಯವಲಯ ಮತ್ತು ಜಲಾನಯನಗಳ GIS ಮಾಹಿತಿಯನ್ನು ತಯಾರಿಸಿದೆ.
6.	ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ	ವಿದ್ಯಾರ್ಥಿಗಳ ಡಾಟಾಬೇಸ್	ಡಾಟಾಬೇಸ್ ಅನ್ನು ಕೇಂದ್ರೀಕೃತಗೊಳಿಸಿ ಇಂದೀಕರಿಸಲಾಗುತ್ತಿವೆ.
7.	ಕೃಷಿ ಇಲಾಖೆ	ರೈತ ಮಿತ್ರ	ಇ-ರೈತಮಿತ್ರ ವೆಬ್ ಪೋರ್ಟಲ್ ಅನ್ನು ಪೂರ್ಣಗೊಳಿಸಲಾಗಿದೆ.
		ಕೃಷಿ ನೆಟ್ (Agri net)	ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಾಯೋಗಿಕ ಯೋಜನೆಯನ್ನು ಪ್ರಾರಂಭಿಸಲಾಗಿದೆ.
8.	ತೋಟಗಾರಿಕೆ	ಆಗ್ರೋ-ಕ್ಲೈಮಾಟಿಕ್ ಪ್ಲಾನಿಂಗ ಅಂಡ್ ಇನ್ಫರ್ಮೇಷನ್	ವೆಬ್‌ಸೈಟ್ ಅನ್ನು ಇಂದೀಕರಿಸುವ ಕಾರ್ಯವು ಪ್ರಗತಿಯಲ್ಲಿದೆ.
		ತೋಟಗಾರಿಕೆ ಪೋರ್ಟಲ್	ವೆಬ್‌ಸೈಟ್‌ನ್ನು ಇಂದೀಕರಿಸುವ ಕಾರ್ಯವು ಪ್ರಗತಿಯಲ್ಲಿದೆ.
9.	ಮಾಹಿತಿ ತಂತ್ರಜ್ಞಾನ	ಕಾಗದ ರಹಿತ ಕಚೇರಿ	ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಅಡಿ

			ಬರುವ 4-5 ಕಚೇರಿಗಳಲ್ಲಿ ನಿಯೋಜಿಸಲಾಗಿದೆ.
		ಐಟಿ-ಬಿಟಿ ಹೋಮ್ ಪೇಜ್	ವೆಬ್‌ಸೈಟ್ ಅನ್ನು ಇಂದೀಕರಿಸುವ ಕಾರ್ಯವು ಪ್ರಗತಿಯಲ್ಲಿದೆ.
10.	ನೀರಾವರಿ (ಕೆ.ಬಿ.ಜೆ.ಎನ್.ಎಲ್)	Pay II Pro	ಕೇಂದ್ರಿಯ ಕಚೇರಿಯಲ್ಲಿ ಅಳವಡಿಸಿ ಬಳಸಲಾಗುತ್ತಿದೆ.
		Water Rate Management	ಕೇಂದ್ರೀಯ ಕಚೇರಿಯಲ್ಲಿ ಅಳವಡಿಸಿ ಬಳಸಲಾಗುತ್ತಿದೆ.
11.	ಕನ್ನಡ ಮತ್ತು ಸಂಸ್ಕೃತಿ	ಹೋಮ್ ಪೇಜ್	ವೆಬ್‌ಸೈಟ್ ಅನ್ನು ಇಂದೀಕರಿಸುವ ಕಾರ್ಯವು ಪ್ರಗತಿಯಲ್ಲಿದೆ.
12.	ಪೋಲೀಸ್ ಇಲಾಖೆ		ಪೋಲೀಸ್ ಐಟಿ 2000 ತಂತ್ರಾಂಶ ಅಭಿವೃದ್ಧಿ ಮತ್ತು ಅಳವಡಿಕೆ ಪ್ರಗತಿಯಲ್ಲಿದೆ.
13.	ಸಾರಿಗೆ ಇಲಾಖೆ	ಸಾರಥಿ	ಸಾರಥಿ ತಂತ್ರಾಂಶವನ್ನು ಬೆಂಗಳೂರಿನ ಸಾರಿಗೆ ಕಚೇರಿಗಳಲ್ಲಿ ಅಳವಡಿಸಿ ಬಳಕೆಯಲ್ಲಿದ್ದು ಇತರೆ ನಗರಗಳ ಕಚೇರಿಗಳಲ್ಲಿ ಅಳವಡಿಕೆ ಕಾರ್ಯವು

			ಪ್ರಗತಿಯಲ್ಲಿದೆ.
14.	ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ	ಭೂಮಿ	ಭೂ ದಾಖಲೆಗಳ ಗಣಕೀಕರಣ ಮಾಡಲಾಗಿದೆ ಮತ್ತು ಗಣಕೀಕೃತ ಭೂ ದಾಖಲೆಗಳನ್ನು ಆನ್-ಲೈನ್ ನಲ್ಲಿ ಒದಗಿಸಲಾಗುತ್ತಿದೆ.
		ಮೋಜಣಿ	ಎಲ್ಲ ತಾಲ್ಲೂಕು ಕಚೇರಿಗಳಲ್ಲಿ ಅಳವಡಿಸಲಾಗಿದೆ.
15.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ		ಇಲಾಖೆ ಗಣಕೀಕರಣ ಪ್ರಗತಿಯಲ್ಲಿದೆ.
16.	ಖಜಾನೆ ನಿರ್ದೇಶನಾಲಯ	ಖಜಾನೆ	ರಾಜ್ಯದ ಎಲ್ಲಾ 216 ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಗಣಕೀಕರಣ
17.	ನೋಂದಣಿ ಮತ್ತು ಮುದ್ರಾಂಕ ಇಲಾಖೆ	ಕಾವೇರಿ	ನೊಂದಣಿ ಕಾರ್ಯಗಳ ಗಣಕೀಕರಣ

ಶ್ರೀ ಎನ್.ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಚಿಂತನಾ ಸಭೆಗಳ ಮೂಲಕ ಅನೇಕ ಆಡಳಿತ ಸುಧಾರಣೆಗಳ ಬಗ್ಗೆ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆಂಬುದನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಆಡಳಿತದಲ್ಲಿ ಪಾರದರ್ಶಕತೆ ಬೇಕು, ಸರಳೀಕರಣ ತರಬೇಕು, ಉತ್ತರದಾಯಿತ್ವ ಇರಬೇಕು, ಶೀಘ್ರವಾಗಿ ಕಡತ ವಿಲೇವಾರಿಯಾಗಬೇಕು. ಅಷ್ಟು ಮಾತ್ರವಲ್ಲ, ರಾಜ್ಯದ ಜನತೆ ತಮ್ಮ ಸ್ವಕ್ಷೇತ್ರದಿಂದಲೇ ತಮ್ಮ ಕಡತದ, ಅರ್ಜಿಗಳ ಸ್ಥಿತಿ-ಗತಿಗಳನ್ನು ತಿಳಿದುಕೊಳ್ಳುವ ರೀತಿಯಲ್ಲಿ, ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಇ-ಆಡಳಿತ ವ್ಯವಸ್ಥೆಯನ್ನು ತರಬೇಕೆಂಬ ಸದಿಚ್ಛೆಯಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ಒಂದೇ ಪ್ರಶ್ನೆ ಏನೆಂದರೆ, e-Governance ಆಡಳಿತದ ಮೂಲಕ ಕರ್ನಾಟಕ

ರಾಜ್ಯ ದೇಶದಲ್ಲಿಯೇ ಒಂದು ಅಗ್ರಗಣ್ಯ ರಾಜ್ಯವಾಗಬೇಕು, ಅಡಳಿತದ ಮಾದರಿ ಆಡಳಿತ ವ್ಯವಸ್ಥೆ ಕೊಟ್ಟ ರಾಜ್ಯವಾಗಬೇಕೆಂಬ ಆಸೆಯಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಜಿಲ್ಲಾ ಆಡಳಿತ ಮಟ್ಟದಿಂದ ಸಚಿವಾಲಯ ಮಟ್ಟದವರೆಗೂ ಸಂಪೂರ್ಣವಾಗಿ e-Governance ಅನ್ನು ಜಾರಿ ತರಲು ನಿಗದಿತ ಸಮಯದ ಅವಧಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬಹುದೇ?

ಎರಡನೆಯದಾಗಿ, ಗ್ರಾಮ ಪಂಚಾಯತಿ ಮಟ್ಟದಿಂದ ಜಿಲ್ಲಾ ಆಡಳಿತ ಮಟ್ಟದವರೆಗೂ ಎರಡನೇ ಹಂತದಲ್ಲಿ ನಿಗದಿತ ಸಮಯದ ಅಧಾರದಲ್ಲಿ ಅನುಷ್ಠಾನಕ್ಕೆ ತರಲು ಕಾರ್ಯಕ್ರಮ ಹಮ್ಮಿಕೊಳ್ಳಬಹುದೇ? ಮೂರನೆಯದಾಗಿ, ವಿಧಾನಸಭೆ ಮತ್ತು ವಿಧಾನ ಪರಿಷತ್ತು ಒಳಗೊಂಡು ಇಡೀ ವಿಧಾನಮಂಡಲದ ಕಾರ್ಯಾಲಯವನ್ನು e-Governance ವ್ಯಾಪ್ತಿಯಲ್ಲಿ ತರುವುದು. ನಾಲ್ಕನೆಯದಾಗಿ, ನ್ಯಾಯಾಂಗ ವ್ಯವಸ್ಥೆಯನ್ನೂ e-Governance ವ್ಯಾಪ್ತಿಗೆ ತರುವ ಮೂಲಕ ಒಂದು ವರ್ಷದ ಅವಧಿಯೊಳಗೆ ಅದನ್ನು ತರುವ ನಿಟ್ಟಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ಮುತುವರ್ಜಿ ವಹಿಸಬೇಕು ಮತ್ತು ಅದನ್ನು ಅನುಷ್ಠಾನಕ್ಕೆ ತರಬೇಕೆಂಬ ಕಳಕಳಿಯ ವಿನಂತಿಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯೋಗಿಶ್ ಭಟ್‌ರವರು ಅತ್ಯಂತ ಪ್ರಮುಖ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ಕರ್ನಾಟಕವು ಇಡೀ ದೇಶದಲ್ಲಿಯೇ e-Governanceನಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆ. ಇದು ನಾನು ಹೇಳುವ ಮಾತಲ್ಲ. ಇತ್ತೀಚೆಗೆ ಶ್ರೀ ನಂದನ್ ನೀಲಕಣಿಯವರನ್ನು ನಾನು ಕರೆಸಿದ್ದೆ. ಕರ್ನಾಟಕದಲ್ಲಿ ಅವರಿಗೆ ರಾಜ್ಯ ಸರ್ಕಾರದ ಇ-ಆಡಳಿತ ಸೇವೆಯಲ್ಲಿ ಕೆಲಸ ಮಾಡಿದ ಅನುಭವವಿದೆ. ಇದರ ಆಧಾರದ ಮೇಲೆ ಕೇಂದ್ರ ಸರ್ಕಾರವು ತಮಗೆ ಹೊಸ ಜವಾಬ್ದಾರಿ ವಹಿಸಿರುವುದಾಗಿ ಹೇಳಿದ್ದೇನೆ. ಅದು ಪತ್ರಿಕೆಗಳಲ್ಲೂ ಬಂದಿದೆ. ಕರ್ನಾಟಕ ರಾಜ್ಯವು ಇ–ಆಡಳಿತದಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆಯೆಂದು ಅವರು ಹೇಳಿದ್ದು ನಿನ್ನೆ ಪತ್ರಿಕೆಗಳಲ್ಲಿ ಬಂದಿದೆ. ಹೆಮ್ಮೆಯ ಸಂಗತಿ ಏನೆಂದರೆ, ಡಾ:ಕಸ್ತೂರಿ ರಂಗನ್, ಅವರು knowledge commission ಅಧ್ಯಕ್ಷರಾಗಿದ್ದರು. ಅವರು ಇವತ್ತು Planning Commission Member ಆಗಿದ್ದಾರೆ. ಅಂದರೆ, ಕರ್ನಾಟಕದ ಇಬ್ಬರು ಮಹನೀಯರು ನಮ್ಮ ಸರ್ಕಾರದ ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಒಂದಲ್ಲ ಒಂದು ರೀತಿಯಿಂದ ಏನು ಸಹಕಾರ ಕೊಡುತ್ತಿದ್ದರು, ಇವತ್ತು ಕೇಂದ್ರದಲ್ಲಿ ಒಂದು ದೊಡ್ಡ ಜವಾಬ್ದಾರಿಯನ್ನು ಹೊರುವ ಮಟ್ಟಕ್ಕೆ ನಾವು ಆಡಳಿತದಲ್ಲಿ ಸುಧಾರಣೆ ತರುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

ಒಂದನೇ ಹಂತದಲ್ಲಿ ಜಿಲ್ಲಾ ಆಡಳಿತ ಮಟ್ಟದಿಂದ ಸಚಿವಾಲಯ ಮಟ್ಟದವರೆಗೂ ಸಂಪೂರ್ಣವಾಗಿ e-Governance ಆಡಳಿತವನ್ನು ಈ ವರ್ಷದಲ್ಲಿಯೇ ಅನುಷ್ಠಾನಕ್ಕೆ ತರಬೇಕೆಂದು ತೀರ್ಮಾನಿಸಿದ್ದೇವೆ. ಎರಡನೇ

ಹಂತದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಿಂದ ಜಿಲ್ಲಾ ಆಡಳಿತದ ಮಟ್ಟದವರೆಗೂ ಮುಂದಿನ ಒಂದು ವರ್ಷದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ತೀರ್ಮಾನಿಸಿದ್ದೇವೆ. ಮತ್ತು ಬೆಂಗಳೂರು ಒನ್ ಕೇಂದ್ರಗಳ ಸೇವೆ ಮತ್ತು ಸಂಕೀರ್ಣಗಳನ್ನು ವಿಸ್ತರಿಸಿದ್ದೇವೆ. ನಾಗರಿಕ ಸೇವೆಗಳನ್ನು ಒದಗಿಸುವುದಕ್ಕೆ ಬೆಂಗಳೂರು ಒನ್ ಕೇಂದ್ರಗಳನ್ನು ಸ್ಥಾಪಿಸಿದ್ದು. ಮಾನ್ಯ ಜಯಚಂದ್ರರವರೆ, ಕಳೆದ ಒಂದು ವರ್ಷದಲ್ಲಿ ಈ ಕೇಂದ್ರಗಳ ಸಂಖ್ಯೆಯು 40ರಿಂದ 53ಕ್ಕೆ ಏರಿಕೆಯಾಗಿದೆ. ಅಂದರೆ, ಈ ವರ್ಷದ ಕೊನೆಯಲ್ಲಿ ಈ ಕೇಂದ್ರಗಳನ್ನು 100 ಸಂಖ್ಯೆಗೆ ಏರಿಸಬೇಕೆಂದು ತೀರ್ಮಾನಿಸಿದ್ದೇವೆ. ನಾಗರಿಕ ಸೇವಾ ಕೇಂದ್ರಗಳಿಲ್ಲಿ ಈ ಮೊದಲು ಒಟ್ಟು 29 ಸೇವೆಗಳನ್ನು ಒದಗಿಸಲಾಗುತ್ತಿತ್ತು. ಕಳೆದ ಒಂದು ವರ್ಷದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಟಿಕೆಟ್ ಕಾಯ್ದಿರಿಸುವಿಕೆ, ಕರ್ನಾಟಕ ರಾಜ್ಯ ಪ್ರವಾಸೋದ್ಯಮದ ಪ್ರವಾಸದ ಟಿಕೆಟ್ ಕಾಯ್ದಿರಿಸುವಿಕೆ, ಜಂಗಲ್ ಲಾಡ್ಜಸ್‌ನಲ್ಲಿ ಸ್ಥಳಾವಕಾಶದ ಟಿಕೆಟ್ ಕಾಯ್ದಿರಿಸುವುದು, ಈ ರೀತಿ ನಾಲ್ಕು ನೂತನ ಸೇವೆಗಳನ್ನು ಪ್ರಾರಂಭಿಸಿದ್ದೇವೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರತಕ್ಕ ಸುಮಾರು 30 ಕಟ್ಟಡಗಳಲ್ಲಿ ಈಗಾಗಲೇ ನಾಗರೀಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ನಿಯೋಜಿಸಲಾಗಿದೆ. Bangalure one ಮಾದರಿಯಲ್ಲೇ ರಾಜ್ಯದ ಎರಡನೇ ಸ್ತರದ ನಗರಗಳಾದ ಮೈಸೂರಿನಲ್ಲಿ 5 ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ಸ್ಥಳ ಗುರುತಿಸಿದ್ದೇವೆ. ಮಂಗಳೂರು, ಬೆಳಗಾಂ ಮತ್ತು ಶಿವಮೊಗ್ಗಗಳಲ್ಲಿಯೂ ಇದಕ್ಕಾಗಿ ಸ್ಥಳವನ್ನು ಗುರುತಿಸುವ ಕಾರ್ಯ ಪ್ರಾರಂಭವಾಗಿದೆ. ಈ ರೀತಿ ಅನೇಕ ಕಡೆ ಈ e-Governance ಯಶಸ್ವಿಯಾಗಿ ತರುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಬಹುಶಃ ಇಲಾಖೆವಾರು ಚರ್ಚೆಯ ಕಾಲದಲ್ಲಿ ಇನ್ನೂ ಹೆಚ್ಚಿನ ವಿವರವನ್ನು ಕೊಡಬಯಸುತ್ತೇನೆ. ಇದರ ಬಗ್ಗೆ ಇನ್ನೂ ಬಹಳಷ್ಟು ಸಂಗತಿಗಳು ಇದೆ. ಮುಂಬರುವ ದಿವಸಗಳಲ್ಲಿ ಕರ್ನಾಟಕ e-Governance ನಲ್ಲಿ ಒಂದು ಮಾದರಿ ರಾಜ್ಯವನ್ನಾಗಿ ಮಾಡುವ ಬಗ್ಗೆ ಪ್ರಯತ್ನ ಮಾಡುತ್ತೇವೆ. ಇವತ್ತು ಏನು ಯೋಗೀಶ್‌ಭಟ್‌ರವರು ಇದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ, ಅಭ್ಯಾಸ ಮಾಡಿ, ಪ್ರಮುಖ ಸಲಹೆಗಳನ್ನು ಕೊಟ್ಟಿದ್ದಾರೆ, ಆಡಳಿತದಲ್ಲಿ ಪಾರದರ್ಶಕತೆ, ಸರಳೀಕರಣ, ಉತ್ತರದಾಯಕತ್ವ, ಶೀಘ್ರ ಕಡತ ವಿಲೇವಾರಿ ಮುಂತಾದ ಬಗ್ಗೆ ಪ್ರಮುಖವಾದ ಸಲಹೆಯನ್ನೇನು ಕೊಟ್ಟಿದ್ದಾರೆ, ಅದಕ್ಕೆ ಒತ್ತುಕೊಡುತ್ತೇವೆ. ಅದರ ಜೊತೆಗೆ ತಮ್ಮ ಆಸೆ ಏನೆಂದರೆ, ಜನತೆ ಕೊಟ್ಟಂಥ ಅರ್ಜಿ ರಾಜ್ಯದ ಯಾವುದೇ ಮೂಲೆಯಲ್ಲಿರಲಿ, ಅದರ ಸ್ಥಿತಿಗತಿಗಳೇನು ಎಂಬುದರ ಬಗ್ಗೆ ತಮ್ಮ ಕ್ಷೇತ್ರದಲ್ಲೇ ಕುಳಿತುಕೊಂಡು ತಿಳಿದುಕೊಳ್ಳುವ ಅನುಕೂಲ ಮಾಡಬೇಕೆಂಬ ಬಗ್ಗೆ ಚಿಂತನೆ ನಡೆಸಿದ್ದೇವೆ. ಈ ರೀತಿ ಮುಂಬರುವ ದಿವಸಗಳಲ್ಲಿ ತಮ್ಮೆಲ್ಲರ ಸಲಹೆಯನ್ನು ಪಡೆದು ಇದನ್ನು ಅಭಿವೃದ್ಧಿಪಡಿಸುವುದಕ್ಕೆ e-Governance ಇದನ್ನು ಮಾದರಿಯಾಗಿ ಮಾಡುವುದಕ್ಕೆ ನಮ್ಮ ಶಕ್ತಿ ಮೀರಿ

ಪ್ರಯತ್ನವನ್ನು ಮಾಡುತ್ತೇವೆಂಬ ಭರವಸೆಯನ್ನು ಈ ಮನೆಯಲ್ಲಿ ನಾನು ಕೊಡಲು ಇಚ್ಛೆಪಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ಸ್ವಾಗತಿಸುತ್ತೇನೆ. e-governance ಕ್ಷೇತ್ರದಲ್ಲಿ ರಾಜ್ಯ ಬಹಳ ಮುಂದೆ ಇದೆ ಎಂಬುದನ್ನು ತಾವು ಹೇಳಿದ್ದೀರಿ. ಆದರೆ, ಒಂದು ತೊಂದರೆಯಾಗುತ್ತಿದೆ. e-Governanceನ್ನು ಎಲ್ಲಾ ಇಲಾಖೆಗಳಿಗೂ ವಿವಿಧ ರೀತಿಯಲ್ಲಿ extend ಮಾಡುವ ಹಂತದಲ್ಲಿದೆ. ಆದರೆ, ಇದು ಎಲ್ಲವೂ ಈ ಇಲಾಖೆಯ ವ್ಯಾಪ್ತಿಯಲ್ಲಿ ಆಗುತ್ತಿಲ್ಲ. Out source ಮಾಡುತ್ತಿದ್ದೀರಿ. Out source ನವರು ಅದನ್ನು effective ಆಗಿ ಮಾಡದಿರುವ ಕಾರಣ e-Governanceಗೆ ಕೆಟ್ಟ ಹೆಸರು ಬಂದಿದೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ನೆಮ್ಮದಿ ಕೇಂದ್ರಗಳನ್ನು ಕೊಮ್ಯಾಟ್ ಎಂಬ ಸಂಸ್ಥೆಗೆ ಕೊಟ್ಟಿದ್ದೀರಿ. ನಾನು ಹಳ್ಳಿಯಿಂದ ಬಂದವನು. ನನಗೆ ಹಳ್ಳಿಯ ಸಮಸ್ಯೆ ಏನೆಂದು ಗೊತ್ತಿದೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ ಬೇಗ ಮುಗಿಸಿ. ಪ್ರಶ್ನೋತ್ತರ ಮುಗಿಯಿತು.

ಶ್ರೀ ಟಿ.ಬಿ.ಜಯಚಂದ್ರ: ಇದು ಬಹಳ ಮುಖ್ಯವಾದ ವಿಚಾರ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಬೇಕಾದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಇದರಲ್ಲಿ ಬಹಳಷ್ಟು ಮಾಹಿತಿಗಳು ಇದೆ. ಚರ್ಚೆಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ: Out sourcing ನವರು ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದರ ಬಗ್ಗೆ ಏನಾದರೂ ಯೋಚನೆ ಮಾಡಿ. ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಅವರನ್ನು ಕಿತ್ತು ಬೇರೆಯವರಿಗೆ ಕೊಡುವ ಕೆಲಸ ಮಾಡಿ. ಆ ಕೆಲಸವನ್ನು ಮಾಡದಿದ್ದರೆ e-Governance ಒಳ್ಳೆಯ ಹೆಸರು ಬರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಎಲ್ಲೆಲ್ಲಿ ಕೊರತೆಯಿದೆ, ಅದನ್ನು ಸರಿಪಡಿಸೋಣ. ಇದರ ಬಗ್ಗೆ ಈ ಮನೆಯಲ್ಲಿಯೂ ಸಾಕಷ್ಟು ಚರ್ಚೆ ಮಾಡೋಣ. ನಿಮ್ಮೆಲ್ಲರ ಸಲಹೆಗಳ ಆಧಾರದ ಮೇಲೆ ಇದನ್ನು ಸುಧಾರಣೆ ಮಾಡಲು ಸಿದ್ಧನಾಗಿದ್ದೇನೆ.

ಅಧ್ಯಕ್ಷರು: ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ದಿನೇಶ್ ಆರ್.ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕಕ್ಕೆ ನಮಗೆ ಅಂತರರಾಷ್ಟ್ರೀಯ ಮಟ್ಟದಲ್ಲೇ ಹೆಸರು ಇದೆ. ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ಅಗ್ರ ಸ್ಥಾನದಲ್ಲಿದೆಯೆಂದು ಹೇಳಿದರು. ಆದರೆ, ಕಳೆದ ವರ್ಷ ಸರ್ವೆ ಮಾಡಿದಾಗ ನಮ್ಮ ರಾಜ್ಯ ಇಡೀ ದೇಶದಲ್ಲಿ 8ನೇ ಸ್ಥಾನದಲ್ಲಿತ್ತು. ಈ ವರ್ಷ ಅದು 15ನೇ ಸ್ಥಾನಕ್ಕೆ ಹೋಗಿದೆ. ನಮಗಿಂತ ಕಡಿಮೆ

ಇರತಕ್ಕವರು ಪಶ್ಚಿಮ ಬಂಗಾಳ, ಬಿಹಾರ ಮತ್ತು ಜಾರ್ಖಂಡ್. ಉಳಿದ ಎಲ್ಲಾ ರಾಜ್ಯದವರು ನಮಗಿಂತಲೂ ಮುಂದೆ ಇದ್ದಾರೆ ಎಂಬುದು ಸರ್ವೆ ಮಾಡಿದಾಗ ತಿಳಿದುಬಂದಿದೆ. E-Governance ವಿಚಾರದಲ್ಲಿ ರಾಜ್ಯದಲ್ಲಿ ಸರಿಯಾದ ಒತ್ತು ಕೊಡುತ್ತಿಲ್ಲ. ನಾವು ಮೊದಲನೆಯ ಸ್ಥಾನದಲ್ಲಿ ಇರಬೇಕಾಗಿತ್ತು. ಆದರೆ, ಇಲ್ಲ.

ಅಧ್ಯಕ್ಷರು: ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಆಗ ಮಾತನಾಡಿ.

ಶ್ರೀ ದಿನೇಶ್ ಆರ್.ಗುಂಡೂರಾವ್: ಇದು ಮುಖ್ಯವಾದ ವಿಚಾರ. ಮಾಹಿತಿ ತಂತ್ರಜ್ಞಾನಕ್ಕೆ ಮೂಲವಾಗಿರುವ ರಾಜ್ಯದಲ್ಲಿ ನಾವು ಹಿಂದುಳಿದಿದ್ದೇವೆಂದರೆ ಇದರ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲವೆಂದು ಆಯಿತು. ಆದ್ದರಿಂದ ದಯವಿಟ್ಟು ಸರ್ಕಾರ ಇದಕ್ಕೆ ಹೆಚ್ಚು ಒತ್ತುಕೊಟ್ಟು ಎಲ್ಲಾ ಹಂತದಲ್ಲೂ ಇದನ್ನು ಹಾಕಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲಿ ಕೇವಲ ಕಂಪ್ಯೂಟರೀಕರಣ ಮಾತ್ರವಲ್ಲ, ಆಡಳಿತ ಸುಧಾರಣೆ ಸಹ ಮಾಡಬೇಕು.

ಅಧ್ಯಕ್ಷರು: ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಕೊಡುತ್ತೇನೆ. ಆಗ ತಾವು ಮಾತನಾಡಿ. ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಸುರೇಶ್‌ಕುಮಾರ್, ಕಾನೂನು ಮತ್ತು ಸಂಸದೀಯ ಸಚಿವರು: ಮಾನ್ಯ ಅಧ್ಯಕ್ಷರೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯಲ್ಲಿರುವ 119 ಪ್ರಶ್ನೆಗಳ ಪೈಕಿ 90 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ–1

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

I. ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು: ಮಾನ್ಯ ಅಧ್ಯಕ್ಷರೆ,
1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:

ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(1)** ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಕಲಂ 89ರ ಮೇರೆಗೆ:

1. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಭತ್ತ, ಅಕ್ಕಿ, ಗೋಧಿ, ದ್ವಿದಳ ಧಾನ್ಯ, ಹಿಟ್ಟು, ಅಕ್ಕಿ ರವೆ, ಗೋಧಿ ಹಾಗೂ ಮೈದಾ ಹಿಟ್ಟು ಇವುಗಳ ಮಾರಾಟದ ಮೇಲಿನ ತೆರಿಗೆಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.03.2010ರವರೆಗೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(2)**ನೇ ಸಂಖ್ಯೆಯ ಅಧಿ ಸೂಚನೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಬಜೆ ಹಾಗೂ ಪಾದರಕ್ಷೆಗಳ (ಒಂದು ಜೊತೆಗೆ ನೂರು ರೂಪಾಯಿ ಬೆಲೆ ಬಾಳುವ ಎಲ್ಲಾ ರೀತಿಯ ಪಾದರಕ್ಷೆಗಳಿಗೆ) ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(3)**ನೇ ಸಂಖ್ಯೆಯ ಅಧಿಸೂಚನೆ.

3. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಹುಣಸೇಹಣ್ಣು, ಸೀಗೆಕಾಯಿ, ತೆಂಗಿನ ಕಾಯಿ, ಕೊಬ್ಬರಿ ಮತ್ತು ಒಣಗಿಸಿದ ತೆಂಗಿನ(ಕೊಬ್ಬರಿ) ಪುಡಿ ಹಾಗೂ ಅಡಿಕೆ ಕಾಯಿ ಇವುಗಳಿಗೆ ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಶೇ. 2ರಷ್ಟು ಕಡಿತಗೊಳಿಸಿ **ದಿನಾಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(4)**ನೇ ಸಂಖ್ಯೆಯ ಅಧಿಸೂಚನೆ.

4. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ 1985ರ ಕೇಂದ್ರ ಅಬಕಾರಿ ಸುಂಕ ಕಾಯ್ದೆಯಲ್ಲಿರುವ ಪ್ರೇ–ಕ್ಯೂರ್ಡ್ ಟ್ರೇಡ್ ರಬ್ಬರ್‌ನ ಶೀರ್ಷಿಕೆ ಮತ್ತು ಉಪ ಶೀರ್ಷಿಕೆ ಸಂಖ್ಯೆ 4008–29–40ನ್ನು ದಿನಾಂಕ 01.04.2009ರಿಂದ ಕೈಗಾರಿಕಾ ಹೂಡೂವಳಿ ಎಂದು ವ್ಯಾಖ್ಯಾನಿಸಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(5)** ನೇ ಸಂಖ್ಯೆಯ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಕೆಲವು ವಸ್ತುಗಳಿಗೆ ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಂದು ಜಾರಿಗೆ ಬರುವಂತೆ ಶೇ.4ರಷ್ಟು ಕಡಿಮೆ ಮಾಡಿ **ದಿನಾಂಕ 30.03.2009ರಂದು** ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(6)** ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ವ್ಯಾಪಾರಿಗಳು ಪಾವತಿಸುವ ಕನ್ನಡ ಗಣಕಯಂತ್ರ ಸಾಫ್ಟ್ ವೇರ್ ಮೇಲಿನ ತೆರಿಗೆಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(9)**ನೇ ಸಂಖ್ಯೆಯ ಅಧಿಸೂಚನೆ.

7. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಆರ್ಗ್ಯಾನಿಕ್ ವೇಸ್ಟ್ ಕನ್‌ವರ್ಟರ್ಸ್ ಮತ್ತು ಪ್ಲಾಸ್ಟಿಕ್ ಟಾರ್ಪಾಲಿನ್ಸ್‌ಗಳಿಗೆ ವ್ಯಾಪಾರಿಯು ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಶೇ.4ಕ್ಕೆ ಇಳಿಸಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(10)** ನೇ ಸಂಖ್ಯೆಯ ಅಧಿಸೂಚನೆ.

8. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳ ನಿಯಮ 168ಕ್ಕೆ ತಿದ್ದುಪಡಿ ಮಾಡಿ **30.05.2009**ರಂದು ಹೊರಡಿಸಲಾದ **ಎಫ್‌ಡಿ/265/ಸಿಎಸ್‌ಎಲ್/2008**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆಗಳ ಕಾಯ್ದೆ ಕಲಂ 33(3)ರ ಮೇರೆಗೆ:

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆ ಕಾಯ್ದೆಯಡಿ ಹನ್ನೆರಡನೇ ತರಗತಿ ಅಥವಾ ಪದವಿಪೂರ್ವ ಶಿಕ್ಷಣದ ಭೋದಕ ತರಗತಿಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(7)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆಯ ಕಾಯ್ದೆಯ ಕಲಂ 20(ಎ)ರ ಮೇರೆಗೆ:

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆ ಕಾಯ್ದೆಯಡಿ ವಿವಾಹ ಸಭಾಂಗಣಗಳಲ್ಲಿ ಏರ್ಪಡಿಸಲಾಗುವ ಕೈಗಾರಿಕಾ ವಸ್ತುಪ್ರದರ್ಶನಗಳನ್ನು ನಡೆಸಿದಲ್ಲಿ ಅಂತಹ ಸಭಾಂಗಣಕ್ಕೆ ಮಾಲೀಕರು ಪಾವತಿಸುವ ತೆರಿಗೆಗೆ ದಿನಾಂಕ

01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 31.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(8)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1932ರ ಮೈಸೂರು ಪಣ ತೆರಿಗೆ ಕಾಯ್ದೆಯ ಕಲಂ 8ಎ(2)ರ ಮೇರೆಗೆ:

ಪಣ ತೆರಿಗೆಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಮೈಸೂರು ನಗರದ ಪರವಾನಿಗೆದಾರ ಪಣ ವ್ಯವಹಾರಿಗಳು ಪಾವತಿಸಬೇಕಾದ ತೆರಿಗೆಯನ್ನು 1ನೇ ಏಪ್ರಿಲ್ 2009ರಿಂದ ಜಾರಿಗೆ ಬರುವಂತೆ ನಿಗದಿಪಡಿಸಿರುವ ಬಗ್ಗೆ **ದಿನಾಂಕ 16.04.2009**ರಂದು ಹೊರಡಿಸಲಾದ **ಎಫ್‌ಡಿ/65/ಸಿಎಸ್‌ಎಲ್/2009**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯ ಕಲಂ 31ರ ಮೇರೆಗೆ:

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿ ವ್ಯಾಪಾರಿಯು ಮೂಲ ಸೌಕರ್ಯಗಳ ಪ್ರಾಜೆಕ್ಟ್‌ಗಳನ್ನು ಕೈಗೊಂಡಲ್ಲಿ ಆ ಸಂಬಂಧ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಕೆಲವು ನಿಬಂದನೆಗಳಿಗೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 04.05.2009**ರಂದು ಹೊರಡಿಸಲಾದ **ಎಫ್‌ಡಿ/25/ಸಿಇಟಿ/2007(1)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಮೇರೆಗೆ:

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆಯಡಿ ಅಮದುದಾರ ವ್ಯಾಪಾರಿಯು ಮೂಲ ಸೌಕರ್ಯಗಳ ಪ್ರಾಜೆಕ್ಟ್‌ಗಳನ್ನು ಕೈಗೊಂಡಲ್ಲಿ ಆ ಸಂಬಂಧ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಕೆಲವು ನಿಬಂಧನೆಗಳೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 04.05.2009**ರಂದು ಹೊರಡಿಸಲಾದ **ಎಫ್‌ಡಿ/25/ಸಿಇಟಿ/2007(2)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯ ಕಲಂ 31ರ ಮೇರೆಗೆ:

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಪಾವತಿಸಲಾಗುವ ಪ್ರವೇಶ ತೆರಿಗೆಯಿಂದ ವಿಶೇಷ ಆರ್ಥಿಕ ವಲಯದಲ್ಲಿರುವ ಅಭಿವೃದ್ಧಿಗಾರ ಅಥವಾ ಸಹ-ಅಭಿವೃದ್ಧಿಗಾರರಾದ ವ್ಯಾಪಾರಿ ಮತ್ತು ಘಟಕ ಬಳಸುವ ನಿರ್ದಿಷ್ಟ ಸರಕುಗಳ ಮೇಲಿನ ಪ್ರವೇಶ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ವಿನಾಯಿತಿ ನೀಡಿ **ದಿನಾಂಕ 26.05.2009**ರಂದು ಹೊರಡಿಸಲಾದ **ಎಫ್‌ಡಿ/67/ಸಿಎಸ್‌ಎಲ್/2009(1)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆಯ ಕಲಂ 15(3)ರ ಮೇರೆಗೆ:

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ವಿಶೇಷ ಆರ್ಥಿಕ ವಲಯದಲ್ಲಿರುವ ಅಭಿವೃದ್ಧಿಗಾರ ಅಥವಾ ಸಹ-ಅಭಿವೃದ್ಧಿಗಾರರಾದ ಆಮದುದಾರರಿಗೆ ಮತ್ತು ಘಟಕ ಪಾವತಿಸುವ ಅಧಿಸೂಚಿತ ಸರಕುಗಳ ಮೇಲಿನ ಪ್ರವೇಶ ತೆರಿಗೆಯಿಂದ ಸಾರ್ವಜನಿಕ ಹಿತ ದೃಷ್ಟಿಯಿಂದ ವಿನಾಯಿತಿ ನೀಡಿ **ದಿನಾಂಕ 26.5.2009**ರಂದು ಹೊರಡಿಸಲಾದ **ಎಫ್‌ಡಿ/67/ಸಿಎಸ್‌ಎಲ್/2009(2)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯ ಕಲಂ 31ರ ಮೇರೆಗೆ:

1. 1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಉದ್ದೇಶಿತ ಹೊಸ ಕೈಗಾರಿಕಾ ಘಟಕಗಳಿಗೆ ನಿರ್ಣಯಕವಾದಂತಹ ವಿದ್ಯುತ್ ಸ್ಥಾವರದಲ್ಲಿ ವಲಯ1 ಅಥವಾ 2 ಅಥವಾ 3ರಲ್ಲಿ ಸ್ಥಿರ ಯಂತ್ರ ಭಾಗಗಳು ಹಾಗೂ ಮೂಲ ಸರಕುಗಳಿಗೆ ವರ್ತಕರು ಪಾವತಿಸಲಾಗುವ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 3.62.009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/2009(1)**ನೇ ಸಂಖ್ಯೆಯ ಅಧಿಸೂಚನೆ.

2. 1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಪ್ರೋಜೆಕ್ಟ್‌ನ್ನು ಕಾರ್ಯರೂಪಕ್ಕೆ ತರಲು ಘಟಕಗಳಿಗೆ 3 ವರ್ಷಗಳ ಪರಿಮಿತಿ ಹಾಗೂ ಷರತ್ತುಗಳೊಂದಿಗೆ, ರಫ್ತು ಪೂರ್ವಾದೇಶ ಘಟಕಗಳು, ಸ್ಥಿರಯಂತ್ರ, ಯಂತ್ರಭಾಗಗಳು ಹಾಗೂ ಮೂಲ ಸರಕುಗಳನ್ನು ಸ್ಥಾನಿಕ ಸ್ಥಳಗಳಿಗೆ ತೆಗೆದುಕೊಂಡು

ಬರಲು ತಯಾರಿಕಾ ಅಥವಾ ಸರಕು ಸಂಸ್ಕರಣಕ್ಕೆ ವರ್ತಕರು ಪಾವತಿಸಲಾಗುವ ತೆರಿಗೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/2009(ii)**ನೇ ಸಂಖ್ಯೆಯ ಅಧಿಸೂಚನೆ.

3. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಯಾವ ವರ್ತಕರು ಕೈಗಾರಿಕಾ ಘಟಕ ಮತ್ತು ಭಾರತದ ರಾಜ್ಯ ಕ್ಷೇತ್ರದ ಹೊರಗೆ ರಫ್ತು ಮಾಡುವರೋ ಅಂತಹ ಸರಕುಗಳ ಒಟ್ಟು ಬೆಲೆಯಲ್ಲಿ ಶೇಕಡ 25%ರಷ್ಟು ತಯಾರಿಕೆ ಹಾಗೂ ವಿಲೇವಾರಿಯನ್ನು ವಾಣಿಜ್ಯ ಉತ್ಪಾದನೆಯ ಕಚ್ಚಾ ವಸ್ತುಗಳು, ಹೂಡೂವಳಿ ಭಾಗಗಳನ್ನು ಬಳಸುವ ಸ್ಥಾನಿಕ ಸ್ಥಳಗಳಿಗೆ ವರ್ತಕರು ಪಾವತಿಸಲಾಗುವ ತೆರಿಗೆಗೆ ಪರಿಮಿತಿ ಹಾಗೂ ಷರತ್ತುಗಳೊಂದಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/3009(iii)**ನೇ ಸಂಖ್ಯೆಯ ಅಧಿಸೂಚನೆ.

4. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಅಧಿಸೂಚನೆ ಸಂಖ್ಯೆ ಎಫ್‌ಡಿ/29/ಸಿಇಟಿ/2006(i), ದಿನಾಂಕ 17.01.2007ರಲ್ಲಿ ಹೊರಡಿಸಲಾದ ಅಧಿಸೂಚನೆಯ ಕಲಂ(ಬಿ)ಯ ನಂತರದಲ್ಲಿ ಕೆಲವು ಪದಗಳನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/2009(iv)**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮದ ಕಲಂ 25(5)ರ ಮೇರೆಗೆ

1. 2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 26.12.2006**ರಂದು ಹೊರಡಿಸಲಾದ **ಡಿಪಿಎಆರ್/11/ಅರ್‌ಟಿಐ/2006**ನೇ ಸಂಖ್ಯೆಯ ಅಧಿಸೂಚನೆ.

2. 2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮದಡಿ ಕರ್ನಾಟಕ ಮಾಹಿತಿ ಹಕ್ಕು (ಪೀಠಗಳ ರಚನೆ) ನಿಯಮಾವಳಿಗಳು–2006ನ್ನು ರಚಿಸಿ **ದಿನಾಂಕ 29.01.2007**ರಂದು ಹೊರಡಿಸಲಾದ **ಡಿಪಿಎಆರ್/28/ಆರ್‌ಟಿಐ/2006**ನೇ ಸಂಖ್ಯೆಯ ಅಧಿಸೂಚನೆ.

3. 2005ರ ಕರ್ನಾಟಕ ಮಾಹಿತಿ ಹಕ್ಕು ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11.07.2007ರಂದು ಹೊರಡಿಸಲಾದ ಡಿಪಿಎಆರ್/39/ಆರ್‌ಟಿಐ/2007ನೇ ಸಂಖ್ಯೆಯ ಅಧಿಸೂಚನೆ.

4. 2005ರ ಕರ್ನಾಟಕ ಮಾಹಿತಿ ಹಕ್ಕು ನಿಯಮಗಳಲ್ಲಿ ನಿಯಮ 14ನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 17.03.2008ರಂದು ಹೊರಡಿಸಲಾದ ಡಿಪಿಎಆರ್/14/ಆರ್‌ಟಿಐ/2008ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

<u>1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಕಲಂ 8(3)ರ ಮೇರೆಗೆ:</u>

1. 1997ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ(ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11.03.2009ರಂದು ಹೊರಡಿಸಲಾದ ಡಿಪಿಎಆರ್/49/ಎಸ್‌ಆರ್‌ಆರ್./2008ನೇ ಸಂಖ್ಯೆಯ ಅಧಿಸೂಚನೆ.

2. 1988ರ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವೃಂದ, ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ ಎರಡನೇ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 08.06.2007ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಡಿಪಿಎಆರ್/92/ಎಸ್‌ಎಲ್‌ಯು/2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

3. 1993ರ ಕರ್ನಾಟಕ ಆಡಳಿತ ನ್ಯಾಯ ಮಂಡಳಿ(ನೇಮಕಾತಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 25.11.2006ರಂದು ಹೊರಡಿಸಲಾದ ಡಿಪಿಎಆರ್/06/ಎಸ್‌ಎಟಿ/2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

<u>II. ಶ್ರೀ ಗೋವಿಂದ ಎಂ ಕಾರಜೋಳ,(ಯೋಜನೆ ಮತ್ತು ಸಾಂಖ್ಯಿಕ) ಸಚಿವರು:</u>
ಮಾನ್ಯ ಅಧ್ಯಕ್ಷರೆ,

<u>1969ರ ಜನನಗಳ ಮತ್ತು ಮರಣಗಳ ನೋಂದಣಿ ಅಧಿನಿಯಮ 30(3)ರ ಪ್ರಕರಣದ ಮೇರೆಗೆ:</u>

1. 1969ರ ಕೇಂದ್ರೀಯ ಜನನಗಳ ಮತ್ತು ಮರಣಗಳ ನೋಂದಣಿ ಅಧಿನಿಯಮದ ಕಲಂ 30ರ 1999ರ ರೀತ್ಯಾ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ರಚಿಸಿ **ದಿನಾಂಕ 30.12.1999**ರಂದು ಹೊರಡಿಸಲಾದ **ಪಿಡಿಎಸ್/208/ಎಸ್‌ಎಂಸಿ/1999**ನೇ ಸಂಖ್ಯೆಯ ಅಧಿಸೂಚನೆ.

2. 1999ರ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳಿಗೆ ತಿದ್ದುಪಡಿ ಹಾಗೂ ನಮೂನೆ-1 2,5,6.7 ಹಾಗೂ 8ಗಳನ್ನು ಬದಲಾಯಿಸಿ **ದಿನಾಂಕ 30.12.2006**ರಂದು ಹೊರಡಿಸಲಾದ **ಪಿಡಿಎಸ್/135/ಎಸ್‌ಎಂಸಿ/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

<u>III. ಶ್ರೀ ಕೆ.ಎಸ್. ಈಶ್ವರಪ್ಪ, (ಇಂಧನ) ಸಚಿವರು:</u> ಮಾನ್ಯ ಅಧ್ಯಕ್ಷರೆ,

<u>1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮದ ಕಲಂ 57(3) ಮೇರೆಗೆ:</u>

1. 1999ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ) ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಹಾಗೂ ಹೊಸ ನಮೂನೆಯನ್ನು ನಿಗದಿಪಡಿಸಿ **ದಿನಾಂಕ 25.10.2002**ರಂದು ಹೊರಡಿಸಲಾದ **ಡಿಇ/46/ಪಿಎಸ್‌ಆರ್/2001**ನೇ ಸಂಖ್ಯೆಯ ಅಧಿಸೂಚನೆ.

2. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ವರ್ಗಾವಣೆ ವ್ಯವಸ್ಥೆ) (ತಿದ್ದುಪಡಿ) ನಿಯಮಗಳ ಅನುಸೂಚಿ –ಎ ಗೆ ತಿದ್ದುಪಡಿ ಮಾಡಿ **ದಿನಾಂಕ 02.12.2002**ರಂದು ಹೊರಡಿಸಲಾದ **ಡಿಇ/51/ಪಿಎಸ್‌ಆರ್/2001**ನೇ ಸಂಖ್ಯೆಯ ಅಧಿಸೂಚನೆ.

3. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕ.ವಿ.ಪ್ರ.ನಿ.ನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯ, ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) (ತಿದ್ದುಪಡಿ) ನಿಯಮಗಳ ನಿಯಮ 2 ಹಾಗೂ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 31.01.2003**ರಂದು ಹೊರಡಿಸಲಾದ **ಡಿಇ/14/ಪಿಎಸ್‌ಆರ್/2002**ನೇ ಸಂಖ್ಯೆಯ ಅಧಿಸೂಚನೆ.

4. 2001ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಾರ್ಷಿಕ ಲೆಕ್ಕ ವಿವರಣೆ) ನಿಯಮಗಳ ನಿಯಮ 5 ಹಾಗೂ ನಮೂನೆ 2ನ್ನು ಬದಲಾಯಿಸಿ **ದಿನಾಂಕ 04.02.2004**ರಂದು ಹೊರಡಿಸಲಾದ **ಡಿಇ/15/ಪಿಎಸ್‌ಆರ್/99/110** ಸಂಖ್ಯೆಯ ಅಧಿಸೂಚನೆ.

5. 2007ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರ ಹಾಗೂ ಸದಸ್ಯರುಗಳ ಪರಿಶ್ರಮ ಧನ, ಭತ್ಯೆ ಹಾಗೂ ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳ ನಿಯಮ 3 ಮತ್ತು 6ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 06.12.2007**ರಂದು ಹೊರಡಿಸಲಾದ **ಇಎನ್/137/ಪಿಎಸ್‌ಆರ್/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

<u>2003ರ ವಿದ್ಯುಚ್ಛಕ್ತಿ (2003ರ ಕೇಂದ್ರ ಅಧಿನಿಯಮ 36) ಅಧಿನಿಯಮದ ಕಲಂ 182ರ ಮೇರೆಗೆ:</u>

2003ರ ವಿದ್ಯುಚ್ಛಕ್ತಿ (ಮೇಲ್ಮನವಿ ಪ್ರಾಧಿಕಾರಗಳ) (ಕರ್ನಾಟಕ) ನಿಯಮಾವಳಿಗಳನ್ನು ರಚಿಸಿ **ದಿನಾಂಕ 30.12.2003**ರಂದು ಹೊರಡಿಸಲಾದ **ಡಿಇ/100/ಪಿಎಸ್‌ಆರ್/2003/1074**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

<u>2001ರ ವಿದ್ಯುತ್ ಸಂರಕ್ಷಣಾ (2001ರ ಕೇಂದ್ರ ಕಾಯ್ದೆ 52) ಅಧಿನಿಯಮದ ಕಲಂ 59(2)ರ ಮೇರೆಗೆ:</u>

1. 2001ರ ಕರ್ನಾಟಕ ವಿದ್ಯುತ್ ಸಂರಕ್ಷಣಾ ಅಧಿನಿಯಮವನ್ನು ನಿಯಂತ್ರಿಸಲು, ಜಾರಿಗೊಳಿಸಲು ಹಾಗೂ ಸಮನ್ವಯಗೊಳಿಸಲು ಕೆ.ಆರ್.ಇ.ಡಿ.ಎಲ್.ಗೆ ನೇಮಿಸಿ, **ದಿನಾಂಕ 13.05.2004**ರಂದು ಹೊರಡಿಸಲಾದ **ಡಿಇ/22/ಸಿಎಸ್‌ಆರ್/2002/363**ನೇ ಸಂಖ್ಯೆಯ ಅಧಿಸೂಚನೆ.

2. 2007ರ ಕರ್ನಾಟಕ ವಿದ್ಯುತ್ ಸಂರಕ್ಷಣಾ ನಿಧಿ ನಿಯಮಾವಳಿಗಳನ್ನು ರಚಿಸಿ ದಿನಾಂಕ **01.09.2007**ರಂದು ಹೊರಡಿಸಲಾದ **ಇಎನ್/41/ಪಿಎಸ್‌ಆರ್/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) <u>(ಶ್ರೀ ಎಸ್.ಎ. ರವೀಂದ್ರನಾಥ್, (ಕೃಷಿ) ಸಚಿವರ ಪರವಾಗಿ</u>: ಮಾನ್ಯ ಅಧ್ಯಕ್ಷರೆ,

<u>ಭಾರತದ ಸಂವಿಧಾನದ 213(2)(ಎ) ಅನುಚ್ಛೇಧದ ಮೇರೆಗೆ:</u>

ಕರ್ನಾಟಕ ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವ ಸಂಬಂಧದಲ್ಲಿ ಹೊರಡಿಸಿರುವ ಸಂವ್ಯಶಾಇ/26/ಶಾಸನ/2008, ದಿನಾಂಕ 02.06.2009ರ ಆಧ್ಯಾದೇಶ ಸಂಖ್ಯೆ 2ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) <u>(ಶ್ರೀ ಜಿ.ಕರುಣಾಕರರೆಡ್ಡಿ, (ಕಂದಾಯ) ಸಚಿವರ ಪರವಾಗಿ</u>: ಮಾನ್ಯ ಅಧ್ಯಕ್ಷರೆ,
<u>ಭಾರತದ ಸಂವಿಧಾನದ 213(2)(ಎ) ಅನುಚ್ಛೇಧದ ಮೇರೆಗೆ:</u>

1957ರ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ ಅನುಸೂಚಿಗೆ ತಿದ್ದುಪಡಿ ಮಾಡಿ ಹೊರಡಿಸಿರುವ ಡಿಪಿಎಎಲ್/23/ಶಾಸನ/2009, ದಿನಾಂಕ 04.06.2009ರ ಆದ್ಯಾದೇಶ ಸಂಖ್ಯೆ 5ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) <u>(ಶ್ರೀ ಬಿ.ಎನ್. ಬಚ್ಚೇಗೌಡ, (ಕಾರ್ಮಿಕ) ಸಚಿವರ ಪರವಾಗಿ</u>: ಮಾನ್ಯ ಅಧ್ಯಕ್ಷರೆ,
<u>1961ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ 41ರ ಪ್ರಕರಣದ ಮೇರೆಗೆ:</u>

1963ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನಿಯಮಾವಳಿಗಳಲ್ಲಿನ ನಿಯಮ 24ಎ ಹಾಗೂ 26ನ್ನು ಪ್ರತಿಯೋಜಿಸಿ **ದಿನಾಂಕ 31.12.2008**ರಂದು ಹೊರಡಿಸಲಾಧ **ಎಲ್‌ಡಿ/324/ಎಲ್‌ಇಟಿ/2008**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

<u>1948ರ ಕರ್ನಾಟಕ ಕಾರ್ಖಾನೆಗಳ ಅಧಿನಿಯಮದ ಕಲಂ 115(2)ರ ಮೇರೆಗೆ:</u>

1. 1969ರ ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳ ನಿಯಮ 3, 3ಎ(1), 5,6,8,10 ಹಾಗೂ 11ನ್ನು ತಿದ್ದುಪಡಿ ಮಾಡಿ ದಿನಾಂಕ **29.12.1999**ರಂದು ಹೊರಡಿಸಲಾದ **ಕಾಇ/18/ಕಬಾನಿ/1995/(1)**ನೇ ಸಂಖ್ಯೆಯ ಅಧಿಸೂಚನೆ.

2. 1994ರ ಕರ್ನಾಟಕ ಕಂಟ್ರೋಲ್ ಆಫ್ ಇಂಡಸ್ಟ್ರೀಯಲ್ ಮೇಜರ್ ಆಕ್ಸಿಡೆಂಟ್ ಹಜಾರ್ಡ್ ನಿಯಮಾವಳಿಗಳ ನಿಯಮ 1,2,3,4,5,6,7,8,10,11,13,15,16ಗಳ ತಿದ್ದುಪಡಿ, ನಿಯಮ 3ಎ, ಹಾಗೂ ಅನುಸೂಚಿ 8ಎನ್ನು ಹೊಸದಾಗಿ ಸೇರ್ಪಡೆಗೊಳಿಸಿ, ನಿಯಮ 9 ಮತ್ತು 14ನ್ನು ತೆಗೆದುಹಾಕಿ ಹಾಗೂ ನಿಯಮ 12, ಅನುಸುಚಿ 1,2,3,4 ಮತ್ತು 7ನ್ನು ಬದಲಾಯಿಸಿ **ದಿನಾಂಕ 29.11.2001**ರಂದು ಹೊರಡಿಸಲಾದ **ಕಾಇ/19/ಕಬಾನಿ/1998**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1947ರ ಕರ್ನಾಟಕ ಕೈಗಾರಿಕಾ ವಿವಾದ ಕಾಯ್ದೆಯ ಕಲಂ 40(3)ರ ಮೇರೆಗೆ:

1947ರ ಕರ್ನಾಟಕ ಕೈಗಾರಿಕಾ ವಿವಾದ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ಕೆಲವು ತಿದ್ದುಪಡಿ ಮಾಡಿ ಕ್ರಮ ಸಂಖ್ಯೆ 32 ನಂತರ 33 ಹಾಗೂ 34ರ ಉಪಬಂಧಗಳನ್ನು ಸೇರ್ಪಡೆಗೊಳಿಸಿ **ದಿನಾಂಕ 09.03.2000**ರಂದು ಹೊರಡಿಸಲಾದ **ಕಾಇ/31/ಕಬಾನಿ/2000**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕುಮಾರಿ ಶೋಭಾ ಕರಂದ್ಲಾಜೆ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಕಲಂ 320ರ ಮೇರೆಗೆ

1. 2004ರ ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳನ್ನು ರಚಿಸಿ **ದಿನಾಂಕ 15.03.2005**ರಂದು ಹೊರಡಿಸಲಾದ **ಗ್ರಾಅಪ/252/ಜಿಪಸ/2003**ನೇ ಸಂಖ್ಯೆಯ ಅಧಿಸೂಚನೆ.

2. 2004ರ ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್ ಸಭೆ ಮತ್ತು ಗ್ರಾಮ ಸಭೆ) ನಿಯಮಗಳನ್ನು ರಚಿಸಿ **ದಿನಾಂಕ 15.03.2005**ರಂದು ಹೊರಡಿಸಲಾದ **ಗ್ರಾಅಪ/260/ಜಿಪಸ/2003**ನೇ ಸಂಖ್ಯೆಯ ಅಧಿಸೂಚನೆ.

3. 1996ರ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳಿಗೆ ತಿದ್ದುಪಡಿಗಳನ್ನು ತಂದು ದಿನಾಂಕ **25.05.2006**ರಂದು ಹೊರಡಿಸಲಾದ **ಗ್ರಾಅಪ/37/ಜಿಪಸ/2005**ನೇ ಸಂಖ್ಯೆಯ ಅಧಿಸೂಚನೆ.

4. 1995ರ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಲೆಕ್ಕಪತ್ರಗಳು ಮತ್ತು ಬಜೆಟ್) ನಿಯಮಗಳನ್ನು ನಿರಸನಗೊಳಿಸಿ 2006ರ ಕರ್ನಾಟಕ ಪಂಚಯತ್ ರಾಜ್ಯ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳನ್ನು ರಚಿಸಿ **ದಿನಾಂಕ 18.11.2006**ರಂದು ಹೊರಡಿಸಲಾದ **ಗ್ರಾಅಪ/02/ಎಎಫ್ಎನ್(2)/2006**ನೇ ಸಂಖ್ಯೆಯ ಅಧಿಸೂಚನೆ.

5. 2006ರ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳ ನಿಯಮ 20ನ್ನು ಬದಲಾಯಿಸಿ **ದಿನಾಂಕ 06.08.2008**ರಂದು ಹೊರಡಿಸಲಾದ **ಗ್ರಾಅಪ/2/ಎಫ್ಎನ್(2) 2006/2008**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ, (ಕೃಷಿ ಉತ್ಪನ್ನ ಮಾರುಕಟ್ಟೆ) ಸಚಿವರ ಪರವಾಗಿ:
ಮಾನ್ಯ ಅಧ್ಯಕ್ಷರೆ,
1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದ ಕಲಂ 153ರ ಮೇರೆಗೆ:

1. 1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮಗಳಡಿ ಅಧಿಸೂಚನೆ ಸಂಖ್ಯೆ ಸಿಒ/144/ಎಂಆರ್ಇ/2001, ದಿನಾಂಕ 16.06.2001ರಲ್ಲಿ ತೆಗೆದುಹಾಕಲಾಗಿರುವ ಐಟಮ್ ನಂ 3ಎನ್ನು ಪೂರ್ವಾನ್ವಯದಿಂದ ಅಂದರೆ ದಿನಾಂಕ 02.06.1989ರಿಂದ ಜಾರಿಗೆ ಬರುವಂತೆ ಆದೇಶಿಸಿ **ದಿನಾಂಕ 25.05.2009**ರಂದು ಹೊರಡಿಸಲಾದ **ಸಿಡಿ/126/ಎಂಆರ್ಇ/2008**ನೇ ಸಂಖ್ಯೆಯ ಅಧಿಸೂಚನೆ.

2. 1968ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಮಯ) ನಿಯಮಗಳ ನಿಯಮ 60ಸಿಗೆ ತಿದ್ದುಪಡಿ ಮಾಡಿ **ದಿನಾಂಕ 29.01.2001**ರಂದು ಹೊರಡಿಸಲಾದ **ಸಿಎಂಡಬ್ಲ್ಯೂ/214/ಎಂಆರ್ಇ/97**ನೇ ಸಂಖ್ಯೆಯ ಅಧಿಸೂಚನೆ.

3. 1968ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಮಯ) ನಿಯಮಾವಳಿಗಳ ನಿಯಮ 5 ಹಾಗೂ 5ಎಗೆ ತಿದ್ದುಪಡಿ ಮಾಡಿ **ದಿನಾಂಕ 03.02.2004**ರಂದು ಹೊರಡಿಸಲಾದ **ಸಿಡಿ/248/ಎಂಆರ್ಇ/2003**ನೆ ಸಂಖ್ಯೆಯ ಅಧಿಸೂಚನೆ.

4. 2004 ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ವಿನಿಮಯ) ನಿಯಮಗಳನ್ನು ರಚಿಸಿ **ದಿನಾಂಕ 09.07.2004**ರಂದು ಹೊರಡಿಸಲಾದ **ಸಿಡಿ/58/ಎಂಆರ್‌ಇ/2002**ನೇ ಸಂಖ್ಯೆಯ ಅಧಿಸೂಚನೆ.

5. 1968ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ(ವಿನಿಮಯ) ನಿಯಮಾವಳಿಗಳ ನಿಯಮ 91ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 22.07.2004**ರಂದು ಹೊರಡಿಸಲಾದ **ಸಿಡಿ/370/ಎಂಆರ್‌ಇ/2003**ನೇ ಸಂಖ್ಯೆಯ ಅಧಿಸೂಚನೆ.

6. 2004ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ವಿನಿಮಯ) ನಿಯಮಾವಳಿಗಳ ನಿಯಮ2, 3, 5, 7, 8, 10, 13, 14, 17, 19, 23, 24 ಹಾಗೂ ನಮೂನೆ 4,7 ಮತ್ತು 8ಕ್ಕೆ ತಿದ್ದುಪಡಿ, ಹಾಗೂ ನಿಯಮ 9ಎ, 9ಬಿ, 17ಎ, 21ಎ ಯನ್ನು ಸೇರ್ಪಡೆಗೊಳಿಸಿ ಹಾಗೂ ನಿಯಮ 5ರ ಅನುಬಂಧವನ್ನು ಬದಲಾಯಿಸಿ **ದಿನಾಂಕ 09.10.2007**ರಂದು ಹೊರಡಿಸಲಾದ **ಸಿಡಿ/522/ಎಂಆರ್‌ಇ/2006**ನೇ ಸಂಖ್ಯೆಯ ಅಧಿಸೂಚನೆ.

7. 2004ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ವಿನಿಮಯ) ನಿಯಮಾವಳಿಗಳ ನಿಯಮ 21ಎಗೆ ತಿದ್ದುಪಡಿ ಮಾಡಿ **ದಿನಾಂಕ 28.01.2008**ರಂದು ಹೊರಡಿಸಲಾದ **ಸಿಡಿ/321/ಎಂಆರ್‌ಇ/2007**ನೇ ಸಂಖ್ಯೆಯ ಅಧಿಸೂಚನೆ.

8. 1968ರ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಮಯ) ನಿಯಮಾವಳಿಗಳಲ್ಲಿ ನಿಯಮ 74ಎ ಹಾಗೂ ನಮೂನೆ 35ಎ ನ್ನು ಹೊಸದಾಗಿ ಸೇರ್ಪಡೆಗೊಳಿಸಿ **ದಿನಾಂಕ 30.10.2001**ರಂದು ಹೊರಡಿಸಲಾದ **ಸಿಡಿ/10/ಎಂಆರ್‌ಇ/2001**ನೇ ಸಂಖ್ಯೆಯ ಅಧಿಸೂಚನೆ.

9. 1968ರ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಮಯ) ನಿಯಮಾವಳಿ ನಿಯಮ 2, 60ಎ, 60ಸಿ, 61, 76 ಗಳಿಗೆ ತಿದ್ದುಪಡಿ ಮಾಡಿ, ನಿಯಮ 7, 46ಎ, 64, 70, 71, 74ಎ, ನಮೂನೆ 35ಎಗಳನ್ನು ಬದಲಾಯಿಸಿ ಹಾಗೂ ನಿಯಮ 64ಎ ಮತ್ತು 64ಬಿ, 65ಎ ಮತ್ತು ಭಾಗ vi ಎ, vii ಬಿ, vii ಸಿ ಮತ್ತು ನಮೂನೆ 35ಬಿ, 37ಎ, 37ಬಿ, ನಮೂನೆ 46 ರಿಂದ 65ರವರೆಗೆ ಹೊಸದಾಗಿ

ಸೇರ್ಪಡೆಗೊಳಿಸಿ **ದಿನಾಂಕ 19.03.2008**ರಂದು ಹೊರಡಿಸಲಾದ **ಸಿಡಿ/229/ಎಂಆರ್‌ಇ/2007**ನೇ ಸಂಖ್ಯೆಯ ಅಧಿಸೂಚನೆ.

10. 1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದಡಿಯಲ್ಲಿ ರಾಜ್ಯದ ಎಲ್ಲಾ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘ ನಿಯಮಿತ (ಹಾಪ್‌ಕಾಮ್ಸ್)ಗಳಿಗೆ ವಿಧಿಸಲಾಗುವ ಮಾರುಕಟ್ಟೆ ಶುಲ್ಕದಿಂದ ವಿನಾಯಿತಿ ನೀಡಿ **ದಿನಾಂಕ 14.03.2008**ರಂದು ಹೊರಡಿಸಲಾದ **ಸಿಇ/33/ಎಂಆರ್‌ಇ/2008**ನೇ ಸಂಖ್ಯೆಯ ಅಧಿಸೂಚನೆ.

11. 1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದ ಅನುಸೂಚಿಯನ್ನು ತಿದ್ದುಪಡಿಗೊಳಿಸಿ **ದಿನಾಂಕ 16.06.2001**ರಂದು ಹೊರಡಿಸಲಾದ **ಸಿಒ/144/ಎಂಆರ್‌ಇ/2001**ನೇ ಸಂಖ್ಯೆಯ ಅಧಿಸೂಚನೆ.

12. 1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮದಡಿಯಲ್ಲಿ ಅಧಿಸೂಚನೆ ಸಂಖ್ಯೆ ಸಇ/127/ಎಂಆರ್‌ಇ/2001, ದಿನಾಂಕ 29.10.2001ರ ಅನುಬಂಧ-1ರಲ್ಲಿ ಘೋಷಿಸಲಾಗಿರುವ ಕೃಷಿ ಉತ್ಪನ್ನಗಳ ಪೈಕಿ ಐಟಂ- xi ರ ಕ್ರಮಸಂಖ್ಯೆ (3)ರಲ್ಲಿನ ಉರುವಲು ಕಟ್ಟಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಸೂಚಿತ ಸಾಮಾಗ್ರಿಗಳ ಪಟ್ಟಿಯಿಂದ ಕೈಬಿಟ್ಟು **ದಿನಾಂಕ 24.03.2008**ರಂದು ಹೊರಡಿಸಲಾದ **ಸಇ/289/ಎಂಆರ್‌ಇ/2007**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್, (ನಗರಾಭಿವೃದ್ಧಿ) ಸಚಿವರು: ಮಾನ್ಯ ಅಧ್ಯಕ್ಷರೆ,
ಭಾರತದ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ:

1964ರ ಕರ್ನಾಟಕ ಅಧಿನಿಯಮ 22ನೇ ಅಧಿನಿಯಮ ಮತ್ತು 1977ರ ಅಧಿನಿಯಮ 14ಕ್ಕೆ ತಿದ್ದುಪಡಿ ಮಾಡಿ ಹೊರಡಿಸಿರುವ ಡಿಪಿಎಎಲ್/22/ಶಾಸನ/2008, ದಿನಾಂಕ 28.05.2009ರ ಆಧ್ಯಾದೇಶ ಸಂಖ್ಯೆ 1ನ್ನು ಮಂಡಿಸುವುದು.

1976ರ ಕರ್ನಾಟಕ ಪೌರ ನಿಗಮಗಳ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಹೊರಡಿಸಿರುವ ಡಿಪಿಎಎಲ್/21/ಶಾಸನ/2009, ದಿನಾಂಕ 04.06.2009ರ ಆಧ್ಯಾದೇಶ ಸಂಖ್ಯೆ 4ನ್ನು ಮಂಡಿಸುವುದು.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಉಮೇಶ್ ವಿ ಕತ್ತಿ, (ತೋಟಗಾರಿಕೆ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, **ಭಾರತದ ಸಂವಿಧಾನದ 213(2)(ಎ) ಅನುಚ್ಛೇಧದ ಮೇರೆಗೆ:**

ಕರ್ನಾಟಕ ರಾಜ್ಯದಲ್ಲಿ ಪ್ರತ್ಯೇಕ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂದಪಟ್ಟ ವಿಷಯಗಳಿಗೆ ಉಪಬಂದ ಕಲ್ಪಿಸುವ ಸಂಬಂಧ ಹೊರಡಿಸಿರುವ ಸಂವ್ಯಶಾಇ/27/ಶಾಸನ/2008, ದಿನಾಂಕ 02.06.2009ರ ಆಧ್ಯಾದೇಶ ಸಂಖ್ಯೆ 3ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಅಬಕಾರಿ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ, **1965ರ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 71(4) ರ ಮೇರೆಗೆ:**

1. 2008ರ ಕರ್ನಾಟಕ ಅಬಕಾರಿ (ಮದ್ಯ ತಯಾರಿಕೆ) ನಿಯಮಗಳನ್ನು ರಚಿಸಿ ದಿನಾಂಕ **27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(i)**ನೇ ಸಂಖ್ಯೆಯ ಅಧಿಸೂಚನೆ.

2. 1985ರ ಕರ್ನಾಟಕ ಅಬಕಾರಿ (ಗುತ್ತಿಗೆ ಅಧಿಕಾರಿಯುಕ್ತ ಚಿಲ್ಲರೆ ಸಾರಾಯಿ ಮಾರಾಟ) ಕಾಯ್ದೆಯಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/20/ಪಿಇಎಸ್/2005(ii), ದಿನಾಂಕ 01.07.2008ನ್ನು ರದ್ದುಪಡಿಸಿ, **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(ii)**ನೇ ಸಂಖ್ಯೆಯ ಅಧಿಸೂಚನೆ.

3. 2008ರ ಕರ್ನಾಟಕ ಅಬಕಾರಿ (ಗುತ್ತಿಗೆ ಅಧಿಕಾರಯುಕ್ತ ಚಿಲ್ಲರೆ ಸಾರಾಯಿ ಮಾರಾಟ) ನಿಯಮಗಳನ್ನು ರಚಿಸಿ **ದಿನಾಂಕ 27.09.2008**ರಂದು ಹೊರಡಿಸಲಾಧ **ಎಫ್‌ಡಿ/20/ಪಿಇಎಸ್/2005(iii)**ನೇ ಸಂಖ್ಯೆಯ ಅಧಿಸೂಚನೆ.

4. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕಗಳು) ನಿಯಮಗಳ ನಿಯಮ 2ಎಎ ಮತ್ತು ಅನುಸೂಚಿ "ಡಿ" ಗೆ ತಿದ್ದುಪಡಿ ಹಾಗೂ ಹೊಸ ನಿಯಮ 2ಎಡಿಇಯನ್ನು ಸೇರಿಸಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(iv)**ನೇ ಸಂಖ್ಯೆಯ ಅಧಿಸೂಚನೆ.

5. 1968ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ಮದ್ಯ ತಯಾರಿಕೆ) ನಿಯಮಗಳ ನಿಯಮದ ಶೀರ್ಷಿಕೆ, ನಿಯಮ 2ರ ಹಾಗೂ ವೈನ್ ಎಂಬ ಪದದ ಬದಲಿಗೆ "ಫಾರ್ಟಿಫೈಡ್ ವೈನ್" ಎಂಬ ಪದವನ್ನು ತಿದ್ದುಪಡಿಗೊಳಿಸಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(v)**ನೇ ಸಂಖ್ಯೆಯ ಅಧಿಸೂಚನೆ.

6. 1967ರ ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನ ಸಾಗಾಣಿಕೆ ಮತ್ತು ಅಮಲೇರಿಸುವ ವಸ್ತುಗಳ ಆಮದು ಮತ್ತು ರಫ್ತು) ನಿಯಮಗಳ ನಿಯಮ 21ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(vi)**ನೇ ಸಂಖ್ಯೆಯ ಅಧಿಸೂಚನೆ.

7. 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಗಳ ನಿಯಮ 5 ಹಾಗೂ 10ಎಗೆ ತಿದ್ದುಪಡಿ ಮಾಡಿ **ದಿನಾಂಕ 27.09.2008**ರಂದು ಹೊರಡಿಸಲಾದ **ಎಫ್‌ಡಿ/20/ಪಿಇಎಸ್/2005(vii)**ನೇ ಸಂಖ್ಯೆಯ ಅಧಿಸೂಚನೆ.

8. 1968ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿಯ ಮದ್ಯ ಮಾರಾಟ ನಿಯಮಗಳ ನಿಯಮ 3, 3ಎ, 8, ಹಾಗೂ ನಮೂನೆ ಸಿಎಲ್-16ಕ್ಕೆ ತಿದ್ದುಪಡಿ ಮಾಡಿ ಹಾಗೂ ನಮೂನೆ ಸಿಎಲ್-17 ಮತ್ತು 18ನ್ನು ಹೊಸದಾಗಿ ಸೇರ್ಪಡೆಗೊಳಿಸಿ **ದಿನಾಂಕ 22.11.2008**ರಂದು ಹೊರಡಿಸಲಾದ **ಎಫ್‌ಡಿ/3/ಪಿಇಎಸ್/2008**ನೇ ಸಂಖ್ಯೆಯ ಅಧಿಸೂಚನೆ.

9. 1968ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳ ನಮೂನೆ ಸಿಎಲ್-2ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 15.01.2009**ರಂದು ಹೊರಡಿಸಲಾದ **ಎಫ್‌ಡಿ/7/ಪಿಇಎಸ್/2008(i)**ನೇ ಸಂಖ್ಯೆಯ ಅಧಿಸೂಚನೆ.

10. 1967ರ ಕರ್ನಾಟಕ ಅಬಕಾರಿ ಪರವಾನಿಗೆಗಳು (ಸಾಮಾನ್ಯ ಷರತ್ತುಗಳು) ನಿಯಮಗಳ ನಿಯಮ 23ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 15.01.2009**ರಂದು ಹೊರಡಿಸಲಾದ **ಎಫ್‌ಡಿ/7/ಪಿಇಎಸ್/2008(ii)**ನೇ ಸಂಖ್ಯೆಯ ಅಧಿಸೂಚನೆ.

11. 1968ರ ಕರ್ನಾಟಕ ಅಬಕಾರಿ (ಭಾರತೀಯ ಮದ್ಯಗಳ ಮಾರಾಟ) ನಿಯಮಗಳ ನಿಯಮದ ಅನುಸೂಚಿ ಡಿ ಗೆ ತಿದ್ದುಪಡಿ ಮಾಡಿ ದಿನಾಂಕ **3003.2009**ರಂದು ಹೊರಡಿಸಲಾದ **ಎಫ್‌ಡಿ/4/ಪಿಇಎಸ್/2009**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಗಿದೆ.

4. <u>ಚುನಾವಣಾ ಪ್ರಸ್ತಾಪ</u>

<u>ವಿಷಯ: ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ</u>

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272 (1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತೆಗಳ ಸಮಿತಿಗೆ 9 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277 (1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಊ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಋ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283 (1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ 10 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಎ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಕಲ್ಯಾಣ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಏ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಐ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370 (2)ನೇ ನಿಯಮದ ಅನುಸಾರವಾಗಿ ಈ ಸಭೆ ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ 12 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಒ) 1994ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 21(1) (vii)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಓ) 1960ನೇ ಇಸವಿಯ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಕಾಯ್ದೆ, ಭಾಗ--(2)ರ ನಿಯಂತ್ರಣ ಮಂಡಳಿಗೆ ಅಧಿಕಾರಿ ಮತ್ತು ಕರ್ತವ್ಯದ ಸಂಖ್ಯೆ 5(2) (ಏ)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268 (1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ 18 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272 (1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತೆಗಳ ಸಮಿತಿಗೆ 9 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277 (1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಊ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಋ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283 (1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ 10 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಎ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಏ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಐ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370 (2)ನೇ ನಿಯಮದ ಅನುಸಾರವಾಗಿ ಈ ಸಭೆ ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ 12 ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಒ) 1994ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 21 (1) (vii)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

ಓ) 1960ನೇ ಇಸವಿಯ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಕಾಯ್ದೆ, ಭಾಗ-(2)ರ ನಿಯಂತ್ರಣ ಮಂಡಳಿಗೆ ಅಧಿಕಾರಿ ಮತ್ತು ಕರ್ತವ್ಯದ ಸಂಖ್ಯೆ 5(2) (ಏ)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಅಂಗೀಕರಿಸಲಾಯಿತು</u>

5.ನಿಲುವಳಿ ಸೂಚನೆ
ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ : ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬೇಡಿಕೆ ಸಮೀಕ್ಷೆ ನಡೆಸದೇ ಎಕರೆಗೆ 50 ಲಕ್ಷ ರೂ.ಗಳನ್ನು ನೀಡಿ ಜಮೀನು ಖರೀದಿಸಿ ಸರ್ಕಾರಕ್ಕೆ

ಕೋಟ್ಯಂತರ ರೂ. ನಷ್ಟ ಉಂಟು ಮಾಡಿರುವ ಬಗ್ಗೆ.

\- - -

ಶ್ರೀ ಹೆಚ್.ಡಿ.ರೇವಣ್ಣ [ಹೊಳೆನರಸೀಪುರ]:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ವೆಂಕಟಾಪುರ, ಸುಗಟೂರು, ಬಳುವಣಹಳ್ಳಿ, ಹೊಸಪೇಟೆ ಮತ್ತಿತರ ಹಳ್ಳಿ/ಗ್ರಾಮಗಳ ಸರ್ವೆ ನಂ.2ರಿಂದ 390ರವರೆಗಿನ ವಿವಿಧ ಸರ್ವೆ ನಂಬರ್‌ಗಳಲ್ಲಿ ವಸತಿ ನಿವೇಶನಕ್ಕಾಗಿ ಯಾವುದೇ ಸಮೀಕ್ಷೆ ಮಾಡದೆ, ಎಕರೆಗೆ 2 ರಿಂದ 3 ಲಕ್ಷ ರೂಪಾಯಿಗಳವರೆಗೆ ಬೆಲೆ ಬಾಳುವ ಜಮೀನುಗಳನ್ನು ಎಕರೆಗೆ 50.00 ಲಕ್ಷ ರೂಪಾಯಿಗಳಂತೆ ಸುಮಾರು 959 ಎಕರೆಗಳನ್ನು ಮಧ್ಯವರ್ತಿಯ ಮೂಲಕ ಕೊಂಡುಕೊಂಡಿದ್ದು ಸರ್ಕಾರಿ ಆದೇಶ ಸಂಖ್ಯೆ : ವಇ 32 ಕಗೃಮಂ 2009, ದಿನಾಂಕ 20.02.2009ರಂದು ಹೊರಡಿಸಲಾದ ಆದೇಶದಲ್ಲಿ ಮಂಡಳಿಯು 8,97,50,000.00 ರೂ.ಗಳ ಚೆಕ್‌ನ್ನು ನೀಡಿರುತ್ತದೆ. ಈ ಮಧ್ಯವರ್ತಿಯು ಮಾಜಿ ವಸತಿ ಮತ್ತು ಮುಜರಾಯಿ ಸಚಿವರ ಸಹೋದರರಾಗಿದ್ದು, ಇದರಿಂದಾಗಿ ಸರ್ಕಾರಕ್ಕೆ 200 ರಿಂದ 300 ಕೋಟಿ ರೂ.ಗಳ ವಂಚನೆಯಾಗಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ನಿಯಮ 60ರಡಿಯಲ್ಲಿ ಪ್ರಸ್ತಾಪಿಸಲು ತಾವು ಅನುಮತಿ ಕೊಟ್ಟಿದ್ದೀರಿ.

ಅಧ್ಯಕ್ಷರು:- ನಾನಿನ್ನೂ ಅನುಮತಿ ಕೊಟ್ಟಿಲ್ಲ. ನೀವು preliminary submission ಮಾತ್ರ ಮಾಡುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಅದನ್ನೇ ನಾನು ಹೇಳುತ್ತಿದ್ದೇನೆ. ಇದನ್ನು ನಾನು ಹೇಳುವುದಕ್ಕಿಂತ ಹೆಚ್ಚಾಗಿ ಇವತ್ತಿನ 'ಉದಯವಾಣಿ' ದಿನಪತ್ರಿಕೆಯಲ್ಲಿ 'ಜಮೀನು ಖರೀದಿ : ಗೃಹ ಮಂಡಲಿಗೆ ಕೋಟ್ಯಂತರ ರೂ.ನಷ್ಟ' 'ಜಮೀನು ಖರೀದಿಯಲ್ಲಿ ಮಧ್ಯವರ್ತಿ ಕೈಚಳಕ' 'ಗೃಹ ಮಂಡಲಿಗೆ 200 ರಿಂದ 300 ಕೋಟಿ ರೂ. ನಷ್ಟ' 'ಬಿ.ಜೆ.ಪಿ. ಮುಖಂಡರ ಸಂಬಂಧಿಯತ್ತ ಸಂಶಯದ ಬೆರಳು' ಎಂದು ಈ ಬಗ್ಗೆ ವರದಿಯಾಗಿದೆ. ಎಕರೆಗೆ 1 ರಿಂದ 1.25 ಲಕ್ಷ ರೂ.ಗಳ ಬೆಲೆ ಬಾಳುವ ಜಮೀನನ್ನು 50 ಲಕ್ಷ ರೂ.ಗಳನ್ನು ಕೊಟ್ಟು ಖರೀದಿ ಮಾಡಿದ್ದಾರೆ. ಈ ಎಲ್ಲಾ ವಿದ್ಯಮಾನಗಳ ಬಗ್ಗೆ ಇಂದಿನ 'ಉದಯವಾಣಿ' ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ. ಅಲ್ಲದೆ ಇಂದಿನ 'ಕನ್ನಡ ಪ್ರಭ' ಪತ್ರಿಕೆಯಲ್ಲಿ 'ಸಮೀಕ್ಷೆ ನಡೆಸದೆ ಭೂ ಖರೀದಿ' ಶೀರ್ಷಿಕೆಯಲ್ಲಿ ಸಹಾ ಈ ಬಗ್ಗೆ ವರದಿಯಾಗಿದೆ. ಹೌಸಿಂಗ್ ಬೋರ್ಡ್‌ನಿಂದ ಯಾವುದಾದರೂ ಜಮೀನು ಖರೀದಿ ಮಾಡಬೇಕಾದರೆ, ಅದಕ್ಕಾಗಿ ಬೇಡಿಕೆ ಸಮೀಕ್ಷೆಯೊಂದನ್ನು ನಡೆಸಿರಬೇಕು. ಆದರೆ ಇಲ್ಲಿ ಅಂತಹ ಬೇಡಿಕೆ ಸಮೀಕ್ಷೆಯೇ ಆಗಿಲ್ಲ. ಬೇಡಿಕೆ ಸಮೀಕ್ಷೆ ಇಲ್ಲದೆ ಬೆಂಗಳೂರಿನಿಂದ ಸುಮಾರು 60 ಕಿ.ಮೀ. ದೂರದಲ್ಲಿ ಖರೀದಿಸಲಾಗಿರುವ ಈ 959 ಎಕರೆ ಸುಮಾರು 500 ಕೋಟಿ ರೂ. ಬೆಲೆ ಬಾಳುತ್ತದೆ. ಈ ಬಗ್ಗೆ ಒಂದೊಂದಾಗಿ ಹೇಳುತ್ತೇನೆ. ಜಿಲ್ಲಾಧಿಕಾರಿಗಳು 3.11.2008ರಲ್ಲಿ 11 ಗಂಟೆಗೆ ಜಿಲ್ಲಾ ಭೂ ಖರೀದಿ ಸಮಿತಿ ಸಭೆಯೊಂದನ್ನು

ಕರೆಯುತ್ತಾರೆ. ಸದರಿ ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಗೃಹ ಮಂಡಳಿ, ಬೆಂಗಳೂರು; ಜಿಲ್ಲಾ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ; ಉಪ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ; ಸಹಾಯಕ ಕಾರ್ಯಕಲಾಪ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೋಲಾರ; ಭೂ ಮಾಲೀಕರು ಮತ್ತು ಭೂ ಮಾಲೀಕರ ಪ್ರತಿನಿಧಿಗಳು ಉಪಸ್ಥಿತರಿರುತ್ತಾರೆ. ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ವೆಂಕಟಾಪುರ, ಸುಗಟೂರು, ಹೊಸಪೇಟೆ ಮತ್ತು ಬಳವನಹಳ್ಳಿ ವಿವಿಧ ಗ್ರಾಮಗಳಲ್ಲಿ ಸರ್ವೆ ನಂಬರ್ 2 ರಿಂದ 390ರವರೆಗೆ ಸುಮಾರು 1000 ಎಕರೆ ಜಮೀನು ಖರೀದಿಸಲಾಗಿದೆ. ನಿರ್ದಿಷ್ಟವಾಗಿ 958 ಎಕರೆ ಎಂದು ಸರ್ಕಾರಿ ಆದೇಶದಲ್ಲಿ ಹೇಳಲಾಗಿದೆ. ಜಿಲ್ಲಾಧಿಕಾರಿಗಳು ಕರೆದ 3.11.2008ರ ಸಭೆಯಲ್ಲಿ ಈ ಜಮೀನು ಎಕರೆಗೆ 2 ರಿಂದ 3.5 ಲಕ್ಷ ರೂ.ಗಳಷ್ಟು ಬೆಲೆ ಬಾಳುತ್ತದೆ ಎಂದು ಸಬ್ ರಿಜಿಸ್ಟ್ರಾರ್‌ರವರು ಹೇಳುತ್ತಾರೆ. ಇದಾದ ನಂತರ ಇನ್ನೊಂದು ಸಭೆ ನಡೆಯುತ್ತದೆ. ಇದಕ್ಕೆ ಮುಂಚೆ ಜಿಲ್ಲಾಧಿಕಾರಿಗಳನ್ನೇ ವರ್ಗಾವಣೆ ಮಾಡಲಾಗುತ್ತದೆ. ಅವರು ಸರಿಯಾಗಿ adjust ಆಗಲಿಲ್ಲ, ಎಕರೆಗೆ 2 ರಿಂದ 3.5 ಲಕ್ಷ ರೂ.ಗಳನ್ನಷ್ಟೇ ಬೆಲೆ ಕಟ್ಟಿದರು ಎಂಬ ಕಾರಣಕ್ಕಾಗಿ ಜಿಲ್ಲಾಧಿಕಾರಿಗಳನ್ನೇ ವರ್ಗಾವಣೆ ಮಾಡಲಾಗುತ್ತದೆ. ನಂತರ ಅಲ್ಲಿಗೆ ಬೇರೆ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗುತ್ತದೆ. ನಂತರ ಎರಡನೇ ಸಭೆ ನಡೆಯುತ್ತದೆ. ದಿನಾಂಕ 18.10.2008ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೃಷಿ ಜಮೀನಿಗೆ ಎಕರೆಗೆ 1.15 ಲಕ್ಷ ರೂ.ಗಳ valuation ಇದೆ ಎಂದು ಹೇಳಲಾಗುತ್ತದೆ. ಕೃಷಿ ಜಮೀನಿಗೆ 1 ಲಕ್ಷ ರೂ.ಗಳಿಂದ 1.15 ಲಕ್ಷ ರೂ.ಗಳವರೆಗೆ guidance value ಇರುತ್ತದೆ. ಈಗ ಒಬ್ಬ builders ಬರುತ್ತಾನೆ. ಬೇರೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲೂ ಸಹ ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ತೀರ್ಮಾನಿಸಲಾಗುತ್ತದೆ. Maximum ಅಂದರೆ 2 ಲಕ್ಷ ರೂ. ಗಳಿಂದ 3.5 ಲಕ್ಷ ರೂ.ಗಳವರೆಗೆ ಕೊಡಬಹುದು ಎಂದು ಹೇಳುತ್ತಾರೆ. ಶ್ರೀ ಅನ್ವರ್ ಪಾಷ, ಭಾರತೀಯ ಆಡಳಿತ ಸೇವೆ, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 23.1.2009ರಂದು ಜಿಲ್ಲಾ ಭೂ ಖರೀದಿ ಸಮಿತಿ ಸಭೆ ಸೇರಿರುತ್ತದೆ. ಎ.ಸಿ. ಮತ್ತು ಇತರ ಸಮಿತಿ ಸದಸ್ಯರೆಲ್ಲಾ ಸದರಿ ಸಭೆಯಲ್ಲಿ ಉಪಸ್ಥಿತರಿರುತ್ತಾರೆ. ಸದರಿ ಸಭೆಯಲ್ಲಿ ರೈತರು ಮೊದಲು ಎಕರೆಗೆ 40 ಲಕ್ಷ ರೂ.ಗಳ ಬೇಡಿಕೆ ಇಡುತ್ತಾರೆ, ನಂತರ ಎಕರೆಗೆ 30 ಲಕ್ಷ ರೂ.ಗಳನ್ನು ಕೊಡಿ ಎಂದು ಕೇಳುತ್ತಾರೆ. ರೈತರು ಎಕರೆಗೆ 30 ಲಕ್ಷ ರೂ.ಗಳನ್ನು ಕೊಡಿ ಎಂದರೆ, ಜಿಲ್ಲಾಧಿಕಾರಿಗಳು ಎಕರೆಗೆ maximum 2 ರಿಂದ 3.5 ಲಕ್ಷ ರೂ.ಗಳನ್ನು ಕೊಡಬಹುದು ಎಂದು ಹೇಳುತ್ತಾರೆ. ರೈತರ ಬೇಡಿಕೆಯನ್ನು ತಳ್ಳಿ ಹಾಕಲಾಗುತ್ತದೆ. ಇದಾದ ಮೇಲೆ ಡಿ.ಸಿ.ಯವರು ಮತ್ತೊಂದು ಮೀಟಿಂಗ್ ಕರೆದು, ಅದರಲ್ಲಿ ಎಕರೆಗೆ ಅಂತಿಮವಾಗಿ 35 ಲಕ್ಷ ರೂ.ಗಳನ್ನು ನಿಗದಿ ಪಡಿಸುತ್ತಾರೆ. ಈ

ನಡುವೆ ಶ್ರೀಶಕ್ತಿ ಎಂಟರ್‌ಪ್ರೈಸಸ್‌ನ ಡೆನಿಸ್ ಪಿಂಟೋ ಎಂಬುವವರು ಕರ್ನಾಟಕ ಗೃಹ ಮಂಡಳಿಗೆ ಪತ್ರವೊಂದನ್ನು ಬರೆದು, ಇದೇ same ಜಂಗಮಕೋಟೆ ಹೋಬಳಿಯಲ್ಲಿ ನಾನು ಎಕರೆಗೆ 30 ಲಕ್ಷ ರೂ.ಗಳಂತೆ 500 ಎಕರೆ ಜಮೀನನ್ನು ಕೊಡುವುದಾಗಿ ಹೇಳುತ್ತಾರೆ. ಆದರೆ ಈ ಪ್ರಸ್ತಾವನೆಯನ್ನೂ ಸಹ ಒಂದು ಕಡೆ ತೆಗೆದು ಎಸೆಯುತ್ತಾರೆ. ಭೂ ಮಾಲೀಕರ ಹತ್ತಿರ ಎಕರೆಗೆ 5 ಲಕ್ಷ ರೂ.ಗಳಂತೆ power of attorney ಯನ್ನು ಬರೆಸಿಕೊಳ್ಳಲಾಗುತ್ತದೆ. ಎಸ್.ಎನ್.ಶ್ರೀನಿವಾಸ ಶೆಟ್ಟಿ, aged 54 years, S/o late ನಾರಾಯಣ ಶೆಟ್ಟಿ ಎಂಬುವವರು ಆ ರೀತಿ ಬರೆಸಿಕೊಳ್ಳುತ್ತಾರೆ. ಅವರು ಯಾರು? ಎಂಬುದನ್ನು ಸರ್ಕಾರದವರು ಹೇಳಬೇಕು. ಇವರು ಎಕರೆಗೆ 6 ಲಕ್ಷ 62 ಸಾವಿರ ರೂ.ಗಳಂತೆ 1 ಎಕರೆ 13 ಗುಂಟೆ ಜಮೀನನ್ನು 2007ರ ಡಿಸೆಂಬರ್ ತಿಂಗಳಿನಲ್ಲಿ ಪರ್ಚೇಸ್ ಮಾಡುತ್ತಾರೆ. Power of attorney ತೆಗೆದುಕೊಂಡಿದ್ದ ಶ್ರೀ ಶ್ರೀನಿವಾಸ ಶೆಟ್ಟಿ ಎಂಬುವವರೇ ಹೌಸಿಂಗ್ ಬೋರ್ಡಿಗೆ ಸದರಿ ಜಮೀನನ್ನು sale deed ಮಾಡಿ ಕೊಡುತ್ತಾರೆ. ಇದೊಂದು ಕಡೆ ಇರಲಿ. ಇನ್ನೊಬ್ಬರು ರಮೇಶ್ ಎಂಬುವವರು ಇದ್ದಾರೆ. ಅವರೂ ಸಹ ಮಾಲೂರಿನವರೇ ಆಗಿದ್ದಾರೆ. ರಮೇಶ್ ಎಂಬುವವರ ಹೆಸರಿಗೆ GPA holder ಎಂದು ಮಾಡಿರುತ್ತಾರೆ. ರೈತರಿಗೆ ದುಡ್ಡು ಹೋಗುವುದಿಲ್ಲ. ಒಂದೇ ತಿಂಗಳಿನಲ್ಲಿ ಈ ಎಲ್ಲಾ ಅವ್ಯವಹಾರಗಳು ನಡೆಯುತ್ತವೆ. ವಿಧಾನ ಪರಿಷತ್ತಿನಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಯೊಂದನ್ನು ಕೇಳಿದಾಗ ಅದಕ್ಕೆ ಈಗಾಗಲೇ ಸರ್ಕಾರ ಉತ್ತರ ಕೊಟ್ಟಿದೆ. ಕರ್ನಾಟಕ ಗೃಹ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ ಹೋಬಳಿ ವೆಂಕಟಾಪುರ ಎಂಬಲ್ಲಿ ಜಮೀನು ಖರೀದಿಸಲು ತೀರ್ಮಾನವಾಗಿ ಸರ್ಕಾರದ ಆದೇಶವಾಗಿದೆಯೇ? ಎಂಬ ಪ್ರಶ್ನೆಗೆ ಸರ್ಕಾರದವರು 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ, ಖರೀದಿಸಲು ತೀರ್ಮಾನಿಸಲಾಗಿರುವ ಜಮೀನು ಎಷ್ಟು? ಎಂಬ ಪ್ರಶ್ನೆಗೆ ಸರ್ಕಾರದವರು 'ಒಟ್ಟು 959 ಎಕರೆ' ಎಂದು ಉತ್ತರ ಕೊಟ್ಟಿದ್ದಾರೆ. ಹೀಗೆ ಆದೇಶಿಸುವ ಮುನ್ನ ಸರ್ಕಾರ ಬೇಡಿಕೆ ಸಮೀಕ್ಷೆ ನಡೆಸಿದೆಯೇ? ಎಂಬ ಪ್ರಶ್ನೆಗೆ 'ಯಾವುದೇ ಬೇಡಿಕೆ ಸಮೀಕ್ಷೆ ನಡೆಸಿಲ್ಲ' ಎಂದು ಸರ್ಕಾರ ಉತ್ತರ ಕೊಟ್ಟಿದೆ. ಕರ್ನಾಟಕ ಗೃಹ ಮಂಡಳಿ ಯಾವುದಾದರೂ ಜಮೀನು ಖರೀದಿ ಮಾಡುವುದಕ್ಕಿಂತ ಮುಂಚೆ ಬೇಡಿಕೆ ಸಮೀಕ್ಷೆಯನ್ನು ಮಾಡಬೇಕಾಗಿತ್ತು. ಆದರೆ ಯಾವುದೇ ಬೇಡಿಕೆ ಸಮೀಕ್ಷೆಯನ್ನೇ ನಡೆಸಿಲ್ಲ. ಯಾವುದೇ ಬೇಡಿಕೆ ಸಮೀಕ್ಷೆ ನಡೆಸಿಲ್ಲ ಎಂಬುದನ್ನು ಮಾನ್ಯ ವಸತಿ ಸಚಿವರೇ ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರದಲ್ಲಿ ಒಪ್ಪಿಕೊಳ್ಳುತ್ತಾರೆ. ಒಂದು ವೇಳೆ ಖರೀದಿಸಲು ತೀರ್ಮಾನವಾಗಿದ್ದಲ್ಲಿ ಒಂದು ಎಕರೆಗೆ ನಿಗದಿಪಡಿಸಿರುವ ಮೊತ್ತವೆಷ್ಟು? ಎಂಬ ಪ್ರಶ್ನೆಗೆ 'ಪ್ರತಿ ಎಕರೆಗೆ 50 ಲಕ್ಷ ರೂ.ಗಳಂತೆ ಜಮೀನು ಖರೀದಿಸಲು ನಾವು ರೆಡಿ ಇದ್ದೇವೆ' ಎಂದು ಸರ್ಕಾರದವರೇ ವಿಧಾನ

ಪರಿಷತ್ತಿನಲ್ಲಿ ಒಪ್ಪಿಕೊಂಡಿದ್ದಾರೆ. ಖರೀದಿಸಲು ಸರ್ಕಾರದವರು ತೀರ್ಮಾನ ಮಾಡಿಲ್ಲ ಎಂದಿಲ್ಲ. ಈಗಾಗಲೇ ಅವರು ಖರೀದಿಸಲು ರೆಡಿಯಾಗಿದ್ದರು. ವಿಧಾನಪರಿಷತ್ತಿನಲ್ಲಿ ಒಂದು ಹೇಳಿಕೆ ಕೊಟ್ಟರು. ಸರ್ಕಾರದ ಹಾಗೂ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ವಸತಿ ಸಚಿವರು ಇಲ್ಲ, ಸನ್ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಸಭಾ ನಾಯಕರ ಗಮನಕ್ಕೆ ತರುತ್ತಿದ್ದೇನೆ. ಜಮೀನು ಖರೀದಿಸಿರುವ ರೈತರಿಗೆ ಆ ಹಣ ಸಂದಾಯ ಮಾಡಲಾಗಿದೆಯೇ, ಒಟ್ಟು, ರೈತರು, ಮೊತ್ತ, ವಿವರ, ಸಂದಾಯ ಮಾಡಿದ ಮೊತ್ತ ಮತ್ತು ರೈತರ ವಿವರಗಳು ಇರುವ ಅನುಬಂಧ ಲಗತ್ತಿಸಿದೆ. ರೈತರು ಯಾರು? ಒಂದು, ಎಸ್.ಎನ್.ಶ್ರೀನಿವಾಸ ಶೆಟ್ಟರು ಸನ್ ಆಫ್ ನಾರಾಯಣ ಶೆಟ್ಟಿ, ಭೂ ಮಾಲೀಕರು. ಅವರ ಚೆಕ್ ನಂಬರ್ ಡೇಟೆಡ್ 170/3, 181/1 2.3 ವಿಸ್ತೀರ್ಣ. 1.25 ಕೋಟಿ ರೂ.ತಿಪಟೂರಿನ ಒಂದು ಐಟಂಗೆ. ಎರಡನೇ ಐಟಂಗೆ ಶ್ರೀನಿವಾಸ ಶೆಟ್ಟಿ ಭೂ ಮಾಲೀಕರು, ಬಳುವನಹಳ್ಳಿ, ಇದರಲ್ಲಿ ಚೆಕ್ ನಂ.123/3 82/5 3 ಎಕರೆ 19ಗುಂಟೆ. 1.73 ಕೋಟಿ ಮೂರನೇ ಐಟಂ 3 ಎಕರೆ 19 ಗುಂಟೆಗೆ ಎಸ್.ಎನ್. ಶ್ರೀನಿವಾಸ ಶೆಟ್ಟಿ, ಭೂ ಮಾಲೀಕರು, ಹೊಸಪೇಟೆ. ಚೆಕ್ ನಂ. 132,302/1 107/4 ಇವೆಲ್ಲಾ ಚೆಕ್ ನಂಬರ್‌ಗಳು. 11.ಎಕರೆ 30ಗುಂಟೆ ಜಮೀನಿಗೆ 5 ಕೋಟಿ 98 ಲಕ್ಷ.ರೂ. ಮತ್ತೆ ಇನ್ನೊಬ್ಬ ಶ್ರೀನಿವಾಸ ಶೆಟ್ಟರು ಸಗಟೂರು ಚೆಕ್ ನಂ. 112,158,163,181 5 ಎಕರೆ 37 ಗುಂಟೆ ಎರಡು ಕೋಟಿ 96 ಲಕ್ಷ. ಇದೆಲ್ಲಾ ಶ್ರೀನಿವಾಸ ಶೆಟ್ಟರ ಹೆಸರಿಗೆ ಹೋಗುತ್ತದೆ. ಶ್ರೀನಿವಾಸ ಶೆಟ್ಟಿ ಸನ್ ಆಫ್ ನಾರಾಯಣ ಶೆಟ್ಟಿ, ಇವರು ಯಾರೆಂದರೆ ಬಿಜೆಪಿ ಸರ್ಕಾರದ ಮಾಜಿ ವಸತಿ ಸಚಿವರ ಸ್ವಂತ ಸಹೋದರ. ಭೂ ಮಾಲೀಕರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ, ಭೂ ಮಾಲೀಕರೇ ಅವರು? ಆರು ಲಕ್ಷ ರೂಪಾಯಿಗಳಿಗೆ ಒಂದು ಎಕರೆ 13ಗುಂಟೆ ಜಮೀನು ತೆಗೆದುಕೊಳ್ಳುತ್ತಾರೆ. ರೈತರ ಹೆಸರಿನಲ್ಲಿ 50 ಲಕ್ಷ ಹೊಡೆಯುತ್ತಾರೆ. ಇದು ಎರಡನೆಯದು. ರಮೇಶ್ ಬಿನ್ ಬೈರಪ್ಪ ರೆಡ್ಡಿ ಹೊಸಪೇಟೆ ಜಿಪಿಎ ಹೋಲ್ಡರ್ ಇವರು. ಶ್ರೀನಿವಾಸ ಬಿನ್ ಈರಪ್ಪ ಎಂದು ಮಾಲೀಕರು. 10 ದಿನಗಳ ಮುಂಚೆ ಜಿಪಿಎ ಮಾಡಿಕೊಂಡಿದ್ದಾರೆ. 50 ಲಕ್ಷ ರೂ. ದುಡ್ಡು ತೆಗೆದುಕೊಳ್ಳುವುದಕ್ಕೆ 10 ದಿನ ಜಿಪಿಎ ಹೋಲ್ಡರ್ ಆಗಿದ್ದಾರೆ. ಇದು ಒಂದು ಎಕರೆ ನಾಲ್ಕು ಗುಂಟೆ 67 ಲಕ್ಷ. ರೂಪಾಯಿಗಳು. ಇದೇ ರೀತಿ ರಮೇಶ ಬಿನ್ ಬೈರಾ ರೆಡ್ಡಿ ನೋಂದಾಯಿತ ಇವರು ಜಿಪಿಎ ಹೋಲ್ಡರ್. ನಾಗಣ್ಣ ಮತ್ತು ಜಂಗಣ್ಣ ಭೂ ಮಾಲೀಕರು ಇವರು ಬರೀ ಮೂರು ದಿವಸ ಜಿಪಿಎ ಹೋಲ್ಡರ್. ರಿಜಿಸ್ಟರ್ ಆಗಿಲ್ಲ. 10 ದಿನಕ್ಕೆ 10 ಕೋಟಿ ಲಾಭ. ಇದು ಸರ್ಕಾರವೋ ಏನೋ, ಇದು ಒಂದು ಭಾಗ, ಮಾನ್ಯ ಸಭಾಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿಮಗೆ ಎರಡು ಉದಾಹರಣೆ ಕೊಡುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಈ ರೀತಿಯ 200 ರಿಂದ 300 ಕೋಟಿ ವ್ಯವಹಾರ ಪತ್ರಿಕೆಯಲ್ಲಿ ಬಂದಾಗ ನೀವು ಈ ವಿಚಾರಣೆಗೆ ಅವಕಾಶ ಕೊಡಲಿಲ್ಲವೆಂದರೆ ಇನ್ನು ಯಾವುದಕ್ಕೆ ಅವಕಾಶ ಕೊಡುತ್ತೀರಿ? ಬೇಡವೆಂದು ಹೇಳಿ ಬಿಡಿ.

ಅಧ್ಯಕ್ಷರು: ಪ್ರಿಲಿಮಿನರಿ ಸಬ್ಮಿಷನ್ ಮಾಡಿ. ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ರೈತರಿಗೆ ಗೊಬ್ಬರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾಚಿಕೆ ಆಗುವುದಿಲ್ಲವಾ? ಮಾನ್ಯ ಅಧ್ಯಕ್ಷರೆ ದಯಮಾಡಿ ಅವಕಾಶ ಕೊಡಿ. ನಾನು ಇನ್ನು ಹೇಳುವುದು ಇದೆ,

ಅಧ್ಯಕ್ಷರು: ಮಾನ್ಯ ರೇವಣ್ಣರವರೇ, ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಂಡು ಬಂದಿದ್ದೀರಿ. ಪ್ರಿಲಿಮಿನರಿ ಸಬ್ಮಿಷನ್ ಮಾಡಿ ಮುಂದೆ ನಾನು ಯಾವ ನಿಯಾಮಾವಳಿ ಕೆಳಗೆ ಅವಕಾಶ ಕೊಡುತ್ತೇನೋ ಅದನ್ನು ನೋಡಿಕೊಂಡು ವಿಸ್ತಾರವಾಗಿ ಮಾತನಾಢುವುದಕ್ಕೆ ಅವಕಾಶ ಇದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಇನ್ನು ಮುಗಿಸಿಲ್ಲ. ತಮಗೆ ಮನವರಿಕೆ ಮಾಡಿ ಕೊಡುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಅನಧಿಕೃತವಾಗಿ ಸರ್ಕಾರದ ದುಡ್ಡನ್ನು ಉಪಯೋಗಿಸಿಕೊಂಡು ರಿಯಲ್ ಎಸ್ಟೇಟ್ ರೂಪದಲ್ಲಿ ಮಾಡಿರುವಂತಹ ಅವ್ಯವಹಾರ. ಇದರಲ್ಲಿ ಸುಮಾರು 300 ರಿಂದ 400 ಕೋಟಿ ಅವ್ಯವಹಾರವಾಗಿದೆ. ಅವರ ದುಡ್ಡಿನಲ್ಲಿ ಯಾವ ರೀತಿ ರಿಯಲ್ ಎಸ್ಟೇಟ್ ವ್ಯವಹಾರ ಹೊರಗಡೆ ಮಾಡುತ್ತಾರೆ, ಅದೇ ರೀತಿ ಸರ್ಕಾರದ ದುಡ್ಡು ಉಪಯೋಗಿಸಿಕೊಂಡು ಅವರ ತಮ್ಮನ ಹೆಸರಿನಲ್ಲಿ ಆರು ಲಕ್ಷಕ್ಕೆ ಭೂಮಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಚರ್ಚೆ ಮಾಡಲಿ, ಉತ್ತರ ಕೊಡುತ್ತೇವೆ. ಇದು ಯಾವ ಸ್ಟೇಜ್‌ನಲ್ಲಿದೆ? ಅವರು ಪ್ರಿಲಿಮಿನರಿ ಸಬ್ಮಿಷನ್ ಮಾಡಿ ನಿಯಮ 60ರ ಅಡಿಯಲ್ಲಿ ತಮ್ಮ ಅನುಮತಿ ಕೇಳುವುದಕ್ಕೋಸ್ಕರ ಮಾತನಾಡುತ್ತಿದ್ದಾರೆ....

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಯಮ 60ರ ಅಡಿಯಲ್ಲಿ ಅವರ ಅನುಮತಿ ಕೇಳುತ್ತಿದ್ದೇವೆ. ನಿಯಮ 60 ರ ಅಡಿಯಲ್ಲಿ ನಿಲುವಳಿ ಸೂಚನೆ ರೂಪದಲ್ಲಿ ಅನುಮತಿ ಕೊಡಿ ಎಂದು ಅವರ ಅನುಮತಿಯನ್ನು ಕೇಳುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರು ತೀರ್ಮಾನ ತೆಗೆದು ಕೊಳ್ಳಬೇಕು. ಅವಕಾಶ ಮಾಡಿಕೊಟ್ಟರೆ ನಾವು ಮಾತನಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಹಗರಣ ಏನೇ ಆಗಿರಲಿ, ರೈತರಿಗೆ ಆಗಿರುವ ಅನ್ಯಾಯವನ್ನು ಸಬ್ಮಿಷನ್ ಮಾಡುತ್ತಿದ್ದಾರೆ. ಅವ್ಯವಹಾರ, ಹಗರಣ, ಭ್ರಷ್ಟಾಚಾರ ಏನೇ ಆದರೂ ರೈತರಿಗೆ ಏನು ಅನ್ಯಾಯವಾಗಿದೆ, ಯಾರಿಂದ ಅನ್ಯಯವಾಗಿದೆ, ಎಂಬ ವಿಚಾರವನ್ನು ಸಬ್ಮಿಷನ್ ಮಾಡುತ್ತಿದ್ದಾರೆ. ಸಬ್ಮಿಷನ್ ಮಾಡಿದ ಮೇಲೆ ನೀವು ಉತ್ತರ ಕೊಡಿ. ಅವ್ಯವಹಾರ ಆಗಿದೆ ಎಂದು ಹೇಳಿ, ಇಲ್ಲ ಅವ್ಯವಹಾರ ಆಗಿಲ್ಲವೆಂದು ಹೇಳಿ.

ಶ್ರೀ ಎಸ್.ಸುರೇಶ್ ಕುಮಾರ್: ಸಭಾಧ್ಯಕ್ಷರು ನಿಯಮಾವಳಿ ಪ್ರಕಾರ ಬರುತ್ತದೆ, ನೀವು ಮಾತನಾಡಿ ಎಂದು ಹೇಳಿದ ಮೇಲೆ ಇವೆಲ್ಲಾ ಹೇಳಬೇಕು.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅವರು ಇನ್ನು ಸಬ್ಮಿಷನ್ ಮಾಡುತ್ತಿದ್ದಾರೆ ನೀವು ಅನುಮತಿ ಕೊಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಪ್ರಿಲಿಮಿನರಿ ಸಬ್ಮಿಷನ್ ಮಾಡುತ್ತಿದ್ದೇವೆ, ಸರ್ಕಾರ ಭಾಗಿ ಆಗಿದೆ ಎಂದು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು: ಪ್ರಿಲಿಮಿನರಿ ಸಬ್ಮಿಷನ್ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡುವುದು ಇಷ್ಟೆ. ದಯಮಾಡಿ ಕಾನೂನು ಸಚಿವರು ದಿಕ್ಕು ತಪ್ಪಿಸುವುದಕ್ಕೆ ಹೋಗುವುದು ಬೇಡವೆಂದು ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ ಇದು ನನ್ನ ಪ್ರಶ್ನೆ ಅಲ್ಲ. ನಮ್ಮ ರೈತಾಪಿ ಜನ ಇವತ್ತು ಬೆವರು ಸುರಿಸಿ ಎಕರೆಗೆ 1 ಎಕರೆ 13 ಗುಂಟೆಗೆ 6ಲಕ್ಷ 50,000 ದುಡ್ಡು ಕೊಟ್ಟು ಬರೀ 10 ದಿವಸಗಳಲ್ಲಿ ಒಂದು ಲಕ್ಷ 17,000 ತೆಗೆದುಕೊಳ್ಳುತ್ತಾರೆ. ಆ ವಿಷಯವನ್ನು ನಾನು ಹೇಳಬೇಕಾಗುತ್ತದೆ. ನಿಮಗೆ ಮನವರಿಕೆ ಮಾಡಿದ ಮೇಲೆ ನಿಯಮ 60 ರ ಕೆಳಗೆ ತೆಗೆದುಕೊಳ್ಳಬೇಕು. ಏಕೆಂದರೆ ಇವತ್ತು ಪತ್ರಿಕೆಯಲ್ಲಿ ಬಂದಿದೆ, ರಾಜ್ಯದ ಜನತೆ ನೋಡುತ್ತಿದ್ದಾರೆ. ವಿರೋಧ ಪಕ್ಷ ಇದೆಯೋ ಸತ್ತಿದೆಯೋ ಎಂದು ನಾಳೆ ಕೇಳಿದರೆ ನಾವು ಉತ್ತರ ಏನು ಹೇಳಲಿ? ಸರ್ಕಾರಕ್ಕೆ ಹಾಗೂ ಕಾನೂನು ಸಚಿವರಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇದೆ. ಸಭಾ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳಿಗೆ ಶಕ್ತಿ ಇದೆ. ಹೊಸದಾಗಿ ನಮ್ಮ ವಸತಿ ಸಚಿವರು ಬಂದಿದ್ದಾರೆ. ಅವರಿಗೂ ಇದಕ್ಕೆಲ್ಲಾ ಉತ್ತರ ಕೊಡುವ ಶಕ್ತಿ ಇದೆ. ಅವರಿಗೆಲ್ಲಾ ಉತ್ತರ ಕೊಡುವ ಶಕ್ತಿ ಇರುವಾಗ ಕಾನೂನು ಸಚಿವರು ಏಕೆ ಹೀಗೆ ಮಾಡುತ್ತಾರೆ? ರೈತರ ಬಗ್ಗೆ ಅವರಿಗೆ ಕಾಳಜಿ ಇಲ್ಲವಾ?

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ರೇವಣ್ಣರವರೆ, ಯಾರಿಗೋ ಕಾಳಜಿ ಎಂದು ದಯವಿಟ್ಟು ಹೀಗೆ ಮಾತನಾಡಬೇಡಿ. ರೈತರ ಬಗ್ಗೆ ಕಾಳಜಿ ಇಡುವುದಕ್ಕೆ ನೀವು ಒಬ್ಬರೇ ಗುತ್ತಿಗೆ ತೆಗೆದುಕೊಂಡಿದ್ದೀರಾ? ನಮ್ಮ ಕರ್ತವ್ಯ ಇದೆ, ಸದನಕ್ಕೆ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತೆಗೆದುಕೊಂಡು ಬನ್ನಿ. . .

ಶ್ರೀ ಹೆಚ್.ಸಿ.ಬಾಲಕೃಷ್ಣ: ಯಾರು ಗುತ್ತಿಗೆ ತೆಗೆದುಕೊಂಡಿದ್ದಾರೆಂದು ಗೊತ್ತಾಗಲಿ. ಒಂದು ಎಕರೆಯಲ್ಲಿ 40 ಲಕ್ಷ ರೂ. ಹೊಡೆದಿದ್ದಾರೆ. ಯಾರು ಗುತ್ತಿಗೆ ತೆಗೆದುಕೊಂಡಿದ್ದಾರೆ?

: ಗೊಂದಲ :

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸರ್ಕಾರದವರು involve ಆಗಿದ್ದಾರೆ, ಕುಳಿತುಕೊಳ್ಳಿ

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ನಾನು ಬಾಲಕೃಷ್ಣರವರಿಗಾಗಲಿ, ಮತ್ತೊಬ್ಬರಿಗೆ ಮಾತನಾಡುತ್ತಿಲ್ಲ. ಅಧ್ಯಕ್ಷರ ಮುಖಾಂತರ ನಾನು ಮಾತನಾಡುತ್ತಿದ್ದೇನೆ. ಪತ್ರಿಕೆಗಳಲ್ಲಿ ಹಿಂದಿನ ಸರ್ಕಾರದ ವಿಷಯಗಳು ನೂರಾರು ಬಂದಿವೆ. ಇವೆಲ್ಲಾ ನಿಜವೇ? ಎಲ್ಲಾ ನಿಜವೆಂದು ಆಗುತ್ತದಾ? ಅಧ್ಯಕ್ಷರು ನೀವು ಯಾವ ನಿಯಮದಲ್ಲಿ

ಚರ್ಚೆ ಮಾಡಬೇಕೆಂದು ಅನುಮತಿ ಕೊಡಿ. ನಂತರ ಅವರು ಮಾತನಾಡಲಿ. ನಾವು ಅವರು ಮಾತನಾಡುವುದು ಬೇಡವೆಂದು ಹೇಳುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಂತ್ರಿಗಳು ಅವರ ಇಲಾಖೆಯಲ್ಲಿ ಕೊಟ್ಟಿರತಕ್ಕಂತಹ ಉತ್ತರ ಇಲ್ಲಿದೆ. ಸರ್ಕಾರ ನೇರವಾಗಿ ಇದರಲ್ಲಿ involve ಆಗಿದೆ.

ಶ್ರೀ ಎಂ.ಶ್ರೀನಿವಾಸ್(ರಾಜ ರಾಜೇಶ್ವರಿ ನಗರ):- ಜನರು ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇವರು ಹೇಳಿದಂತೆ ರಾಜೀನಾಮೆ ಕೊಡುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಅಧ್ಯಕ್ಷರು ಅನುಮತಿ ಕೊಟ್ಟಮೇಲೆ ಅವರು ಹೇಳುವುದನ್ನು ಹೇಳಲಿ. ಆಮೇಲೆ ಅದಕ್ಕೆ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆ. ನಿನ್ನೆಯೂ ಕೂಡ ಹೀಗೆಯೇ ಮಾಡಿದರು. ಮಾತೆತ್ತಿದರೆ ಆ ಮಂತ್ರಿಗಳು ರಾಜೀನಾಮೆ ಕೊಡಲಿ, ಈ ಮಂತ್ರಿಗಳು ರಾಜೀನಾಮೆ ಕೊಡಲಿ ಎಂದು ಹೇಳುತ್ತಿದ್ದರು. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮಾತನಾಡಿ. ಯಾರು ಬೇಡವೆಂದು ಹೇಳುತ್ತಾರೆ?

ಶ್ರೀ ಹೆಚ್.ಸಿ.ಬಾಲಕೃಷ್ಣ: ಅವರನ್ನೇ ನಾವು ಕೇಳುತ್ತಿದ್ದೇವೆ ಸ್ವಾಮಿ.

ಅಧ್ಯಕ್ಷರು:- ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಬಾಲಕೃಷ್ಣರವರೆ, ಒಂದು ನಿಮಿಷ ಇರಿ. ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಈ ರೀತಿ ಮಾತನಾಡಿದರೆ ನೀವು ಕ್ಷಮೆ ಕೇಳಬೇಕಾಗುತ್ತದೆ. ಹದ್ದುಮೀರಿ ನೀವು ಈ ರೀತಿ ಮಾತನಾಡಬಾರದು. ಇತಿಮಿತಿ ಅರಿತು ಮಾತನಾಡಬೇಕು. ಮಾನ್ಯ ಅಧ್ಯಕ್ಷರೆ, ಈ ರೀತಿ ಮಾತನಾಡಿರುವುದಕ್ಕೆ ಅವರು ಕ್ಷಮೆ ಕೇಳಬೇಕು, ಇಲ್ಲದಿದ್ದರೆ ಪ್ರೂವ್ ಮಾಡಬೇಕು. ಇಷ್ಟು ಹಗುರವಾಗಿ ಮಾತನಾಡಬಾರದು. ನೀವು ಅಧಿಕಾರದಲ್ಲಿದ್ದಾಗ ಲೂಟಿ ಮಾಡಿರುವುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು:- ಬಾಲಕೃಷ್ಣರವರೆ, ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ? ನೋಡಿ, ನೀವು ಈ ರೀತಿಯಾಗಿ ಸದನದಲ್ಲಿ ಬೇಜವಾಬ್ದಾರಿಯಿಂದ ಆಪಾದನೆ ಮಾಡುವಂಥದ್ದು ಸರಿಯಲ್ಲ. ನೀವು ಯಾರ ಮೇಲಾದರೂ ಆಪಾದನೆ ಮಾಡುವುದಿದ್ದರೆ ನಿಮ್ಮ ನಿಲುವಳಿ ಸೂಚನೆಯಲ್ಲಿ mention ಮಾಡಬೇಕಾಗಿತ್ತು. ಆದರೆ ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಎಂಬುದನ್ನು ಮೊದಲು ನೀವು ಓದಿ. ನಿಮ್ಮ ನಿಲುವಳಿ ಸೂಚನೆಯಲ್ಲಿ ಯಾರ ಮೇಲಾದರೂ ಆಪಾದನೆ ಮಾಡುವ ಬಗ್ಗೆ ಎಲ್ಲಿ ತಿಳಿಸಿದ್ದೀರಿ? ನಿಮ್ಮ ನಿಲುವಳಿ ಸೂಚನೆಯಲ್ಲಿ ಈ ರೀತಿ ಇಲ್ಲ. ಹೀಗಿರುವಾಗ ಈ ರೀತಿಯಲ್ಲಿ ಆಪಾದನೆ ಮಾಡುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ

ಮಾತನಾಡುತ್ತೀರಲ್ಲ. ಅವರ ಬಗ್ಗೆ ಮಾತನಾಡುತ್ತೇವೆಂದು ಎಲ್ಲಿ ನಿಮ್ಮ ನಿಲುವಳಿ ಸೂಚನೆಯಲ್ಲಿ ತಿಳಿಸಿದ್ದೀರಿ?

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಹೇಳಿರುವ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:- ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಎಂಬುದನ್ನು ನೀವು ನೋಡಿ. ನೀವು ಈ ರೀತಿಯಾಗಿ ಬೇಜವಾಬ್ದಾರಿಯಿಂದ ಹೇಳಿಕೆ ಕೊಡುವುದರ ಸರಿಯಲ್ಲ. ನೋಡಿ, ಈಗ ರೇವಣ್ಣನವರೂ ಕೂಡ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ಬಾಲಕೃಷ್ಣರವರೆ, ನೀವು ಮೊದಲು ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳಿ. ನಿಮಗಿಂತ ಮೊದಲು ರೇವಣ್ಣನವರು ಮಾತನಾಡುತ್ತಿದ್ದರು. ಅವರೇನಾದರೂ ಇದರ ಬಗ್ಗೆ ನಿಮ್ಮ ರೀತಿ ಹೇಳಿದರೇನು? ಆದುದರಿಂದ ಬಾಲಕೃಷ್ಣರವರೆ, ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಎಂಬುದನ್ನು ನೀವು ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಬಾಲಕೃಷ್ಣರವರು ಏನು ಮಾತನಾಡಿದ್ದಾರೆ ಅದನ್ನು ನಾನು ಕಡತದಿಂದ ತೆಗೆಸುತ್ತೇನೆ. ಸದನದಲ್ಲಿ ಹಿಂದಿನ ಮುಜರಾಯಿ ಮಂತ್ರಿಗಳ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ ಏನೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಕಡತದಿಂದ ತೆಗೆದು ಹಾಕಲಾಗಿದೆ. ಆದುದರಿಂದ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು:- ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ, ಇಲ್ಲಿ ಈಗ ಮಾತನಾಡಿದ್ದು ಯಾವುದೂ ಕೂಡ ದಾಖಲೆಗೆ ಹೋಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಆಧಾರರಹಿತವಾಗಿ ಅವರು ಏನು ಮಾತನಾಡಿದ್ದಾರೆ, ಅದಕ್ಕಾಗಿ ಅವರು ಕ್ಷಮೆ ಕೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಅವರು ಈಗಾಗಲೇ ಏನು ನಮ್ಮ ಬಗ್ಗೆ ಹೇಳಿದ್ದಾರೆ, ಅದಕ್ಕಾಗಿ ಅವರು ಕ್ಷಮೆ ಕೇಳಬೇಕು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಈ ರೀತಿ ಮಾತನಾಡಿರುವುದಕ್ಕೆ ಕ್ಷಮೆ ಕೇಳಿ ತದನಂತರ ಮಾತನಾಡಿ. ನಿಮ್ಮ ಇತಿಹಾಸ ಗೊತ್ತಿದೆ. ನಿಮ್ಮ ಇತಿಹಾಸ ಗೊತ್ತಿದೆ. ನೀವು ಮಾಡಿರುವ ಹಗರಣಗಳು ಒಂದಲ್ಲ, ಎರಡಲ್ಲ, ಇಡೀ ರಾಜ್ಯಕ್ಕೆ ನಿಮ್ಮ ಇತಿಹಾಸ ಗೊತ್ತಿದೆ. ಯಾವ ನೈತಿಕ ಹಕ್ಕಿದೆ ನಿಮಗೆ ಮಾತನಾಡುವುದಕ್ಕೆ? ಆಧಾರರಹಿತವಾಗಿ ಮಾತನಾಡಿದ್ದೀರಿ. ನೀವು ಈ ರೀತಿ ಆಪಾದನೆ ಮಾಡುವುದಕ್ಕೆ ಯಾವ ನೋಟಿಸ್ ಕೊಟ್ಟಿದ್ದೀರಿ? ನೋಟಿಸ್ ಕೊಡದೆಯೇ ಆಧಾರರಹಿತವಾಗಿ ಈ

ರೀತಿ ಮಾತನಾಡಿರುವುದು ಇದು ನಿಮ್ಮ ಬೇಜವಾಬ್ದಾರಿಯ ಪರಮಾವಧಿಯಾಗಿದೆ. ಸದನದಲ್ಲಿ ಈ ರೀತಿ ನಡೆಯುವುದಕ್ಕೆ ನಾವು ಬಿಡುವುದಿಲ್ಲ. ಈ ರೀತಿಯ ದುಂಡಾವೃತ್ತಿ ನಡೆಯುವುದಕ್ಕೆ ನಾವು ಬಿಡುವುದಿಲ್ಲ. ಈ ಸದನ ಕಾನೂನು ಪ್ರಕಾರವಾಗಿ ನಡೆಯಬೇಕು.

(ಸದನದಲ್ಲಿ ಜೆ.ಡಿ.ಎಸ್. ಹಾಗೂ ಬಿ.ಜೆ.ಪಿ. ಯ ಹಲವಾರು ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳನ್ನು ಬಿಟ್ಟು ಮಾತನಾಡುತ್ತಿದ್ದರು)

ಅಧ್ಯಕ್ಷರು:– ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಮಗೆ ಹೇಳುವುದಕ್ಕೆ ಅವಕಾಶ ಕೊಡಿ. ಈ ರೀತಿಯಾದರೆ ನಮಗೂ ಹೇಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಏನಾದರೂ ಹೇಳುವುದಿದ್ದರೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು:– ಬಾಲಕೃಷ್ಣರವರೆ, ನೀವು ಮಾತನಾಡುವಾಗ ನಿಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಮಾತನಾಡಬೇಕು. ನೀವು ಯಾರ ಮೇಲಾದರೂ ಆಪಾದನೆ ಮಾಡುವುದಿದ್ದರೆ ಆ ಬಗ್ಗೆ ಮೊದಲೇ ನೀವು ನಿಮ್ಮ ನೋಟಿಸ್‌ನಲ್ಲಿ ತಿಳಿಸಬೇಕಾಗುತ್ತದೆ. ಆ ರೀತಿ ನೀವು ನಿಮ್ಮ ನಿಲುವಳಿ ಸೂಚನೆಯಲ್ಲಿ ತಿಳಿಸದೇ ಈ ರೀತಿ ಮಾತನಾಡುವುದು ಸರಿಯಲ್ಲ. ಈಗ ನಿಮಗೆ ಮೊದಲೇ ರೇವಣ್ಣನವರು ಮಾತನಾಡಿದರು. ಅವರೇನಾದರೂ ನಿಮ್ಮ ರೀತಿಯಲ್ಲಿ ಮಾತನಾಡಿದರೆ ಹೇಳಿ. ತಾವೊಬ್ಬ ಗೌರವಾನ್ವಿತ ಸದಸ್ಯರಾಗಿ ಈ ರೀತಿ ಮಾತನಾಡಿರುವುದು ಸರಿಯಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟರೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಿದ್ದೇನೆ.

(ಸದನವನ್ನು ಹತ್ತು ನಿಮಿಷಗಳ ಕಾಲಕ್ಕೆ ಸೀಮಿತವಾಗಿ ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಂದೂಡಲಾಯಿತು.)

ಸದನವು ಪುನಃ ಮಧ್ಯಾಹ್ನ 1–45 ಗಂಟೆಗೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಪ್ರಕಟಣೆ

ಅಧ್ಯಕ್ಷರು: ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರಾದ ಶ್ರೀ ಉಮೇಶ್ ವಿ. ಕತ್ತಿಯವರು ಮಾನ್ಯ ಶಾಸಕರ ಗೌರವಾರ್ಥ ವಿಧಾನಸೌಧದ Banquet Hall

ನಲ್ಲಿ ಮಧ್ಯಾಹ್ನ ಭೋಜನ ಕೂಟವನ್ನೇರ್ಪಡಿಸಿದ್ದಾರೆ. ದಯವಿಟ್ಟು ಆ ಭೋಜನಕೂಟಕ್ಕೆ ಎಲ್ಲರೂ ಬರಬೇಕೆಂದು ಆಹ್ವಾನ ಕೊಟ್ಟಿದ್ದಾರೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ಪುನಃ ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳುವುದು

(ಸದನವು ಮಧ್ಯಾಹ್ನ 1–46 ಗಂಟೆಗೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 3.50 ಗಂಟೆಗೆ ಪ್ರಾರಂಭವಾಯಿತು.

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಈಗ ಹೆಚ್.ಸಿ.ಬಾಲಕೃಷ್ಣರವರು ಹೇಳಿದಂತೆ...

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಪಾಟೀಲರೆ, ನೀವು ಕುಳಿತುಕೊಳ್ಳಿ, ದಯಮಾಡಿ ಮಾತನಾಡಬೇಡಿ, ಕುಳಿತುಕೊಳ್ಳಿ

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಶ್ರೀ ಸಿ.ಸಿ.ಪಾಟೀಲ್: ಅವರು ಕ್ಷಮೆ ಕೇಳಬೇಕು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:. ಮಾನ್ಯ ಅಧ್ಯಕ್ಷರೇ, ನಾವು ಏಕೆ ಕ್ಷಮೆ ಕೇಳಬೇಕು. ಕಟ್ಟಾ ಸುಬ್ರಹ್ಮಣ್ಯನಾಯ್ಡುರವರೇ ನಿಮಗೇನು ದೊಡ್ಡ ಖಾತೆ ಕೊಟ್ಟಿಲ್ಲ ಸುಮ್ಮನಿರಿ, ಮಾತನಾಡಬೇಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು: ನಾನು ನಿಮ್ಮ ಹತ್ತಿರ ಅರ್ಜಿ ಹಾಕಿಕೊಂಡು ಬಂದಿದ್ದೇನೆಯೇ? ಅಥವಾ ನನಗೆ ಶಿಫಾರಸ್ಸು ಮಾಡಿ ಎಂದು ಹೇಳಿದ್ದೇನೆಯೇ? ನಾನು ಏನು ಹೇಳಿದೆ, ಅವರು ಸಿ.ಬಿ.ಐ.ಗೆ ಹಾಕಿ ಅಂದರೆ ..

(ಗೊಂದಲ)

ಅಧ್ಯಕ್ಷರು: ನೀವು ಪರಸ್ಪರ ಹೀಗೆ ಮಾತನಾಡುವುದು ಸರಿಯಲ್ಲ, ನೀವು ಮಾತನಾಡುವ ಮೊದಲು ನನ್ನ ಅನುಮತಿ ಪಡೆದು ಮಾತನಾಡಬೇಕು. ಇದು ಸರಿಯಲ್ಲ, ಇದು ಸದನ, ಇದು ಒಳ್ಳೆಯ ಸಂಪ್ರದಾಯವಲ್ಲ. ಮಧ್ಯದಲ್ಲಿ ಮಾತನಾಡುವುದು ಒಳ್ಳೆಯದಲ್ಲ. ಈಗ ಏಕೆ ಆ ಸಬ್ಜೆಕ್ಟ್ ತೆಗೆಯುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಕೋರಮಂಗಲ ಕ್ರೀಡಾ ಗ್ರಾಮಕ್ಕೆ ಕೆಲವು ಸಿ.ಬಿ.ಐ. ತನಿಖೆ ಮಾಡಿಸಿದ್ದಾರೆಯೇ ಎಂದೆ, ನಾನು ಬೇರೆ ಏನೂ ಹೇಳಿಲ್ಲ.

ಅಧ್ಯಕ್ಷರು: ನಾಯ್ಡುರವರೇ diversion ಮಾಡಬೇಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್‌ನಲ್ಲಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದರೆ ನಾವೇನಾದರೂ ಒಪ್ಪಬಹುದಾಗಿತ್ತು. ಇದು ಸರ್ಕಾರಿ ಆದೇಶ ಸಂ: 32 ಗೃಹಮಂಡಲಿ,...

(ಗೊಂದಲ)

ಅಧ್ಯಕ್ಷರು: ಸಬ್ಜೆಕ್ಟ್ ಬಗ್ಗೆ ಮಾತನಾಡುವ ಮೊದಲು ನೀವು ಬಾಲಕೃಷ್ಣರವರ statement ಬಗ್ಗೆ ಕ್ಲಿಯರ್ ಮಾಡಿ ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಕಾಪಿಗಳನ್ನು ತೆಗೆಸಿ ನೋಡಿದ್ದೇನೆ. ಅದರಲ್ಲಿ ಬಾಲಕೃಷ್ಣರವರು ಮಾತನಾಡಿರುವುದನ್ನು ಹಾಗೂ ಮುಖ್ಯಮಂತ್ರಿಗಳು ಮಾತನಾಡಿರುವುದನ್ನು ನೋಡಿದ್ದೇನೆ. ಅದರ ಬಗ್ಗೆ ಮಾತನಾಡಿಬಿಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಪದೇ ಪದೇ ಈ ರೀತಿ ಗೊಂದಲ ಆದರೆ ಮಾತನಾಡಲಿಕ್ಕೆ ಆಗುವುದಿಲ್ಲ.

ಒಬ್ಬ ಮಾನ್ಯಸದಸ್ಯರು: ಒಳಗೆ ಏನು ಮಾತುಕತೆ ಆಗಿದೆ ಅದನ್ನು ಅವರು ಹೇಳಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಬಾಲಕೃಷ್ಣ ಕ್ಷಮೆ ಕೇಳಬೇಕು ಎಂದು ಹೇಳುವುದು ಒಳ್ಳೆಯದಲ್ಲ, ನಮಗೆ ಹೀಗೆ ಮಾತನಾಡಿ ಕ್ಷಮೆ ಕೇಳಿ ಎಂದು ಹೇಳುವುದು ಒಳ್ಳೆಯದಲ್ಲ ಅಧ್ಯಕ್ಷರೇ, ದಯಮಾಡಿ ನೀವು ಅವರಿಗೆ ಹೇಳಬೇಕು. ನೀವು ಹೀಗೆ ಮಾಡಿ, ಹೀಗೆ ಮಾತನಾಡಿ ಎಂದು ಬರೆದುಕೊಟ್ಟು ಬಿಡಿ, ಅದನ್ನು ಓದಿಬಿಡುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಅಧ್ಯಕ್ಷರು: ಪ್ಲೀಸ್, ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ರೇವಣ್ಣರವರಿಗೆ ಮಾತನಾಡಲಿಕ್ಕೆ ಹೇಳಿದ್ದೀರಿ. ಆ ಕಡೆ ಎಲ್ಲರೂ ಎದ್ದು ನಿಂತರೆ ಈ ಸದನ ನಡೆಸಲಿಕ್ಕೆ ಆಗುವುದಿಲ್ಲ, ಇದು ಸರಿಯಲ್ಲ, ಎಲ್ಲರೂ ಒಟ್ಟಿಗೆ ನಿಂತರೆ ಸದನ ನಡೆಸಲಿಕ್ಕೆ ಆಗುವುದಿಲ್ಲ, ನಿಯಮಾನುಸಾರ ಈ ಸದನ ನಡೆಯಬೇಕು. ಈ ರೀತಿ ಎಲ್ಲರೂ ಒಟ್ಟಿಗೆ ಎದ್ದು ನಿಂತರೆ ಸದನ ನಡೆಸುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಸುರೇಶ್ ಕುಮಾರ್: ಆಯಿತ್ತು, ರೇವಣ್ಣನವರು ಮಾತನಾಡಲಿ, ನೀವು ಕುಳಿತುಕೊಳ್ಳಿ.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ಅವರು ಮಾತನಾಡಲಿ. ಆಮೇಲೆ ನೀವು ಮಾತನಾಡಿ. ಪ್ಲೀಸ್. ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ: ಸನ್ಮಾನ್ಯ ಮುಖ್ಯಮಂತ್ರಿಗಳು, ಸಭಾ ನಾಯಕರು ಬಾಲಕೃಷ್ಣರವರಿಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "ಈ ರೀತಿ ಮಾತನಾಡಿದರೆ ನೀವು ಕ್ಷಮೆ ಕೇಳಬೇಕಾಗುತ್ತದೆ, ಹದ್ದುಮೀರಿ ನೀವು ಈ ರೀತಿ ಮಾತನಾಡಬಾರದು, ಇತಿಮಿತಿ ಅರಿತು ಮಾತನಾಡಬೇಕು. ಮಾನ್ಯ ಅಧ್ಯಕ್ಷರೆ, ಈ ರೀತಿ ಮಾತನಾಡಿರುವುದಕ್ಕೆ ಅವರು ಕ್ಷಮೆ ಕೇಳಬೇಕು, ಇಲ್ಲದಿದ್ದರೆ prove ಮಾಡಬೇಕು. ಇಷ್ಟು ಹಗುರವಾಗಿ ಮಾತನಾಡಬಾರದು. ನೀವು ಅಧಿಕಾರದಲ್ಲಿದ್ದಾಗ ಲೂಟಿ ಮಾಡಿರುವುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ." ನಾವೇನು ಲೂಟಿ ಮಾಡಿದ್ದೇವೆಂದು ಅವರು ಹೇಳಲಿ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್: ಅಧ್ಯಕ್ಷರೇ, ಅದಕ್ಕಿಂತ ಮೊದಲು ಬಾಲಕೃಷ್ಣರವರು ಏನು ಮಾತನಾಡಿದರು ಅದನ್ನು ಹೇಳಿ, ಇದು ಸರಿಯಲ್ಲ, ಮೊದಲು ಏನು ಮಾತನಾಡಿದರೂ ಅದರ ಬಗ್ಗೆ ಹೇಳಲಿ. ಕೊಠಡಿಯಲ್ಲಿ ಏನು ಮಾತುಕತೆ ಆಗಿದೆ ಅದನ್ನು ಹೇಳಲಿ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಹೇಳಿಕೆ ಓದುವುದು ಸರಿಯಲ್ಲ. Revanna is misleading the house.

ಶ್ರೀ ಎಂ.ಶ್ರೀನಿವಾಸ್: ಒಳಗೆ ಏನು ಮಾತನಾಡಿಕೊಂಡಿದ್ದೀರಿ ಅದನ್ನು ಸದನಕ್ಕೆ ಹೇಳಿ, ಇಲ್ಲಿ ಭಾಷಣ ಮಾಡಬೇಡಿ. ಅಧ್ಯಕ್ಷರು ಏನು ಆದೇಶ ಕೊಟ್ಟಿದ್ದಾರೆ, ಏನು ಮಾತನಾಡಬೇಕು ಅದನ್ನು ಹೇಳಿ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್: ಮುಖ್ಯಮಂತ್ರಿಯವರು ಹೇಳಿದ್ದನ್ನೇ ಹೇಳುತ್ತಿದ್ದಾರೆ, ಬಾಲಕೃಷ್ಣರವರು ಹೇಳಿದ್ದನ್ನು ಹೇಳಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಈ ರೀತಿಯಾದರೆ ಸದನ ನಡೆಸಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಆಯಿತು, ಈ ರೀತಿಯಾದರೆ ಸದನ ನಡೆಸಲಿಕ್ಕೆ ಆಗುವುದಿಲ್ಲ. ಎಲ್ಲಾ ಶಾಸಕರು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ: ನಮ್ಮ ವಿರೋಧ ಪಕ್ಷದ ಸದಸ್ಯರು ಏನು ಮಾತನಾಡುತ್ತಾರೆಂದು ತಿಳಿದುಕೊಂಡು ಆಮೇಲೆ ಆಡಳಿತ ಪಕ್ಷದ ಶಾಸಕರು ಕೂಲಂಕಷವಾಗಿ ಹೇಳಲಿ. ನೀವು ಅಧಿಕಾರದಲ್ಲಿದ್ದಾಗ ಈ ರಾಜ್ಯದಲ್ಲಿ ಲೂಟಿ ಮಾಡಿರುವುದು ಗೊತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳಿದಾಗ ಬಾಲಕೃಷ್ಣ ಅವರು ತಮ್ಮ ಭಾವನೆ ವ್ಯಕ್ತಪಡಿಸಿದ್ದು ಇಲ್ಲಿದೆ, "ಇದೊಂದು ಭಾರಿ ಭ್ರಷ್ಟಾಚಾರದ

ಹಗರಣವಾಗಿದೆ. ಇದರಲ್ಲಿ ಎಲ್ಲೋ ಒಂದು ಕಡೆ ಕೃಷ್ಣಯ್ಯಶೆಟ್ಟಿಯವರಿಂದ ರಾಜೀನಾಮೆಯನ್ನು ತೆಗೆದುಕೊಂಡಿದ್ದಾರೆ, ಏಕೆಂದರೆ ಸದನದಲ್ಲಿ ಮುಂದೆ ಈ ವಿಷಯ ಪ್ರಸ್ತಾಪವಾಗುತ್ತದೆ ಮತ್ತು ಅವತ್ತು ರಾಜೀನಾಮೆಯನ್ನು ತೆಗೆದುಕೊಳ್ಳಬೇಕಾಗುತ್ತದೆಂಬ ಉದ್ದೇಶವನ್ನಿಟ್ಟುಕೊಂಡೆ ಮೊದಲೇ ಅವರಿಂದ ರಾಜೀನಾಮೆಯನ್ನು ಬುದ್ಧಿವಂತಿಕೆಯಿಂದ ತೆಗೆದುಕೊಂಡಿದ್ದಾರೆ. ಎಲ್ಲೋ ಒಂದು ಕಡೆ ಮುಖ್ಯಮಂತ್ರಿಗಳೂ ಕೂಡ ಇದರ ಹಿಂದೆ ಇದ್ದಾರೆಂದು ನಮ್ಮ ಭಾವನೆ ಬರುತ್ತಿದೆ" ಎಂದು ಹೇಳಿದ್ದಾರೆ. ಅವರು ಮಾಡುತ್ತಿದ್ದಾರೆಂದು ಹೇಳಿಲ್ಲ.

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ಕೃಷ್ಣಪ್ಪನವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ಸದನದಲ್ಲಿ ಸಭಾ ನಾಯಕರು ಹಾಗೂ ಮುಖ್ಯಮಂತ್ರಿಗಳೂ ಇದ್ದಾರೆ. ಈಗ ಎಲ್ಲಾ ಶಾಸಕರು ಈ ರೀತಿ ಎದ್ದು ನಿಂತರೆ ವಿರೋಧ ಪಕ್ಷದಲ್ಲಿ ಇದ್ದುಕೊಂಡು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: Why the Leader of House is there? He has to advise, he has to guide the House and he has to assist the Speaker.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿ ಎಲ್ಲರ ಸಮಕ್ಷಮದಲ್ಲಿ ಯಾವ ಧಾಟಿಯಲ್ಲಿ ಮಾತನಾಡಿದರು, ಏನು ಚರ್ಚೆಯಾಯಿತು ಎನ್ನುವಂಥಾದ್ದು ನಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ಈ ಹಿನ್ನೆಲೆಯಲ್ಲಿ ನಿಮ್ಮ ಕೊಠಡಿಯಲ್ಲಿ ಏನು ಮಾತುಕತೆ ಆಯಿತು, ಅದರ ಆಧಾರದ ಮೇಲೆ ಕಾರ್ಯಕಲಾಪ ನಡೆಯಬೇಕು. ಅಲ್ಲೇನು ತೀರ್ಮಾನ ಮಾಡಲಾಗಿದೆ, ನೀವೇನು ಡೈರೆಕ್ಷನ್ಸ್ ಕೊಟ್ಟಿದ್ದೀರಿ ಅದರಂತೆ ನಡೆಯಬೇಕು, ನಮ್ಮದೇನು ಅಭ್ಯಂತರವಿಲ್ಲ. ಅವರು ನಡೆದುಕೊಂಡ ರೀತಿ ಸರಿಯಿದೆ ಎನ್ನುವುದಾದರೆ ಅದಕ್ಕೂ ನನ್ನದೇನೂ ಅಭ್ಯಂತರವಿಲ್ಲ. ಒಬ್ಬ ರಾಜ್ಯದ ಮುಖ್ಯಮಂತ್ರಿ ಬಗ್ಗೆ ಇಲ್ಲಿ ಹಗುರವಾಗಿ ಮಾತನಾಡಬಹುದು, ನಿರಾಧಾರವಾಗಿ ಭ್ರಷ್ಟಾಚಾರದ ಆರೋಪ ಹೊರಿಸಬಹುದು, ಕೃಷ್ಣಯ್ಯ ಶೆಟ್ಟಿಯವರ ರಾಜೀನಾಮೆಯನ್ನು ಮುಂಚಿತವಾಗಿಯೇ ಮುಂದಾಲೋಚನೆ ಮಾಡಿ ತೆಗೆದುಕೊಂಡಿದ್ದಾರೆಂದು ಹೇಳಿದ್ದರು. ಆ ಬಗ್ಗೆ ನಾನೇನು ಒಂದು ಶಬ್ಧವನ್ನು ಮಾತನಾಡಲಿಲ್ಲ. ಅದಕ್ಕೊಂದು ವ್ಯವಸ್ಥೆ ಇದೆ, ಇಷ್ಟು ಬೆಲೆಯಿದ್ದದ್ದು ಇಷ್ಟು ಬೆಲೆಗೆ

ಮಾರಾಟವಾಗಿದೆ, ಇದರಿಂದ ಸರ್ಕಾರಕ್ಕೆ ಇಷ್ಟೊಂದು ಅನ್ಯಾಯವಾಗಿದೆ. ವಾಸ್ತವಿಕ ಸ್ಥಿತಿ ಏನು? ಎಷ್ಟು ಎಕರೆ ಖರೀದಿ ಮಾಡಿದ್ದಾರೆ, ಏನಾಗಿದೆ ಎಲ್ಲಾ ವಿವರವನ್ನು ಉತ್ತರ ಕೊಡಬೇಕಾದರೆ ತಿಳಿಸುತ್ತೇನೆ. ಪ್ರತಿಪಕ್ಷದ ನಾಯಕರಿಗೆ ಆ ಪದ್ಧತಿ ಬಗ್ಗೆ ಗೊತ್ತಿದೆ. ಆವೇಶದಲ್ಲಿ ಕೆಲವು ಸಾರಿ ಕೆಲವು ಮಾತುಗಳು ಬರುತ್ತವೆ, ಕ್ಷಮೆ ಕೇಳುತ್ತೇವೆ, ಇದರಲ್ಲಿ ಯಾರು ಯಾರಿಗಿಂತಲೂ ಈ ಮನೆಯಲ್ಲಿ ದೊಡ್ಡವರಿಲ್ಲ, ಆದರೆ ಮತ್ತದೇ ವಿಷಯ ಚರ್ಚೆಯಾದರೆ ನಂತರವೂ ಮಾತನಾಡಲಿಕ್ಕೆ ಸಂಪೂರ್ಣ ಅವಕಾಶ ಇದೆ.

4–00pm

ಮಾನ್ಯ ರೇವಣ್ಣನವರು ಸಹ ಇಲ್ಲಿ ಈ ಮನೆಯಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದಂಥವರು. ಇವತ್ತು ಆ ಮನೆಯಲ್ಲಿ ಏನು ಚರ್ಚೆಯಾಗಿದೆ, ಏನು ತೀರ್ಮಾನವಾಗಿದೆ, Speaker ಕೊಠಡಿಯಲ್ಲಿ ಕುಳಿತು ಏನು ತೀರ್ಮಾನವಾಗಿದೆ, ಅದರಂತೆ ಕಾರ್ಯಕಲಾಪ ಮುಂದುವರೆಯುತ್ತದೆ. ಎರಡನೆಯದು, ನಾನು ನಿಮ್ಮಲ್ಲಿ ವಿನಂತಿ ಮಾಡುವಂಥಾದ್ದು, ಕಳೆದ ಎರಡು–ಮೂರು ದಿವಸಗಳಿಂದ ಅನೇಕ ಗಂಭೀರವಾದ ವಿಷಯಗಳು ಚರ್ಚೆಯಾಗಿವೆ. ಪರಿಹಾರ ಹುಡುಕುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ನೀವು ಪ್ರತಿ ಪಕ್ಷದವರು ಅನೇಕ ರೀತಿಯಲ್ಲಿ ನಮಗೆ ಸಹಕರಿಸುತ್ತಿದ್ದೀರಿ. ಇನ್ನೂ ಬರುವಂಥ ದಿವಸಗಳಲ್ಲಿ ಇನ್ನೂ ಒಳ್ಳೆಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಇಲ್ಲಿ ಚರ್ಚೆಯಾಗಬೇಕು. ಯಾವುದೇ ಇಲಾಖೆಯಲ್ಲಿ ಏನೇ ಈ ರೀತಿ ವ್ಯವಹಾರಗಳು ನಡೆದಿರುವಂಥಾದ್ದು, ಕಾನೂನು ಬಾಹಿರವಾಗಿದ್ದರೆ, ಮೇಲ್ನೋಟಕ್ಕೆ ನಿಮ್ಮ ಕಣ್ಣಿಗೆ ಕಂಡರೆ ಅದನ್ನು ನಮ್ಮ ಗಮನಕ್ಕೆ ತರುವುದಕ್ಕೆ ನೀವು ಇರುವಂಥಾದ್ದು. ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತಿರುವುದೇ ಅದಕ್ಕಾಗಿ. ಇದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಇವತ್ತು ಮಾತನಾಡಿದಂಥ ದಾಟಿ ನನಗೆ ತುಂಬಾ ನೋವಾಗಿದೆ. ಆ ಹಿನ್ನೆಲೆಯಲ್ಲಿ ಕೊಠಡಿಯಲ್ಲಿ ಚರ್ಚೆಯಾಗಿದೆ. ಏನು ತೀರ್ಮಾನವಾಗಿದೆ, ಇಷ್ಟಾಗಿದೆ ಎಂದರೂ ಮತ್ತೆ ಮತ್ತೆ ಅದನ್ನು ಪುನರ್ ಪ್ರಸ್ತಾಪ ಮಾಡುವುದರ ಬದಲಿಗೆ ನಂತರ ಮುಂದಿನ ಚರ್ಚೆಗೆ ಅವಕಾಶವಾಗುತ್ತದೆ. ದಯಮಾಡಿ ಅಧ್ಯಕ್ಷರೆ, ತಾವು ಏನು ಸೂಚನೆ ಕೊಟ್ಟಿದ್ದೀರಿ, ಅದರಂತೆ ಕಾರ್ಯಕಲಾಪ ಮುಂದುವರೆಯುತ್ತದೆ, ಅಲ್ಲಿಯವರೆಗೆ ನಮ್ಮ ಆಡಳಿತ ಪಕ್ಷದ ಸದಸ್ಯರು ಸುಮ್ಮನೆ ಕುಳಿತುಕೊಳ್ಳಿ, please....

(ಗೊಂದಲ)

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೇ ನೀವು ಮಾತನಾಡಿ. ಬಾಲಕೃಷ್ಣರವರೇ ನೀವು clear ಮಾಡಿ. ಮಾನ್ಯ ರೇವಣ್ಣನವರೇ ನೀವು ಸ್ವಲ್ಪ ಹೊತ್ತು ಬಿಟ್ಟು ಓದಿರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಗದೀಶ್ ಮೆಟಗುಡ್‌ರವರೇ, ಕುಳಿತುಕೊಳ್ಳಿ, ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಮಂತ್ರಿಗಳು ಇದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೇ, ಇದು ಕಡತದಲ್ಲಿ ಹೋಗುತ್ತದೆ. ಒಬ್ಬ ವಿರೋಧ ಪಕ್ಷದ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಬಾಲಕೃಷ್ಣರವರು ಮಾತನಾಡಲಿ, ರೇವಣ್ಣನವರು ಮಾತನಾಡಲಿ ಎನ್ನುವುದಲ್ಲ. ಯಾರಾದರೂ ಮಾತನಾಡಿಕೊಳ್ಳಲಿ. ಇಲ್ಲದಿದ್ದರೆ prove ಮಾಡಬೇಕು. "ನೀವು ಅಧಿಕಾರದಲ್ಲಿದ್ದಾಗ ಲೂಟಿ ಮಾಡಿದ್ದೀರಿ" ಎಂದು ಹೇಳುತ್ತೀರಿ. ಅದೂ ಇದ್ದರೆ ಮುಖ್ಯಮಂತ್ರಿಗಳು ತನಿಖೆ ಮಾಡಿಕೊಳ್ಳಲಿ. ನಮ್ಮದೇನೂ ಅಭ್ಯಂತರವಿಲ್ಲ. ಯಾವ ತರಹ ಬೇಕಾದರೂ ತನಿಖೆ ಮಾಡಿಕೊಳ್ಳಲಿ. ಏನೂ ಲೂಟಿ ಮಾಡಿದ್ದೇವೆ ಎಂದು ಸಭೆಯ ಗಮನಕ್ಕೆ ತರುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು: ಬಾಲಕೃಷ್ಣರವರು ಸ್ಪಷ್ಟೀಕರಣ ಕೊಡುತ್ತಾರೆ ಎಂದು ಹೇಳಿದ್ದೀರಿ. ನೀವು ಪದೇ ಪದೇ ಅದೇ ಹೇಳಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ನಾವು ಲೂಟಿ ಮಾಡಿದ್ದರೆ, ಏನು ಲೂಟಿ ಮಾಡಿದ್ದೇವೆ ಎಂದು ಸನ್ಮಾನ್ಯ ಸಭಾನಾಯಕರನ್ನು ಸಭೆಯ ಗಮನಕ್ಕೆ ತರುವುದಕ್ಕೆ ಹೇಳಿ. ಏನು ಲೂಟಿ ಮಾಡಿದ್ದೇವೆ ಎಂದು ಹೇಳಲಿ. ಲೂಟಿ ಮಾಡಿದ್ದರೆ ನಾವು ಏನೂ ಬೇಕಾದರೂ ಫೇಸ್ ಮಾಡುತ್ತೇವೆ. ಯಾವುದು ಬೇಕಾದರೂ ಮಾಡುತ್ತೇವೆ. ಲೋಕೋಪಯೋಗಿ ಇಲಾಖೆಯಲ್ಲಿನ ನನ್ನ ಅವಧಿಯಲ್ಲಿ ಎಲ್ಲಾ ತನಿಖೆಯನ್ನು ಲೋಕಾಯುಕ್ತಕ್ಕೆ ಹಾಕಿದ್ದರು. ನಾನು ಮಾನ್ಯ ಮುಖ್ಯಮಂತ್ರಿಗಳ ಮನೆ ಹತ್ತಿರ ಅರ್ಜಿ ಇಟ್ಟುಕೊಂಡು ಹೋಗಿದ್ದೇನೆಯೇ? ಇಂಧನ ಇಲಾಖೆ ತನಿಖೆ ಮಾಡಿದರು, ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಅರ್ಜಿ ಹಿಡಿದುಕೊಂಡು ಹೋಗಿದ್ದೇನೆಯೇ? Dairy ತನಿಖೆ ಮಾಡಿದರು, ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಅರ್ಜಿ ಹಿಡಿದುಕೊಂಡು ಹೋಗಿದ್ದೇನೆಯೇ? ನಾನು ತನಿಖೆಗೆ ಹೆದರುವುದಿಲ್ಲ. ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಇದು ಮುಗಿಸುವಂಥ ಲಕ್ಷಣ ಅಲ್ಲ. ಈ ರೀತಿಯಾದರೆ ನಾವು proceedings ನಡೆಸುವುದಕ್ಕೆ ಆಗುವುದಿಲ್ಲ. ಈಗ ಬಾಲಕೃಷ್ಣರವರೇ ನೀವು ಸ್ಪಷ್ಟೀಕರಣ ಮಾಡುವುದಿದ್ದರೆ ಮಾಡಿ. ಇಲ್ಲದಿದ್ದರೆ proceedings ನಡೆಸುವುದಕ್ಕೆ ನಮಗೆ ಆಗುವುದಿಲ್ಲ. ಇದೇ ರೀತಿ ಮಾಡಿಕೊಂಡು ಹೋದರೆ there is no end at all.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಈ ಕಡೆಯವರಿಗೆ ಒಂದು ವಿನಂತಿ ಮಾಡುತ್ತೇನೆ. ನಾನು ಆಡಳಿತ ಪಕ್ಷದ ಸದಸ್ಯರಿಗೆ ಒಂದು ವಿನಂತಿ ಮಾಡುತ್ತೇನೆ. ನೀವು ಏನಾದರೂ ಮಾತನಾಡುವುದಾದರೆ ಅಧ್ಯಕ್ಷರ ಅಪ್ಪಣೆ ಪಡೆದು ಒಬ್ಬರು ಎದ್ದು ಮಾತನಾಡಿ. ಒಂದು ಸಾರಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆಯಿತು. ಅಧ್ಯಕ್ಷರು ಹೇಗೆ ಕೆಲಸ ಮಾಡುತ್ತಾರೆ? ಅವರು ಏನು ಆದೇಶ ಕೊಡುತ್ತಾರೆ ಅದರಂತೆ

ಕಾರ್ಯಕಲಾಪ ನಡೆಯಬೇಕು. ಅವರನ್ನು ಕರೆದಿದ್ದಾರೆ, ಅವರು ಮಾತನಾಡುತ್ತಾರೆ. ದಯಮಾಡಿ please . . .

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ನೇರವಾದ ಆರೋಪ ಮಾಡಿಲ್ಲ. ನಿಮ್ಮ ಕಡತದಲ್ಲಿದೆ. ನೀವು ಕಡತ ತೆಗೆಸಿ ನೋಡಿದ್ದೀರಿ. ನಾನು ಏನು ಹೇಳಿದ್ದೇನೆ ಎಂದರೆ, ಎಲ್ಲೋ ಒಂದು ಕಡೆ ಮುಖ್ಯಮಂತ್ರಿಗಳು ಕೂಡ ಅದರ ಹಿಂದೆ ಇದ್ದಾರೆ ಎನ್ನುವ ಭಾವನೆ ನನಗೆ ಬರುತ್ತಿದೆ.

(ಗೊಂದಲ)

ಒಂದು ನಿಮಿಷ ಸುಮ್ಮನೆ ಇರ್ರಿ, ಸುಮ್ಮನೆ ಹೇಳುವುದಕ್ಕೂ ಬಿಡುವುದಿಲ್ಲ. ಹೇಗೆ ಓದಬೇಕು ಎಂದು ಬರೆದುಕೊಡಿ ಹಾಗೆಯೇ ಓದಿ ಬಿಡುತ್ತೇನೆ.

ಅಧ್ಯಕ್ಷರು: ನೀವು ಮತ್ತೆ ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಏನೂ ತಪ್ಪು ಮಾಡಿಲ್ಲ, ಏಕೆ ಕ್ಷಮೆ ಕೇಳಬೇಕು? ಅವರನ್ನು ಸುಮ್ಮನೆ ಇರುವುದಕ್ಕೆ ಹೇಳಿ. ಇಲ್ಲದಿದ್ದರೆ ಬರೆದುಕೊಟ್ಟು ಬಿಡಿ ಹೇಗೆ ಓದಬೇಕು ಎಂದು ಹಾಗೆಯೇ ಓದುತ್ತೇನೆ.

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ: ಅಧ್ಯಕ್ಷರೇ, ಇದು ಗರಡಿ ಮನೆಯಾಗುತ್ತಿದೆ. ದಯಮಾಡಿ. ನಾವೆಲ್ಲಾ ಸ್ವಲ್ಪ ಬಿ.ಪಿ., ಶುಗರ್ ಇರುವಂಥವರು. ಇದು ಆಗುವುದಿಲ್ಲ. ಸಭೆ ಸಮಾಧಾನವಾಗಿ ನಡೆದರೆ, ನಮ್ಮನ್ನೆಲ್ಲಾ ಶಾಸನ ಸಭೆಗೆ ಕರೆದು ಕುಳಿತು ಚರ್ಚೆ ಮಾಡುವುದಕ್ಕೆ ಬಿಡಿ. ಇದು ಗರಡಿ ಮನೆ ತರಹ ಆಗಿದೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ಬಾಲಕೃಷ್ಣರವರೇ ನೀವು ಹೇಳಿ.

ಶ್ರೀ ಸುಭಾಷ್ ಗುತ್ತೇದಾರ್: ಸದನದಲ್ಲಿ ಯಾವ ರೀತಿ ಇರಬೇಕು ಎಂದು ಹೇಳಿ ಕೊಡಿ ಸ್ವಾಮಿ.

ಶ್ರೀ ಸುರೇಶ್ ಬಾಬು: ಈ ಸಲ ಸದನದಲ್ಲಿ ಟ್ರೈನಿಂಗ್ ಕೊಟ್ಟಿಲ್ಲ. ಅದರಿಂದ ಈ ರೀತಿ ಆಡುತ್ತಿದ್ದಾರೆ. ಮೊದಲು ಟ್ರೈನಿಂಗ್ ಕೊಡಿ, ನಂತರ ಸದನ....

ಅಧ್ಯಕ್ಷರು: ಪರಸ್ಪರ ಈ ರೀತಿ ಸದಸ್ಯರು ನೀವೇ ಮಾತನಾಡುತ್ತಿದ್ದರೆ ಸದನ ನಡೆಸುವಂಥ ಅವಶ್ಯಕತೆ ಇಲ್ಲ ಅನಿಸುತ್ತದೆ ನನಗೆ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸುರೇಶ್ ಬಾಬು: ಮೊದಲು ಟ್ರೈನಿಂಗ್ ಕೊಡಿ. ನಂತರ ಸದನ ಸರಿ ಹೋಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾನು ಆಗಲೇ ಹೇಳಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ನೇರವಾಗಿ ಆರೋಪ ಮಾಡಿಲ್ಲ. ಏತಕ್ಕೆ ಈ ಅನುಮಾನ ಬರುತ್ತಿದೆ. ಈಗ ಪ್ರಾಜೆಕ್ಟ್ clear ಆಗಬೇಕಾದರೆ financial approval ಬೇಕಲ್ಲವೇ ಸ್ವಾಮಿ? 500 ಕೋಟಿ–600 ಕೋಟಿ clear ಆಗಬೇಕಾದರೆ financial approval ಬೇಕಲ್ಲವೇ? Finance Minister ಯಾರು? ನಾನು ನೇರವಾಗಿ ಎಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು involve ಆಗಿದ್ದಾರೆ ಎಂದು ಹೇಳಿಲ್ಲ. ಮುಖ್ಯಮಂತ್ರಿಗಳು clearance ಕೊಟ್ಟಿದ್ದಾರೆ. ಎಲ್ಲೋ ಒಂದು ಕಡೆ ಇರಬಹುದು ಎಂದು ನಮ್ಮ ಭಾವನೆ ವ್ಯಕ್ತಪಡಿಸುವುದಕ್ಕೆ ಆಗುವುದಿಲ್ಲವೇ? ವಿರೋಧ ಪಕ್ಷದವರು ಹೇಗೆ ಹೇಳಬೇಕು ಎಂದು ನೀವೇ ಬರೆದುಕೊಟ್ಟು ಬಿಡಿ, ಹಾಗೆಯೇ ನಾವು ಹೇಳುತ್ತೇವೆ. ನಾನು ಏನಾದರೂ ಅವರ ಮೇಲೆ ನೇರ ಆರೋಪ ಮಾಡಿದ್ದರೆ, ನಾನು ಕ್ಷಮೆ ಯಾಚಿಸುತ್ತೇನೆ. ಅವರ ಮನಸ್ಸಿಗೆ ನೋವಾಗಿದ್ದರೆ, ನಾನು ಕ್ಷಮೆ ಯಾಚಿಸುತ್ತಿದ್ದೆ. ಎಲ್ಲರಿಗಿಂತ ನಾನು ಏನೂ ದೊಡ್ಡವನಲ್ಲ. ಈ ಸದನಕ್ಕಿಂತ ದೊಡ್ಡವನೇನೂ ಅಲ್ಲ ನಾನು. ನಾನು ನೇರ ಆರೋಪ ಮಾಡಿಲ್ಲ. ಹಾಗಾದರೆ ನನ್ನ ಭಾವನೆ, ನಾವು ಏತಕ್ಕೋಸ್ಕರ ಇದನ್ನು 60ರ ನಿಲುವಳಿ ಸೂಚನೆ ಅಡಿಯಲ್ಲಿ ಕೊಡಬೇಕು ಎನ್ನತಕ್ಕಂಥಾದ್ದನ್ನು ಅದನ್ನು conclude ಮಾಡುವುದಕ್ಕೆ ಬರುವುದಕ್ಕೆ ಮುಂಚೆ ಎದ್ದು ನಿಂತುಕೊಂಡು ಗಲಾಟೆ ಮಾಡಿದರೆ ನಾವು ಏನು ಮಾಡುವುದು? ಅವರೂ Finance Minister ಆಗಿದ್ದಾರೆ. ಅವರೂ ಕೂಡ ಅದಕ್ಕೆ concurrence ಕೊಟ್ಟಿದ್ದಾರೆ. ಅದರಿಂದ ಇದನ್ನು ನಿಲುವಳಿ ಸೂಚನೆ ಅಡಿಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ಹೇಳುವುದಕ್ಕೋಸ್ಕರ ನಾನು ಆ ಪದವನ್ನು ಉಪಯೋಗಿಸಿದೆ. ಎಲ್ಲೋ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದರ ಹಿಂದೆ ಇದ್ದಾರೆ ಎನ್ನುವ ಭಾವನೆ ನನ್ನಲ್ಲಿ ಬರುತ್ತಿದೆ ಎಂದು ಉಪಯೋಗಿಸಿದೆ. ಇದರಿಂದ ಅವರ ಮನಸ್ಸಿಗೆ ನೋವಾದರೆ ನಾನು ಕ್ಷಮೆ ಯಾಚಿಸುತ್ತೇನೆ. ನಾನು ನೇರವಾಗಿ ಅವರನ್ನು ಆರೋಪ ಮಾಡಿಲ್ಲ. ನೇರವಾಗಿ ಮಾನ್ಯ ಮುಖ್ಯಮಂತ್ರಿಗಳು involve ಆಗಿದ್ದಾರೆ ಎಂದು ನಾನು ಹೇಳಿಲ್ಲ. ನಾನು ಇದನ್ನು ನಿಲುವಳಿ ಸೂಚನೆಗೆ ಏಕೆ ಒತ್ತಾಯ ಮಾಡುತ್ತೇನೆ ಎಂದರೆ, ಇದು ಸುಮಾರು 500 ಕೋಟಿ ರೂಪಾಯಿಗಳ ಹಗರಣ. ಅದರಿಂದ ದಯಮಾಡಿ ತಾವು ಇದನ್ನು ನಿಲುವಳಿ ಸೂಚನೆ 60ರ ಅಡಿಯಲ್ಲಿ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ಇದು ಇತ್ತೀಚೆಗೆ ಬಹಳ ಜಾಸ್ತಿಯಾಗುತ್ತಿದೆ. ನಾನು ಹೇಳುವುದು, ಅಕಸ್ಮಾತ್ ಇದು ಹೇಳಿಲ್ಲ ಎನ್ನುವುದು. ಇದು ಸಭೆಯ ನಡವಳಿಕೆಗೆ ಎಲ್ಲೋ ಸರಿ ಹೋಗುತ್ತಿಲ್ಲ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಒಂದು ನಿಮಿಷ ತಾಳಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಕಾನೂನು ಮಂತ್ರಿಗಳೇ, ಮಾನ್ಯ ಶಂಕರಲಿಂಗೇಗೌಡ್ರು ನಡೆದ ರೀತಿಯಲ್ಲಿ ನಾವು ನಡೆಯುತ್ತಿದ್ದೇವೆ. ಮಾನ್ಯ ಶಂಕರಲಿಂಗೇಗೌಡ್ರು ಮಾಡಿದ್ದನ್ನು ಮಾನ್ಯ ಬಾಲಕೃಷ್ಣರವರು ಮಾಡುತ್ತಿದ್ದಾರೆ. ಇದು ಪರಿಪಾಠ. ಅವರು ಮಾಡಿದ್ದನ್ನು ನಾವು ಮಾಡುತ್ತಿದ್ದೇವೆ. ಅದರಲ್ಲಿ ಏನೂ ತಪ್ಪಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಎಂ.ಟಿ.ಕೃಷ್ಣಪ್ಪರವರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಆಮೇಲೆ ನೀವು ಮಾತನಾಡಿ. ಸರ್ಕಾರದಲ್ಲಿರುವವರೇ ಹೀಗೆ ಮಾತನಾಡಿದರೆ ಏನು ಮಾಡಬೇಕು ಎಂದು ನಮಗೆ ಅರ್ಥವಾಗುವುದಿಲ್ಲ. ಈಗ ನಾನು ಏನು ಹೇಳುತ್ತೇನೆ ಎಂದರೆ, ಈಗ ಬಾಲಕೃಷ್ಣರವರು ಈಗ ಪ್ರಸ್ತಾಪ ಮಾಡಿದ್ದಾರೆ. ನಾನು ಅವರ ಮೇಲೆ ನೇರವಾಗಿ ಯಾವುದೇ ಆರೋಪ ಮಾಡಿಲ್ಲ. ಆ ಉದ್ದೇಶವೂ ನನಗೆ ಇಲ್ಲ. ಈ ಒಂದು ದೊಡ್ಡ ಮೊತ್ತದ ಹಣ ಇಲ್ಲಿ involve ಆಗಿರುವುದರಿಂದ Housing Boardಗೆ ಬಹಳಷ್ಟು ಹಣ ನಷ್ಟವಾಗುತ್ತದೆ. ಮಧ್ಯವರ್ತಿಗಳು ಯಾರೋ ಅದನ್ನು ಲೂಟಿ ಹೊಡೆದು ಬಿಡುತ್ತಾರೆ. ಆ ಕಾರಣದಿಂದ ಇಷ್ಟು ದೊಡ್ಡ ಮೊತ್ತದ ಹಣವಾಗಿರುವುದರಿಂದ Finance Departmentಗೂ ಬಂದಿರಬಹುದೇನೋ ಅನ್ನತಕ್ಕಂಥಾದ್ದು ನನಗೆ ಇದೆ. ಅದರಿಂದ ಇದು ಆ ತರಹದ ಭಾವನೆ ನನಗೆ ಬರುತ್ತದೆ ಎಂದು ಹೇಳಿದ್ದಾರೆ. ಆದರೂ ಕೂಡ ಅದು ಸರಿಯಿಲ್ಲವೆಂದರೆ ನೀವು ತೆಗೆದುಹಾಕಿ ಎಂದು ಅವರು ಹೇಳಿದ್ದಾರೆ. ಅದನ್ನು expunge ಮಾಡಿದ್ದಾರೆ. ಅದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಕೋಪದಲ್ಲಿ ನೀವು ಇರುವಾಗ ಎಷ್ಟು ಲೂಟಿ ಹೊಡೆದಿರಿ ಎಂದು ಹೇಳಿದ್ದು ಕೂಡ ದಾಖಲಾತಿಗೆ ಹೋಗುತ್ತದೆ. ಸಂಸದೀಯ ಈ ವ್ಯವಸ್ಥೆಯಲ್ಲಿ, ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ, ಕೆಲವು ವಿರೋಧ ಪಕ್ಷದವರು ಹೇಳುವುದು ಅದಕ್ಕೆ ಅವರು ಉತ್ತರ ಕೊಡುವುದು ಇವೆಲ್ಲಾ ಇರತಕ್ಕಂಥಾದ್ದೇ. ಆದರೆ, ನಾವು ಸ್ವಲ್ಪ ಸಂಯಮ ಇಟ್ಟುಕೊಳ್ಳಬೇಕಾಗುತ್ತದೆ. ನಾವು ಈ ನಿಯಮಾವಳಿಗಳ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಚರ್ಚೆ ಆ ರೀತಿ ನಡೆಯಬೇಕಾಗುತ್ತದೆ. ಇಲ್ಲದಿದ್ದರೆ ಇದಕ್ಕೆ ಹಗ್ಗ ಹಾಗೂ ಮುಗುದಾರ ಏನೂ ಇಲ್ಲದ ರೀತಿಯಲ್ಲಿ ಆಗಿ ಹೋಗಿಬಿಡುತ್ತದೆ. ಆ ಕಾರಣದಿಂದ ಈ ನಿಯಮಾವಳಿಗಳ ಚೌಕಟ್ಟಿನೊಳಗಡೆ, ನಮಗೆ ಗೊತ್ತಿದೆ. ನಿಯಮಾವಳಿಯಲ್ಲಿ ಏನು ಹೇಳುತ್ತದೆ ಎಂದು ನಮಗೆ ಗೊತ್ತಿದೆ. ಯಾರ ಮೇಲಾದರೂ ಆರೋಪ ಮಾಡಬೇಕಾದರೆ ಅದಕ್ಕೆ ಮೊದಲು ನಿಮಗೆ ನೋಟೀಸ್ ಕೊಟ್ಟು ಅದಕ್ಕೆ ಸಂಬಂಧಪಟ್ಟಂಥ ದಾಖಲಾತಿಗಳನ್ನು

ಕೊಟ್ಟು ಆಮೇಲೆ ಮಾಡಬೇಕು ಎನ್ನುವುದು ಇದೆ. ಅವರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆ ರೀತಿಯ ಆರೋಪ ಮಾಡಿಲ್ಲ ಎಂದು ಹೇಳಿದ್ದಾರೆ. ಜೊತೆಗೆ ಈಗ ಒಬ್ಬ ಸದಸ್ಯರು ಮಾಡಿದರು. ಅದನ್ನು ನೀವು ಅದರ ಬಗ್ಗೆ ಏನು ಮಾಡಬೇಕು? ಸರಿ ದಾರಿಗೆ ತರತಕ್ಕಂಥ ಕೆಲಸ ಮಾಡುವ ಅಧಿಕಾರ ನಿಮಗೆ ಇದೆ. ನಿಯಮಾವಳಿಗಳ ಚೌಕಟ್ಟಿನಲ್ಲಿ ಅದನ್ನು ಮಾಡತಕ್ಕಂಥದ್ದು ಇದೆ. ಆದರೆ ಈಗ ಏನು ಆಗುತ್ತದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲೇ ಇದ್ದಾರೆ. ಈಗ ಅವರೂ ಕೂಡ ಇವರ ಮೇಲೆ ನೀವು ಇದ್ದಾಗ ಎಷ್ಟು ಲೂಟಿ ಹೊಡೆದಿದ್ದೀರಿ ಎನ್ನುವ ಪದ ಪ್ರಯೋಗ ಕೂಡ ಆಗಿದೆ.

ಅದಕ್ಕೆ ನಾನು ಏನು ಹೇಳುವುದೇನೆಂದರೆ, ಈಗ ಸದನ ನಡೆಯಬೇಕು. ಅದನ್ನೂ expunge ಮಾಡಿ. ಇವರದೂ expunge ಮಾಡಲಿ, ಮುಂದಕ್ಕೆ ಈ ತರಹ ಆಗಬಾರದು. ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಿಮ್ಮ ಸರ್ಕಾರದಲ್ಲಿರುವ ಮಾನ್ಯ ಮಂತ್ರಿಗಳಿಗೆ ನಮಗಿಂತಲೂ ಹೆಚ್ಚಿನ ಜವಾಬ್ದಾರಿ ಇರುತ್ತದೆ. Because you are running the Government. We are in the opposition. ನಾವು oppositionನಲ್ಲಿರುವಾಗ ಸ್ವಲ್ಪ ಸಂಯಮವನ್ನು ಕಳೆದುಕೊಳ್ಳಬಹುದು. ಆದರೆ, ನಿಮಗೆ ಸಂಯಮ ಕಳೆದುಕೊಳ್ಳುವುದಾಗಲಿ, ತಾಳ್ಮೆ ಕಳೆದುಕೊಳ್ಳುವುದಾಗಲಿ ಇದ್ದರೆ, ಅದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ, Parliamentary democracy ಯಲ್ಲಿ ಒಳ್ಳೆಯ ಬೆಳವಣಿಗೆಯಾಗುವುದಿಲ್ಲ. ಮೊನ್ನೆ ಮಆನ್ಯ ಶಂಕರಲಿಂಗೇಗೌಡರು ಹೇಳಿದರು, ಮಾನ್ಯ ಕಾನೂನು ಮಂತ್ರಿಗಳು ಇದ್ದಾರೆ. ನಾನು ಅವರ ಕೈಯಲ್ಲಿ ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದರು. ಶಾಸಕರ ಗತಿ ಏನಾಗಬೇಕು? ಅವರೂ incident ನಲ್ಲಿ involve ಆಗಿದ್ದಾರೆ ಎಂದು ಹೇಳಿದರು. ಮೈಸೂರು ಗಲಭೆ ಅವರಿಂದಲೇ ಆಗಿದ್ದು ಎಂದು ಹೇಳಿದರು. ಅವರು ಬೇಜವಾಬ್ದಾರಿಯಿಂದ ನಡೆದುಕೊಂಡರೆ, ನಿಮ್ಮ ಕೊಠಡಿಗೆ ಬಂದು ಚರ್ಚೆ ಮಾಡಿ, ಅವರು ಮಾತಿಗೆ ಒಪ್ಪಿಕೊಳ್ಳದೇ walk out ಮಾಡುತ್ತಾರೆ. ಅವರ ಮೇಲೆ ನಾವೇನಾದರೂ action ತೆಗೆದುಕೊಂಡಿದ್ದೇವೆಯೇ? ಅದಕ್ಕೆ ನಾನು ಹೇಳಿದ್ದು, ಈ ತರಹದ್ದು ಆಗಬಾರದು. ಅವರು unparliamentary ಆಗಿದ್ದರೆ, ರೂಲ್ಸ್‌ಗೆ ವಿರುದ್ಧವಾಗಿದ್ದರೆ, you have got every right to set it right. Speaker has got every right. He is empowered under the law, under the rules and regulations, which we have passed here. ಅದರ ಪ್ರಕಾರ ಕ್ರಮ ತೆಗೆದುಕೊಳ್ಳಲಿ. ಇಲ್ಲದಿದ್ದರೆ, ruling party ಅವರು ಎದ್ದು 20–30 ಜನ ನಾವು ಜಾಸ್ತಿ ಇದ್ದೇವೆ. Majority ಇದ್ದೇವೆಂದು ಹೇಳಿ, ಎದ್ದು ನಿಂತುಕೊಂಡು ಬಾಯಿ ಮುಚ್ಚಿಸುವುದು ಸರಿಯಾದ ಕ್ರಮವಾಗುವುದಿಲ್ಲ, ಅದು ಒಳ್ಳೆಯ

ಸಂಪ್ರದಾಯವಾಗುವುದಿಲ್ಲ. ಒಳ್ಳೆಯ ಪದ್ಧತಿಯಾಗುವುದಿಲ್ಲ. ದಯಮಾಡಿ ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರತಿಪಕ್ಷದ ನಾಯಕರಂತೂ ಅಧ್ಯಕ್ಷರ ಕೊಠಡಿಯಲ್ಲಿರಲಿಲ್ಲ.

ಶ್ರೀ ಸಿದ್ದರಾಮಯ್ಯ: ನನ್ನನ್ನು ಕರೆದಿರಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆಯಿತು, ಪರವಾಗಿಲ್ಲ. ಆ ಕೊಠಡಿಯಲ್ಲಿ ಅಧ್ಯಕ್ಷರ ಸಮಕ್ಷಮ ಏನಾಯಿತು ಅದು ಇಲ್ಲಿ ನಡೆಯಬೇಕು ತಾನೇ? ಒಪ್ಪಿಕೊಂಡು ಬಂದಿರುವುದು ಇಲ್ಲಿ ಕಾರ್ಯಕಲಾಪ ಮುಂದುವರೆಯಬೇಕಲ್ಲವೇ? ಅದು ಒಂದು. ಎರಡನೆಯದು, ಯಾವ ಧಾಟಿಯಲ್ಲಿ ಮಾತನಾಡಿದರು, ಏನು ನಡೆಯಿತು ಎನ್ನುವುದು ಇಡೀ ಮನೆಯಲ್ಲಿ ಎಲ್ಲರಿಗೂ ಗೊತ್ತಿರುವಂಥಾದ್ದು, ಮಾಧ್ಯಮದವರ ಸಮಕ್ಷಮದಲ್ಲಿ ನಡೆದಿರತಕ್ಕಂಥಾದ್ದು, ಇಷ್ಟಾದರೂ ಸಹ ನಮ್ಮ ಜನತಾದಳದ ಮುಖಂಡರು ಅವರು ಮಾಡಿದ್ದೇ ಸರಿ ಎನ್ನುವುದಾದರೆ, ನನ್ನದೇನು ಅಭ್ಯಂತರವಿಲ್ಲ. ಚರ್ಚೆ ಮುಂದುವರೆಯಲಿ.

ಶ್ರೀ ಸಿದ್ದರಾಮಯ್ಯ: ಅಲ್ಲಿ ಏನು ಒಪ್ಪಿಕೊಂಡು ಬಂದಿದ್ದಾರೆಂದು ನಮಗೆ ಗೊತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಪ್ರತಿಪಕ್ಷದ ನಾಯಕರಾಗಿ ಕೇಳುತ್ತೀರೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಸಿದ್ದರಾಮಯ್ಯ: ಅವರು ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲ. ಅದಕ್ಕೇ ನಾನು ಅಧ್ಯಕ್ಷರಿಗೆ ಹೇಳುತ್ತಿರುವುದು, ನನಗೂ ಗೊತ್ತಿಲ್ಲ. ಅಲ್ಲಿ ಏನು ನಡೆಯಿತು, ಅದರಂತೆ ಇಲ್ಲಿ ಒಪ್ಪಿಕೊಳ್ಳಬೇಕಾಗಿರುವುದು, ಕಾರ್ಯಕಲಾಪ ನಡೆಯಬೇಕಾದುದು ಒಳ್ಳೆಯದು. ಅಧ್ಯಕ್ಷರು ಅಲ್ಲಿ ಏನು ನಡೆಯಿತು ಎನ್ನುವುದನ್ನು ಹೇಳಲಿ. ಅದರಂತೆ ಅವರು ನಡೆದುಕೊಳ್ಳಲಿಲ್ಲವೆಂದರೆ, ಕಾರ್ಯಕಲಾಪ ಮುಂದುವರೆಯಬೇಕು. ಅದಕ್ಕೆ ಅಡ್ಡಿ ಆಗಬಾರದು. ನಾನು ಒಪ್ಪಿಕೊಂಡು ಬಂದೆ, ಆದರೆ ಇಲ್ಲಿ ಮಾಡುವುದಿಲ್ಲವೆಂದರೆ ನನ್ನದೇನು ಅಭ್ಯಂತರವಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾನು ಒಪ್ಪಿಕೊಂಡು ಬಂದಿರುವುದನ್ನು ಇಲ್ಲಿ ಹೇಳಿದ್ದೇನೆ. ಸುಮ್ಮನೆ ಏನೋ ಒಪ್ಪಿಕೊಂಡು ಬಂದಿದ್ದೇನೆ, ಏನೋ ಆಗಿದೆ ಎಂದು ಅನುಮಾನ ಪಡಬೇಕಾಗಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳೇ, ನಾನು ಏನು ಹೇಳುತ್ತೇನೆಂದರೆ you are Leader of the entire House.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸಿದ್ದರಾಮಯ್ಯನವರೆ, ಪ್ರತಿಪಕ್ಷದ ನಾಯಕರೆ, ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ, ನೀವು ಮತ್ತೆ ಮತ್ತೆ ನನ್ನ ಜವಾಬ್ದಾರಿ ಅಥವಾ ನಾನು ನಾಯಕ ಎನ್ನುವಂಥದ್ದೆಲ್ಲಾ ಚರ್ಚೆಯಾಗುತ್ತಿರುವ

ವಿಷಯ. ನಾನು ಹೇಗೆ ನಡೆದುಕೊಳ್ಳಬೇಕು ಎನ್ನುವುದು ಗೊತ್ತಿದೆ. ಅದರಂತೆ ನಾನು ನಡೆದುಕೊಳ್ಳುತ್ತೇನೆ. ಈ ಮನೆಯ ಕಾರ್ಯಕಲಾಪ ನಡೆಯಬೇಕು. ಅದು ನನ್ನ ದೊಡ್ಡ ಜವಾಬ್ದಾರಿ, ಆಡಳಿತ ಪಕ್ಷದ ಜವಾಬ್ದಾರಿ. ರಾಜ್ಯದ ಅಭಿವೃದ್ಧಿಯ ಹಿತದೃಷ್ಟಿಯಿಂದ ನಾವು ಇನ್ನೂ ಎಲ್ಲವನ್ನೂ ಸಹಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ನಾನು ಅದರ ಬಗ್ಗೆ ಏನು ಚಿಂತೆ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಯಾರೂ ಸಹಿಸಿಕೊಳ್ಳಬೇಕಾದಂತಹ ಅಗತ್ಯ ಇಲ್ಲ. You have to abide by the rules and regulations which are passed here, nobody is above it.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಅಧ್ಯಕ್ಷರಿಗೆ ಇಷ್ಟೇ ಕೇಳುವುದು, ಆ ಕೊಠಡಿಯಲ್ಲಿ ಏನಾಯಿತು ಎನ್ನುವುದು ರೆಕಾರ್ಡ್‌ಗೆ ಹೋಗಲಿ. ಅದನ್ನು ಒಪ್ಪುವುದಿಲ್ಲ ಎನ್ನುವುದು ರೆಕಾರ್ಡ್‌ಗೆ ಹೋಗಲಿ. ಅದರಂತೆ ಕಾರ್ಯಕಲಾಪ ನಡೆಯಲಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಸಿದ್ದರಾಮಯ್ಯ: ಇಲ್ಲ, Ultimately ಅಲ್ಲಿ ಏನು ತೀರ್ಮಾನವಾಗಿದೆ, ಸ್ಪೀಕರ್ ಏನು ಹೇಳುತ್ತಾರೆ, everybody should follow it.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರಿಗೆ ನಾನು ಅಷ್ಟೇ request ಮಾಡುವುದು. ಅಲ್ಲಿ ಏನು ನಡೆಯಿತು ಹೇಳಿ, ಅದರಂತೆ ಅವರು ನಡೆದುಕೊಳ್ಳುವುದಾದರೆ ಕಾರ್ಯಕಲಾಪ ಮುಂದುವರೆಯಲಿ, ನನ್ನದೇನು ಅಭ್ಯಂತರವಿಲ್ಲ. ನಾನು ಯಾವುದೇ ಕಾರಣಕ್ಕೂ ಅಡ್ಡಿ ಮಾಡುವುದಿಲ್ಲ. ನೀವು ಮುಂದುವರೆಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ಕೊಠಡಿಯಲ್ಲಿ ಏನೂ ಆಗಿಲ್ಲ. ಕೊಠಡಿಯಲ್ಲಿ ನಾನು ಏನು ಹೇಳಿದ್ದೇನೆ ಅಷ್ಟೇ ನಡೆದಿದ್ದು.

ಶ್ರೀ ಬಸವರಾಜ ಬೊಮ್ಮಾಯಿ(ಮಾನ್ಯ ಜಲಸಂಪನ್ಮೂಲ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಎಲ್ಲಾ ವಿಷಯ ಪ್ರಸ್ತಾಪವಾದ ಮೇಲೆ, ಕೊನೆಗೆ ಅಲ್ಲಿ ಏನು ಕಡತದಲ್ಲಿದೆ ಅದನ್ನು ಓದಿದ ಮೇಲೆ, ಅವರು ಹೇಳಿದರು ನನ್ನ ಉದ್ದೇಶ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಆಪಾದನೆ ಮಾಡಬೇಕೆಂದು ಇರಲಿಲ್ಲ. ನೇರವಾಗಿ ಆಪಾದನೆ ಮಾಡಿಲ್ಲ. ಆದರೂ ಕೂಡ ನನ್ನ ಮಾತನ್ನು ಪೂರ್ತಿ ಮಾಡುವುದಕ್ಕೆ ಮುಂಚಿತವಾಗಿಯೇ ಆ ತರಹ ಭಾವನೆಯನ್ನು ಸದನಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನೋವಾಗಿದ್ದರೆ, ಅದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆ ಪ್ರಕಾರ ಅವರು ಹೇಳಿದ್ದಾರೆ. ಆದರೆ ಅಷ್ಟೇ ಸೀಮಿತವಾಗಿದ್ದರೆ ಈ ಪ್ರಶ್ನೆ ಮತ್ತೆ ಉದ್ಭವಿಸುತ್ತಿರಲಿಲ್ಲ. ಈಗ ಅದರ ಹಿನ್ನೆಲೆಯಲ್ಲಿ ಮತ್ತೆ ಹಿಂದೆ ಏನಾಯಿತು ಮತ್ತೆ ಮುಂದೆ ಏನಾಯಿತು ಏಕೆ ಇದನ್ನು ಮಾಡಿದಿರಿ ಅಂದರೆ, ಈಗ ನೀವು ಹೇಳಿದಿರಿ ಈಗ ಮತ್ತೆ ನಾವು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಈ ವಿಷಯ ಇಲ್ಲೇ ಮುಗಿಸುವ ದೃಷ್ಟಿಯಿಂದ ನಾನು

ಮಾಡತನಾಡುತ್ತಿದ್ದೇನೆ ಅಷ್ಟೇ. ಅವರು rules ಕೆಳಗಡೆ discussion ತೆಗೆದುಕೊಂಡರೆ, ಅಧ್ಯಕ್ಷರಿಗೆ ಬಿಟ್ಟಿದ್ದು ನಾವೆಲ್ಲರೂ ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ.

ಅಧ್ಯಕ್ಷರು: ಮತ್ತೆ ಇದರ ಬಗ್ಗೆ repeat ಮಾಡುವುದು ಬೇಡ. ಇಲ್ಲಿಗೆ ಮುಗಿಸೋಣ.

ಶ್ರೀ ಹೆಚ್.ಡಿ.ರೇವಣ್ಣ: ಒಂದು ನಿಮಿಷ ಸಾರ್, ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಹೇಳಿದಾಗ, ನಾನು clarification ಕೇಳಬೇಕಾದದ್ದು ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: Chamber ನಲ್ಲಿ ಏನು ನಡೆಯಿತು ಅಷ್ಟು ಮಾತ್ರ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಇವತ್ತು ಸಭೆಯೊಳಗೆ ಏನು ನಡೆಯಿತು ಎನ್ನುವುದು ಮಾನ್ಯ ಬಾಲಕೃಷ್ಣ ಅವರು ಕೇಳಿದ್ದಾರೆ. ಮೊನ್ನೆ ಮಾನ್ಯ ಶಂಕರಲಿಂಗೇಗೌಡರು ಸಭೆಯಲ್ಲಿ ನಿಮ್ಮ ಅಧ್ಯಕ್ಷತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಾನೂನು ಸಚಿವರು, ಮಾನ್ಯ ವಿರೋಧಪಕ್ಷದ ನಾಯಕರುಗಳು ಒಪ್ಪಿಕೊಂಡು ಬಂದು ಇಲ್ಲಿ ಏನು ಹೇಳಿಕೆ ಆಯಿತು ಎನ್ನುವುದನ್ನು ನೀವು ಕಡತದಿಂದ ತೆಗೆಸುತ್ತೀರಾ? ಆವತ್ತು, ಸಭೆಯಲ್ಲಿ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ, ವಿರೋಧ ಪಕ್ಷದ ನಾಯಕರುಗಳು ಎಲ್ಲಾ ಒಟ್ಟಿಗೆ ಸೇರಿ ನಡೆದಾಗ ಅದು ನಡೆಯಿತೇ? ಕಾನೂನು ಸಚಿವರು ಎಲ್ಲಾ ರೆಡಿ ಮಾಡಿಕೊಂಡು ಬಂದಿದ್ದೇನೆ, ತಪ್ಪು ಎಂದು ಹೇಳಿಕೆ ಕೊಡಿಸುತ್ತೇನೆ ಎಂದು ಹೇಳಿದರು, ಹೇಳಿಕೆಯನ್ನು ಕೊಡಿಸಿದರೆ?

(ಗೊಂದಲ)

ಅಧ್ಯಕ್ಷರು: ನೋಡಿ, ಮಾನ್ಯ ಬಾಲಕೃಷ್ಣ ಅವರು ಏನು ಒಂದು ಹೇಳಿಕೆಯನ್ನು ಕೊಟ್ಟರು, ಅದು ಏನು ಆಕ್ಷೇಪಾರ್ಹ ಹೇಳಿಕೆ ಎಂದು ಇದೆ. ಅದನ್ನು ನಾನು ಈಗಾಗಲೇ ಕಡತದಿಂದ ತೆಗೆದುಹಾಕಲಿಕ್ಕೆ ಹೇಳಿದ್ದೇನೆ ಮತ್ತು ನೇರವಾಗಿ ಆಪಾದನೆ ಮಾಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನೇ ನಾವು ಸ್ಪಷ್ಟ ಮಾಡಿ ಎಂದು ಅಲ್ಲಿ ಹೇಳಿರುವಂಥಾದ್ದು, ಮತ್ತೆ ಅದರ ಬಗ್ಗೆ ವಿಷಾದ ವ್ಯಕ್ತಪಡಿಸಬೇಕೆಂದೂ ನಾವು ಹೇಳಿದ್ದೇವೆ. ಇನ್ನು ಅದು ಅವರಿಗೆ ಬಿಟ್ಟಂಥ ವಿಚಾರ. ಅಲ್ಲಿ ಏನಾಗಿರುವಂಥಾದ್ದು ಎನ್ನುವುದು. ಉಳಿದ ವಿಷಯಗಳು chamberನಲ್ಲಿ discussion ಮಾಡಿದಾಗ ಪ್ರಸ್ತಾಪವಾಗಿಲ್ಲ. ಇಷ್ಟು ಪ್ರಸ್ತಾಪವಾಗಿದೆ. ಇನ್ನು ನಿಮ್ಮ ವಿವೇಚನೆಗೆ ಬಿಡುತ್ತಿದ್ದೇನೆ. ಏಕೆಂದರೆ, proceedings ನಡೆಸಿಕೊಂಡು ಹೋಗಬೇಕಾಗಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಏನಾಗಿದೆ ಎನ್ನುವುದರ ಬಗ್ಗೆ ಕೇಳಿದರು, ಅದರ ಬಗ್ಗೆ ನಾವು ಹೇಳಿದೆವು. ಇಷ್ಟಂತೂ ಆಗಿದೆ. ಅದರ ಮೇಲೆ ನಿಮ್ಮ ವಿವೇಚನೆಗೆ ಬಿಟ್ಟಂಥ ವಿಷಯ. ಇವತ್ತು ನಾನು ಗೌರವಾನ್ವಿತ ಸದಸ್ಯರಲ್ಲಿ ಒಂದೇ ಹೇಳುವಂಥಾದ್ದು, ಇವತ್ತು ಯಾವುದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಅದು ನಿಲುವಳಿ ಸೂಚನೆ ಇರಬಹುದು, ಮತ್ತೊಂದರಲ್ಲಿ,

ಇವತ್ತು ಯಾರ ಮೇಲಾದರೂ ಆಪಾದನೆ ಮಾಡುವಂಥ ಸಂದರ್ಭದಲ್ಲಿ ನಾವು ನಿಯಮಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಯಾರ ಮೇಲಾದರೂ ಆಪಾದನೆ ಮಾಡಬೇಕಾದರೆ .ಅವರ ಬಗ್ಗೆ specific ಆಗಿ ಯಾವ charges ಇವೆ, ಅದನ್ನು ಪಡೆದು, ಅವರ ಹೆಸರನ್ನು ಹಾಕಿ ನೀವು ನೋಟೀಸ್ ಕೊಟ್ಟರೆ ಅದರ ಬಗ್ಗೆ ಪರಿಶೀಲನೆ ಮಾಡಬಹುದು. ಅದನ್ನು ಬಿಟ್ಟು ಸುಮ್ಮನೆ ನೀವು ಆಪಾದನೆ ಮಾಡುವುದಾದರೆ, ಯಾರಿಗೂ ಗೌರವ ತರುವಂಥಾದ್ದು ಅಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ಭಾವನೆಗಳಲ್ಲಿ ಇವತ್ತು ಆ ರೀತಿ ಅರ್ಥ ಬರುವಂಥಾದ್ದು ಆಗಿದೆ. ಆಕ್ಷೇಪಾರ್ಹ ಹೇಳಿಕೆಗಳು ಇವೆ, ಅದನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಇಲ್ಲಿಗೆ ಇದನ್ನು ಮುಗಿಸೋಣ.

ಶ್ರೀ ಹೆಚ್.ಡಿ.ರೇವಣ್ಣ: ಲೂಟಿ ಮಾಡಿದ್ದಾರೆ ಎಂಬ ಹೇಳಿಕೆಯ ಬಗ್ಗೆ ಏನು ಮಾಡಿದಿರಿ?

ಅಧ್ಯಕ್ಷರು: ಆಕ್ಷೇಪಾರ್ಹ ಅಂತಹ ಇರುವ ಹೇಳಿಕೆಗಳನ್ನು ಕಡತದಿಂದ ತೆಗೆಯುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಮುಖ್ಯಮಂತ್ರಿಗಳನ್ನು ಕ್ಷಮೆ ಕೇಳುವುದಕ್ಕೆ ಹೇಳಿ ಹೋಗಲಿ.

ಅಧ್ಯಕ್ಷರು: ಕಡತದಿಂದ ತೆಗೆದುಹಾಕುವಂತೆ ಹೇಳಿದ್ದೇನಲ್ಲಾ. ನೀವು priliminary submission continue ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಕೊನೆಯದಾಗಿ ಎರಡು ವಿಷಯಗಳಿವೆ. ಅದರ ಬಗ್ಗೆ ಮಾತನಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಹೌಸಿಂಗ್ ಬೋರ್ಡ್ employees ಅವರು 6.3.2009ರಲ್ಲಿ ಈ 959 ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, ಒಂದು ನಿಮಿಷ, ಕಡತದಲ್ಲಿ ಯಾವುದು ಸರಿಯಿಲ್ಲ, ದಯಮಾಡಿ ಅವುಗಳನ್ನು ಕಡತದಿಂದ ತೆಗೆದುಹಾಕಿ.

ಅಧ್ಯಕ್ಷರು: ನಾನು ತೆಗೆದು ಹಾಕಲು ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಇವತ್ತು 59 ಎಕರೆ ಜಮೀನನ್ನು 50 ಲಕ್ಷದಂತೆ ತೆಗೆದುಕೊಂಡರೆ, ಹೌಸಿಂಗ್ ಬೋರ್ಡ್ ದಿವಾಳಿಯಾಗುತ್ತದೆ ಎಂದು employees ಅರ್ಜಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಇದು ಚರ್ಚೆ ಅಲ್ಲ. Preliminary submission ಅಷ್ಟೇ.

ಶ್ರೀ ಹೆಚ್.ಡಿ.ರೇವಣ್ಣ: ಅದಕ್ಕೋಸ್ಕರ, employees ಕೊಟ್ಟಿರುವ ಅರ್ಜಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಏಕೆ ನಿಯಮ 60 ರಡಿಯಲ್ಲಿ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಇವೆಲ್ಲಾ ಹೇಳುತ್ತಿದ್ದೇನೆ. ಇದಾದ ಮೇಲೆ ಒಂದು ಸರ್ಕಾರಿ ಆದೇಶ ಆಗಿದೆಯಲ್ಲಾ, ಇದರಲ್ಲಿ ಸರ್ಕಾರಿ ಆದೇಶ

ಆಗಿರುವುದರಿಂದ, ಸರ್ಕಾರ approve ಮಾಡದ ಹೊರತು, ಹಣಕಾಸು ಇಲಾಖೆ ಅಥವಾ ಸಚಿವ ಸಂಪುಟ ಸಭೆಯ ಅನುಮತಿ ಇಲ್ಲದೇ ಈ 959 ಎಕರೆ ಜಮೀನನ್ನು ಎಕರೆಗೆ 50 ಲಕ್ಷ ರೂಪಾಯಿಯಂತೆ ಮಾಡಿದ್ದಾರೆ. ಅದರಂತೆ ಸುಮಾರು 450 ಕೋಟಿ ರೂ. ಅಥವಾ ಸುಮಾರು 58 ಎಕರೆ ಎಂದರೆ 480 ಕೋಟಿ ರೂ.ಗಳವರೆಗೂ ಹೋಗಬಹುದೆಂಬ ಅಂದಾಜು. ಜಿಲ್ಲಾಧಿಕಾರಿಗಳನ್ನು ಇದಕ್ಕೋಸ್ಕರವೇ ವರ್ಗಾವಣೆ ಮಾಡಿದ್ದಾರೆ. ಮತ್ತೆ ಸಂಬಂಧಪಟ್ಟ ಹಿಂದಿನ ಮಂತ್ರಿಗಳು ಮೀಟಿಂಗ್‌ನಲ್ಲಿ ಕುಳಿತುಕೊಂಡು ಇದನ್ನೆಲ್ಲಾ ಮಾಡಿಸಿರುವುದು. ಹೌಸಿಂಗ್ ಬೋರ್ಡ್ ಮೀಟಿಂಗ್ ಇರಬಹುದು, ಎಲ್ಲಾ ಮೀಟಿಂಗ್‌ಗಳಲ್ಲೂ ಮಂತ್ರಿಗಳು ಕುಳಿತುಕೊಂಡು ಇದನ್ನು ಮಾಡಿರುವುದು. ಈಗ ಬಾಕಿ ಇರುವ ಎಲ್ಲಾ ವಿಷಯಗಳನ್ನು ಬಿಡಿ. ಇವತ್ತು ಎಲ್ಲಾ ಪತ್ರಿಕೆಗಳಲ್ಲಿ... "ಗೃಹ ಮಂಡಳಿಯಿಂದ ಕೋಟ್ಯಂತರ ರೂ.ನಷ್ಟ, ಜಮೀನು ಖರೀದಿಯಲ್ಲಿ ಮಧ್ಯವರ್ತಿಗಳ ಕೈಚಳಕ, 200ರಿಂದ 300 ಕೋಟಿ ರೂ.ಗಳಷ್ಟು ನಷ್ಟ" ಎಂದು ಪತ್ರಿಕೆಗಳಲ್ಲಿ ಬಂದಿದೆ.

ಇದರ ಜೊತೆಗೆ, ಹಿಂದಿನ ಒಬ್ಬರು ಮಂತ್ರಿಗಳ ಸೋದರರೇ ನನ್ನ ಬಳಿ ಡಾಕ್ಯುಮೆಂಟ್ಸ್ ಇವೆ. ಲಕ್ಷ 15 ಸಾವಿರ ರೂ.ಗಳಷ್ಟು ದುಡ್ಡು ಪಡೆದು ಖರೀದಿಸಿ, 8 ದಿವಸಕ್ಕೆ 50 ಲಕ್ಷ ರೂ.ಗಳಿಗೆ ಅವರು ತೆಗೆದು ಕೊಳ್ಳುತ್ತಾರೆಂದರೆ, ಈಗ ಎಲ್ಲಾ ವಿಷಯಗಳನ್ನೂ ಮುಂದಕ್ಕೆ ಹಾಕಿ. ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಇದನ್ನು ನಿಯಮ 60ರಡಿ ಇವತ್ತು ಜರೂರಾಗಿ ತೆಗೆದು ಕೊಳ್ಳಬೇಕು. ಏಕೆಂದರೆ, ಈ ರಾಜ್ಯ ಸರ್ಕಾರದ ಬೊಕ್ಕಸ ಲೂಟಿಯಾಗುತ್ತಿದೆ, ಸುಮಾರು 300 ಕೋಟಿ ರೂ.ಗಳಷ್ಟು ಹಣ ಲೂಟಿಯಾಗುತ್ತಿರುವುದರಿಂದ ದಯಮಾಡಿ ಮಾನ್ಯ ಸಭಾ ನಾಯಕರು ಇದಕ್ಕೆ ಒಪ್ಪಿಕೊಂಡಿದ್ದಾರೆ, ಕಾನೂನು ಸಚಿವರೂ ಒಪ್ಪಿಕೊಂಡಿದ್ದಾರೆ. ಇಂತಹ ವಿಷಯ ಏನೇ ಇದ್ದರೂ ಇಂತಹುದನ್ನು ಮೊದಲು ಚರ್ಚೆ ಮಾಡಬೇಕೆಂದು ಅವರು ಹೇಳಿದರು. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ದಯಮಾಡಿ ಸಭಾಧ್ಯಕ್ಷರು ಎಲ್ಲಾ ವಿಷಯಗಳನ್ನೂ ಮುಂದೂಡಿ ಇದನ್ನು ಇವತ್ತು ನಿಲುವಳಿ ಸೂಚನೆ 60ರಡಿ ತೆಗೆದುಕೊಂಡು ಪ್ರಸ್ತಾಪಿಸುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕು. ನಾವೆಲ್ಲರೂ ಸಿಗ್ನೇಟರಿಯಾಗಿದ್ದೇವೆ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕಾರ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈಗ ನಿಯಮ 60ರಡಿ ತೆಗೆದುಕೊಳ್ಳಿ. ಎಲ್ಲಾ ವಿಷಯಗಳನ್ನೂ ಮುಂದೂಡಿ. ಇವತ್ತು ಎಷ್ಟು ಹೊತ್ತಾದರೂ ಚರ್ಚೆಯಾಗಲಿ. ಅದರಲ್ಲಿ ಏನೇನು ಇದೆಯೋ, ಎಲ್ಲಾ ವಿವರಗಳನ್ನೂ ಕೊಡಬೇಕು. ನಾನು ಸಭಾ ನಾಯಕನಾಗಿ ಒಪ್ಪಿಕೊಳ್ಳುತ್ತೇನೆ. ಇದು ಸುದೀರ್ಘವಾಗಿ ಚರ್ಚೆಯಾಗಬೇಕು. ಈಗ ಅವರು ಅದರ ಬಗ್ಗೆ ಏನು ಹೇಳುತ್ತಾರೆ, ಈ ಚರ್ಚೆ ಮುಂದುವರೆಯಲಿ. ನೀವು ಸಮಯ ನಿಗದಿಪಡಿಸಿ, ಈಗ ಅವರು ವಿಷಯ ಪ್ರಾರಂಭಿಸಲಿ.

ಅಧ್ಯಕ್ಷರು: ರೇವಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ನಿಲುವಳಿ ಸೂಚನೆಯಡಿ ಈ ವಿಷಯಗಳನ್ನು ಚರ್ಚಿಸುವುದಕ್ಕಾಗುವುದಿಲ್ಲ. ಚರ್ಚೆಯಾಗಬೇಕು, ವಿಷಯಗಳು ಹೊರಗೆ ಬರಬೇಕೆಂಬ ಉದ್ದೇಶ ನಿಮ್ಮದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎಲ್ಲಾ ವಿಷಯಗಳನ್ನೂ ಬಿಟ್ಟು ಇದಕ್ಕೆ ಪ್ರಾಧಾನ್ಯತೆ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಹೇಳಿದ್ದಾರೆ. ಅದಕ್ಕೋಸ್ಕರ, ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ನಿಮಗೆ ಚರ್ಚಿಸಲು ನಾನು ಅವಕಾಶ ಕಲ್ಪಿಸಿಕೊಡುತ್ತೇನೆ. ಇವತ್ತು ಸಾಯಂಕಾಲದವರೆಗೆ ಈ ವಿಷಯವನ್ನು ಮುಗಿಸಬೇಕು.

ಶ್ರೀ ಸಿದ್ದರಾಮಯ್ಯ: ಈಗ ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೀರಲ್ಲ, ಈಗಲೇ ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಾ? ಆಯಿತು, ಚರ್ಚೆ ಮಾಡಿ.

ಅಧ್ಯಕ್ಷರು: ಇವತ್ತು ಸಾಯಂಕಾಲದೊಳಗೆ ಚರ್ಚೆ ಮುಗಿಯಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರೆ: ರೇವಣ್ಣನವರೆ, ನೀವು ಪ್ರಾರಂಭಿಸುತ್ತೀರಾ? ಬಾಲಕೃಷ್ಣರವರು ಪ್ರಾರಂಭಿಸುತ್ತಾರೋ? ನೀವು ಪ್ರಾರಂಭಿಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅವರು preliminary submission ಮಾಡಿದ್ದಾರೆ.

ಅಧ್ಯಕ್ಷರು: ರೇವಣ್ಣನವರೆ, ನೀವು ಪ್ರಾರಂಭಿಸಿ.

ಶ್ರೀ ಹೆಚ್.ಡಿ.ರೇವಣ್ಣ: ಅವರು ಮಾತನಾಡಲಿ. ಅನಂತರ, ನಾನು ಮಾತನಾಡುತ್ತೇನೆ. ಬಾಲಕೃಷ್ಣರವರು ಈಗ ಮಾತನಾಡಲಿ.

ಅಧ್ಯಕ್ಷರು: ರೇವಣ್ಣನವರೆ, ತಾವು ಇದಕ್ಕೆ initiate ಮಾಡಬೇಕು. ನಿಲುವಳಿ ಸೂಚನೆಯನ್ನು ತಂದವರು ನೀವು, ನೀವು ನಾಯಕರು, Floor Leader.

ಶ್ರೀ ಸಿದ್ದರಾಮಯ್ಯ: ವಿಷಯವನ್ನು ಯಾರು ಬೇಕಾದರೂ ಪ್ರಾರಂಭಿಸಬಹುದು.

ಅಧ್ಯಕ್ಷರು: ಮಾತನಾಡಬಹುದು. ಅದು ಅವರಿಗೆ ಬಿಟ್ಟದ್ದು. ಆದರೂ ತಾವು(ರೇವಣ್ಣ) start ಮಾಡಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ತಮ್ಮ ರೂಲಿಂಗ್‌ನಲ್ಲಿ ಅವರೇ ವಿಷಯ ಪ್ರಾರಂಭಿಸಬೇಕು, ನಾವು ಪ್ರಾರಂಭಿಸಬಾರದೆಂದು ಹೇಳುತ್ತೀರಾ?

ಅಧ್ಯಕ್ಷರು: ನಿಮ್ಮಲ್ಲಿ choices ಇದೆ. ನೀವೇ ಮಾತನಾಡುವುದಾದರೆ, ಮಾತನಾಡಿ. ಆದರೆ, ರೂಲ್ ಇದೆ. ಅದರ ಪ್ರಕಾರ ಅವರು ವಿಷಯವನ್ನು ಮೊದಲು ಪ್ರಾರಂಭಿಸಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅನಂತರ, ಅವರು ಮಾತನಾಡುತ್ತಾರೆ. ಅವರು submission ಮಾಡಿದ್ದಾರಲ್ಲ.

ಅಧ್ಯಕ್ಷರು: ಅನಂತರ ಅವರು ಮಾತನಾಡುತ್ತಾರೆಯೇ? ಆಗಬಹುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಪ್ರಿಲಿಮಿನರಿ ಹಂತದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದೊಂದು ದೊಡ್ಡ ಹಗರಣ. ಇದರಲ್ಲಿ ಸುಮಾರು 500 ಕೋಟಿ ರೂ.ಗಳಷ್ಟು ಭ್ರಷ್ಟಾಚಾರವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನಕ್ಕೆ ಹೇಳಬಯಸುತ್ತೇನೆ. ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ....ಕರ್ನಾಟಕ ಗೃಹ ಮಂಡಳಿಯವರು ವಸತಿ ಸಮುಚ್ಚಯ ನಿರ್ಮಿಸುವುದಕ್ಕೆ ಶಿಡ್ಲಘಟ್ಟ ತಾಲ್ಲೂಕನ್ನೇ ಏಕೆ ಆಯ್ಕೆ ಮಾಡಿಕೊಂಡರೋ ನನಗಂತೂ ಗೊತ್ತಿಲ್ಲ. ಅವರ ಉದ್ದೇಶವಾದರೂ ಏನು? ಇಲ್ಲಿಂದ 40–50 ಕಿಲೋಮೀಟರ್‌ಗಳಷ್ಟು ದೂರದಲ್ಲಿರುವ ಜಾಗಕ್ಕೆ ಹೋಗಿ ಅಲ್ಲಿ ಜಮೀನನ್ನು ಖರೀದಿಸಿ ಅಲ್ಲಿ ಹೌಸಿಂಗ್ ಬೋರ್ಡ್‌ನ ಮನೆಗಳನ್ನು, ಸೈಟುಗಳನ್ನು ಇಲ್ಲೇ ಕೇಳುವವರು ಇಲ್ಲ. ಅಲ್ಲಿ ಯಾರು ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಅಂದರೆ, ಇದರ ಹಿಂದೆ ಏನಿದೆ ಎಂಬುದನ್ನು ಹೇಳುವುದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿಗಳು ಒಂದು ಸಭೆ ನಡೆಸುತ್ತಾರೆ. ಕರ್ನಾಟಕ ಗೃಹ ಮಂಡಳಿಯಿಂದ ನಾವು ಇಂತಹ ಜಾಗದಲ್ಲಿ ವಸತಿ ಸಮುಚ್ಚಯ ನಿರ್ಮಿಸುತ್ತೇವೆ, ನಮಗೆ ಜಾಗ ಬೇಕು ಕೊಡಿ ಎಂದು ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿಗಳಿಗೆ ಒಂದು ಪ್ರಸ್ತಾವನೆ ಹೋಗುತ್ತದೆ. ಅವರು ದಿನಾಂಕ 3.11.2008ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಉಪ ವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ, ಸಹಾಯಕ ಕಾರ್ಯಕಲಾಪ ಅಭಿಯಂತರರು, ಕೋಲಾರ, ಭೂ ಮಾಲೀಕರ ಪ್ರತಿನಿಧಿಗಳು,... ಸ್ವಾಮಿ, ಭೂ ಮಾಲೀಕರಲ್ಲ, ಅದರಲ್ಲಿ ಇನ್ನೊಂದು ಪಾಯಿಂಟ್ ಸೇರಿಸುತ್ತಾರೆ. "ಭೂ ಮಾಲೀಕರ ಪ್ರತಿನಿಧಿಗಳು" ಎಂದು. ಪ್ರತಿನಿಧಿಗಳೆಂದರೆ, GPA Holders. ಭೂ ಮಾಲೀಕರು ಯಾರೆಂದರೆ, ರೈತರ ಜೊತೆಗೆ GPA Holders. ಇಬ್ಬರನ್ನೂ ಸೇರಿಸಿ ಸಭೆ ಕರೆಯುತ್ತಾರೆ. ಬ್ರೋಕರ್ಸ್ ಸಭೆಯನ್ನು ಮಾಡಿದ ಸಂದರ್ಭದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಒಂದು ಮಾತನ್ನು ಹೇಳುತ್ತಾರೆ. ಶಿಡ್ಲಘಟ್ಟ ತಾಲ್ಲೂಕಿನ ಜಂಗಮ ಕೋಟೆ ಹೋಬಳಿ, ವೆಂಕಟಾಪುರ, ಸೊಗಟೂರು, ಹೊಸಪೇಟೆ ಮತ್ತು ಗೊರುವನಹಳ್ಳಿ ಗ್ರಾಮದ ವಿವಿಧ ಸರ್ವೆ ನಂ.2ರಿಂದ 390ರವರೆಗಿನ ಜಮೀನನ್ನು ಮತ್ತು ಚಿಕ್ಕಬಳ್ಳಾಪುರ ನಗರದ ರಾಜವಾರಿ, ಬನ್ನಿಕುಪ್ಪೆ ಮತ್ತು ಸೊನ್ನಾಪುರ ಗ್ರಾಮದ ಜಮೀನನ್ನು ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಗೋಸ್ಕರ ಖರೀದಿಸಲು ಸಭೆ ನಡೆಸುತ್ತಾರೆ. ಅಲ್ಲಿ ಏನು ಹೇಳುತ್ತಾರೆಂದರೆ, ಈ ಜಮೀನನ್ನು ತೆಗೆದುಕೊಳ್ಳಬೇಕಲ್ಲ, ಅದಕ್ಕೆ ಎಲ್ಲಿಯೋ ಒಂದು ಕಡೆ ದೇವನಹಳ್ಳಿಯ ಹೆಸರನ್ನು ಸೇರಿಸುತ್ತಾರೆ. ಏಕೆಂದರೆ, ದೇವನಹಳ್ಳಿ ಹೆಸರು ಎಂದರೆ, ಅಲ್ಲಿ ಒಳ್ಳೆಯ ರಿಯಲ್ ಎಸ್ಟೇಟ್ ವ್ಯವಹಾರ ನಡೆಯುತ್ತದೆ. ಅಲ್ಲಿ

ಜಮೀನಿನ ಬೆಲೆ ಜಾಸ್ತಿ ಇದೆ. ಇದು ಯಾವ ರೀತಿಯ ಕಾಕತಾಳೀಯವೆಂದರೆ, ಆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ದೇವನಹಳ್ಳಿ ಹೆಸರನ್ನು ಏಕೆ ಸೇರಿಸಬೇಕು? "ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 25 ಕಿಲೋಮೀಟರ್" ಎಂದು ಇಲ್ಲಿ ಹೇಳುತ್ತಾರೆ. ಇದು ಏಕೆ ಬೇಕು? ಎಷ್ಟು ಕಿಲೋಮೀಟರ್ ಎಂದು ಅವರು ಹೇಳಬೇಕಲ್ಲ. ಅಂದರೆ, ಇದೊಂದು ಪೂರ್ವಯೋಜಿತವಾಗಿದ್ದು, ಇದರ ಬೆಲೆಯನ್ನು ಹೆಚ್ಚಿಸುವುದಕ್ಕೋಸ್ಕರ, ಬೆಲೆ ನಿಗದಿಪಡಿಸುವುದಕ್ಕೋಸ್ಕರ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 20 ಕಿಲೋಮೀಟರ್ ದೂರದಲ್ಲಿರುವುದರಿಂದ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಸ್ತಾಪ ಈ ಸಭೆಯಲ್ಲಿ ಏಕೆ ಪ್ರಸ್ತಾಪವಾಗುಬೇಕಾಗಿತ್ತು?

ಆದುದರಿಂದ, ಅಲ್ಲಿನ ಜಿಲ್ಲಾ ನೋಂದಣಾಧಿಕಾರಿಗಳು ಹೇಳುತ್ತಾರೆ. ಅಲ್ಲಿ ಎಲ್ಲಾ ದಾಖಲೆಗಳನ್ನೂ ಪರಿಗಣಿಸಿ, ಪ್ರತಿ ಎಕರೆಗೆ ಕನಿಷ್ಠ ಎರಡು ಲಕ್ಷದಿಂದ ಗರಿಷ್ಠ ಮೂರೂವರೆ ಲಕ್ಷ ರೂ.ಗಳವರೆಗೂ ಇದೆಯೆಂದು ಹೇಳುತ್ತಾರೆ. ಮಾಲೀಕರನ್ನು ಕೇಳುವುದಿಲ್ಲ, ಏಜೆಂಟರನ್ನು ಕೇಳುತ್ತಾರೆ. ಜಿಲ್ಲಾಧಿಕಾರಿಗಳು ಸಭೆಗೆ ಏಜೆಂಟರನ್ನು ಸೇರಿಸುವ ಅವಶ್ಯಕತೆಯಾದರೂ ಏನಿತ್ತು? ಅವರೇಕೆ ಬರಬೇಕಾಗಿತ್ತು? ಅವರು ರೈತರೊಂದಿಗೆ ಸಂವಾದ ನಡೆಸಬಹುದಾಗಿತ್ತು. ಆದರೆ, ಅವರೊಂದಿಗೆ ಸಂವಾದ ನಡೆಸಲಿಲ್ಲ. ಪ್ರತಿ ಎಕರೆಗೂ 55 ಲಕ್ಷ ಕೊಡಿ ಸ್ವಾಮಿ ಎಂದು ಏಜೆಂಟ್ ಕೇಳುತ್ತಾನೆ. 55 ಲಕ್ಷ ಎಂದರೆ, ನಮ್ಮ ಪಕ್ಕದ ಬಿಡದಿಯಲ್ಲಿ ಎಕರೆಗೆ 35 ಲಕ್ಷ ರೂ.ಗಳನ್ನು ನಿಗದಿಪಡಿಸುತ್ತಾರೆ, ಇಲ್ಲಿಂದ ಸುಮಾರು 10–15 ಕಿಲೋಮೀಟರ್ ದೂರದಲ್ಲಿರುವ ಆನೇಕಲ್‌ನಲ್ಲಿ ಹೌಸಿಂಗ್ ಬೋರ್ಡ್‌ನವರು 15ರಿಂದ 20 ಲಕ್ಷ ರೂ.ಗಳನ್ನು ಪ್ರತಿ ಎಕರೆಗೂ ನಿಗದಿಪಡಿಸುತ್ತಾರೆ. ಆದರೆ, ಬೆಂಗಳೂರಿನಿಂದ 60 ಕಿಲೋಮೀಟರ್‌ಗಳಷ್ಟು ದೂರವಿರುವ ಜಾಗಕ್ಕೆ ಪ್ರತಿ ಎಕರೆಗೂ 55 ಲಕ್ಷ ಕೊಡಿ ಎಂದು ರೈತರು ಕೇಳುವುದಿಲ್ಲ, ರಿಯಲ್ ಎಸ್ಟೇಟ್ ಏಜೆಂಟರು ಕೇಳುತ್ತಾರೆ. ಆದರೆ, ಜಿಲ್ಲಾಧಿಕಾರಿಗಳು ಅದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಸಭೆ ಮುಂದೂಡುತ್ತಾರೆ. ಇಲ್ಲ, ಇದಕ್ಕೆ ನಾನು ಒಪ್ಪುವುದಿಲ್ಲ, ಬೆಲೆ ಜಾಸ್ತಿಯಾಗಿದೆ, ಆದುದರಿಂದ, ಮುಂದೆ ಪುನಃ ಇದನ್ನು ಪರಿಶೀಲಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿ ಮುಂದಿನ ಸಭೆಯ ದಿನಾಂಕವನ್ನು ನಿಗದಿಪಡಿಸಿಕೊಟ್ಟು ಸಭೆಯನ್ನು ಮುಂದೂಡುತ್ತಾರೆ. ಇದರ ಪರಿಣಾಮ ಜಿಲ್ಲಾಧಿಕಾರಿಗಳನ್ನು ವರ್ಗಾಯಿಸುತ್ತಾರೆ! ಏತಕ್ಕೋಸ್ಕರ ವರ್ಗಾಯಿಸುತ್ತಾರೆಂದರೆ, ನಾವು ನಡೆಸುವ ರಿಯಲ್ ಎಸ್ಟೇಟ್ ದಂಧೆಗೆ ಜಿಲ್ಲಾಧಿಕಾರಿಗಳು ಸಹಕಾರ ಕೊಡುವುದಿಲ್ಲವೆಂದು ಆ ಜಿಲ್ಲಾಧಿಕಾರಿಗಳನ್ನು ವರ್ಗಾಯಿಸುತ್ತಾರೆ. ಬೇರೆ ಜಿಲ್ಲಾಧಿಕಾರಿಗಳನ್ನು ಅವರ ಜಾಗಕ್ಕೆ ನೇಮಿಸುತ್ತಾರೆ.

ಅಧ್ಯಕ್ಷರೆ, ಮತ್ತೊಬ್ಬ ಜಿಲ್ಲಾಧಿಕಾರಿಗಳು ದಿನಾಂಕ 23.1.2009ರಲ್ಲಿ ಪುನಃ ಒಂದು ಸಭೆ ಕರೆಯುತ್ತಾರೆ. ಅನೇಕ ಸಭೆಗಳು ಭೂ ದರವನ್ನು ನಿಗದಿ ಪಡಿಸಲು ಕೋರಿರುವ ಮೇರೆಗೆ ದಿನಾಂಕ 3.11.2008ರಲ್ಲಿ ಸಮಿತಿ ಸಭೆ ಕರೆಯಬೇಕಾಗಿತ್ತು.

ಅನಂತರ, ಅನೇಕ ದಿನಾಂಕಗಳಲ್ಲಿ ಸಭೆ ನಡೆದು ಅಂತಿಮವಾಗಿ ದಿನಾಂಕ 20.3.2009ರಲ್ಲಿ ಸಭೆ ನಡೆಸಿದರು.

(4.30 pm)

ಆ ಸಭೆಯಲ್ಲಿ ಏನು ತೀರ್ಮಾನವಾಗುತ್ತದೆ? ಇದರಲ್ಲಿ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ತೋರಿಸಿರುತ್ತಾರೆ. ಎಕರೆಗೆ ಕನಿಷ್ಟ 2 ಲಕ್ಷ ಗರಿಷ್ಠ 3.5 ಲಕ್ಷ ರೂ. ಎಂದು ಪ್ರಸ್ತಾವನೆ ಆಗುತ್ತದೆ. ಮಾಲೀಕರು, ಏಜೆಂಟರು 55 ಲಕ್ಷ ರೂ. ಕೊಡಿ ಎಂದು ಕೇಳುತ್ತಾರೆ. ಆಮೇಲೆ, ಅಲ್ಲಿಯೇ ಅಕ್ಕಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಶಪಡಿಸಿಕೊಂಡಿರುವ ಜಮೀನುಗಳನ್ನು ಪ್ರತಿ ಎಕರೆಗೆ 20 ಲಕ್ಷ ರೂ.ಗಳಂತೆ ನೀಡಿರುವ ವಿಷಯವನ್ನು ಪರಿಗಣಿಸುವಂತೆ...., ಅಂದರೆ, 20 ಲಕ್ಷ ರೂ.ಗಳಂತೆ ರಾಷ್ಟ್ರೀಯ ರಸ್ತೆ ನಿರ್ಮಾಣ ಮಾಡಲಿಕ್ಕೆ ಅಕ್ಕಪಕ್ಕದ ಜಾಗಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೊಡುತ್ತಾರೆ. ಅದನ್ನೂ ಕೂಡ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತಾರೆ. ಇದೆಲ್ಲವನ್ನೂ ಪರಿಶೀಲನೆ ಮಾಡಿ ಕೊನೆಗೆ ಏಜೆಂಟರನ್ನು final ಆಗಿ ನಿಮ್ಮ rate ಏನು ಎಂದು ಕೇಳುತ್ತಾರೆ. ಏಜೆಂಟರು final ಆಗಿ 51 ಲಕ್ಷ ರೂ.ಗಳನ್ನು ಕೊಡುತ್ತೇವೆಂಬ ಮಾತನ್ನು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ತೆಗೆದುಕೊಳ್ಳುತ್ತಾರೋ ಅಥವಾ real estate Agent ಗೆ ಅನುಕೂಲವಾಗುತ್ತದೆ ಎಂದು ತೆಗೆದುಕೊಳ್ಳುತ್ತಾರೋ, 40 ಲಕ್ಷ ರೂ.ಗಳನ್ನು ಕೊಡಬೇಕಾಗುತ್ತದೆಂದು ಆ ಸಭೆಯಲ್ಲಿ ಚರ್ಚೆ ಮಾಡುತ್ತಾರೆ. ಕಡೆಗೆ ಎಲ್ಲವನ್ನೂ ಮೀರಿ ಕರ್ನಾಟಕ ಗೃಹ ಮಂಡಳಿ ವಸತಿ ಯೋಜನೆಯಲ್ಲಿ ನೀಡಲು ಉದ್ದೇಶಿಸಿರುವ ಜಮೀನಿಗೆ ಪ್ರತಿ ಎಕರೆಗೆ 43 ಲಕ್ಷ ರೂ.ಗಳನ್ನು ನಿಗದಿಪಡಿಸಲು ತೀರ್ಮಾನಿಸಲಾಯಿತು. ಗರಿಷ್ಠ 3.5 ಲಕ್ಷ ರೂ.ಗಳಂತೆ ಇದೆ. ಒಂದಕ್ಕೆ ಎರಡು ಪಟ್ಟು ಮೂರು ಪಟ್ಟು ತೆಗೆದುಕೊಳ್ಳಿ, ಆದರೆ, 20 ಪಟ್ಟು ತೆಗೆದುಕೊಳ್ಳುವುದೆಂದರೆ ಏನರ್ಥ? ಇದರ ಹಿಂದೆ ಏನೋ ಇದೆ ಎನ್ನುವ ಸಂದೇಹ ಬರುವುದಿಲ್ಲವೇ? ನೀವು ರೈತರ ಹತ್ತಿರ ಸಂವಾದ ಮಾಡುವುದಿಲ್ಲ. ಮೀಟಿಂಗ್‌ಗೆ ಏಜೆಂಟರನ್ನು ಕರೆಸುತ್ತೀರಿ. ಅಲ್ಲಿ 43 ಲಕ್ಷ ರೂ. fix ಮಾಡುತ್ತಾರೆ. Final ಆಗಿ ಜಿಲ್ಲಾಧಿಕಾರಿಗಳು 43 ಲಕ್ಷ ರೂ.ಗಳನ್ನು fix ಮಾಡುತ್ತಾರೆ. ಅದರ ನಂತರ, ದಿನಾಂಕ 17.02.2009ರಲ್ಲಿ ಕರ್ನಾಟಕ ಗೃಹ ಮಂಡಳಿ ಒಂದು ಮೀಟಿಂಗ್ ಮಾಡುತ್ತದೆ. ಜಿಲ್ಲಾಧಿಕಾರಿಗಳು ನಿಗದಿಪಡಿಸಿರುವ ಎಕರೆಯೊಂದಕ್ಕೆ 43 ಲಕ್ಷ ರೂ.ಗಳ ಬೆಲೆಯನ್ನೂ ಗಾಳಿಗೆ ತೂರುತ್ತಾರೆ. ಇವರು 50 ಲಕ್ಷ ರೂ.ಗಳಂತೆ fix ಮಾಡುತ್ತಾರೆ. ಇದು ಯಾರ ಹಣ? ಇದು ಯಾರಪ್ಪನ ಮನೆ ಆಸ್ತಿ? ಇದು ಯಾರಪ್ಪನ ಮನೆ ಹಣ? 3.5 – 4 ಲಕ್ಷ ರೂ.ಗಳಿಗೆ ಕೊಡುವ ಜಮೀನನ್ನು ಅಷ್ಟು ಬೆಲೆ ಕೊಟ್ಟು ಖರೀದಿಸಲು ಕಾರಣವೇನು? ಆ 40-50 ಲಕ್ಷ ರೂಪಾಯಿಗಳನ್ನು ರೈತರಿಗಾದರೂ ಕೊಟ್ಟಿದ್ದಾರೆಯೇ? ರೈತರಾದರೂ

ಉದ್ಧಾರವಾಗಿದ್ದರೆ ಬಿಟ್ಟುಬಿಡೋಣ. ಯಾರೋ ಮಧ್ಯವರ್ತಿಗಳಿಗೋಸ್ಕರ 50 ಲಕ್ಷ ರೂ.ಗಳಂತೆ ಕೊಡಬೇಕೆಂದು ಕರ್ನಾಟಕ ಗೃಹ ಮಂಡಳಿ ತೀರ್ಮಾನ ಮಾಡುತ್ತದೆಂದರೆ ಎಲ್ಲೋ ಒಂದು ಕಡೆ ಇದಕ್ಕೆ ಸರ್ಕಾರದಲ್ಲಿ ಒಪ್ಪಿಗೆ ಸಿಗುತ್ತದೆಂದರೆ ಏನು ಅನುಮಾನ ಬರುತ್ತದೆ? ನನಗೆ ಬಿಡಿ, ಮಾನ್ಯ ಅಧ್ಯಕ್ಷರೆ, ತಮಗೆ ಏನು ಅನುಮಾನ ಬರುತ್ತದೆ? ಇದರ ಹಿಂದೆ ಏನಿದೆ? ಅದೂ ಕೋಲಾರ ಜಿಲ್ಲೆಯಲ್ಲಿ ರೈತರ ಬಗ್ಗೆ ಸರ್ಕಾರ ಎಷ್ಟು ಧಾರಾಳವಾಗಿ ಚಿಂತನೆ ನಡೆಸಿದೆ ಎನ್ನುವುದನ್ನು ನೋಡಬಹುದು. ಬೆಂಗಳೂರಿನಿಂದ ಹತ್ತಿರದಲ್ಲಿ ಬಿಡದಿಯಲ್ಲಿ ಬೆಲೆ ಕೇಳಿದರೆ ಒಂದು ಎಕರೆಗೆ 35 ಲಕ್ಷ ರೂ. ಎಂದು ಹೇಳುತ್ತಾರೆ. ಆನೇಕಲ್‌ನಲ್ಲಿ 25 ಲಕ್ಷ ರೂ. ಎಂದು ಹೇಳುತ್ತಾರೆ. ಹತ್ತಿರವಿರುವ ಹೊಸೂರು ರೈತರ ಬಗ್ಗೆ ಕಾಳಜಿ ಇಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಬಾಲಕೃಷ್ಣರವರು ಹೇಳಿದ ಹಾಗೆ, 53 ಲಕ್ಷ ರೂಪಾಯಿಗಳ ಬೆಲೆ ನಿಗದಿಪಡಿಸಲು ಭೂಮಾಲೀಕರು ಕೋರಿದ್ದರು. ಚರ್ಚೆಯ ನಂತರ 43 ಲಕ್ಷ ರೂಪಾಯಿಗಳ ಬೆಲೆ ನಿಗದಿಗೊಳಿಸಲು ತೀರ್ಮಾನಿಸಲಾಗಿರುತ್ತದೆ. ದಿನಾಂಕ: 10-02-2009ರಂದು ನಡೆದ ಮಂಡಳಿಯ ಸಭೆಯಲ್ಲಿ ಈ ಜಮೀನುಗಳು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರದಲ್ಲಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹೊಂದಿಕೊಂಡಿರುವುದರಿಂದ ಈ ಬೆಲೆಗೆ ಭೂಮಾಲೀಕರು ಜಮೀನು ಕೊಡಲು ಒಪ್ಪಿಗೆ ಇಲ್ಲದ ಪ್ರಯುಕ್ತ ಹಾಗೂ ಸದರಿ ಮಂಡಳಿಯ ವಸತಿ ಯೋಜನೆಗೆ ಇದು ಅತ್ಯವಶ್ಯಕವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರಾರಂಭದಲ್ಲಿ demand survey ಆಗಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಎಲ್ಲೋ ಒಂದು ಕಡೆ Housing Board ನವರು ಜಮೀನು ಖರೀದಿ ಮಾಡಬೇಕಾದರೆ ಮೊದಲು demand survey ಮಾಡಬೇಕು. ಎಲ್ಲಿ demand ಇದೆ, ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಜನರಿಗೆ ಅನುಕೂಲ ಮಾಡಬೇಕೆನ್ನುವ ದೃಷ್ಟಿ ಇಟ್ಟುಕೊಂಡು ಮಾಡಬೇಕು. ಇವತ್ತಿನ Housing Board Minister ರವರು ವಿಧಾನಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಕರ್ನಾಟಕ ಗೃಹಮಂಡಳಿಯಿಂದ ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಜಮೀನನ್ನು ಖರೀದಿಸಲು ಸರ್ಕಾರಿ ಆದೇಶವಾಗಿದೆಯೇ ಎಂದು ಕೇಳಿದ್ದಕ್ಕೆ ಹೌದು, ಆಗಿದೆ ಎಂದು ಹೇಳಿದ್ದಾರೆ. ಖರೀದಿಸುವ ಜಮೀನು ಎಷ್ಟು ಎಂದು ಕೇಳಿದ್ದಕ್ಕೆ 959 ಎಕರೆ ಎಂದು ಹೇಳಿದ್ದಾರೆ. ಇದಕ್ಕೆ ಆದೇಶಿಸುವ ಮುಂಚೆ ಸರ್ಕಾರ ಬೇಡಿಕೆ ಸಮೀಕ್ಷೆ ನಡೆಸಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರ ಕೊಡುತ್ತಾರೆ. ಅಂದರೆ ಬೇಡಿಕೆ ಬೇಕಾಗಿಲ್ಲ. ಅದರ ಅವಶ್ಯಕತೆ ಇಲ್ಲ. ಯಾರೂ ಕೇಳಿಲ್ಲ. ಬೇಡಿಕೆ ಸರ್ವೆ ಮಾಡಿಸಿಲ್ಲ. ಏನು ತಿಳಿದುಕೊಳ್ಳಬೇಕು? ಮಾತನಾಡಬೇಡಿ, ಕೂಗಾಡಬೇಡಿ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಬಾಲಕೃಷ್ಣರವರೆ, ನೀವು ಈ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಬೇಡಿಕೆ ಸಮೀಕ್ಷೆ ನಡೆಸಿದೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳುತ್ತಾರೆ. ಒಂದು ವೇಳೆ ಖರೀದಿಸಲು ತೀರ್ಮಾನವಾಗಿದ್ದಲ್ಲಿ ಪ್ರತಿ ಎಕರೆಗೆ ಗೊತ್ತುಪಡಿಸಿರುವ ದರ ಎಷ್ಟು ಎಂದು ಕೇಳಿದ್ದಕ್ಕೆ 50 ಲಕ್ಷ ರೂ.ಗಳಂತೆ 959 ಎಕರೆ ಜಮೀನನ್ನು ಖರೀದಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ. ಅಂದರೆ, 500 ಕೋಟಿ ರೂ. ಆಯಿತು. ಈ ಬಗ್ಗೆ ನಾವು ಮಾತನಾಡಬಾರದೆ?

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರುಗಳೆ, ಹೀಗೇಕೆ ಮಾಡುತ್ತೀರಿ? ಬಾಲಕೃಷ್ಣರವರೆ, ತಾವು ಈ ಕಡೆ ನೋಡಿಕೊಂಡು ಮಾತನಾಡಿ. ತಾವೇಕೆ ಆ ಕಡೆಗೆ ನೋಡುತ್ತೀರಿ? Address me. Address the Speaker. Please.

ಶ್ರೀ ವೆಂಕಟರಮಣಪ್ಪ(ರೇಷ್ಮೆ ಸಚಿವರು): ಬಾಲಕೃಷ್ಣರವರು ಈ ಕಡೆ ನೋಡಿಕೊಂಡು ಮಾತನಾಡಲಿ. ನೀವು ಜಗಳ ಕಾಯುವುದಕ್ಕೋಸ್ಕರ ಆ ಕಡೆ ನೋಡಿಕೊಂಡು ಹೇಳುತ್ತಿದ್ದೀರಿ. ನೀವು ಅಧ್ಯಕ್ಷರ ಕಡೆಗೆ ನೋಡಿಕೊಂಡು ಮಾತಾಡಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಇನ್ನು ಮುಂದಿನ ವಿಷಯ ಬಹಳ ಸ್ವಾರಸ್ಯಕರವಾಗಿದೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್: ಮಾನ್ಯ ಅಧ್ಯಕ್ಷರು, ಸದಸ್ಯರು ಮಾತನಾಡುವಾಗ ಬೇರೆಯವರು ಮಾತನಾಡಿದರೆ ಅವರು ಹೇಗೆ ಹೇಳಲಿಕ್ಕೆ ಆಗುತ್ತದೆ. ತಾವು ಅವರನ್ನು control ಮಾಡಬೇಕು.

ಅಧ್ಯಕ್ಷರು: Control ಮಾಡುತ್ತೇನೆ. ಬಾಲಕೃಷ್ಣರವರೆ, ಈ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಭೂಮಾಲೀಕರು ಯಾರ್ಯಾರು? GPA holders ಯಾರು? ಸಮೀಕ್ಷೆ ಇಲ್ಲದೆ ಏಕೆ ಅಲ್ಲಿ ಹೋದರು ಎನ್ನುವ ಪ್ರಶ್ನೆಗೆ ಇಲ್ಲಿ ಉತ್ತರ ಸಿಗುತ್ತದೆ. ಭೂಮಾಲೀಕರು– ಎಸ್.ಎಂ. ಶ್ರೀನಿವಾಸ ಶೆಟ್ಟಿ ಬಿನ್ ನಾರಾಯಣ ಶೆಟ್ಟಿ ಇವರು ಯಾರು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ತಿಳಿಸಬೇಕು. ಹಿಂದೆ ಇದ್ದಂಥ ಗೃಹ ಮಂಡಳಿ ಸಚಿವರಿಗೂ ಅವರಿಗೂ ಏನು ಸಂಬಂಧ ಎಂಬುದನ್ನು ತಿಳಿಸಬೇಕು. ಅವರು register ಮಾಡಿಕೊಟ್ಟಿರುವ ಪತ್ರ ಇಲ್ಲಿದೆ. ಡಿಸೆಂಬರ್ 2007ರಲ್ಲಿ 1 ಎಕರೆ 13 ಗುಂಟೆ ಜಾಗವನ್ನು 6–6.5 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳುತ್ತಾರೆ. Housing Board ನಿಂದ ಒಂದು ವರ್ಷದ ನಂತರ ಅವರಿಗೆ 50 ಲಕ್ಷ ಸಿಗುತ್ತದೆ. ಸ್ವಾಮಿ, ಈ ಭಾಗ್ಯ, ಈ ಲಾಟರಿ ಯಾರಿಗುಂಟು ಯಾರಿಗಿಲ್ಲ? ಅದೂ ಬೆಂಗಳೂರಿನ ದೇವನಹಳ್ಳಿಯಲ್ಲಿ ಅಲ್ಲ. ಪಾಪ ನಮಗೆ ಗಂಗಾಜಲ ಕುಡಿಸಿ ಲಾಡು ತಿನ್ನಿಸಿ ಸರ್ಕಾರಕ್ಕೆ ತಿರುಪತಿ ನಾಮ ಇಟ್ಟರೆ ಹೇಗೆ? ಇದರಲ್ಲಿ ವ್ಯತ್ಯಾಸ ಎಷ್ಟು? ಇದು ಅಧಿಕಾರ ದುರುಪಯೋಗ ಅಲ್ಲವೇ? ಇನ್ನೊಬ್ಬರು ಮಾಲೂರಿನ ರಮೇಶ್ ಎನ್ನುವವರು ಇದರಲ್ಲಿ entry ಆಗುತ್ತಾರೆ.

ಶ್ರೀನಿವಾಸ ಶೆಟ್ಟಿ ಬುದ್ಧಿವಂತರು. Real Estate ಅನುಭವ ಏನು ಮಾಡುತ್ತಾರೆಂದರೆ ಜಮೀನನ್ನು ತಮ್ಮ ಹೆಸರಿನಲ್ಲಿ ಮಾಡಿಕೊಳ್ಳುವುದಿಲ್ಲ. ಬೇರೆಯವರ ಹೆಸರಿನಲ್ಲಿ ಮಾಡಿಸಿರುತ್ತಾರೆ. ಲಾಭ ಬಂದಾಗ ಅವರ ಕಡೆಯಿಂದ ಮಾಡಿಸುತ್ತಾರೆ. ಏಕೆಂದರೆ, ಗೊತ್ತಾಗಬಾರದಲ್ಲ! ಎಲ್ಲಾ ಜಮೀನು ಇವರದೇ ಎನ್ನುತ್ತಾರಲ್ಲ.

ಅವರು GPA ಮಾಡಿಸಿಕೊಂಡಿದ್ದರು. ಹೌಸಿಂಗ್ ಬೋರ್ಡಿನಲ್ಲಿ ರೈತರಿಗೆ ದುಡ್ಡು ಕೊಡದೇ, GPA ಮೇಲೆ ಹಣ ಕೊಡಬಹುದೇ? ಎಂದು ದಯಮಾಡಿ ಮಾನ್ಯ ಮಂತ್ರಿಗಳು ನಮಗೆ ಹೇಳಬೇಕು. ಅವರು GPA ಮಾಡಿಸಿಕೊಂಡಿರುವುದಕ್ಕೂ, ಕರ್ನಾಟಕ ಗೃಹ ಮಂಡಳಿಗೆ ರಿಜಿಸ್ಟರ್ ಮಾಡಿಕೊಟ್ಟಿರುವುದಕ್ಕೂ ನಡುವೆ ಕೇವಲ 10 ದಿವಸಗಳ ವ್ಯತ್ಯಾಸ ಮಾತ್ರವಿದೆ. ಬೇರೆ ರೀತಿಯ GPA ಮಾಡಿಸಿಕೊಂಡಿದ್ದಲ್ಲಿ, ಏನಾದರೂ ವ್ಯತ್ಯಾಸವಾದರೆ ದುಡ್ಡು ರೈತರಿಗೆ ನೇರವಾಗಿ ಹೋಗಿ ಬಿಡುತ್ತದೆ ಎಂಬ ಭಯದಿಂದ ಅವರು ರಿಜಿಸ್ಟರ್ಡ್ GPA ಮಾಡಿಸಿಕೊಂಡಿದ್ದರು. ಖರೀದಿ ಮಾಡಬೇಕೆಂದು ಕರ್ನಾಟಕ ಗೃಹ ಮಂಡಳಿ ತೀರ್ಮಾನ ಮಾಡುತ್ತದೆ. ಇವರು ಹೋಗಿ GPA ಮಾಡಿಸಿಕೊಳ್ಳುತ್ತಾರೆ. 10 ದಿವಸಗಳಲ್ಲೇ ಹೌಸಿಂಗ್ ಬೋರ್ಡ್‌ನವರು ಅವರಿಂದ purchase ಮಾಡಿಕೊಳ್ಳುತ್ತಾರೆ. GPA holdersಗಳಿಗೆ ನೇರವಾಗಿ ಹಣ ಕೊಡಬಹುದೇ? ನೀವು ರೈತರಿಗೆ 50 ಲಕ್ಷ ರೂ.ಗಳನ್ನು ಕೊಟ್ಟಿದ್ದರೆ, ನಾವು ನಿಮಗೆ ಕೈ ಮುಗಿಯುತ್ತಿದ್ದೆವು. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಂತಹ ಸರ್ಕಾರ ರೈತರಿಗೋಸ್ಕರ 50 ಲಕ್ಷ ರೂ.ಗಳನ್ನು ಕೊಟ್ಟಿದೆ ಎಂಬುದನ್ನು ಆಧಾರವಾಗಿ ಇಟ್ಟುಕೊಂಡು ನಾವೂ ಸಹ ಬಿಡದಿಯಲ್ಲಿ 70-80 ಲಕ್ಷ ರೂ.ಗಳನ್ನು ಕೇಳಬಹುದು ಎಂದು ನಾವೂ ಸಹ ಸುಮ್ಮನೆ ಇರುತ್ತಿದ್ದೆವು. ಜಿಲ್ಲಾಧಿಕಾರಿಗಳು ಸಭೆಗೆ ಮಧ್ಯವರ್ತಿಗಳನ್ನು ಕರೆಯತಕ್ಕಂಥ ಅವಕಾಶ ಇದೆಯೇ? GPA holders ಮತ್ತು ಮಧ್ಯವರ್ತಿಗಳನ್ನು ಜಿಲ್ಲಾಧಿಕಾರಿಗಳು ಸಭೆಗೆ ಕರೆದಿದ್ದಾರೆ. ಭೂ ಮಾಲೀಕರು ಮತ್ತು ಭೂ ಮಾಲೀಕರ ಪ್ರತಿನಿಧಿಗಳು ಸಭೆಯಲ್ಲಿದ್ದರು ಎಂಬುದು ಸರ್ಕಾರದ ದಾಖಲೆಗಳಲ್ಲಿದೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಕೋಪ ಇದೆ. ನಾನು ಒಂದು ಮಾತನ್ನು ಹೇಳಿದೆ. ಇಷ್ಟು ದಾಖಲೆಗಳು ನಮಗೆ ಸರ್ಕಾರದಿಂದ ಸಿಕ್ಕಿದೆ. ಶ್ರೀನಿವಾಸ ಶೆಟ್ಟಿ ಎಂಬುವವರು ಯಾರು? ಅವರ ಜಮೀನನ್ನು ಏತಕ್ಕಾಗಿ ತೆಗೆದುಕೊಂರು? ಆ ಜಮೀನನ್ನೇ ಅಲ್ಲಿಗೆ ಏಕೆ ಹೋಗಿ ತೆಗೆದುಕೊಂಡರು? ಏಕೆ ಸಮೀಕ್ಷೆ ನಡೆಸದೆ ತೆಗೆದುಕೊಂಡರು ಎಂಬುದನ್ನು ಸರ್ಕಾರ ಹೇಳಲಿ. ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ನೀವು ಈ ರೀತಿ ಮಾತನಾಡುವುದು ಸರಿಯಲ್ಲ. ನೀವು ನೇರವಾಗಿ subject ಮೇಲೆ ಮಾತನಾಡಿ. ನೀವು ಯಾವುದಕ್ಕೆ

ಯಾವುದನ್ನೋ comparison ಮಾಡಲಿಕ್ಕೆ ಹೊರಟರೆ, ಮತ್ತೆ again ಸಮಸ್ಯೆ ಪ್ರಾರಂಭವಾಗುತ್ತದೆ. ಆ ರೀತಿ ನೀವು ಮಾತನಾಡುವ ಅವಶ್ಯಕತೆ ಇಲ್ಲ. ಚುನಾವಣೆ ಗೆಲ್ಲುವುದಕ್ಕೂ ನೀವು ಮಾತನಾಡುವುದಕ್ಕೂ ಏನು ಸಂಬಂಧವಿದೆ? ಇದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ವಿ.ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಸೋಮಣ್ಣನವರೆ, ನಾನು ಮಾತನಾಡಿ ಮುಗಿಸಿದ ಮೇಲೆ, ನೀವು ಉತ್ತರ ಹೇಳಬೇಕಾದರೆ ಹೇಳಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ನೀವು ವಿಷಯ ಮಂಡನೆ ಮಾಡಿ. ನಿಮ್ಮ ಕಡೆ ಇರುವ details ಎಲ್ಲವನ್ನೂ ಹೇಳಿ. ಆದರೆ ಇವತ್ತು ಚುನಾವಣೆ ಗೆಲ್ಲುವುದಕ್ಕೂ, ಈ ವಿಷಯಕ್ಕೂ ನೀವು compare ಮಾಡುವುದಕ್ಕೆ ಹೋದರೆ ಹೇಗೆ?

(ಗೊಂದಲ)

ಶ್ರೀ ಆರ್.ಅಶೋಕ್:- ಅವರು ಹಿಂದೆ 16 ಸೀಟುಗಳನ್ನು ಗೆದ್ದಿದ್ದರು. ಆಗ ಅವರು ಹೇಗೆ ಗೆದ್ದಿದ್ದರು? ಗೆಲ್ಲವುದಕ್ಕೆ ಅವರು ಆಗ ಏನು ಮಾಡಿದ್ದರು? ಎಲ್ಲಾ ಚುನಾವಣೆಯಲ್ಲೂ ಗೆದ್ದು 20 ವರ್ಷ ಅಧಿಕಾರ ಮಾಡಿದ್ದಿರಲ್ಲಾ, ಆಗ ನೀವು ಎಷ್ಟು ಹಣ ಮಾಡಿದ್ದಿರಿ? ಯಾವ್ಯಾವ ಇಲಾಖೆಗಳಿಂದ ಎಷ್ಟೆಷ್ಟು ದುಡ್ಡು collect ಮಾಡಿದ್ದಿರಿ? ಆಪಾದನೆ ಮಾಡುವುದಕ್ಕೆ ಮುಂಚೆ ಈ ಮಾಹಿತಿಯನ್ನು ನೀವು ನಮಗೆ ಕೊಡಿ. ನೀವು ಎಷ್ಟು ದುಡ್ಡು ಮಾಡಿದ್ದಿರಿ?...

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ವಿಷಯ ಮಂಡನೆ ಮಾಡುವಾಗ ಈ ರೀತಿಯಾಗಿ ಹೇಳಿ unnecessary ನೀವು proceedings stall ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಆರ್.ಅಶೋಕ್:- ... ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಭೂಮಿಯನ್ನು ಯಾರ್ಯಾರಿಗೆ acquire ಮಾಡಿದ್ದೀರಿ? ...

(ಗೊಂದಲ)

ಅಧ್ಯಕ್ಷರು:- ಆ ಹೇಳಿಕೆಯನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ.

(ಗೊಂದಲ)

ಶ್ರೀ ಆರ್.ಅಶೋಕ್:- ಮಾನ್ಯ ಅಧ್ಯಕ್ಷರೆ, ಇಲ್ಲಿ 224 ಜನ ಗೆದ್ದು ಬಂದಿದ್ದೇವೆ. ಲೋಕಸಭಾ ಚುನಾವಣೆಯಲ್ಲೂ ಸಹ ಗೆದ್ದು ಬಂದಿದ್ದಾರೆ. ಯಾರು ನಮಗೆ ಓಟ್ ಮಾಡಿದ್ದಾರೋ, ಅವರಿಗೆಲ್ಲಾ ಇವರು ಅವಮಾನ ಮಾಡುತ್ತಿದ್ದಾರೆ.

ಗೆಲ್ಲಿಸಿ ಕಳುಹಿಸಿರುವ ಮತದಾರರನ್ನು ಇವರು ಅವಹೇಳನ ಮಾಡುತ್ತಿದ್ದಾರೆ. ಈ ಬಗ್ಗೆ ನೀವು ಕ್ಷಮಾಪಣೆ ಕೇಳಬೇಕು...

(ಗೊಂದಲ)

ಶ್ರೀ ಆರ್.ಅಶೋಕ್:- ನೀವೂ ಸಹ ಗೆದ್ದು ಬಂದಿದ್ದೀರಿ. ನೀವೆಲ್ಲರೂ ಸಹ ದುಡ್ಡು ಕೊಟ್ಟು ಗೆದ್ದು ಬಂದಿದ್ದೀರಾ? ಎಂದು ಹೇಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ನಿಮ್ಮ ಇತಿಹಾಸವೆಲ್ಲಾ ನಮಗೆ ಗೊತ್ತಿದೆ. ಪೇಪರ್‌ನಲ್ಲಿ ಮುಖಪುಟದಲ್ಲಿ ಪೂರ್ತಿಯಾಗಿ ನಿಮ್ಮ ಇತಿಹಾಸವೇ ಬಂದಿದೆ. ಎಲ್ಲಾ ಗಣ್ಯ ವ್ಯಕ್ತಿಗಳ ಚರಿತ್ರೆಯೇ ಅದರಲ್ಲಿ ಬಂತು...

(ಗೊಂದಲ)

ಶ್ರೀ ಆರ್.ಅಶೋಕ್:- ...ಯಾರ್‍ಯಾರು ಹೇಗೆ ಗೆದ್ದರು ಎಂಬ ಚರ್ಚೆ ಇಲ್ಲಿ ಬೇಡ. ಇವರು ಯಾವ ರೀತಿಯಾಗಿ ಗೆದ್ದರು ಎಂಬ ಬಗ್ಗೆ ನಮ್ಮ ಹತ್ತಿರವೂ ಸಹ ಮಾಹಿತಿ ಇದೆ. ಅವರು ಏನೇನು ಅಕ್ರಮಗಳನ್ನು ಮಾಡಿದ್ದಾರೆ ಎನ್ನುವಂತಹ ಮಾಹಿತಿ ನಮ್ಮ ಬಳಿ ಇದೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ನೀವು ವಿಷಯವನ್ನು ಮಂಡನೆ ಮಾಡಿ, details ಕೊಡಿ. ಈ ರೀತಿ ನೀವು ಯಾವುದು ಯಾವುದಕ್ಕೋ ವಿಷಯಾಂತರ ಮಾಡಿದರೆ, ಅದು ಸರಿಯಾಗುವುದಿಲ್ಲ.

(ಗೊಂದಲ)

ಶ್ರೀ ಆರ್.ಅಶೋಕ್:- ನೀವು 50 ವರ್ಷದ್ದು ಏನೇನು ಮಾಡಿದ್ದೀರಿ ಎಂಬುದನ್ನು ಕೊಟ್ಟರೆ, ನಾವು ಒಂದು ವರ್ಷದ್ದನ್ನು ಕೊಡುವುದಕ್ಕೆ ರೆಡಿಯಾಗಿದ್ದೇವೆ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ... ಅವರ ಕಾಲದಲ್ಲಿ 400 ಎಕರೆ de-notification ಮಾಡಿರುವುದರ ಬಗ್ಗೆ ನಾನು ರೆಕಾರ್ಡ್ಸ್ ತಂದು ತೋರಿಸುತ್ತೇನೆ. ಅವರು ಅದನ್ನು ಒಪ್ಪಿಕೊಳ್ಳುತ್ತಾರಾ? ...

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ನೀವು ವಿಷಯವನ್ನು ಮಂಡನೆ ಮಾಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಚರ್ಚೆಗೆ ನಾವು ಉತ್ತರ ಕೊಡುತ್ತೇವೆಂದು ಸರ್ಕಾರದ ಪರವಾಗಿ ಹೇಳಿದ್ದಾರೆ. ನೀವು ಹೇಳಿದ ಎಲ್ಲಾ ವಿಷಯಕ್ಕೂ ಸಹ ನಾವು ಉತ್ತರ ಕೊಡುತ್ತೇವೆ ಎನ್ನುವಂತಹ ಮಾತನ್ನೂ ಸಹ ಅವರು ಹೇಳಿದ್ದಾರೆ. ಚರ್ಚೆಯಲ್ಲಿ ಭಾಗವಹಿಸಿ, ವಿಷಯವನ್ನು ಮಂಡನೆ ಮಾಡಿ,

details ಕೊಡಿ. ಅದನ್ನು ಬಿಟ್ಟು, ರಾಜಕೀಯ ಹಿನ್ನೆಲೆಯನ್ನು ಇಟ್ಟುಕೊಂಡು ಅದನ್ನೆಲ್ಲಾ ಮಾತನಾಡಲಿಕ್ಕೆ ಹೋದರೆ ಆಪಾದನೆ ಎನ್ನುವುದು ಪ್ರಾರಂಭವಾಗುತ್ತದೆ. ಅದಕ್ಕೆ ಏನಾದರೂ ದಾಖಲೆಗಳಿದ್ದರೆ ನೀವು ಕೊಡಿ. ಅದನ್ನು ಬಿಟ್ಟು ಈ ರೀತಿ ಬೇರೆ ಬೇರೆ ವಿಷಯಾಂತರ ಮಾಡುವಂಥಾದ್ದು ಸರಿಯಲ್ಲ. ಇದು ಸದನಕ್ಕೆ ಗೌರವ ತರುವುದಿಲ್ಲ. ಅದಕ್ಕಾಗಿ ನಿಮ್ಮ ಹೇಳಿಕೆಯನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಅಧ್ಯಕ್ಷರೆ, ಆಯಿತು.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ...ನಿಮಗೆ ಎಷ್ಟು ನಾಚಿಕೆಯಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ...

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ದಯವಿಟ್ಟು ತಾವು continue ಮಾಡಿ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ...ಹಿಂದಿದ್ದ ಮಂತ್ರಿಗಳು ಎಂತೆಂತಹ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂಬುದರ documents ನಾನು ಕೊಡಲೇ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಶ್ರೀನಿವಾಸ್‌ರವರೆ, ನೀವು ಆ ಬಗ್ಗೆ ಚರ್ಚಿಸಲು ಪ್ರತ್ಯೇಕ ನೋಟಿಸ್ ಕೊಡಿ. ಆಗ ಆ ಬಗ್ಗೆ ಚರ್ಚಿಸೋಣ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ದಯವಿಟ್ಟು ತಾವು continue ಮಾಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರು ಮಾತನಾಡಲಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಈ ಒಂದು ವಿಚಾರದ ಮಹತ್ವ ನಿಜಕ್ಕೂ ಕೂಡ ಜಾಸ್ತಿ ಇರಬೇಕು ಎಂಬ ಅಪೇಕ್ಷೆ ಇದ್ದರೆ, ನೀವು ನೇರವಾಗಿ subjectಗೆ ಬನ್ನಿ ಎಂದು ನಾನು ಹೇಳಬಯಸುತ್ತೇನೆ. ಅದನ್ನು ಬಿಟ್ಟು, ನೀವು ಜೊತೆ ಜೊತೆಯಲ್ಲೇ ಬೇರೆಯದನ್ನು ಹೇಳುತ್ತಾ ಹೋದರೆ, ನಾವೂ ಹೇಳಬೇಕಾಗುತ್ತದೆ. ಇವತ್ತು ಏನಾಗಿದೆ? ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೆ, ಕುಳಿತುಕೊಳ್ಳಿ, ಮಾನ್ಯ ಬಾಲಕೃಷ್ಣರವರೆ, ನೀವು continue ಮಾಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ...ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಎಲ್ಲಿ?

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಿದ್ದರಾಮಯ್ಯನವರು ನಿಂತಿದ್ದ ಮೈಸೂರು ಚುನಾವಣೆಯಲ್ಲಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಿಮ್ಮ ಬಳಿ ಅಧಿಕಾರ ಇದೆ, ನೀವು ಆ ಬಗ್ಗೆ ತನಿಖೆ ಮಾಡಿಸಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ...ನಾನು ತುಂಬಾ ಸ್ಪಷ್ಟವಾಗಿ ಮಾನ್ಯ ಬಾಲಕೃಷ್ಣರವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ನೀವು ಮಾತನಾಡಿ, ನಾವು ಇಲ್ಲ ಎನ್ನುವುದಿಲ್ಲ. ಆದರೆ ಇದಕ್ಕೆ ರಾಜಕೀಯ mix ಮಾಡುತ್ತಾ ಹೋಗುವುದು ಬೇಡ. ನೀವು ಆ ರೀತಿ ರಾಜಕೀಯ mix ಮಾಡುತ್ತಾ ಹೋದರೆ, ನಿಮಗಿಂತ ಜಾಸ್ತಿ ನಮಗೂ ಮಾತನಾಡಲಿಕ್ಕೆ ಬರುತ್ತದೆ. ನಮ್ಮಲ್ಲಿ ಜನ ಜಾಸ್ತಿಯಿದ್ದಾರೆ. ಇದಕ್ಕೆ ಯಾರೂ ಹೆದರುವುದಿಲ್ಲ...

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಚರ್ಚೆ ಇಲ್ಲಿ ಪ್ರಾರಂಭವಾಗಿದೆ. ಅವರು ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು, ಅದನ್ನು ಮಾನ್ಯ ಮುಖ್ಯ ಮಂತ್ರಿಗಳ ಒಪ್ಪಿಗೆ ಪಡೆದು ತಾವು ಇಲ್ಲಿ ಚರ್ಚೆಗೆ ಅನುಮತಿ ಕೊಟ್ಟು ವಿರೋಧ ಪಕ್ಷದವರ ಮೇಲೆ ದೊಡ್ಡ ಉಪಕಾರ ಮಾಡಿದ್ದೀರಿ. ಬಹಳ ಸಂತೋಷ. ಈ ಮಧ್ಯದಲ್ಲಿ ಒಂದು ಅಗಾಧವಾದ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಗೌರವಾನ್ವಿತ ಈಶ್ವರಪ್ಪನವರು ಈ ರಾಜ್ಯಕ್ಕೆ ಒಂದು ದೊಡ್ಡ ಸಂದೇಶವನ್ನು ಕೊಟ್ಟಿದ್ದಾರೆ. ಏನು ಆ ಸಂದೇಶ ಎಂದರೆ, ರಾಜ್ಯದ ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ಮಾನ್ಯ ಡಿ.ಕೆ. ಶಿವಕುಮಾರ್‌ರವರು ಮತ್ತು ಮಾನ್ಯ ಈಶ್ವರಪ್ಪನವರು ಇಲ್ಲಿ ಈ ಸದನದ ಸದಸ್ಯರು ಯಾರು ಅಲ್ಲ, ಅವರ ಬಗ್ಗೆ ದಯವಿಟ್ಟು ಇಲ್ಲಿ ಮಾತನಾಡುವುದಕ್ಕೆ ಹೋಗಬೇಡಿ. ಅವರು ಮಂತ್ರಿಗಳಾಗಿರಬಹುದು ಸದಸ್ಯರಾಗಿರಬಹುದು ಯಾರೇ ಇರಬಹುದು ಅದನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಈ ಸದನದ ಸದಸ್ಯರು ಯಾರು ಅಲ್ಲ, ಅವರ ಬಗ್ಗೆ ಮಾತನಾಡುವುದು ಬೇಡ. ಚರ್ಚೆ ಮಾಡುವುದು ಬೇಡ. ಅದನ್ನು

ನಾನು ಕಡತದಿಂದ ತೆಗೆದು ಹಾಕಿದ್ದೇನೆ. ನಾನು ಮುಂದಕ್ಕೆ allow ಮಾಡುವುದಿಲ್ಲ. ಇದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ಈ ಸದನದ ಸದಸ್ಯರ ಬಗ್ಗೆ ಮಾತನಾಡಿ. ನಾನು ಈಗಾಗಲೇ ಕಡತದಿಂದ ತೆಗೆದು ಹಾಕಿದ್ದೇನೆ. ಅದರ ಬಗ್ಗೆ no further discussion. I will not allow. ಸಭಾಧ್ಯಕ್ಷನಾಗಿ ನಾನು allow ಮಾಡುವುದಿಲ್ಲ. ಮಾನ್ಯ ಬಾಲಕೃಷ್ಣರವರೇ, ನೀವು ಮುಂದುವರೆಸಿ.

ಶ್ರೀ ಡಿ.ಕೆ.ಶಿವಕುಮಾರ್: ಅದು ಕಡತದಲ್ಲಿ ಇರಬೇಕು.

ಅಧ್ಯಕ್ಷರು: I will not allow. ಈ ವಿಷಯದ ಬಗ್ಗೆ ನಾನು allow ಮಾಡಿಲ್ಲ. ಇದಕ್ಕೆ ಮುಕ್ತಾಯ ಇಲ್ಲ. ಈ ರೀತಿ ಮಾತನಾಡುತ್ತಾ ಹೋದರೆ ಮತ್ತೊಬ್ಬ ಲೋಕಸಭಾ ಸದಸ್ಯರು MP ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. I will close it. ಮಾನ್ಯ ಬಾಲಕೃಷ್ಣರವರೇ, ನೀವು ನೇರವಾಗಿ ವಿಷಯಕ್ಕೆ ಬನ್ನಿ. ಎಲ್ಲೆಲ್ಲೋ ತೆಗೆದುಕೊಂಡು ಹೋಗುವುದು ಬೇಡ. ಮಾನ್ಯ ಡಿ.ಕೆ.ಶಿವಕುಮಾರ್‌ರವರೇ ನಾನು ಅಲೋ ಮಾಡಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, I am a point of order.

ಅಧ್ಯಕ್ಷರು: ಯಾವ ವಿಷಯದ ಮೇಲೆ ಪಾಯಿಂಟ್ ಆಫ್ ಆರ್ಡರ್?

ಶ್ರೀ ಡಿ.ಕೆ.ಶಿವಕುಮಾರ್: I will tell you. ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, . . .

ಶ್ರೀ ಆರ್.ಅಶೋಕ್: ಎಲ್ಲಾ ವಿಚಾರಗಳನ್ನು ಕಡತದಿಂದ ತೆಗೆದ ಮೇಲೆ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಅಧ್ಯಕ್ಷರು: ಆ ವಿಷಯದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆ ವಿಷಯದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು Point of order ಎಂದು ಹೇಳುತ್ತಿದ್ದಾರೆ. Point of order should not become point of disorder. ನೀವು ಯಾವ ವಿಷಯದ ಅಡಿಯಲ್ಲಿ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದೀರಿ? Under what provision, ದಯವಿಟ್ಟು ಮೊದಲು ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್: I will just tell you. ಹೇಳುವುದಕ್ಕೆ ಬಿಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಎಲ್ಲಾ ಸದಸ್ಯರಿಗೂ ಅಧಿಕಾರಿ ಇದೆ. ಪಾಯಿಂಟ್ ಆಫ್ ಆರ್ಡರ್ ಏನೆಂದು ಮೊದಲೇ ಹೇಳುವುದಿಲ್ಲ. ಅವರು ಪ್ರಸ್ತಾಪ ಮಾಡಿದ ಮೇಲೆ ಪಾಯಿಂಟ್ ಆಫ್ ಆರ್ಡರ್ ಆಗುತ್ತದೆ ಇಲ್ಲವೆಂದು ತೀರ್ಮಾನ ಮಾಡುವವರು ಅಧ್ಯಕ್ಷರು. ನೀವು ಮೊದಲೇ objection ಮಾಡಿದರೆ ಹೇಗೆ ಹೇಳುವುದಕ್ಕೆ ಆಗುತ್ತದೆ? ಯಾವ ಪ್ರಾವಿಷನ್ ಎಂದು ಹೇಳುವುದಕ್ಕೆ ಬಿಡದೆ ಇದ್ದರೆ ಹೇಗೆ? Let him make a

submission. It is for the Speaker to consider whether it is a point of order or not.

ಶ್ರೀ ಎಸ್.ಸುರೇಶ್ ಕುಮಾರ್: ನಾವು ಪಾಯಿಂಟ್ ಆಫ್ ಆರ್ಡರ್ ಅಲ್ಲವೆಂದು ಹೇಳಲಿಲ್ಲ. ಯಾವ ಪ್ರಾವಿಷನ್‌ನಲ್ಲಿ ರೈಸ್ ಮಾಡುತ್ತಿದ್ದಾರೆ?

ಅಧ್ಯಕ್ಷರು: ಯಾವ ವಿಷಯಕ್ಕೆ ಸಂಬಂಧ ಪಟ್ಟ ಹಾಗೆ ಎಂದು ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಅವರು He was a member of the Cabinet. Number one, ಇದು ಈ ಮನೆಯ ಸ್ವತ್ತು ಇದು. It is a property of the house.

ಅಧ್ಯಕ್ಷರು: ಈ ವಿಷಯದ ಮೇಲೆ ಮಾತನಾಡುವ ಸಮಯದಲ್ಲಿ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಈ statement, it is a property of this house. ಅವರು ಹೇಳಿ ಆಗಿ ಹೋಯಿತು. ಚರ್ಚೆ ಆಗಿ ಹೋಯಿತು.

ಅಧ್ಯಕ್ಷರು: ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಅದರ ಬಗ್ಗೆ ಚರ್ಚೆ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: You cannot withdraw, ಮಾನ್ಯ ಅಧ್ಯಕ್ಷರೆ, ಅವರ statement ಅನ್ನು ನೀವು ಹೇಗೆ ಕಡತದಿಂದ ತೆಗೆದು ಹಾಕುತ್ತೀರಿ?

ಅಧ್ಯಕ್ಷರು: ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಯಾರು ಈ ಸದನದ ಸದಸ್ಯರು ಅಲ್ಲ, ಅವರ ಬಗ್ಗೆ ಮಾತನಾಡಬಾರದು ಎಂದು ಹೇಳಿದ್ದೇನೆ. ಆದ್ದರಿಂದ I will not allow.

ಶ್ರೀ ಡಿ.ಕೆ.ಶಿವಕುಮಾರ್: ಒಂದು ವಸ್ತುವನ್ನು ಈ ಮನೆಗೆ ಕೊಟ್ಟಿದ್ದಾರೆ. ಈ ರಾಜ್ಯಕ್ಕೆ ಕೊಟ್ಟಿದ್ದಾರೆ. ಈ ರಾಜ್ಯ ಲೂಟಿ ಮಾಡಿದ್ದಾರೆಂದು ಹೇಳಿದ್ದಾರೆ. ಎಷ್ಟು ಲೂಟಿ ಆಗಿದೆ, ಯಾರ್ಯಾರು ಸೇರಿದ್ದಾರೆ, ಇವರದು ಏನು ಭಾಗ ಇದೆ, ಇದನ್ನು ನೀವು ಚರ್ಚೆ ಮಾಡಬೇಡಿ ಎಂದು ಹೇಳಿದರೆ ಹೇಗೆ? ಇದು ಸರಿ ಇಲ್ಲ ಅಧ್ಯಕ್ಷರೆ, ನೀವು ನಮಗೆ ನ್ಯಾಯವನ್ನು ಒದಗಿಸಿ ಕೊಡಬೇಕು. Injustice is being flow from the seat of justice.

ಶ್ರೀ ಹೆಚ್.ಡಿ.ರೇವಣ್ಣ: ಒಬ್ಬ ಆಡಳಿತ ಪಕ್ಷದ ಮಂತ್ರಿ ಆಗಿದ್ದು. . .

ಅಧ್ಯಕ್ಷರು: ಈ ರೀತಿ ಕಾಮೆಂಟ್ ಮಾಡುವುದು ಸರಿಯಲ್ಲ. ನಾನು ಮಂತ್ರಿಗಳಿಗೆ ವಾರ್ನ್ ಮಾಡಿದ್ದೇನೆ. ಈ ರೀತಿ ಪದೇ ಪದೇ ಸದನದಲ್ಲಿ ಇಲ್ಲದೆ ಇರುವ ಸದಸ್ಯರ ಬಗ್ಗೆ ಮಾತನಾಡಬೇಡಿ ಎಂದು ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಾಳೆ ಈ ಬಗ್ಗೆ ಪತ್ರಿಕೆಯಲ್ಲಿ ಬಂದರೆ ಏನು ಹೇಳುವುದು? ಅವರು ಸದನದಲ್ಲಿ ಇಲ್ಲ, ನಾನು ಹೇಳಿರುವುದು ತಪ್ಪು ಎಂದು ಮಾನ್ಯ ಸಚಿವರು ಹೇಳಲಿ, ಮಾನ್ಯ ಸಚಿವರನ್ನು ಕ್ಷಮೆ ಕೇಳುವುದಕ್ಕೆ ಹೇಳಿ. ನೀವು

ಬಾಲಕೃಷ್ಣರವರಿಗೆ ಕ್ಷಮೆ ಕೇಳಿ ಎಂದು ಹೇಳುತ್ತೀರಿ. ಇದಕ್ಕೆ ಕ್ಷಮೆ ಕೇಳುವುದಕ್ಕಾಗುವುದಿಲ್ಲವೆಂದರೆ ಹೇಗೆ ಮಾನ್ಯ ಸಭಾಧ್ಯಕ್ಷರೆ ದಯಮಾಡಿ ಹೇಳಿ. ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ನಾನು ಹೇಳಲಿಲ್ಲ ಮಾನ್ಯ ಮಂತ್ರಿಗಳು ಹೇಳಲಿ. ಇಲ್ಲವಾದರೆ ನಾವು ಧರಣಿ ಕೂರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಆ ವಿಷಯವನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಕಡತದಲ್ಲಿದ್ದರೆ ನೀವು ಮಾತನಾಡಬಹುದಾಗಿತ್ತು. ಕಡತದಲ್ಲಿದ್ದರೆ ಪಾಯಿಂಟ್ ಆಫ್ ಆರ್ಡರ್ ಬರುತ್ತಿತ್ತು. ನನ್ನ ಅಧಿಕಾರ ಉಪಯೋಗ ಮಾಡಿ ನಾನು ತೆಗೆದು ಹಾಕಿದ್ದೇನೆ. ನೀವು ಯಾರೂ objection ಮಾಡುವುದಕ್ಕೆ ಮುಂಚೆಯೇ ನಾನು ತೆಗೆದಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳಾಗಲಿ, ಹಿರಿಯ ಸಚಿವರಾದರೂ ಹೇಳಲಿ. ಅವರಿಗೆ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳಿ. ಅವರು ಹೇಳಿದ್ದು ತಪ್ಪು ಎಂದು ಹೇಳಲಿ. ಮಾನ್ಯ ಸಭಾಧ್ಯಕ್ಷರು ನೀವು ವಾಪಸ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಮುಖ್ಯ ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಮಾನ್ಯ ಕುಮಾರಸ್ವಾಮಿಯವರು ಯಾವ ರೀತಿ ಹಿಂದಿನ ಚುನಾವಣೆ ನಡೆಸಿದರು ಎಂದು ಹೇಳಿದರು. ಮಾನ್ಯ ಈಶ್ವರಪ್ಪನವರು ಚುನಾವಣೆ ಬಗ್ಗೆ ಚರ್ಚೆ ಮಾಡಿದರು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಚುನಾವಣೆ ಬಗ್ಗೆ ಪ್ರಾರಂಭ ಮಾಡಿದ್ದು ನೀವು. ಚುನಾವಣೆ ಬಗ್ಗೆ ಏಕೆ ಮಾತನಾಡಿದಿರಿ? ಮಾನ್ಯ ಅಧ್ಯಕ್ಷರೆ, ಇವರು ಏಕೆ ಚುನಾವಣೆ ಬಗ್ಗೆ ಮಾತನಾಡಬೇಕಾಗಿತ್ತು? ಹೌಸಿಂಗ್ ಬೋರ್ಡ್ ವಿಚಾರ ಮಾತನಾಡುತ್ತಿದ್ದರು. ಹೌಸಿಂಗ್ ಬೋರ್ಡ್ ವಿಚಾರ ಮಾತನಾಡಬೇಕಾಗಿತ್ತು. ಅದು ಬಿಟ್ಟು ಚುನಾವಣೆ ವಿಚಾರ ಮಾತನಾಡಿದರು. ಅದಕ್ಕೋಸ್ಕರ ಮಾನ್ಯ ಈಶ್ವರಪ್ಪನವರು ಚುನಾವಣೆ ಬಗ್ಗೆ ಚರ್ಚೆ ಮಾಡಿದರು. ನೀವು ಏಕೆ ವಿಷಯಾಂತರ ಮಾಡಿದಿರಿ? ನೀವೇಕೆ ಡೀವಿಯೇಟ್ಸ್ ಆದಿರಿ?

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಂತ್ರಿಗಳೇ ಎದ್ದು ನಿಂತು ಬಿಟ್ಟರೆ ನಾವೇನು ಮಾಡುವುದು?

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೇ, ನಿಮಗೆ ಏನಾದರೂ ಮುಖ್ಯವಾದ ವಿಚಾರ ಇದ್ದರೆ ಅದಕ್ಕೆ ಸಪೋರ್ಟ್ ಮಾಡಿ.

5–00pm

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಅವರು ನನಗೆ ಅವಕಾಶ ಕೊಟ್ಟರೆ ತಾನೆ ನಾನು ಹೇಳುವುದಕ್ಕೆ ಸಾಧ್ಯ.

ಅಧ್ಯಕ್ಷರು:- ನಾನು ನಿಮಗೆ ಈಗ ಕೇಳುತ್ತಿದ್ದೇನೆ. ಮೊದಲು ನೀವು ವಿಷಯಾಂತರ ಏಕೆ ಮಾಡಿದಿರಿ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ನೀವು ಆ ಬಗ್ಗೆ ಹೇಳಿದ ಮೇಲೆ ನಾನು ತಪ್ಪು ಒಪ್ಪಿಕೊಂಡೆನಲ್ಲ. ನೀವು ಹೇಳಿದಿರಿ, ನಾನು ಹೇಳಿದ್ದು ಸರಿಯಿಲ್ಲವೆಂದು. ಆಯಿತು ಎಂದು ಅದನ್ನು ಅಲ್ಲಿಗೇ ಬಿಟ್ಟುಬಿಟ್ಟೆ. ಅದೇ ರೀತಿ ನೀವು ಅವರಿಗೆ ಈಗ ಹೇಳಿ, ಅವರು ಹೇಳಿರುವುದು ಸರಿಯಿಲ್ಲವೆಂದು.

ಅಧ್ಯಕ್ಷರು:- ನೀವು ಇದೇ ರೀತಿ ಮಾಡುತ್ತಾ ಹೋದರೆ, ಇವತ್ತು ಮುಖ್ಯವಾದ ವಿಷಯದ ಬಗ್ಗೆ ಚರ್ಚೆ ಏನು ಮಾಡಬೇಕಾಗಿದೆ, ಅದು ಡೈವರ್ಟ್ ಆಗುತ್ತದಷ್ಟೆ. ಬೇರೆ ಬೇರೆ ವಿಷಯಗಳನ್ನೇ ನೀವು ರಾಜಕೀಯವಾಗಿ ಮಾತನಾಡುವುದಾದರೆ ಮುಖ್ಯವಾದ ವಿಷಯದ ಬಗ್ಗೆ ಏನು ಚರ್ಚೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದೀರಿ, ಅದು ಡೈವರ್ಟ್ ಆಗುತ್ತದಷ್ಟೆ. ಅದೇ ಉದ್ದೇಶವೇ ನಿಮಗಿದ್ದರೆ ಅದೇ ರೀತಿ ಮಾಡಿ. ನಿಮಗೆ ವಿಷಯ ಚರ್ಚೆ ಮಾಡುವುದು ಬೇಡವೆಂದರೆ ಬಿಟ್ಟುಬಿಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಅವರಿಗೆ ಹೇಳಲು ವಿಷಯವೇ ಇಲ್ಲ. ಅದಕ್ಕೋಸ್ಕರ ಇದನ್ನು ಈ ರೀತಿ ಎಳೆಯುತ್ತಿದ್ದಾರೆ.

ಶ್ರೀ ಹೆಚ್.ಸಿ ಬಾಲಕೃಷ್ಣ:- ಮಾನ್ಯ ಈಶ್ವರಪ್ಪನವರು ಚುನಾವಣೆ ವಿಚಾರವನ್ನು ಹೇಳಿದರು.

ಅಧ್ಯಕ್ಷರು:- ಪದೇ ಪದೇ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ. ನೀವು ಚುನಾವಣೆ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ಅವರೂ ಕೂಡ ಚುನಾವಣೆ ವಿಷಯವನ್ನು ಪ್ರಸ್ತಾಪ ಮಾಡಿದರು. ಅದನ್ನೆಲ್ಲಾ ಕಡತದಿಂದ ತೆಗೆದು ಹಾಕಿದ್ದೇನೆ. ಅದನ್ನು ಬಿಟ್ಟು ನೀವು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಈಗ ವಿಷಯ ಹೇಳಬೇಕೆಂದರೆ, ಈಗ Election Commission ರವರ ಹತ್ತಿರ ಮಾಹಿತಿ ಇದೆ. ಶಿವಮೊಗ್ಗದಲ್ಲಿ ಹೇಗೆ ಚುನಾವಣೆ ನಡೆಯಿತು, ಬಳ್ಳಾರಿಯಲ್ಲಿ ಹೇಗೆ ಚುನಾವಣೆ ನಡೆಯಿತು, ಹಾಸನದಲ್ಲಿ ಚುನಾವಣೆ ಹೇಗೆ ನಡೆಯಿತು, ಯಾರು ಲೂಟಿ ಮಾಡಿದ್ದಾರೆ.

ಅಧ್ಯಕ್ಷರು:- ಬಾಲಕೃಷ್ಣರವರೆ, ಮುಖ್ಯವಾದ ವಿಚಾರ ಚರ್ಚೆ ಮಾಡುವುದನ್ನು ಬಿಟ್ಟು ನೀವು ಹೀಗೆಯೇ ಮಾತನಾಡುವುದಾದರೆ ಇದನ್ನು ಇಲ್ಲಿಗೇ ಕ್ಲೋಸ್ ಮಾಡೋಣ. ಅಜೆಂಡಾದಲ್ಲಿರುವ ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ರೇವಣ್ಣನವರೆ, ಇದೇ ರೀತಿಯಾದರೆ ಇದನ್ನು ಇಲ್ಲಿಗೇ ಕ್ಲೋಸ್ ಮಾಡಿ next Agenda ದಲ್ಲಿ ಏನು ವಿಚಾರವಿದೆಯೋ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ನೀವು ಇದೇ ರೀತಿ ಮಾಡುವುದಾದರೆ ನಾನು ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ನಾನು ಇದನ್ನು ಇಲ್ಲಿಗೇ ಬಿಟ್ಟು ಅಜೆಂಡಾದಲ್ಲಿ ಬೇರೆ ಏನು ವಿಷಯವಿದೆ, ಅದನ್ನು ತೆಗೆದುಕೊಳ್ಳುತ್ತೇನೆ. ನೀವು ನೇರವಾಗಿ ವಿಷಯಕ್ಕೆ ಬನ್ನಿ. ನಿಮಗೆ ಡಿಸಕಶನ್ ಮಾಡಬೇಕಾದ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಹೇಳಿ. ನಿಮಗೆ ಇಷ್ಟವಿಲ್ಲದಿದ್ದರೆ ಅದನ್ನು ಹಾಗೆಯೇ ಬಿಟ್ಟುಬಿಡಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ನೀವಾದರೂ ಮಾತನಾಡಿ. ನೀವು ಮಾತನಾಡುವಾಗ ಇಷ್ಟು ಗೊಂದಲವಾಗಿರಲಿಲ್ಲ. ನೇರವಾಗಿ ನೀವು ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ.ರೇವಣ್ಣ:– ನನಗೆ ಈಗ ಅವಕಾಶವನ್ನು ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ನೀವು ರೇವಣ್ಣನವರಿಗೆ ಅವಕಾಶವನ್ನು ಕೊಟ್ಟಿದ್ದೀರೋ ಅಥವಾ ಬಾಲಕೃಷ್ಣರವರಿಗೆ ತಾವು ಅವಕಾಶವನ್ನು ಕೊಟ್ಟಿದ್ದೀರೋ ಎಂಬ ಬಗ್ಗೆ ಹೇಳಿಬಿಟ್ಟರೆ ಸಾಕು. ಅವರು ಹೇಳಿದ್ದನ್ನು ನಾವು ಕೇಳಲು ಅನುಕೂಲವಾಗುತ್ತದೆ. ನೀವು ಆಗ ಬಾಲಕೃಷ್ಣರವರಿಗೆ ಹೇಳಿದಿರಿ. ಆಗ ರೇವಣ್ಣನವರು ಮಾತನಾಡಲು ಎದ್ದರು. ರೇವಣ್ಣನವರಿಗೆ ನೀವು ಹೇಳಿದಾಗ ಬಾಲಕೃಷ್ಣರವರು ಮಾತನಾಡಲು ಎದ್ದರು. ಈಗ ರೇವಣ್ಣನವರು ಮಾತನಾಡಲು ಎದ್ದಿದ್ದಾರೆ. ಆದುದರಿಂದ ನೀವು ಈಗ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆ ಇಷ್ಟೇ ಇರುವುದು. ಕಡತಕ್ಕೆ ಹೋಗಿದೆಯಲ್ಲ ಕುಮಾರಸ್ವಾಮಿಯವರ ಬಗ್ಗೆ ಹೇಳಿದ್ದು. . .

ಅಧ್ಯಕ್ಷರು:– ಕಡತಕ್ಕೆ ಹೋಗಿರುವುದನ್ನು ತೆಗೆದು ಹಾಕಿಸಿದ್ದೇನೆ. ನೀವು ಹೇಳುವುದಕ್ಕೆ ಮುಂಚೆಯೇ ಅದನ್ನು ತೆಗೆದು ಹಾಕಿದ್ದೇನೆ. ಈಗಾಗಲೇ ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಈಗ ಕುಮಾರಸ್ವಾಮಿಯವರು ಮತ್ತು ಮಾನ್ಯ ದೇವೇಗೌಡರು ಈ ಸದನದಲ್ಲಿ ಇಲ್ಲ. ಸದನದ ಒಬ್ಬ ಹಿರಿಯ ಮಂತ್ರಿಗಳು ಅವರ ಬಗ್ಗೆ ಹೇಳಿರುವಾಗ ಆ ಬಗ್ಗೆ ನಾಳೆ ಬೆಳಿಗ್ಗೆಯೇ ಎಲ್ಲಾ ಪತ್ರಿಕೆಗಳಲ್ಲಿ ಬರುತ್ತದೆ. ಆದುದರಿಂದ ಆ ರೀತಿ ಅವರು ಹೇಳಿರುವುದಕ್ಕೆ ಈ ಸದನಕ್ಕೆ ಕ್ಷಮೆಯನ್ನು ಕೇಳಬೇಕು. ಇಲ್ಲದಿದ್ದರೆ ನಾವು ಧರಣಿ ಕೂರುತ್ತೇವೆ.

(ಜೆ.ಡಿ.ಎಸ್. ಪಕ್ಷದ ಶಾಸಕರೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಅಧ್ಯಕ್ಷರು:– ನಿಮಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲವೆಂದರೆ ಅದನ್ನು ಹಾಗೆಯೇ ಬಿಟ್ಟುಬಿಡಿ. ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ ಚರ್ಚೆ ಮಾಡಬೇಕೆನ್ನುವ ಮನಸ್ಸಿಲ್ಲದಿದ್ದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ

ಚರ್ಚೆ ಮಾಡಬೇಕೆನ್ನುವ ಅವಶ್ಯಕತೆ ಇಲ್ಲದಿದ್ದರೆ ಬಿಟ್ಟುಬಿಡಿ. ನಾನು ಆಗಲೇ ನೀವು ಹೇಳುವುದಕ್ಕೆ ಮೊದಲೇ ಕಡತದಿಂದ ತೆಗೆಸಬೇಕಾದ್ದನ್ನು ತೆಗಿಸಿದ್ದೇನೆ ಮತ್ತು ಆ ಬಗ್ಗೆ ಎಚ್ಚರಿಕೆಯನ್ನೂ ಕೂಡ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ಅವರೇನೋ ವಿಚಾರವನ್ನು ಹೇಳಿಬಿಡುತ್ತೇವೆಂದು ದೊಡ್ಡದಾಗಿ ಹೇಳಲು ಹೊರಟರು. ಆದರೆ ಅವರಿಗೆ ಏನೂ ಕಡಿದು ಹಾಕುವುದಕ್ಕೆ ಅವರ ಕೈಯಲ್ಲಿ ಆಗಲಿಲ್ಲ. ಏನೋ ದೊಡ್ಡ ಆನೆಗಳನ್ನು ಹಿಡಿದುಬಿಡುತ್ತೇವೆ, 500 ಕೋಟಿ ರೂಪಾಯಿಗಳ ಬಗ್ಗೆ ಹಿಡಿದುಕೊಟ್ಟುಬಿಡುತ್ತೇವೆ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡಿದರು. ಆದರೆ ಈಗ ನೋಡಿದರೆ ಐದು ರೂಪಾಯಿಯ ಹಗರಣ ಕೂಡ ನಡೆದಿಲ್ಲವೆನ್ನುವಂತಿದೆ. ಆದುದರಿಂದ ಅವರಿಗೆ ಏನೂ ಹೇಳುವುದಕ್ಕೆ ದಾರಿ ತೋಚದೇ ಈಗ ಸದನದ ಬಾವಿಗೆ ಧರಣಿಗೆ ಬಂದಿದ್ದಾರೆ. ಏನಾದರೂ ಹೇಳುವುದಿದ್ದರೆ ಅವರ ಸ್ಥಾನಕ್ಕೆ ಹೋಗಿ ಹೇಳಲಿ.

ಶ್ರೀ ಹೆಚ್.ಡಿ. ರೇವಣ್ಣ:- ಮಂತ್ರಿಗಳು ಹೇಳಿರುವುದನ್ನು ಅವರು ವಾಪಸ್ ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು:- ಯಾರಾದರೂ ಒಬ್ಬರು ನಿಂತು ಮಾತನಾಡಿ. ಎಲ್ಲರೂ ಪದೇ ಪದೇ ಹೀಗೆ ಎದ್ದು ನಿಂತು ಮಾತನಾಡಬೇಡಿ. ಏನಾದರೂ ಮಾತನಾಡುವುದಿದ್ದರೆ ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಈ ರೀತಿ ಎಲ್ಲರೂ ಕೂಡ ರೂಲಿಂಗ್ ಪಾರ್ಟಿಯವರು ಒಂದೇ ಬಾರಿಗೆ ಪದೇ ಪದೇ ಎದ್ದುನಿಂತುಕೊಂಡು ಬಿಟ್ಟರೆ ಹೇಗೆ ಹೇಳಿ? ಮಾನ್ಯ ಮುಖ್ಯಮಂತ್ರಿಗಳೆ ನೀವೇ ಹೇಳಿ. ಈ ರೀತಿಯೇ ಆಗಿ ಸದನ ನಡೆಸುವುದೇ ಬೇಡವೆಂದರೆ ಮುಗಿಸಿಬಿಡೋಣವಷ್ಟೆ. ಸದನ ನಡೆಸುವುದು ಬೇಡವೆಂದರೆ ಬೇಡವೇ ಬೇಡ ಬಿಡಿ. ಸದನ ಕಲಾಪ ಮುಗಿಸಿಬಿಡೋಣ. ಸದನದ ನಾಯಕರಾದ ಮುಖ್ಯಮಂತ್ರಿಗಳು ಹೇಳಿದರೂ ಅವರುಗಳು ಎದ್ದುನಿಂತುಕೊಳ್ಳುತ್ತಾರೆ, ಬೇಡವೆಂದರೂ ಎದ್ದುನಿಂತುಕೊಳ್ಳುತ್ತಾರೆ. ಅವರ ಚೀಫ್ ವಿಪ್ ಹೇಳಿದರೂ ಕೂಡ ಅವರ ಮಾತನ್ನು ಕೇಳದೇ ಎದ್ದುನಿಂತುಕೊಳ್ಳುತ್ತಾರೆ. ಆಮೇಲೆ ಮಂತ್ರಿಗಳು ಯಾವಾಗಲಾದರೂ ಎದ್ದುನಿಂತುಕೊಂಡು ಏನನ್ನಾದರೂ ಹೇಳಿಬಿಡಬಹುದು ಎಂದರೆ ಅದು ಸರಿಯೆ? ಈಗ ಈಶ್ವರಪ್ಪನವರಿಗೆ ಗೊತ್ತಿಲ್ಲವೆ ಹೇಳಿ, ಅವರು ಪ್ರಸ್ತಾಪ ಮಾಡಿರುವ ವ್ಯಕ್ತಿಗಳು ಈ ಸದನದ ಸದಸ್ಯರಲ್ಲ, ಒಬ್ಬರು ಮಾಜಿ ಪ್ರಧಾನ ಮಂತ್ರಿಗಳು, ಇನ್ನೊಬ್ಬರು ಮಾಜಿ ಮುಖ್ಯಮಂತ್ರಿಗಳಾಗಿದ್ದವರು, ಇದು ಗೊತ್ತಿದ್ದರೂ ಕೂಡ ನೀವು ಅಧಿಕಾರದಲ್ಲಿದ್ದಾಗ, ನಿಮ್ಮವರೇ ಪ್ರಧಾನ ಮಂತ್ರಿಗಳಾಗಿದ್ದಾಗ, ಮುಖ್ಯಮಂತ್ರಿಗಳಾಗಿದ್ದಾಗ ಲೂಟಿ ಹೊಡೆದಿದ್ದೀರಿ ಎಂದರೆ ಅದು ಸರಿಯೆ? ಈ ರೀತಿ ಹೇಳುವುದು ಸರಿಯೆ?

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ವಿರೋಧ ಪಕ್ಷದ ನಾಯಕರೆ, ನಾವು ಇಡೀ ರಾಜ್ಯದಲ್ಲಿ 19 ಸೀಟ್ ಗೆದ್ದಿರುವಂಥ ಸಂದರ್ಭದಲ್ಲಿ ಅವರು ಮಾತನಾಡಿದ್ದು ಸರಿಯೆ? ನೀವು ಅದನ್ನು ಒಪ್ಪುತ್ತೀರ?

ಶ್ರೀ ಸಿದ್ದರಾಮಯ್ಯ:- ಅವರು ಮತ್ತು ನೀವು ಒಂದೇ ಏನು?

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಮತ್ತು ನಾವು ಒಂದಲ್ಲ. ಆದರೆ ನೀವು ನಮಗೆ ಹೇಳಿದ ಹಾಗೆ ಅವರಿಗೂ ಹೇಳಬೇಕು. ನೀವು ವಿರೋಧ ಪಕ್ಷದ ನಾಯಕರು, ನಿಮ್ಮ ಸ್ಟ್ಯಾಂಡರ್ಡ್‌ಗೆ ತಕ್ಕಂತೆ ಹೇಳಿ.

ಶ್ರೀ ಸಿದ್ದರಾಮಯ್ಯ:- ಸ್ಟ್ಯಾಂಡರ್ಡ್ ಎಂದರೆ ಅದು ಯಾವ ಸ್ಟ್ಯಾಂಡರ್ಡ್ ಹೇಳಿ. ನೀವು ಒಬ್ಬ ಹಿರಿಯ ಸಚಿವರಾಗಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ:- ನಮಗೆ ಮಾತ್ರ ಏಕೆ ಈ ರೀತಿ ಹೇಳುತ್ತಿದ್ದೀರಿ. ನೀವು ವಿರೋಧ ಪಕ್ಷದ ನಾಯಕರು. ನೀವೇ ಹೇಳಿ. 19 ಸೀಟ್ ಗೆದ್ದಿರುವಂಥ ಸಂದರ್ಭದಲ್ಲಿ ಅವರು ಯಾವ ರೀತಿ ಮಾತನಾಡಿದ್ದಾರೆ ನೋಡಿ. ಆ ಬಗ್ಗೆ ನೀವು ಅವರಿಗೆ ಹೇಳಿ.

ಶ್ರೀ ಸಿದ್ದರಾಮಯ್ಯ:- ನೀವು ಹಿರಿಯ ಮಂತ್ರಿಗಳಾಗಿದ್ದು ಬಾಯಿಗೆ ಬಂದಂತೆಲ್ಲಾ ಮಾತನಾಡುವುದಕ್ಕಾಗುತ್ತದೆಯೆ?

ಶ್ರೀ ಕೆ.ಎಸ್.ಈಶ್ವರಪ್ಪ:- ನೀವು ಬಾಯಿಗೆ ಬಂದಂತೆ ಮಾತನಾಡಬಹುದೆ?

ಶ್ರೀ ಸಿದ್ದರಾಮಯ್ಯ:- ಬಾಯಿಗೆ ಬಂದಂತೆ ಲೂಟಿ ಹೊಡೆದಿದ್ದಾರೆ ಎಂದರೆ ಹೇಗೆ? You are in power. ಯಾರು ಯಾರು ಲೂಟಿ ಹೊಡೆದಿದ್ದಾರೆ ಎಂಬ ಬಗ್ಗೆ ಸದನದಲ್ಲಿ ನಮ್ಮ ಮುಂದೆ ಇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾವು ಕೂಡ 25 ವರ್ಷದಿಂದ ಈ ಸದನದಲ್ಲಿ ಇದ್ದೇವೆ. ಯಾರು ಯಾರು ಎಷ್ಟೆಷ್ಟು ಲೂಟಿ ಹೊಡೆದಿದ್ದಾರೆ ಎಂಬ ಬಗ್ಗೆ ಸದನದಲ್ಲಿ ಇಡಿ. ಈಗ You are in power, ಯಾರು ಯಾರು ಎಷ್ಟೆಷ್ಟು ಲೂಟಿ ಹೊಡೆದಿದ್ದಾರೆ ಎಂಬ ಬಗ್ಗೆ ವಿವರವನ್ನು ಇಡಿ. ಎಲ್ಲವನ್ನೂ ಸಿ.ಬಿ.ಐ. ಎನ್‌ಕ್ವೈರಿಗೆ ಕೊಡಿ. ತಾಕತ್ತಿದ್ದರೆ ಎಲ್ಲವನ್ನೂ ಎನ್‌ಕ್ವೈರಿಗೆ ಕೊಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ನಾನು ಈ ಮನೆಯ. .

(ಗೊಂದಲ)

ಅಧ್ಯಕ್ಷರು:- ಈಶ್ವರಪ್ಪನವರೆ, ಸಿದ್ದರಾಮಯ್ಯನವರೆ, ಪ್ಲೀಸ್, ತಾವು ದಯವಿಟ್ಟು ಕುಳಿತುಕೊಳ್ಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರಿಗೆ ಹೇಳುವುದೇನೆಂದರೆ, ನಾವು ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಪ್ರತಿ ಪಕ್ಷದ ನಾಯಕರು ಎದ್ದು ನಿಂತುಕೊಂಡಾಗ ನಿಮಗೆಷ್ಟೇ ಆಕ್ರೋಶವಿದ್ದರೂ ಕೂಡ ಶಾಂತವಾಗಿ-ಕುಳಿತುಕೊಳ್ಳಿ. ಈ ಕಡೆ ಯಾರು ಸಂಬಂಧಪಟ್ಟ ಸಚಿವರಿರುತ್ತಾರೋ ಅವರು ಉತ್ತರ ಕೊಡುತ್ತಾರೆ. ನಾನು ಆ ಕಡೆ ಮತ್ತು ಈ ಕಡೆ ಇರುವ ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ, ಸನ್ಮಾನ್ಯ ಅಧ್ಯಕ್ಷರು ಹೇಳಿದಂತೆ, ಸನ್ಮಾನ್ಯ ರೇವಣ್ಣನವರು ತಂದ ನಿಲುವಳಿ ಸೂಚನೆಯನ್ನು ಕನ್‌ವರ್ಟ್ ಮಾಡಿ ಇವತ್ತೇ ಚರ್ಚೆಯಾಗಬೇಕೆಂದು ಹೇಳಿದ ಮೇಲೆ, ಇದರ ಹಿಂದೆ ಇರುವ ಸತ್ಯ ಈಚೆಗೆ ಬರಬೇಕು ಎಂಬುದೇ ಆಗಿದೆ. ಪ್ರತಿ ಪಕ್ಷದ ನಾಯಕರೆ, ಅತ್ಯಂತ ಪ್ರಮುಖವಾದ ವಿಷಯವನ್ನು ಸನ್ಮಾನ್ಯ ರೇವಣ್ಣನವರು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ ಜನತೆಗೆ ಎಲ್ಲೋ ಒಂದು ಕಡೆ, ನೂರಾರು ಕೋಟಿ ಜಮೀನು ಖರೀದಿ ಮಾಡಿ ಅವ್ಯವಹಾರ ನಡೆಯುತ್ತಿದೆ, ಮೋಸವಾಗುತ್ತಿದೆ, ರೈತರಿಗೆ ಸಿಗುತ್ತಿಲ್ಲ, ಎಲ್ಲವೂ ಅದ್ಯಾರೋ ಮಧ್ಯವರ್ತಿಗಳ ಪಾಲಾಗುತ್ತಿದೆ ಎನ್ನುವಂಥದ್ದು ಅವರು ಹೇಳಿರುವ ವಿಷಯ. ಈ ವಿಷಯದ ಬಗ್ಗೆ ಸಂಪೂರ್ಣವಾಗಿ ಇಲ್ಲಿ ಚರ್ಚೆಯಾಗಬೇಕು. ಚರ್ಚೆಯಾದ ಮೇಲೆ, ವಾಸ್ತವಿಕವಾಗಿ ಖರೀದಿ ಮಾಡಿರುವುದು ಎಷ್ಟು, ಮೂವತ್ತು, ಮೂವತ್ತೆರಡು ಎಕರೆ ಜಮೀನು. ಅದಕ್ಕೆ ಸಂಪೂರ್ಣವಾಗಿ ಇಲ್ಲಿ ಚರ್ಚೆಯಾಗಬೇಕು. ಚರ್ಚೆಯಾದ ಮೇಲೆ, ವಾಸ್ತವಿಕವಾಗಿ ಖರೀದಿ ಮಾಡಿರುವುದು ಎಷ್ಟು? 31-32 ಎಕರೆ ಜಮೀನು.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೇ,...

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ತಾವು ಏಕೆ intervene ಮಾಡುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಆಯಿತು, ನೀವೇ ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ನೀವು ಉತ್ತರ ಕೊಡುವಾಗ ಏನು ಬೇಕಾದರೂ ಕೊಡಿ. ಇಲ್ಲಿ ಪ್ರಶ್ನೆ ಇಷ್ಟೇ, ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಲೂಟಿ ಮಾಡಿದ್ದಾರೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೋಡಿ ಶಿವಕುಮಾರ್, ನಾನು ಮಾತನಾಡುವುದಕ್ಕೆ ಬಿಡುತ್ತೀರಾ? ಈ ಮನೆಯಲ್ಲಿ ಚರ್ಚೆ ಸಂದರ್ಭದಲ್ಲಿ ಏನು ಮಾತು ಬಂತು? 19 seats ಅನ್ನು ಇದೇ ರೀತಿ ಗೆದ್ದಿದ್ದೀರಿ ಎಂದು ಮತದಾರರಿಗೆ ಅಪಮಾನ ಮಾಡುವಂತಹ ಮಾತು ಇಲ್ಲಿ ಬಂತು. ಆ ಮಾತು ಬರದಿದ್ದರೆ ಯಾರೂ ಎದ್ದೇಳುವಂತಹ ಪ್ರಶ್ನೆ ಬರುತ್ತಿರಲಿಲ್ಲ. ಆಗಲೇ ಪ್ರತಿಪಕ್ಷದ ನಾಯಕರು

ಎದ್ದು ನಿಂತುಕೊಂಡು ಈ ಮಾತುಗಳನ್ನು ನೀವು ಹೇಳಬಾರದಾಗಿತ್ತು, ಇದು ಸರಿಯಲ್ಲ, ಇದನ್ನು ಕಡತದಿಂದ ತೆಗೆಸಿ ಹಾಕಿ, ವಿಷಯಕ್ಕೆ ಬನ್ನಿ ಎಂದು ಅವರು ಹೇಳಿದ್ದರೆ ಈ ಸಂದರ್ಭ ಬರುತ್ತಿರಲಿಲ್ಲ. ಬೇಡ, ಅವರು ಬೇಡ, ಆ ಪಕ್ಷದವರನ್ನು control ಮಾಡುವುದಕ್ಕೆ ಅವರಿದ್ದಾರೆ. ಮಾನ್ಯ ರೇವಣ್ಣನವರಾದರೂ ಈ ಮಾತನ್ನು ಹೇಳಬೇಕಾಗಿತ್ತು. ನೀವು ಮಾರ್ಗದರ್ಶನ ಮಾಡುತ್ತೀರಿ, ಸಲಹೆ ಕೊಡುತ್ತೀರಿ ಎಂದರೆ ಒಳ್ಳೆಯದು. ಬೇಡವೆಂದರೆ ನಾನು ಕೇಳುವುದಿಲ್ಲ. ಈಗ ಪ್ರಶ್ನೆ ಏನು? ವಿಷಯ ಬಿಟ್ಟು ವಿಷಯಾಂತರವಾಗುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಹೇಳಿರುವುದಕ್ಕೆ...

ಅಧ್ಯಕ್ಷರು: ತಡೆಯಿರಿ, ಅವರು ಮಾತನಾಡುವುದು ಮುಗಿಯಲಿ, ಅವರು ಮುಗಿಸಲಿ, ಏಕೆ ಅವಸರ ಮಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾವೇನು ಹೇಳಿದೆವು ಈ ವಿಷಯ ಚರ್ಚೆಗೆ ಬಂತು. ಯಾರೇ ಸನ್ಮಾನ್ಯ ಸದಸ್ಯರು ಮಾತನಾಡಿದರೂ ಸಹ ಯಾವುದೂ ದಾಖಲೆಗೆ ಹೋಗಬಾರದೆನ್ನುವ ವಿಷಯಗಳಿದ್ದರೆ, ಆ ಕಡತದಲ್ಲಿ ಯಾವುದು ಇರಬೇಕು, ಯಾವುದು ಇರಬಾರದು ಎನ್ನುವುದನ್ನು ಸಾಯಂಕಾಲ ಕಡತ ತರಿಸಿ ತಾವು ನೋಡಿಬಿಟ್ಟು ತೆಗೆದು ಹಾಕುವುದಕ್ಕೆ ತಮಗೆ ಸಂಪೂರ್ಣ ಅಧಿಕಾರ ಇದೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಚರ್ಚೆಯ ಮಹತ್ವವನ್ನೇ ದಿಕ್ಕುತಪ್ಪಿಸಿ ಬೇರೆ ವಿಷಯಗಳಿಗೆ ಹೋದರೆ ಇವತ್ತು ಪೂರ್ತಿ ಚರ್ಚೆಯಾಗದಿದ್ದರೆ ಅದರ ಮಹತ್ವ ಕಳೆದುಕೊಳ್ಳುತ್ತದೆ. ಸಾಯಂಕಾಲದ ಹೊತ್ತಿಗೆ ಚರ್ಚೆ ಮುಗಿದು ಉತ್ತರ ಕೊಡುವುದರೊಳಗಾಗಿ ವಾಸ್ತವಿಕವಾಗಿ ಎಷ್ಟು ಜಮೀನು ಇತ್ತು? ಎಷ್ಟು ಖರೀದಿ ಮಾಡಬೇಕೆಂದು ಇದ್ದರು? ಎಷ್ಟು ಖರೀದಿ ಮಾಡಿದ್ದಾರೆ? ಅವರು ಖರೀದಿ ಮಾಡಿರುವುದೇ 30–32 ಎಕರೆಗೆ 14–15 ಕೋಟಿ ರೂಪಾಯಿಯಾಗಿದೆ. 300 ಕೋಟಿ 400 ರೂಪಾಯಿ ಎನ್ನುವುದು ದಾಖಲೆಗೆ ಹೋಗಬಾರದು. ಆ ರೀತಿ ಬಿಟ್ಟರೆ ಮಾಹಿತಿಗಳು... ನಮ್ಮದೇನು ಅಭ್ಯಂತರವಿಲ್ಲ. ಆ ಚರ್ಚೆಯ ಸಂದರ್ಭದಲ್ಲಿ ಯಾವುದನ್ನು ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ, ಮತ್ತೊಬ್ಬರು ಹೇಳಿದ್ದಾರೆ, ಅದು ಸರಿಯಿಲ್ಲ, ಅದನ್ನು ಕಡತದಿಂದ ತೆಗೆದು ಹಾಕಿ ಎಂದು ಹೇಳುವುದಕ್ಕೂ ಅವರಿಗೆ ಅಧಿಕಾರ ಇದೆ. ಇಲ್ಲಿರುವಂತಹ ಈ ಮನೆಯ ಎಲ್ಲಾ ಸದಸ್ಯರಿಗೂ ಅಧಿಕಾರ ಇದೆ. ಅದು ಬಿಟ್ಟು ನೀವು ವೆಲ್‌ಗೆ ಬಂದು, ಇವತ್ತಿನ ಚರ್ಚೆಯ ಮಹತ್ವವನ್ನೇ ಆ ಕಡೆ ಈ ಕಡೆ ಬದಲಾವಣೆ ಮಾಡಿಬಿಟ್ಟರೆ ಚರ್ಚೆಯ ಉದ್ದೇಶ ಏನು ಸಫಲವಾಗುತ್ತದೆ? ಅದಕ್ಕೆ ಮಾನ್ಯ ಈಶ್ವರಪ್ಪನವರು ಏನು ಹೇಳಿದರು? ಅದರ ಬಗ್ಗೆ ಚರ್ಚೆಯಾಗಲಿ. ಅವರು ಮಾತನಾಡಿರುವುದು ಸರಿಯಲ್ಲ. ಕಡತದಿಂದ ತಗೆದು ಹಾಕಬೇಕೆಂದರೆ ಯಾರ ಬಗ್ಗೆ ಆಗಲಿ, ಮಾನ್ಯ ಅಧ್ಯಕ್ಷರು ಅದನ್ನು ಕಡತದಿಂದ ತಗೆದು ಹಾಕಲಿ. ಆದರೆ ವೆಲ್‌ಗೆ ಬರುವಂತಹ ಅಗತ್ಯ

ಇರಲಿಲ್ಲ. ಅದನ್ನು ನೀವು ಗಟ್ಟಿಯಾಗಿ ಇದು ಸರಿಯಲ್ಲ, ಇದನ್ನು ತೆಗೆದು ಹಾಕಬೇಕು ಎಂದು ಹೇಳಿ, ಚರ್ಚೆ ಮಾಡೋಣ. ನನ್ನದು ವಿನಂತಿ ಇಷ್ಟೇ, ಆದುದರಿಂದ ಮಾನ್ಯ ಶಿವಕುಮಾರ್‌ರವರು ಚರ್ಚೆಗೆ ಅವಕಾಶ ಕೊಡಿ, ವ್ಯತ್ಯಾಸವಾಗುತ್ತದೆ, ಇದು ಸರಿ ಹೋಗುವುದಿಲ್ಲ.

ಅಧ್ಯಕ್ಷರು: ನಾನು ಆಗಲೇ ಆ statement ಕಡತದಿಂದ ತೆಗೆದುಬಿಟ್ಟಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಅದನ್ನು ತೆಗೆದು ಹಾಕಿ ಬಿಟ್ಟಿದ್ದಾರೆ. ಅದನ್ನು ತೆಗೆದು ಹಾಕಿದರೂ ಕೂಡ ಆ ವಿಚಾರ ಈ ಹೌಸ್‌ನ property ಆಗಿಹೋಯಿತು. ಈಗ ಪ್ರಶ್ನೆ ಏನೆಂದರೆ ಅವರು ಕೇಳುತ್ತಿರುವುದು ಇದು ದಾಖಲೆಗೆ ಹೋಗಿದೆ, ರಾಜ್ಯದ ಜನತೆಗೆ ತಲುಪುತ್ತಿದೆ. ನನ್ನ ತಮ್ಮ ಲೂಟಿ ಮಾಡಿಲ್ಲವೆಂದು ಅದಕ್ಕೆ ಮಾನ್ಯ ಈಶ್ವರಪ್ಪನವರು ಕ್ಷಮಾಪಣೆ ಕೇಳಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಇಲ್ಲಿ ಕುಳಿತುಕೊಂಡು ಹೇಳಿಕೊಡುವುದಕ್ಕೆ ನಮಗೆ ಬೇರೆ ಏನೂ ಕೆಲಸ ಇಲ್ಲವೇ? ನಾವು ಇದನ್ನು ಬಹಳ ಗಂಭೀರವಾಗಿ. ಏಕೆ ಪರಿಗಣಿಸಬೇಕೆಂದರೆ ಯಾವ ಸದಸ್ಯರ ಮೇಲೂ ಕೂಡ ಹಗುರವಾಗಿ ಮಾತನಾಡಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ಹೇಳುತ್ತಿರುವುದು. ಅದರಲ್ಲೂ ಮಂತ್ರಿಗಳಾದವರು ಹೆಚ್ಚು ಗಾಂಭೀರ್ಯದಿಂದ, ಘನತೆಯಿಂದ ಮತ್ತು ಜವಾಬ್ದಾರಿಯಿಂದ ಹೇಳಬೇಕೆಂದು ನನ್ನ ಸಲಹೆ. ಮಾನ್ಯ ಬಾಲಕೃಷ್ಣರವರು ಮಾತನಾಡಿದರು ಎಂದರೆ ಅವರು ಮಾತನಾಡಿದ್ದು ತಪ್ಪು, ಯಾರಿಗೂ ಕೂಡ ಮಾತನಾಡಬಾರದು. ಆಧಾರ ಇದ್ದರೆ ಮಾನ್ಯ ಅಧ್ಯಕ್ಷರ ಹತ್ತಿರ permission ತೆಗೆದುಕೊಂಡು ಮಾತನಾಡಬೇಕು. ಇಲ್ಲದಿದ್ದರೆ ಯಾರ ಬಗ್ಗೆ ಕೂಡ ಮಾತನಾಡಬಾರದು. ನಾನು ಮೂರು ದಿನದಿಂದ ನೋಡುತ್ತಿದ್ದೇನೆ. ಒಂದು ವಿಚಾರಕ್ಕೆ ಸಂಬಂಧಪಟ್ಟಾಗ ಸದನದಲ್ಲಿ ಮಂತ್ರಿಗಳಿಲ್ಲದೆ ಇದ್ದಾಗ ಹೇಳಲಿ, ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ, ನೀವಾದರೂ ಹೇಳೀ, ಇನ್ನೊಬ್ಬರು ಹೇಳಲಿ. ಆದರೆ ಸದನದಲ್ಲಿ ಒಬ್ಬರು ಮಂತ್ರಿಯಿರುವಾಗ ಅವರು ಹೇಳುವಾಗ ಇನ್ನೊಬ್ಬರು ಮಂತ್ರಿ ಎದ್ದು ನಿಂತುಕೊಂಡು ಬೇರೆಯವರ ಬಗ್ಗೆ remarks ಮಾಡುವುದು it is not going to be a good precedent. ಇಲ್ಲದೆ ಹೋದರೆ ಇಲ್ಲಿ ಆರೋಗ್ಯಕರವಾದ ಚರ್ಚೆ ನಡೆಯುವುದಕ್ಕೆ ಸಾಧ್ಯವಿಲ್ಲ. ಈ ಸದನದ ಘನತೆ, ಗಾಂಭೀರ್ಯ ಎಲ್ಲಾ ನಾವೇ ಹಾಳು ಮಾಡಿಕೊಂಡು ಬಿಡುತ್ತೇವೆ. ಇಲ್ಲಿ ಇರುವಾಗ ನಾವು ಕೆಲವು ವಿಚಾರಗಳನ್ನು ಹೇಳಿದಾಗ, ನೀವು ಅದನ್ನು ತೆಗೆದುಕೊಂಡು ಅದು ಸರಿಯಿಲ್ಲ ಎಂದು ಅದರ ಬಗ್ಗೆ ಹೇಳಿ, ಅದನ್ನು ಡಿನ್ಯೈ ಮಾಡುವುದಕ್ಕೆ ತಳ್ಳಿ ಹಾಕುವುದಕ್ಕೆ ಅವಕಾಶ ಇದೆ, ಉತ್ತರ ಕೊಡುವಾಗ ನಿಮಗೆ ಎಲ್ಲಾ ಅವಕಾಶ ಕೊಡುತ್ತಾರೆ. ಇಲ್ಲಿ ಈಗ ಅವರು ತಂದಿರತಕ್ಕಂಥ ವಿಚಾರ ಅವರು ಹೇಳಿದ ಹಾಗೆ 31 ಎಕರೆ ತೆಗೆದುಕೊಂಡಿರುವುದು ನಿಜ. ಆದರೆ ಸರ್ಕಾರ 959 ಎಕರೆಯನ್ನು 50 ಲಕ್ಷ ರೂಪಾಯಿಗೆ ತೆಗೆದುಕೊಳ್ಳಿ ಎಂದು ಅನುಮತಿ ಕೊಟ್ಟಿದೆ. ಈಗ ಇವರು ವಿಚಾರ ಎತ್ತಿರುವುದರಿಂದ ಇಷ್ಟೇ

ಆಗಿರುವುದು ಎಂದು ಹೇಳುತ್ತಾರೆ. ಸರ್ಕಾರ ಅನುಮತಿ ಕೊಟ್ಟಿದೆ, 31 ಎಕರೆ ಮಾತ್ರ ರಿಜಿಸ್ಟರ್ ಆಗಿದೆ. ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಸಿಕ್ಕಾಗ ಮಾತನಾಡುತ್ತೇನೆ. ಈಗ ಇಲ್ಲಿ ಅದು ಪ್ರಶ್ನೆ ಬಂದಿರುವುದು.

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾನಾಯಕರು ಒಪ್ಪಿಕೊಂಡ ಮೇಲೆ ಮಾನ್ಯ ಸಭಾಧ್ಯಕ್ಷರು ಇದನ್ನು ಕಡತದಿಂದ ತೆಗೆಯುತ್ತೇವೆ ಎಂದು ಹೇಳಿದ ಮೇಲೆ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ದಯವಿಟ್ಟು ತೆಗೆದುಕೊಳ್ಳಿ, ಈಗಾಗಲೇ ನಾನು ಕಡತದಿಂದ ತೆಗೆದುಬಿಟ್ಟಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಸರ್ಕಾರದಿಂದ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ, prove ಮಾಡುವುದಕ್ಕಾಗಲಿಲ್ಲವೆಂದ ಮೇಲೆ ನಾವೇನು ಮಾಡುವುದಕ್ಕಾಗುತ್ತದೆ?

(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಯಲ್ಲಿದ್ದವರು ಅವರವರ ಸ್ಥಾನಗಳಿಗೆ ತೆರಳಿದರು)

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸರ್ಕಾರದ ಆದೇಶ ಇದೆ. ಈ ಸರ್ಕಾರದ ಆದೇಶ ಸಂಖ್ಯೆ 32/ಕರ್ನಾಟಕ ಗೃಹ ಮಂಡಲಿ 2009, ಬೆಂಗಳೂರು, ದಿ:20.02.09ರಲ್ಲಿ ಕರ್ನಾಟಕ ಗೃಹಮಂಡಳಿ ವಸತಿ ಯೋಜನೆಗಾಗಿ ಖರೀದಿಸಲು ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವ ನಿಬಂಧನೆಗೆ ಒಳಪಟ್ಟು ಸರ್ಕಾರ ಅನುಮೋದನೆ ನೀಡಿದೆ. ಅಲ್ಲಿ ಜಮೀನು purchase ಮಾಡುವುದಕ್ಕೆ ಸರ್ಕಾರದ ಅನುಮತಿ ಸಿಕ್ಕಿದೆ. ಅದಕ್ಕೆ ಸಂಬಂಧಪಟ್ಟಂತ ಪತ್ರ ಇಲ್ಲಿದೆ. ವೆಚ್ಚವನ್ನು ಸರ್ಕಾರಿ ನಿಯಮಾನುಸಾರ ನಿರ್ವಹಿಸಬೇಕಾಗಿದ್ದು, ಸರ್ಕಾರದ ಸಹಾಯವನ್ನು ಅಪೇಕ್ಷಿಸಿದೆ ಯೋಜನೆ ಕಾರ್ಯಗತಗೊಳಿಸಬೇಕು. ಹಾಗೆಂದರೆ ಅರ್ಥ ಏನು ಸ್ವಾಮಿ? ಕರ್ನಾಟಕ ಗೃಹಮಂಡಳಿ ಸಂಪೂರ್ಣವಾಗಿ ಬೀಗ ಹಾಕುವಂತಹ ವ್ಯವಸ್ಥೆ ಬಂದಿದೆ. ಇದು ನಾನು ಹೇಳಿರುವುದಲ್ಲ. Karnataka Housing Board Employees Unionನವರು ಒಂದು ಪತ್ರವನ್ನು ಗೃಹ ಆಯುಕ್ತರಿಗೆ ಬರೆಯುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗೃಹ ಮಂಡಳಿಗೆ 959 ಎಕರೆ ಜಮೀನು ಖರೀದಿಸುವಂತೆ ಸರ್ಕಾರ ಆದೇಶ ಮಾಡಿದೆ. ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟ ಬೆಂಗಳೂರಿನಿಂದ 50–60 ಕಿ.ಮೀ ದೂರದಲ್ಲಿದೆ. ಅದಕ್ಕೆ ನೀವು 50 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಆದರೆ ಬೆಂಗಳೂರಿನಿಂದ 25 ಕಿ.ಮೀ ದೂರದಲ್ಲಿರುವ ಜಮೀನಿಗೆ 35 ಲಕ್ಷ ರೂಪಾಯಿಗೆ ಖರೀದಿ ಮಾಡಿದ್ದೀರಿ. ಬೇಡಿಕೆ ಸರ್ವೆ ನಡೆಸದೇ 959 ಎಕರೆ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಾ? ಇದರಿಂದ ಮಂಡಳಿಗೆ ಆರ್ಥಿಕ ನಷ್ಟವುಂಟಾಗುತ್ತದೆ. ಕರ್ನಾಟಕ ಹೌಸಿಂಗ್ ಬೋರ್ಡ್ ದಿವಾಳಿಯಾಗುತ್ತದೆ. ಇದನ್ನು

ಪುನರ್ ಪರಿಶೀಲನೆ ಮಾಡಿ ಎಂದು ಯೂನಿಯನ್‌ನವರು ಒಂದು ಪತ್ರವನ್ನು ಬರೆಯುತ್ತಾರೆ. ಅದಕ್ಕೆ ಸರ್ಕಾರ ಏನು ಹೇಳುತ್ತದೆ? ನಮಗೂ ನಿಮಗೂ ಸಂಬಂಧ ಇಲ್ಲ, ನಾವು ಅನುಮತಿ ಕೊಟ್ಟಿದ್ದೇವೆ ಅಷ್ಟೇ ಎಂದು ಗೃಹ ಮಂಡಳಿಗೆ ಬರೆಯುತ್ತಾರೆ. 50 ಕಿ.ಮೀ ದೂರ ಇರುವುದಕ್ಕೆ 50 ಲಕ್ಷ ರೂಪಾಯಿ, 25 ಕಿ.ಮೀ ಇರುವುದಕ್ಕೆ 35 ಲಕ್ಷ ರೂಪಾಯಿ. ಮಾನ್ಯ ಮುಖ್ಯಮಂತ್ರಿಗಳು ಈ ಉತ್ತರವನ್ನು ಕೊಟ್ಟರು, 959 ಎಕರೆಗೆ ಸರ್ಕಾರ ಅನುಮತಿ ಕೊಟ್ಟಿದ್ದರೂ ನಾವು 30 ಎಕರೆಗೆ ದುಡ್ಡು ಕೊಟ್ಟಿರುವುದು ಎಂದು. ಅದನ್ನು ಯಾರಿಗೆ ಕೊಟ್ಟಿದ್ದೀರಿ? ಒಂದು ಲಕ್ಷ ರೂಪಾಯಿ ಆಗಲಿ ಅದು ಬಡ ಬೋರೇಗೌಡನ ದುಡ್ಡು. 959 ಎಕರೆ ಜಮೀನು purchase ಮಾಡುವುದಕ್ಕೆ ಈ ದಾಂಧಲೆ ಶುರುವಾಗಿದೆ. ಇದರಲ್ಲಿ 25–30 ಕೋಟಿ ರೂಪಾಯಿಯ ಅವ್ಯವಹಾರವಾಗಿದೆ, ಸರ್ಕಾರದ ಹಣ ಗುಳುಂ ಮಾಡುವ ವ್ಯವಸ್ಥೆ ನಡೆಯುತ್ತಿದೆ. ಸರ್ಕಾರ 30 ಎಕರೆಗೆ permission ಕೊಟ್ಟಿದ್ದಾರಾ ಅಥವಾ 959 ಎಕರೆಗೆ permission ಕೊಟ್ಟಿದ್ದಾರಾ? ಕರ್ನಾಟಕ ಗೃಹಮಂಡಳಿ ನೌಕರರು, ಇಲ್ಲಿ ಲೂಟಿ ನಡೆಯುತ್ತಿದೆ, ಇದನ್ನು ನಿಲ್ಲಿಸಿ, ನಾವು ಬೀದಿಗೆ ಬರುತ್ತೇವೆಂದು ಪತ್ರವನ್ನು ಗೃಹ ಆಯುಕ್ತರಿಗೆ ಬರೆಯುತ್ತಾರೆ.

ರಮೇಶ್ ಎನ್ನುವವರು ಮಾಲೂರಿನವರು ಅವರು ಯಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು, ಸಂಬಂಧಪಟ್ಟ ಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ಇವರು ಮಾಲೂರಿನವರು, ಮಾಲೂರಿನಲ್ಲಿ ಯಾರಿದ್ದರೆಂಬುದನ್ನು ಸಭೆಗೆ ಹೇಳಬೇಕಾಗಿಲ್ಲ. ಮಾಲೂರಿನಿಂದ ಯಾರು ಗೆದ್ದು ಬಂದಿದ್ದಾರೆಂಬುದನ್ನು ಹೇಳಬೇಕಾಗಿಲ್ಲ. ಇವರು ದಿನಾಂಕ:13.03.2009ರಲ್ಲಿ ರಿಜಿಸ್ಟರ್ ಜಿ.ಪಿ.ಎ. ಮಾಡಿಸಿಕೊಳ್ಳುತ್ತಾರೆ. ಕರ್ನಾಟಕ ಹೌಸಿಂಗ್ ಬೋರ್ಡ್‌ನವರಿಗೆ ದಿನಾಂಕ: 20.03.2009ರಲ್ಲಿ ಕೊಡುವಂಥಾದ್ದು. ಇಲ್ಲಿ ಜಿ.ಪಿ.ಎಗೂ ರಿಜಿಸ್ಟ್ರೇಷನ್‌ಗೂ ಮಧ್ಯೆ 7 ದಿವಸಗಳು ಮಾತ್ರ ಅಂತರವಿರುವಂಥಾದ್ದು, ಅಂದರೆ ಇದು ಪೂರ್ವ ಯೋಜಿತವಾಗಿದ್ದು, ಇಲ್ಲಿ ನಾವು purchase ಮಾಡುತ್ತೇವೆ. ನೀವು ಯಾರಾದರೂ ಹೋಗಿ ದುಡ್ಡು ಕೊಡಿ ಎನ್ನುವಂಥಾದ್ದು. ನೀವು ರೈತರಿಗೆ ದುಡ್ಡು ಕೊಡುವುದಕ್ಕೆ ರೆಡಿ ಇಲ್ಲ. ಇಲ್ಲಿ ಯಾರೋ ಮಧ್ಯವರ್ತಿಗಳು ಹೋಗಿ ಜಿ.ಪಿ.ಎ. ರಿಜಿಸ್ಟರ್ ಮಾಡಿಸಿಕೊಂಡು ಜಿ.ಪಿ.ಎ. ತೆಗೆದುಕೊಳ್ಳುತ್ತಾರೆ. ಅವರಿಗೆ 5 ಲಕ್ಷ ರೂಪಾಯಿಗಳನ್ನೋ, 10 ಲಕ್ಷ ರೂಪಾಯಿಗಳನ್ನೋ, ಆ ಭಾಗದಲ್ಲಿ ಅವರಿಗೆ ಎಷ್ಟೋ ಕೊಟ್ಟರೆ ಸಾಕು. ಇವತ್ತು ಜಮೀನಿನ ಪರಿಸ್ಥಿತಿ ಕೆಟ್ಟಿದೆ. ಅಲ್ಲಿ 10 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು. ಸರ್ಕಾರದವರು ಎಷ್ಟಾದರೂ ತೆಗೆದುಕೊಳ್ಳಲಿ. ನೀವು ಜಿ.ಪಿ.ಎ.ನವರಿಗೆ ಕೊಡಬಹುದೇ? ನೀವು ನೇರವಾಗಿ ರೈತರಿಗೆ ಕೊಡಿ. ಹತ್ತು ದಿವಸಗಳಲ್ಲಿ ಜಿ.ಪಿ.ಎ. ರಿಜಿಸ್ಟರ್ ಏಕೆ ಮಾಡಿಸಿಕೊಳ್ಳುತ್ತಾರೆ? ನೀವು ರೈತರನ್ನು ಕರೆಸಿ. ಇದಕ್ಕೆ ನಾವು ಏನು ತಿಳಿದುಕೊಳ್ಳಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವೆಲ್ಲವನ್ನು ನೋಡಿದಾಗ ಒಂದು ಕಡೆ ಸರ್ಕಾರ ಆದೇಶವನ್ನು

ಹೊರಡಿಸಿರುವಂಥಾದ್ದು. ಮಾನ್ಯ ಮುಖ್ಯಮಂತ್ರಿಯವರು ಬೆಳಿಗ್ಗೆ ನನ್ನ ಮೇಲೆ ನೇರವಾಗಿ ಅಪಾದನೆ ಮಾಡಿದೆ. ನೀನು ಮಾಡಿದ್ದು ಸರಿಯಲ್ಲವೆಂದು ಕೋಪ ಮಾಡಿಕೊಂಡರು. ನಾನು ಅದಕ್ಕೂ ಉತ್ತರ ಹೇಳಿದ್ದೇನೆ. ನಾನು ಕೇಳುವಂಥಾದ್ದು ಏನೂ ಬೇಡ, ಇಲ್ಲಿ ಅವ್ಯವಹಾರ ಅಗಿಲ್ಲ, ಯಾರು involve ಆಗಿಲ್ಲ, ಚರ್ಚೆಯೂ ಬೇಡ, ನಿಯಮ 60 ಬೇಡ. ಇದನ್ನು CBIಗೆ ನೇರವಾಗಿ ಕೊಡಲಿ. ಇದು ತನಿಖೆಯಾಗಲಿ, ಬರೀ 30 ಎಕರೆ ಜಮೀನನ್ನು ಕೊಡುವ ಅವಶ್ಯಕತೆ ಏನು ಇತ್ತು? ಆ 30 ಎಕರೆ ಜಮೀನನ್ನು ತೆಗೆದುಕೊಂಡಿರುವವರು ಯಾರು? ಆ 30 ಎಕರೆ ಯಾರದು? ಈ 30 ಎಕರೆ ವಿಷಯ ಬೀದಿಗೆ ಬಂದಿದ್ದಕ್ಕೆ ಅದು ಅಷ್ಟಕ್ಕೆ ನಿಂತಿದೆ. ಇದು ಬೀದಿಗೆ ಬರದಿದ್ದರೆ ಸಾವಿರ ಎಕರೆಯ ವ್ಯವಹಾರವೂ ಮುಗಿಯುತ್ತಿತ್ತು. ಇದರ ಹಿಂದೆ ಷಡ್ಯಂತರ ಇಲ್ಲವೇ? ದಯಮಾಡಿ ಇದರ ಹಿಂದೆ ದೊಡ್ಡ ಭ್ರಷ್ಟಾಚಾರ, ದೊಡ್ಡ ಹಗರಣವಿರುವುದರಿಂದ, ಇದನ್ನು CBI ತನಿಖೆಗೆ ಕೊಡುವಂಥಾದ್ದು ಆಗಲಿ. ಮಾನ್ಯ ಮುಖ್ಯಮಂತ್ರಿಯವರು ನನಗೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಿದ್ದಾರೆ. ಇದಕ್ಕೆ Finance Secretary ಯವರು approval ಕೊಟ್ಟಿದ್ದಾರೆ. Finance Minister approval ಕೊಟ್ಟಿದ್ದಾರೆ. ನಾವು ಒಪ್ಪಿಕೊಳ್ಳುತ್ತೇವೆ, ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧವಿಲ್ಲ. ಇದನ್ನು CBIಗೆ ಕೊಡಿ, ಇದು ಏಕೆ ಅಯಿತು? ಎಲ್ಲಿಂದ ಅಯಿತು? ಏತಕ್ಕೆ ಇದು ಅಯಿತು? ಅಲ್ಲಿಯವರೆಗೆ ಏಕೆ ಹೋದರು? ಬೇಡಿಕೆ ಸಮೀಕ್ಷೆ ಮಾಡಿದ್ದಾರಾ? ಇಲ್ಲವಾ? ಬೇಡಿಕೆ ಇಲ್ಲದೇ ಹೋದರೆ ಅನಾವಶ್ಯಕವಾಗಿ ಅಲ್ಲಿ ಏಕೆ ತೆಗೆದುಕೊಳ್ಳುತ್ತಾರೆ? ಇದರ ಉದ್ದೇಶವೇನು? DCಯವರನ್ನು ವರ್ಗಾವಣೆ ಮಾಡಿದ್ದು ಏಕೆ? ಬೇರೆ DCಯವರನ್ನು ತಂದು ರೇಟನ್ನು ಹೆಚ್ಚು ಮಾಡಿದ್ದು ಏಕೆ? ಇವೆಲ್ಲಾ ವಿಷಯಗಳು ಜನರಿಗೆ ಗೊತ್ತಾಗಬೇಕಲ್ಲಾ. ದಯಮಾಡಿ ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಇದನ್ನು CBI ತನಿಖೆಗೆ ಕೊಡಬೇಕು. ಇದರ ಸತ್ಯ ಏನೆಂಬುದು ಹೊರಗಡೆ ಬರಬೇಕು. ಇದರ ಹಿಂದೆ ಇದ್ದವರಿಗೆಲ್ಲಾ ಶಿಕ್ಷೆಯಾಗಬೇಕೆಂದು ಒತ್ತಾಯವನ್ನು ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನೀವು ಆಗಲೇ ಮಾತನಾಡಿದಿರಲ್ಲಾ....

ಶ್ರೀ ಹೆಚ್.ಡಿ.ರೇವಣ್ಣ: ನಾನು ಆಗಲೇ Rule 60ರಲ್ಲಿ submission ಮಾಡಿದ್ದಷ್ಟೆ ಹೊರತು, ಇನ್ನು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು: ತಾವು ವಿಷಯವನ್ನು brief ಆಗಿ ಹೇಳಿ, ಮತ್ತೆ ವಿಷಯ repeat ಆಗುವುದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದು ಬೇಡ, ವಿಷಯವನ್ನು ಮುಚ್ಚಿ ಹಾಕೋಣವೆಂದರೆ ಮುಚ್ಚಿ ಹಾಕೋಣ ನನ್ನದೇನೂ ಇಲ್ಲ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ ನಾನು ಒಂದು ವಿನಂತಿ ಮಾಡುವುದೇನೆಂದರೆ....

ಶ್ರೀ ಹೆಚ್.ಡಿ.ರೇವಣ್ಣ: ಇದು ನೂರಾರು ಕೋಟಿ ರೂಪಾಯಿಗಳ ಹಗರಣ ವಾಗಿರುವಂಥಾದ್ದು, ದಯಮಾಡಿ....

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಾನು ಸಭಾಧ್ಯಕ್ಷನಾಗಿ ಮಾತನಾಡುತ್ತಿದ್ದೇನೆ. ಈಗ ಮಾನ್ಯ ಬಾಲಕೃಷ್ಣರವರು ಸಾಕಷ್ಟು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಕೆಲವು details ಕೊಟ್ಟಿದ್ದಾರೆ. ನೀವು ಮಾತನಾಡಬಾರದೆಂದು ನಾನು ಹೇಳುತ್ತಿಲ್ಲ. ಆದರೆ ವಿಷಯ ಸಂಕ್ಷಿಪ್ತವಾಗಿ ಇರಲಿ, ಮತ್ತೆ points repetition ಆಗಬಾರದು, ಹೊಸ ವಿಷಯಗಳು ಏನಾದರೂ ಇದ್ದರೆ ಮಾತನಾಡಿ. ಇಂದು ಸಂಜೆ 6ಗಂಟೆಯೊಳಗೆ ತಮ್ಮ ಕಡೆಯಿಂದ ಚರ್ಚೆ ಮುಗಿಸಿದ ನಂತರ ಸರ್ಕಾರ ಉತ್ತರ ಕೊಡಲಿ. ಮೊದಲು ಮಾನ್ಯ ರೇವಣ್ಣನವರು ಮಾತನಾಡಲಿ, ನಂತರ ಮಾನ್ಯ ವಿರೋಧಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಈ ವಿಷಯ ಗಂಭೀರವಾಗಿದೆ. ಇದರಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆಯೆಂಬ ಉದ್ದೇಶದಿಂದಲೇ, ಇವತ್ತಿನ ದಿವಸ ಬೆಳಿಗ್ಗೆ ನಿಯಮ 60ರ ಅಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ತಾವು ಅದನ್ನು ನಿಯಮ 69ಕ್ಕೆ convert ಮಾಡಿ ಅವಕಾಶ ಕೊಟ್ಟಿದ್ದೀರಿ. ಈಗಾಗಲೇ ನಮ್ಮ ಸದಸ್ಯರಾದ ಬಾಲಕೃಷ್ಣರವರು ಸುದೀರ್ಘವಾಗಿ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಮಧ್ಯದಲ್ಲಿ interfere ಆಗಿದ್ದಾರೆ. ಇವತ್ತು ಏನಾಗಿದೆಯೆಂದರೆ, ಮೊನ್ನೆ ವಿಧಾನಪರಿಷತ್ತಿನಲ್ಲಿ ನಡೆದಿರುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಸನ್ಮಾನ್ಯ ವಸತಿ ಮಂತ್ರಿಯವರೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈಗ 33 ಎಕರೆಗಳೆಂದು ಹೇಳುತ್ತಾರೆ. ಅಲ್ಲಿ ವಸತಿ ಮಂತ್ರಿಯವರು ಏನು ಹೇಳುತ್ತಾರೆಂದರೆ, ಹೌದು, ಕರ್ನಾಟಕ ಶಿಡ್ಲಘಟ್ಟದಲ್ಲಿ ಜಮೀನು ಖರೀದಿಸಲು ತೀರ್ಮಾನ, ಸರ್ಕಾರದ ಆದೇಶವಾಗಿದೆಯೆಂದು ಹೇಳುತ್ತಾರೆ. ಅದು 959 ಎಕರೆಗಳನ್ನು ಖರೀದಿ ಮಾಡಿದ್ದೇವೆಂದು ಹೇಳುತ್ತಾರೆ. ಮೂರನೇ ವಿಷಯವೇನೆಂದರೆ ಸಮೀಕ್ಷೆ ಏನಾದರೂ ಆಗಿದೆಯಾ? ಎಂದು ಕೇಳುತ್ತಾರೆ. ಅದಕ್ಕೆ ಸಮೀಕ್ಷೆಯೇ ಆಗಿಲ್ಲವೆಂದು ಹೇಳುತ್ತಾರೆ. ಈ ಹೇಳಿಕೆಯನ್ನು ನಾನಲ್ಲ ಕೊಡುತ್ತಿರುವುದು, ಸನ್ಮಾನ್ಯ ವಸತಿ ಮಂತ್ರಿಗಳು ಹೇಳಿಕೆ ಕೊಟ್ಟಿರುವುದು. ಇದೇ ಒಂದು ವೇಳೆ ಖರೀದಿಸಲು ತೀರ್ಮಾನವಾಗದಿದ್ದಲ್ಲಿ, ಪ್ರತಿ ಎಕರೆಗೆ ಗೊತ್ತುಪಡಿಸಿರುವ ಹಣವೆಷ್ಟು? ಎಂದರೆ 959 ಎಕರೆಗೂ 50 ಲಕ್ಷ ರೂಪಾಯಿಗಳಂತೆ ಅವರೇ ಹೇಳಿದ್ದಾರೆ. ಅಂದರೆ ಅವರು ಇಲ್ಲಿ 33 ಎಕರೆಗಳೆಂದು ಹೇಳುತ್ತಿಲ್ಲ. ಈಗ ಇಲ್ಲಿ ಮಾನ್ಯ ವಸತಿ ಸಚಿವರು ಸುಳ್ಳು ಹೇಳುತ್ತಿದ್ದಾರೋ, ಮಾನ್ಯ

ಮುಖ್ಯಮಂತ್ರಿಯವರು ಸುಳ್ಳು ಹೇಳುತ್ತಿದ್ದಾರೋ, ನನಗೆ ಗೊತ್ತಿಲ್ಲ, ಏಕೆಂದರೆ ಇದು ಅವರ ಹೇಳಿಕೆಯಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ರೇವಣ್ಣನವರೆ, ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ನಾನು ಹೇಳದೇ ಇರುವುದನ್ನು ಅವರು ಹೇಳುವುದು ಬೇಡ. ಮೊದಲನೆಯದಾಗಿ ಈಗ 32,33 ಎಕರೆ ಜಮೀನು ಹಾಲಿ ಇದುವರೆಗೂ 50ಲಕ್ಷ ರೂಪಾಯಿಗಳಂತೆ ಖರೀದಿ ಆಗಿದೆ. ಎರಡನೆಯದಾಗಿ, ವಿಧಾನಪರಿಷತ್ತಿನಲ್ಲಿ 900 ಚಿಲ್ಲರೆ ಎಕರೆ ಜಮೀನನ್ನು ಖರೀದಿ ಮಾಡುವುದಕ್ಕೆ ಹೊರಟಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಅದನ್ನು deny ಮಾಡುತ್ತಿಲ್ಲ. ಈಗ ಇದುವರೆಗೂ 959 ಎಕರೆಯಲ್ಲಿ 32,33 ಎಕರೆ ಜಮೀನು ಖರೀದಿ ಆಗಿದೆ. ಇಲ್ಲಿ ಜಮೀನಿಗೆ ಅಷ್ಟು ಬೆಲೆ ಇಲ್ಲ. ಇಲ್ಲಿ ಹೆಚ್ಚುವರಿಯಾಗಿ ಜಮೀನನ್ನು ಖರೀದಿ ಮಾಡಿ ಏನೋ ಅವ್ಯವಹಾರ ಮಾಡುವುದಕ್ಕೆ ಹೊರಟಿದ್ದಾರೆನ್ನುವಂಥಾದ್ದು ನಿಮ್ಮ ಆರೋಪವಾಗಿದೆ. ಈಗ ಮೇಲ್ಮನೆಯಲ್ಲಿ ಏನು ಹೇಳಿದ್ದಾರೆಂಬ ವಿಷಯವನ್ನು ಮಾನ್ಯ ಬಾಲಕೃಷ್ಣರವರು ಹೇಳಿದರು. ನಾನು ಹೇಳದೇ ಇರುವ ವಿಚಾರವನ್ನು ನನ್ನ ಬಾಯಿಂದ ಹೇಳಿಸಬೇಡಿ. ಇದಕ್ಕೆ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ನೀವು ಏನು ಸಲಹೆಯನ್ನು ಕೊಡುತ್ತೀರೋ ಅದನ್ನು ನನಗೆ ಕೊಡಿ. ಅದಕ್ಕೋಸ್ಕರವೇ ಇದು ಸುದೀರ್ಘವಾಗಿ ಚರ್ಚೆಯಾಗಬೇಕೆಂದು ಹೇಳುತ್ತಿರುವಂಥಾದ್ದು. ಯಾವುದೇ ಕಾರಣಕ್ಕೂ ಇದು ಪಾರದರ್ಶಕ ಸರ್ಕಾರ, ಮುಚ್ಚಿ ಹಾಕುವ ಪ್ರಶ್ನೆ ಇಲ್ಲ. ನೀವು ಎಲ್ಲಾ ವಿವರಗಳನ್ನು ಕೊಡಿ, ಅದರೆ ಹೇಳಿದ ವಿಚಾರಗಳನ್ನೇ repeat ಮಾಡಬೇಡಿ ಅಷ್ಟೇ. ನೀವು ಹೊಸ ವಿಷಯಗಳನ್ನು ಹೇಳಿ, ನಮಗೂ enlighten ಮಾಡಿ. We are ready to hear. ನಾವು cooperate ಮಾಡುವುದಕ್ಕೆ ready ಇದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಹೊಸ ವಿಷಯವನ್ನು ಏನೂ ಮುಚ್ಚಿಟ್ಟು ಹೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದಕ್ಕೂ, ಮೇಲ್ಮನೆಯಲ್ಲಿ ಮಾನ್ಯ ವಸತಿ ಸಚಿವರು ಹೇಳಿಕೆ ಕೊಟ್ಟಿರುವುದನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಹೊಸ ವಿಷಯಗಳನ್ನು ಯಾವುದು ಹೇಳುತ್ತಿಲ್ಲ. ಸನ್ಮಾನ್ಯ ವಸತಿ ಸಚಿವರೇ clear cut ಆಗಿ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಎಲ್ಲಾ 959 ಎಕರೆಗಳನ್ನು ಪ್ರತಿ ಎಕರೆಗೆ 50 ಲಕ್ಷ ರೂಪಾಯಿಗಳಂತೆ ಖರೀದಿಸಲು ತೀರ್ಮಾನಿಸಿದೆ. ಈ ಹೇಳಿಕೆಯನ್ನು ದಿನಾಂಕ: 10.07.2009ರಂದು ಕೊಟ್ಟಿದ್ದಾರೆಂದರೆ ಇದು ಕಳೆದ ಶುಕ್ರವಾರದಂದು ಸನ್ಮಾನ್ಯ ವಸತಿ ಸಚಿವರು ಈ ಹೇಳಿಕೆಯನ್ನು ಕೊಟ್ಟಿದ್ದಾರೆಂದ ಮೇಲೆ, ಇದರಲ್ಲಿ ಯಾರನ್ನು ನಂಬಬೇಕು? ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ನಂಬಬೇಕೋ, ಮಾನ್ಯ ವಸತಿ ಸಚಿವರ ಹೇಳಿಕೆಯನ್ನು ನಂಬಬೇಕೋ, ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಏನೂ deviate ಮಾಡುವುದಕ್ಕೆ ಹೋಗುತ್ತಿಲ್ಲ. ಇದು ಅಲ್ಲದೇ

ಸಂದಾಯ ಮಾಡಿದ ಮೊತ್ತ ರೈತರಿಗೆ ವಿವರ, ಅದನ್ನು ಲಗತ್ತಿಸಿದ್ದೇವೆಂದು ಹೇಳಿದ್ದಾರೆ. ನಾನು ಹೇಳುವಂಥಾದ್ದು ಒಬ್ಬ ಮಂತ್ರಿಯವರೇ, ಅವರು ಯಾರು ಹಿಂದಿನ ಮಂತ್ರಿಗಳಿದ್ದರು. ಅವರ ಸ್ವಂತ ಸಹೋದರ ಶ್ರೀನಿವಾಸ ಶೆಟ್ಟರೋ, ಅಥವಾ ನಾರಾಯಣ ಶೆಟ್ಟರು ಎಂದು ಸಹೋದರರು ಯಾರು ಇದ್ದಾರೋ, ಅವರಿಗೆ ಒಂದೇ ಸಾರಿ payment ಎಷ್ಟು ದಿವಸಗಳಲ್ಲಿ ಕೊಡಬೇಕೆನ್ನುವಂಥಾದ್ದು, ಅವರು ಮತ್ತು ರಮೇಶ್‌ಗೂ ಕೊಟ್ಟಾಯಿತು.

5.30pm

ಇದರಲ್ಲಿ ಅಧಿಕಾರಿಗಳು ಯಾರಿದ್ದಾರೆ, ಮಂತ್ರಿಗಳು ಯಾರಿದ್ದಾರೆ ಎನ್ನುವುದು ಈಚೆಗೆ ಬರಬೇಕಲ್ಲವೇ? ಇದಲ್ಲದೆ 10ನೇ ಜುಲೈವರೆಗೆ ಮಾನ್ಯ ವಸತಿ ಮಂತ್ರಿಗಳು ಈ ಅವ್ಯವಹಾರವನ್ನು ತಡೆಹಿಡಿಯುತ್ತೇನೆಂದು ಎಲ್ಲಿಯಾದರೂ ಸದನಕ್ಕೆ ಹೇಳಿದ್ದಾರೆಯೇ? ಇಂಥ ಅವ್ಯವಹಾರ ನಡೆಯುತ್ತಿದೆ, ಇದರಲ್ಲಿ ಅವ್ಯವಹಾರ ನಡೆದಿರುವುದು ನನಗೆ ಕಂಡು ಬಂದಿದೆ, ಹಿಂದಿನ ವಸತಿ ಮಂತ್ರಿಗಳು ಇಂಥ ಕೆಲಸ ಮಾಡಿದ್ದಾರೆ, ಇದನ್ನು ತಡೆಹಿಡಿಯುತ್ತೇನೆಂದು ವಿಧಾನ ಪರಿಷತ್ತಿನಲ್ಲಿ ಏನಾದರೂ ಹೇಳಿಕೆ ಕೊಟ್ಟಿದ್ದರೆ ಆಗ ನಾನು ವಸತಿ ಮಂತ್ರಿಗಳನ್ನು ಒಪ್ಪಿಕೊಳ್ಳುತ್ತಿದ್ದೆ, ಮಾನ್ಯ ಮುಖ್ಯಮಂತ್ರಿಯವರನ್ನು ಸಹ ಒಪ್ಪಿಕೊಳ್ಳುತ್ತಿದ್ದೆ. ಇವತ್ತು ನಾವು ಈ ವಿಷಯವನ್ನು ಸದನದಲ್ಲಿ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸಿದ ಮೇಲೆ ಇದು ಈ ರಾಜ್ಯದ ಜನತೆಯ ಮುಂದೆ ಬಯಲಾಗುತ್ತದೆಂದು 33 ಎಕರೆ ಮಾತ್ರ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದರೆ ಇದು ನ್ಯಾಯವೇ ಎಂಬುದನ್ನು ನಿರ್ಧರಿಸುವುದಕ್ಕೆ ರಾಜ್ಯದ ಜನತೆಗೆ ಬಿಡುತ್ತೇನೆ. ಜಿಲ್ಲಾಧಿಕಾರಿಗಳು ಯಾರ control ನಲ್ಲಿರುತ್ತಾರೆ? ಜಿಲ್ಲಾಧಿಕಾರಿಗಳು ಮಂತ್ರಿಗಳ control ನಲ್ಲಿರುತ್ತಾರೆಯೇ? DPAR ಯಾರ control ನಲ್ಲಿದೆ? ಒಬ್ಬ ಮಂತ್ರಿ ಹೇಳಿದ್ದನ್ನು ಮಾಡಲಿಲ್ಲವೆಂದು ಆ ಅಧಿಕಾರಿಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಬೇರೆ ಜಿಲ್ಲಾಧಿಕಾರಿಗಳ ಕೈಯಲ್ಲಿ ಮಾಡಿಸುತ್ತೀರಿ. ಬೆಂಗಳೂರು ಗ್ರಾಮಾಂತರದಲ್ಲಿ, ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ? ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ KIADB ಅಡಿಯಲ್ಲಿ ಎಲ್ಲೆಲ್ಲಿ ರೈತರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ? ಯಾವ್ಯಾವುದನ್ನು acquire ಮಾಡಿದ್ದೀರಿ ಎಂಬುದನ್ನು ಸದನದ ಮುಂದೆ ಇಡಿ. ಈ ಪ್ರದೇಶದಲ್ಲಿ ಒಂದು ಎಕರೆ ಜಮೀನು 1.00 ಲಕ್ಷ ರೂ.ಗಳಿಂದ 2.5 ಲಕ್ಷ ರೂ.ಗಳಿಗೆ ಬಾಳುತ್ತದೆ ಎಂದು ಜಿಲ್ಲಾಧಿಕಾರಿಯೇ ಹೇಳಿದ್ದಾರೆ. ಅವರು file ನಲ್ಲಿ maximum ಅಂದರೆ 2.5 ಲಕ್ಷ ರೂ.ಗಳಿಗೆ ಬೆಲೆ ಬಾಳುತ್ತದೆ ಎಂದು ತಿಳಿಸಿದ್ದಾರೆ. ದಲ್ಲಾಳಿಗಳು ಹೋದಾಗ ಎಕರೆಗೆ 43 ಲಕ್ಷ ರೂಪಾಯಿಯಂತೆ ರೈತರೇ ಕೊನೆಗೆ ಒಪ್ಪಿಕೊಂಡಿದ್ದಾರೆ. ಅವರು 43 ಲಕ್ಷ ರೂಪಾಯಿಗಳಿಗೆ ಒಪ್ಪಿಕೊಂಡ ಮೇಲೆ ಮತ್ತೆ 7 ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದವರು ಯಾರು? ಇದರ ಬಗ್ಗೆ ಎಲ್ಲಿ ಸಭೆ ನಡೆಯಿತು? ಗೃಹ ಮಂಡಳಿಯ

ಅಧ್ಯಕ್ಷರು ಸಭೆ ನಡೆಸಿದರೇ? ಅಥವಾ ಮಂತ್ರಿಗಳ ಅಧ್ಯಕ್ಷತೆಯಲ್ಲಿಯೇ ನಡೆಯಿತೇ? ಸಭೆ ನಡೆದಿದ್ದರೆ ಯಾರ ಅಧ್ಯಕ್ಷತೆಯಲ್ಲಿ ನಡೆಯಿತು? ಇದಕ್ಕೆ ಧಮಕಿ ಯಾರು ಹಾಕಿದರು? ಎಕರೆ ಒಂದಕ್ಕೆ 43 ಲಕ್ಷ ರೂಪಾಯಿಗಳಂತೆ ರೈತರು ಒಪ್ಪಿಕೊಂಡಮೇಲೆ ಅದನ್ನು 50 ಲಕ್ಷ ರೂಪಾಯಿಗಳೆಂದು ಹೆಚ್ಚಿಗೆ ಮಾಡಲು ಕಾರಣವೇನು? ಅದೇ ಊರಿನಲ್ಲಿ ಒಂದು ಎಕರೆ ಜಾಗಕ್ಕೆ 30 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಶ್ರೀಶಕ್ತಿ ಎಂಟರ್‌ಪ್ರೈಸಸ್ ಎನ್ನುವವರು ಬರೆದುಕೊಡುತ್ತಾರೆ. 'ಶ್ರೀ ಶಕ್ತಿ ಎಂಟರ್‌ಪ್ರೈಸಸ್ ಡೆನಿಷ್ ಪಿಂಟೋ ಎನ್ನುವವರು ಕರ್ನಾಟಕ ಗೃಹಮಂಡಳಿಗೆ ಪತ್ರ ಬರೆದು ಜಂಗಮಕೋಟೆ ಹೋಬಳಿ 500 ಎಕರೆ ಜಮೀನು ಅಂದರೆ same ಜಾಗ, ಇವರು ಯಾವ ಜಾಗದಲ್ಲಿ ಖರೀದಿ ಮಾಡಿದ್ದಾರೆ, ಆ ಜಾಗದಲ್ಲಿಯೇ 500 ಎಕರೆ ಪ್ರದೇಶವನ್ನು ಖರೀದಿ ಮಾಡಲು ಎಕರೆಗೆ 30 ಲಕ್ಷ ರೂ.ಗಳಂತೆ ಕೊಡಲು ಸಿದ್ಧರಿದ್ದೇವೆ, ದಾಖಲೆಗಳನ್ನು ಒದಗಿಸಿ ಲಗತ್ತಿಸಿದೆ' ಎಂದು ಆತನೇ ಅರ್ಜಿಯನ್ನು ಬರೆಯುತ್ತಾನೆ. ಅಂದರೆ, 30 ಲಕ್ಷ ರೂಪಾಯಿಗಳಂತೆ ಕೊಡುತ್ತೇವೆಂದು ಹೇಳುತ್ತಾರೆ. ಒಂದು ಕಡೆ ಮಧ್ಯವರ್ತಿಗಳು ಆ ಜಾಗಕ್ಕೆ ಎಕರೆ ಒಂದಕ್ಕೆ 43 ಲಕ್ಷ ರೂಪಾಯಿಗಳು ಹೇಳುತ್ತಾರೆ. ಇನ್ನೊಂದು ಕಡೆ 500 ಎಕರೆ ಜಾಗಕ್ಕೆ ಎಕರೆ ಒಂದಕ್ಕೆ 30 ಲಕ್ಷ ರೂಪಾಯಿಗಳು ಕೊಡುತ್ತೇನೆಂದು ಡೆವೆಲಪರ್ ಬರೆದುಕೊಡುತ್ತಾನೆ. ಇನ್ನೊಂದು ಕಡೆ ಪ್ರಾಮಾಣಿಕವಾದಂಥ ಜಿಲ್ಲಾಧಿಕಾರಿ ಒಂದು ಎಕರೆಗೆ 2.5 ಲಕ್ಷ ರೂಪಾಯಿಗಳಿಂದ 3 ಲಕ್ಷ ರೂಪಾಯಿಗಳು ಎಂದು ಹೇಳುತ್ತಾರೆ. ಅದಕ್ಕೆ ಆ ಜಿಲ್ಲಾಧಿಕಾರಿಯನ್ನು ಅಲ್ಲಿಂದ ಸರ್ಕಾರ ವರ್ಗಾವಣೆ ಮಾಡುತ್ತದೆ. ಇನ್ನೊಂದು ಅಂಶ ಹೇಳುತ್ತೇನೆ. ಇದಕ್ಕೆ Government Order ಮಾಡಿದ್ದಾರಲ್ಲಾ, ಇದನ್ನು ಯಾರು ಮಾಡಿದರು ಸ್ವಾಮಿ? 5 ಕೋಟಿ ರೂ.ಗಳಿಗಿಂತ ಹೆಚ್ಚಿನ ಬೆಲೆಗೆ ಖರೀದಿ ಮಾಡಬೇಕಾದರೆ ಅಥವಾ ಯಾವುದೇ ಪ್ರಾಜೆಕ್ಟ್ ಆಗಬೇಕಾದರೆ ಇದು ಹಣಕಾಸು ಇಲಾಖೆಗೆ ಹೋಗಬೇಕಲ್ಲವೇ? 959 x 50 ಎಂದರೆ ಸುಮಾರು 475 ಕೋಟಿಗಿಂತ ಕಡಿಮೆ ಆಗಲಾರದು. ಆದ್ದರಿಂದ, ಇದು ಹಣಕಾಸು ಇಲಾಖೆಗೆ ಹೋಗಬೇಕಲ್ಲವೇ? ಹಾಗಿದ್ದರೆ, ಇದಕ್ಕೆ ಸಂಬಂಧಿಸಿದ ಕಡತದಲ್ಲಿ ಇದರ ಬಗ್ಗೆ ಹಣಕಾಸು ಇಲಾಖೆಯ ಕಾರ್ಯದರ್ಶಿಯವರು ಏನು ಬರೆದರು? ಅದನ್ನು ಸದನದ ಮುಂದಿಡಿ. ಇದಕ್ಕೆ ಹಣಕಾಸು ಮಂತ್ರಿಗಳು ಏನು ಹೇಳಿದರು? ಹಣಕಾಸು ಮಂತ್ರಿಗಳಾಗಿ ಮಾನ್ಯ ಮುಖ್ಯಮಂತ್ರಿಗಳೇ ಇದ್ದಾರೆ. ಈ 959 ಎಕರೆ ಜಾಗವನ್ನು ಖರೀದಿ ಮಾಡಲು ಸನ್ಮಾನ್ಯ ಮುಖ್ಯಮಂತ್ರಿಗಳೇ ಕಣ್ಣುಮುಚ್ಚಿಕೊಂಡು approve ಮಾಡಿದ್ದಾರೆಯೇ? ಇದಾದಮೇಲೆ ಇದು ಸಚಿವಸಂಪುಟಕ್ಕೆ ಹೋಗಬೇಕಲ್ಲವೇ? ಸಚಿವ ಸಂಪುಟಕ್ಕೆ ಹೋಗಿದ್ದರೆ ಇದರ ಬಗ್ಗೆ ಎಲ್ಲಾ ಸಚಿವರು ಒಪ್ಪಿಕೊಂಡಿದ್ದಾರೋ, ಇಲ್ಲವೋ ಅದು ನಮಗೆ ಗೊತ್ತಿಲ್ಲ. ಅಥವಾ ಸಚಿವ ಸಂಪುಟ ಸಭೆಗೆ ಹೋಗದೆಯೇ pending at discretion ಎಂದು ಏನಾದರೂ ಕೊಟ್ಟು ಮಾಡಿದ್ದಾರೆಯೇ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿ): ಒಂದು ನಿಮಿಷ yield ಆಗಿ. ರೇವಣ್ಣನವರು ಈ ಮನೆಯ ಹಿರಿಯ ಸದಸ್ಯರು. ಕರ್ನಾಟಕ ಗೃಹಮಂಡಳಿ ಹೇಗೆ ಕೆಲಸ ಮಾಡುತ್ತದೆ, ಅದಕ್ಕೆ ಎಷ್ಟು ಸ್ವಾತಂತ್ರ್ಯ ಇದೆ ಎನ್ನುವುದರ ಬಗ್ಗೆ ಇಲ್ಲಿ ಕುಳಿತಿರುವಂಥ ನಮಗೆಲ್ಲ ಅರಿವು ಇದೆ. ತಾವು ಸಹ ಸಚಿವರಾಗಿದ್ದಂಥವರು. ಮೊದಲನೆಯದಾಗಿ, ಈ ವಿಷಯ ಹಣಕಾಸು ಇಲಾಖೆಗೆ ಹೋಗುವುದಿಲ್ಲ, ಹೋಗಿಬರುವ ಅವಶ್ಯಕತೆಯಿಲ್ಲ. ಹಾಗೆಯೇ, ಇದು ಸಚಿವಸಂಪುಟದ ಮುಂದೆ ಬರುವುದಿಲ್ಲ. ಈ ಯೋಜನೆಗೆ ನಾವು ಸರ್ಕಾರದಿಂದ ಒಂದು ಪೈಸೆ ಸಹ ಕೊಡುವುದಿಲ್ಲ. ಗೃಹಮಂಡಳಿ self finance ಇರುವಂಥದ್ದು. 2000ರ ಮಾರ್ಚ್ ತಿಂಗಳ ನಂತರ 30 ಎಕರೆ 31 ಗುಂಟೆ ಮಾತ್ರ 15 ಕೋಟಿ 39 ಲಕ್ಷ ರೂಪಾಯಿಗಳ ಒಂದು ಅಂದಾಜಿನಲ್ಲಿ ಖರೀದಿ ಆದ ಮೇಲೆ ಮಾರ್ಚ್ ನಂತರ ಇದುವರೆಗೆ ಒಂದು ಎಕರೆ ಸಹ ಖರೀದಿ ಮಾಡಿಲ್ಲ. ನಿಮಗೆ ಗೊತ್ತಿದ್ದೂ ಸಹ ಮುಖ್ಯಮಂತ್ರಿಯವರಿಗೆ ಗೊತ್ತಿಲ್ಲವೇ? ಹಣಕಾಸು ಇಲಾಖೆಯ ಗಮನಕ್ಕೆ ಬರಲಿಲ್ಲವೇ? ಸಚಿವ ಸಂಪುಟದ ಅನುಮೋದನೆಯಾಗಿದೆಯೇ? ಏಕೆ misguide ಮಾಡುತ್ತೀರಿ? ಪ್ರಾಮಾಣಿಕವಾಗಿ ಇಲ್ಲಿ ಎದ್ದುನಿಂತುಕೊಂಡು ಹೇಳುತ್ತಿದ್ದೇನೆ, ಈ ಮನೆಯಲ್ಲಿ ತಾವು misguide ಮಾಡಬೇಡಿ. ಇಲ್ಲಿ ತಾವು ಸತ್ಯವನ್ನಾದರೂ ಹೇಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಮಾಧ್ಯಮದವರು ಬರೆದುಕೊಳ್ಳುತ್ತಿದ್ದಾರೆ. ಅವರು ಹೇಳಿದ್ದಾರೆ. ಏನಾಗುತ್ತದೆಯೋ, ಎಲ್ಲಿಗೆ ಹೋಗುತ್ತದೆಯೋ ಎಂದು ಮಧ್ಯೆ ನನ್ನದೂ ಒಂದು ಸ್ವಲ್ಪ ಇರಲಿ ಎಂದು ತಾವು reply ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಶಿವಕುಮಾರ್‌ರವರೆ, ನಿಮ್ಮಿಂದ ನಾನು ಇದನ್ನು ನಿರೀಕ್ಷೆ ಮಾಡಿರಲಿಲ್ಲ. I never expected. ಮಾಧ್ಯಮಕ್ಕೆ, ಈ ರಾಜ್ಯದ ಜನರಿಗೆ misguide ಆಗಬಾರದು. ಗೊಂದಲವನ್ನು ಉಂಟು ಮಾಡಬೇಕು, misguide ಮಾಡಬೇಕೆನ್ನುವ intention ಅವರದ್ದು ಇದ್ದರೆ, as a Chief Minister ನಾನು clarily ಮಾಡುವುದು ನನ್ನ duty. ಅದನ್ನು ನಾನು ಮಾಡುತ್ತಿದ್ದೇನೆ. ಮುಖ್ಯಮಂತ್ರಿಯವರಾಗಿ, ನೀವು ಹೇಳುವುದು ಸರಿ ಇಲ್ಲವೆಂದು ಹೇಳಿ ಬೇಕಾದರೆ. ಆದರೆ, ಅವರಿಗೆ ಗೊತ್ತಿದ್ದೂ misguide ಏಕೆ ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ, please. ಈಗ ಮುಖ್ಯಮಂತ್ರಿಯವರು ಹೇಳಿದ್ದರಲ್ಲಿ ಏನಾದರೂ ತಪ್ಪಿದೆಯೇ? ಡಿ.ಕೆ. ಶಿವಕುಮಾರ್‌ರವರೆ, ಸ್ಪಷ್ಟೀಕರಣ ಮಾಡಿದ್ದೇಕೆಂದರೆ, further ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ಅವರು 5 ನಿಮಿಷಕ್ಕೆ excite ಆಗುತ್ತಾರೆ.

ಅಧ್ಯಕ್ಷರು: ಡಿ.ಕೆ.ಶಿವಕುಮಾರ್‌ರವರೆ, points repeat ಆಗಬಾರದೆನ್ನುವುದು ಒಂದು ಮತ್ತು ಹಣಕಾಸು ಇಲಾಖೆಯ ಜವಾಬ್ದಾರಿ ಏನು ಎನ್ನುವುದನ್ನು ಅವರು ಹೇಳಿದರು. ರೇವಣ್ಣನವರೆ, ತಾವು ಮುಂದುವರಿಸಿ.

ಶ್ರೀ ಹೆಚ್.ಡಿ.ರೇವಣ್ಣ: ನಾವೇನು ಇಲ್ಲಿ ಹೇಳುತ್ತಿದ್ದೇವೆ ಅದನ್ನು ಮಾನ್ಯ ಮುಖ್ಯಮಂತ್ರಿಯವರು ಗುರುತು ಹಾಕಿಕೊಂಡು, note ಮಾಡಿಕೊಂಡು ಸರ್ಕಾರದಿಂದ ಉತ್ತರ ಕೊಡುವ ಸಮಯದಲ್ಲಿ ಹೇಳಲಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಒಂದು ಸರ್ಕಾರಿ ಆದೇಶವಿದೆ. ಈ ಸರ್ಕಾರಿ ಆದೇಶವನ್ನು ಯಾರು ಮಾಡಿದ್ದು? 500 ಕೋಟಿ ರೂಪಾಯಿಗಳಷ್ಟು ದೊಡ್ಡ project ಅನ್ನು ತೆಗೆದುಕೊಳ್ಳಬೇಕಾದರೆ ಹಣಕಾಸು ಇಲಾಖೆಯಿಂದ ಅನುಮತಿ ಇಲ್ಲದೆ ಇದಕ್ಕೆ permission ಕೊಟ್ಟವರು ಯಾರು?

ಶ್ರೀ ವಿ.ಸೋಮಣ್ಣ: ರೇವಣ್ಣನವರೆ, ತಾವು ಸಹ ಮಂತ್ರಿಯಾಗಿದ್ದವರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಸೋಮಣ್ಣನವರೆ, ತಾವು ದಯಮಾಡಿ ಕುಳಿತುಕೊಳ್ಳಿ, ಸರ್ಕಾರದಿಂದ ಉತ್ತರ ಕೊಡುವ ಸಂದರ್ಭದಲ್ಲಿ ಸವಿಸ್ತಾರವಾಗಿ ಉತ್ತರ ಕೊಡಲಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಿಗೆ ತಪ್ಪು ಮಾಹಿತಿ ಹೋಗಬಾರದು. ಮಾನ್ಯ ರೇವಣ್ಣನವರು ಸಹ 5 ವರ್ಷಗಳ ಕಾಲ ಸಚಿವರಾಗಿದ್ದವರು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ವಸತಿ ಸಚಿವರು ಉತ್ತರ ಕೊಡುವಾಗ ಏನು ಬೇಕಾದರೂ ಕೊಡಲಿ. ನನ್ನದೇನೂ ಅಭ್ಯಂತರವಿಲ್ಲ. ನಾನು submission ಮಾಡುವಾಗ ದಯಮಾಡಿ ಯಾರು ಎದ್ದು ನಿಂತು disturbance ಮಾಡಬಾರದು. ನಾನು yield ಆಗಿಲ್ಲ. ನಾನು ದಾಖಲಾತಿ ಸಮೇತ ಮಾತನಾಡುತ್ತಿದ್ದೇನೆ. ದಯಮಾಡಿ ವಸತಿ ಸಚಿವರು ಈಗ ಕುಳಿತುಕೊಳ್ಳಲಿ. ನಾನು yield ಆಗಿಲ್ಲ. ಈ ರೀತಿ disturbance ಮಾಡುವುದಾದರೆ ಇದನ್ನು ಚರ್ಚೆ ಮಾಡದೆ ಕುಳಿತುಕೊಳ್ಳಬೇಕಾಗುತ್ತದೆ. ಚರ್ಚೆ ಮಾಡುವುದೇ ಬೇಡವೆನ್ನುವುದಾದರೆ ಬಿಟ್ಟುಬಿಡಿ. ಈ message ರಾಜ್ಯದ ಜನತೆ ಮುಂದೆ ಹೋಗಲಿ. ಇಲ್ಲಿ ಚರ್ಚೆ ಮಾಡುವುದು ಬೇಡ, ಇದನ್ನು ಮುಚ್ಚಿಹಾಕಬೇಕೆನ್ನುವುದಾದರೆ ಏನೂ ಮಾಡುವುದಕ್ಕಾಗುವುದಿಲ್ಲ. (ಗೊಂದಲ) ನಾನು yield ಆಗಿಲ್ಲ. ಮಾನ್ಯ ವಸತಿ ಮಂತ್ರಿಗಳು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಸೋಮಣ್ಣನವರೆ, ತಾವು ಆಮೇಲೆ ಉತ್ತರ ಕೊಡುವಿರಂತೆ. ಈಗ ದಯಮಾಡಿ ಕುಳಿತುಕೊಳ್ಳಿ. ರೇವಣ್ಣನವರೆ, points repeat ಆಗಬಾರದು. ಹೊಸ ವಿಷಯವಿದ್ದರೆ ಹೇಳಿ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಮಾತನಾಡುವಾಗ points ನ್ನು repeat ಮಾಡಬೇಡಿ. ಹೊಸ ವಿಚಾರಗಳನ್ನು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಹೇಳಿದ್ದನ್ನೇ ಹೇಳುತ್ತಿಲ್ಲ. ಹಣಕಾಸು ಇಲಾಖೆ, ಸರ್ಕಾರ ಕೊಟ್ಟಿಲ್ಲವೆಂದು ಮುಖ್ಯಮಂತ್ರಿಯವರು ಹೇಳಿದರು. ಅದಕ್ಕೆ ನಾನು ಸರ್ಕಾರಿ ಆದೇಶವನ್ನು ಕೊಡುತ್ತಿದ್ದೇನೆ. ನಿಮಗೆ ಬೇಕಾದರೆ ಇಲ್ಲಿ ಏನೇನಾಗಿದೆ ಎಂಬ ಬಗ್ಗೆ ಈ ಎಲ್ಲಾ ಕಡತಗಳನ್ನು ಕಳುಹಿಸಿಕೊಡುತ್ತೇನೆ. 500 ಕೋಟಿ ರೂಪಾಯಿಯದ್ದು ಸರ್ಕಾರಿ ಆದೇಶ ಮಾಡಬೇಕಾದರೆ, ಮುಖ್ಯಮಂತ್ರಿಗಳ ಮತ್ತು ಯಾರ ಗಮನಕ್ಕೂ ಬರಲಿಲ್ಲವೆಂದರೆ ಅದಕ್ಕೆ ಏನು ಹೇಳುತ್ತೀರೋ ತಮಗೇ ಬಿಡುತ್ತೇನೆ. ಒಂದಲ್ಲಾ ಎರಡಲ್ಲಾ ಐದುನೂರು ಕೋಟಿ ರೂಪಾಯಿಯದ್ದು. ಸರ್ಕಾರಿ ಆದೇಶದಲ್ಲಿ ಅವರೇ ಹೇಳುತ್ತಾರೆ, ಸರ್ಕಾರಿ ಆದೇಶ ಸಂಖ್ಯೆ 3222, ತಿಪಟೂರು-ಚಿಕ್ಕಬಳ್ಳಾಪುರ-ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ವೆಂಕಟಾಪುರ, ಸಗಟೂರು, ಬಳುವಳ್ಳಿ, ಹೊಸಪೇಟೆ, ಬನ್ನೀಪುರ ವಿವಿಧ ಗ್ರಾಮಗಳಲ್ಲಿ ಸರ್ವೆ ನಂಬರ್ 2 ರಿಂದ 390ರವರೆಗೆ ಒಟ್ಟು 959 ಎಕರೆ ಜಮೀನನ್ನು ಎಕರೆ ಒಂದಕ್ಕೆ 50 ಲಕ್ಷದಂತೆ ಮಾತ್ರ ಕರ್ನಾಟಕ ವಸತಿ ಯೋಜನೆಗೆ ಖರೀದಿಸಲು ಅನುಮತಿ ನೀಡಲಾಗಿದೆ. ಇದನ್ನು ಕೊಟ್ಟಿರುವುದು ಸರ್ಕಾರ. ಇದು ಒಂದು ಕಡೆ ಹೌಸಿಂಗ್ ಬೋರ್ಡ್‌ದ್ದು. ಯಾರು ಆ ಮಂತ್ರಿಗಳು ಇರುತ್ತಾರೆ, ಅವರ ತಮ್ಮನ ಹೆಸರಿನಲ್ಲೇ 6 ಲಕ್ಷದ 52 ಸಾವಿರಕ್ಕೆ ಒಂದು ಎಕರೆ 13 ಗುಂಟೆಯನ್ನು ತೆಗೆದುಕೊಳ್ಳುತ್ತಾರೆ. ಅದನ್ನು ಎಂಟೇ ದಿವಸಗಳಲ್ಲಿ ಮಂತ್ರಿಯ ತಮ್ಮ ಶ್ರೀನಿವಾಸಶೆಟ್ಟಿ ಎಂಬುವವರಿಗೆ 50 ಲಕ್ಷಕ್ಕೆ ಪೇಮೆಂಟ್ ಆಗುತ್ತದಲ್ಲಾ, ಇದಕ್ಕೆ ಕಾರಣ ಕರ್ತರು ಯಾರು? ಹೌಸಿಂಗ್ ಕಮೀಷನರ್ ಕಾರಣ ಕರ್ತರೇ? ಅವರನ್ನು ಅಮಾನತ್ತು ಮಾಡುತ್ತೀರೋ? ಅವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕುತ್ತೀರೋ? ನಿಜವಾಗಿಯೂ ತಮ್ಮ ಸರ್ಕಾರಕ್ಕೆ ನೈತಿಕವಾದ ಹಕ್ಕಿದ್ದು ಈ ರಾಜ್ಯದ ಜನರ ಹಣದ ಬಗ್ಗೆ ಕಾಳಜಿ ಇದ್ದರೆ ಯಾರು ಹೌಸಿಂಗ್ ಕಾರ್ಯದರ್ಶಿ, ಕಮೀಷನರ್ ಇದ್ದಾರೆ, ಅವರು ಹಣಕಾಸು ಇಲಾಖೆಯ ಗಮನಕ್ಕೆ, ಮುಖ್ಯಮಂತ್ರಿಯವರ ಗಮನಕ್ಕೆ, ಸಚಿವ ಸಂಪುಟದ ಗಮನಕ್ಕೆ ತಾರದೆಯೇ ಇಂಥ 500 ಕೋಟಿ ರೂಪಾಯಿ ಪ್ರಾಜೆಕ್ಟ್‌ಗೆ ಹೌಸಿಂಗ್ ಬೋರ್ಡ್ ಮುಳುಗಿಸಲು ಏನು ಮಾಡಿದ್ದಾರೆ, ಅವರ ಮೇಲೆ, ಸಂಬಂಧಪಟ್ಟ ಅಧಿಕಾರಿಗಳು, ಡಿ.ಸಿ.ಯವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಲು ತಯಾರಿದ್ದೀರಾ? ಇವತ್ತು ನಾವು ಏನಾದರೂ ಇದನ್ನು ಇಲ್ಲಿ ತರದೇ ಇದ್ದರೆ ಈ ವಿಷಯವನ್ನು ಯಾರಾದರೂ ಮಾತನಾಡುತ್ತಿದ್ದಿರಾ? 10.07.2009ರಂದು ವಸತಿ ಸಚಿವರೇ ವಿಧಾನ ಪರಿಷತ್ತಿನಲ್ಲಿ 959 ಎಕರೆಗೆ ಒಂದು ಎಕರೆಗೆ 50 ಲಕ್ಷದಂತೆ ಎಂದು ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು: ನೀವು ಮಾತನಾಡಿ. ಬೇಡವೆಂದು ಹೇಳುವುದಿಲ್ಲ. ಆದರೆ, ಹೊಸ ವಿಚಾರಗಳನ್ನು ಮಾತನಾಡಿ. ವಿಧಾನ ಪರಿಷತ್ತಿನಲ್ಲಿ ಹೇಳಿರುವುದನ್ನು ಹೇಳುತ್ತಿರಲ್ಲಾ? ಇದನ್ನು ನೀವೂ ಹೇಳಿದಿರಿ, ಅವರೂ ಹೇಳಿದರು.

ಶ್ರೀ ಹೆಚ್.ಡಿ.ರೇವಣ್ಣ: ಇರುವ ವಿಚಾರವನ್ನು ಹೇಳಬೇಕಲ್ಲವೇ?

ಅಧ್ಯಕ್ಷರು: ಹೊಸ ಹೊಸ ವಿಷಯಗಳಿದ್ದರೆ ಹೇಳಿ. ಮತ್ತೆ ವಿಷಯಗಳನ್ನು repetition ಮಾಡುವುದು ಬೇಡ. ಇದರಿಂದ ಸದನದ ಸಮಯ ಹೋಗುತ್ತದೆ. ಬೇರೆ ವಿಷಯ ಚರ್ಚೆಗೆ ಬರುವುದಿಲ್ಲ. ನಾನು ಇದಕ್ಕೆ ಸಂಜೆ 6 ಗಂಟೆಯವರೆಗೆ ಎಂದು ಸಮಯ ನಿಗದಿ ಮಾಡಿದ್ದೇನೆ. ಅಷ್ಟರಲ್ಲಿ ತಾವು ಮುಗಿಸಿ. 6 ಗಂಟೆಯೊಳಗೆ ಎಲ್ಲಾ ವಿಷಯಕ್ಕೆ ಉತ್ತರ ಕೊಡಲಿ. ಹೊಸ ಹೊಸ ವಿಚಾರ ಹೇಳಿದರೆ ಅಡ್ಡಿ ಇಲ್ಲ. ವಿಧಾನ ಪರಿಷತ್ತಿನ ವಿಚಾರವನ್ನು ನೀವು ಎಷ್ಟು ಸಲ ಹೇಳಿದಿರಿ ನೀವೇ ಹೇಳಿ?

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ ನೀವು conclude ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಅವರೇ ವಿಧಾನ ಪರಿಷತ್ತಿನಲ್ಲಿ ಮುಖ್ಯಮಂತ್ರಿಯವರು ಮತ್ತು ಅವರ ಸಚಿವ ಸಂಪುಟದ ಸದಸ್ಯರ ಸಮ್ಮುಖದಲ್ಲೇ ಈ 959 ಎಕರೆಯನ್ನು ಎಕರೆಯೊಂದಕ್ಕೆ 50 ಲಕ್ಷ ರೂಪಾಯಿಯಂತೆ ಖರೀದಿ ಮಾಡಲು ನಿರ್ಧರಿಸಿದ್ದೇವೆಂದು ಹೇಳುತ್ತಾರೆ. ಆ ಕಾರಣದಿಂದ ಕೂಡಲೇ ಯಾರು ಹೌಸಿಂಗ್ ಬೋರ್ಡ್‌ನ ಕಾರ್ಯದರ್ಶಿ ಇದ್ದಾರೆ, ಇದಕ್ಕೆ ಕಾರಣಕರ್ತರು ಯಾರು? ಅವರ ಮೇಲೆ ವಿಚಾರಣೆ ಆಗುವವರೆಗೆ ಕ್ರಿಮಿನಲ್ ಕೇಸ್ ಹಾಕಬೇಕು ಮತ್ತು ಅವರನ್ನು ಅಮಾನತ್ತು ಮಾಡಬೇಕು. ಹೌಸಿಂಗ್ ಕಮೀಷನರ್, ಜಿಲ್ಲಾಧಿಕಾರಿಯವರು ಕಾರ್ಯದರ್ಶಿಯವರು ಇರಬಹುದು. ಅನಂತರ ಇದನ್ನು ಸಿ.ಬಿ.ಐ.ಗೆ ಕೊಡುವುದು ಸೂಕ್ತ. ಏಕೆನೆಂದರೆ ಮಾನ್ಯ ಮುಖ್ಯಮಂತ್ರಿಯವರು ನನಗೆ ಗೊತ್ತಿರುವುದು 33 ಎಕರೆ ಎಂದು ಹೇಳುತ್ತಾರೆ. ಆದರೆ, ವಸತಿ ಸಚಿವರು 958 ಎಕರೆ ಎಂದು ಹೇಳುತ್ತಾರೆ. ಇದರಲ್ಲಿ ನಿಜವೇನು ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ. ಒಂದಲ್ಲಾ ಎರಡಲ್ಲಾ, ಇದು 400 ಕೋಟಿ ರೂಪಾಯಿಯ ಹಗರಣ. ಆದ್ದರಿಂದ ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಬೇಕು. ಸಂಬಂಧಪಟ್ಟ ಕಡತಗಳನ್ನೆಲ್ಲಾ ಕೂಡಲೇ ವಶಪಡಿಸಿಕೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು, ಅಮಾನತ್ತಿನಲ್ಲೂ ಇಡಬೇಕೆಂದು ವಿನಂತಿಸುತ್ತಾ, ತಾವು ಈ ವಿಚಾರವನ್ನೇನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ನಾನು ತಮಗೆ ಋಣಿಯಾಗಿದ್ದೇನೆ. ಅದರ ಜೊತೆಗೆ ಆಡಳಿತ ಪಕ್ಷದ ಸದಸ್ಯರು, ಮಂತ್ರಿಗಳು ಸದನದಲ್ಲಿ ಇಲ್ಲದಿರುವ ವ್ಯಕ್ತಿಗಳ ಬಗ್ಗೆ ಹೇಳದೆಯೇ, ಯಾವುದಾದರೂ ಆಪಾದನೆ ಮಾಡುವುದಿದ್ದರೆ, ಮುಖ್ಯಮಂತ್ರಿಗಳು ಇರಬಹುದು, ಮಂತ್ರಿಗಳು ಇರಬಹುದು, ಮಾಡುವುದಾದರೆ ನೇರವಾಗಿ ಮಾಡಲಿ. ನಾವೂ ಅದನ್ನು ಎದುರಿಸಲು ತಯಾರಿದ್ದೇವೆ. ಏಕೆಂದರೆ

ಅವರೇ ಲೂಟಿ ಹೊಡೆದಿದ್ದಾರೆ. ಏನಾದರೂ ಲೂಟಿ ಹೊಡೆದಿದ್ದಾರೆ ಅವೆಲ್ಲವನ್ನು ತನಿಖೆ ಮಾಡಲಿ. ನಾವೇನೂ ಬೇಡವೆಂದು ಹೇಳುವುದಿಲ್ಲ. ಕುಮಾರಸ್ವಾಮಿಯವರ, ಧರ್ಮಸಿಂಗ್‌ರವರ ಕಾಲದ್ದನ್ನು ತನಿಖೆ ಮಾಡುತ್ತಾರೋ ಯಾರ ಕಾಲದ್ದನ್ನು ಮಾಡುತ್ತಾರೋ ಮಾಡಲಿ. ಸರ್ಕಾರವೇ ಅವರ ಕೈಯಲ್ಲಿ ಇರುವಾಗ ಏಕೆ ಹೆದರಬೇಕು? ನಾವೇನಾದರೂ ಅವರ ಮನೆಯ ಬಾಗಿಲಿಗೆ ಅರ್ಜಿಯನ್ನು ಇಟ್ಟುಕೊಂಡು ಹೋಗಿದ್ದೇವೋ? ನಾವು ಮುಖ್ಯಮಂತ್ರಿಗಳು, ಮಂತ್ರಿಗಳ ಮನೆಗೆ ಅರ್ಜಿಯನ್ನು ಇಟ್ಟುಕೊಂಡು ಹೋಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇನ್ನು ಯಾರು ನಿಮ್ಮ ಮನೆಯ ಬಾಗಿಲಿಗೆ ಬರುತ್ತಾರೆ? ಈ ವಿಚಾರವನ್ನು ನೀವು ಹತ್ತು ಸಲ ಹೇಳಿದ್ದೀರಿ. ಯಾರಿಗೆ ತೃಪ್ತಿಪಡಿಸಲು ನೀವು ಈ ಮಾತನ್ನು ಹೇಳುತ್ತಿದ್ದೀರಿ? There is a limit for evey thing. ನಾವೇನಾದರೂ ನಿಮ್ಮನ್ನು ಬನ್ನಿಯೆಂದು ಕರೆದಿದ್ದೆವಾ? It is too much. ಹತ್ತು ಸಲ ನಮ್ಮ ಮನೆಗೆ ಬಂದಿದ್ದೆವಾ ಎಂದು ಹೇಳಿದ್ದೀರಿ. ನಾನು ನಿಮ್ಮನ್ನು ಬಾ ಎಂದು ಕರೆದಿದ್ದೇನೆಯೇ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಇದನ್ನು ದಯಮಾಡಿ ಸಿ.ಬಿ.ಐ.ಗೆ ರೆಫರ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಇದು ಜನರಲ್ ಸಬ್ಜೆಕ್ಟ್ ಅಲ್ಲಾ. I will not allow. ಇದರಲ್ಲಿ ಎಲ್ಲರೂ ಮಾತನಾಡುವುದೇನಿದೆ? ಬಾಲಕೃಷ್ಣನವರು, ರೇವಣ್ಣನವರು ಮಾತನಾಡಿದರು. ಬಾಲಕೃಷ್ಣರವರು ಮಾತನಾಡಿದ್ದನ್ನೇ ಇವರೂ ಮಾತನಾಡಿದರು. ಹೊಸ ವಿಚಾರ ಇದರಲ್ಲಿ ಏನೂ ಇಲ್ಲ. ನಾನು allow ಮಾಡುವುದಿಲ್ಲ. ಬಂಡೆಪ್ಪ ಖಾಶೆಂಪೂರ್‌ರವರೊಬ್ಬರು ಮಾತನಾಡಿ. ಮತ್ತೆ ಬೇರೆ ಯಾರಿಗೂ allow ಮಾಡುವುದಿಲ್ಲ. ಇದು ಜನರಲ್ ವಿಚಾರವಾಗಿದ್ದರೆ ಮಾತನಾಡಬಹುದು. ಉಳಿದವರು ಉತ್ತರವನ್ನು ಕೊಟ್ಟ ಮೇಲೆ ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾನು ಇದರ ಮೇಲೆ ಜಾಸ್ತಿ ಮಾತನಾಡುತ್ತಿಲ್ಲ. ನಮ್ಮ ಪಕ್ಷದ ಶಾಸಕಾಂಗ ಸಭೆಯ ಅಧ್ಯಕ್ಷರು ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ, ಅವರ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರಬಯಸುತ್ತೇನೆ. ಹಿಂದಿನ ಎಲ್ಲಾ ಸಭೆಗಳಲ್ಲಿ ಏನಾಗಿದೆ ಎಂಬುದು ಬೇಡ. ಆದರೆ, ಕೊನೆಯ ಸಭೆಯನ್ನು 23.01.2009 ರಲ್ಲೇನು ಡಿ.ಸಿ.ಯವರು ಕರೆದಿದ್ದರು, ಅದರಲ್ಲಿ ನೋಂದಣಿ ಅಧಿಕಾರಿಗಳು 2 ಲಕ್ಷದಿಂದ 3.50 ಲಕ್ಷ ಇಲ್ಲಿ ಬೆಲೆ ಬಾಳುತ್ತದೆ ಎಂಬ pointನ್ನು ಹೇಳಿದ್ದಾರೆ. ಕೆ.ಇ.ಬಿ.ಗೆ ಮತ್ತು ಇತರೆ ಇಲಾಖೆಗಳಿಗೆ ಜಮೀನು ಬೇಕಾಗಿದ್ದರೆ ನಾವು ಡಿ.ಸಿ.ಯವರಿಗೆ ಮನವಿ ಮಾಡಿದಾಗ

ಅವರು ಅಲ್ಲಿನ ನೋಂದಣಿ ಅಧಿಕಾರಿಗಳು ಎಷ್ಟು ಹೇಳುತ್ತಾರೋ ಅದಕ್ಕಿಂತ 20 ಪರ್ಸೆಂಟ್ ಜಾಸ್ತಿ ಮಾಡಿ ಮಾತ್ರ ತೆಗೆದುಕೊಳ್ಳಲು ನಮಗೆ ಅಧಿಕಾರವಿದೆ. ಅದಕ್ಕಿಂತ ಜಾಸ್ತಿ ಮಾಡಲು ಆಗಿಲ್ಲವೆಂದು ಎಷ್ಟೋ reject ಆಗಿರುವ ಉದಾಹರಣೆ ನಮ್ಮ ಮುಂದಿದೆ. ಆದರೆ, ಇಲ್ಲಿ 3.50 ಲಕ್ಷವೆಂದು ಏನು ಹೇಳಿದ್ದಾರೆ, ಅದಕ್ಕಿಂತಲೂ ಎಷ್ಟು ಪಟ್ಟು ಜಾಸ್ತಿಯಾಗಿದೆ ಎಂಬ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಇಲ್ಲಿ demand survey ಏನೂ ಆಗಿಲ್ಲ. ಈ ಹಿನ್ನೆಲೆಯಲ್ಲಿ ಬಹಳ ದೊಡ್ಡ ಕೈವಾಡವಿದೆ. ಆದ್ದರಿಂದ ಇದನ್ನು ದಯವಿಟ್ಟು ಸಿ.ಬಿ.ಐ.ಗೆ ರೆಫರ್ ಮಾಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ನಿಮ್ಮ ನಾಯಕರು ಮಾತನಾಡಿದ್ದಾರೆ. ಆದ್ದರಿಂದ ನಾನು ಬೇರೆಯವರಿಗೆ allow ಮಾಡುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ತುಂಬಾ ಜನ ಸದಸ್ಯರು ಇದಕ್ಕೆ ಸಹಿ ಮಾಡಿದ್ದಾರೆ. ನಾವು ಜಾಸ್ತಿ ಜನರು ಮಾತನಾಡುವುದಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಮ್ಮಲ್ಲಿ ಇಬ್ಬರಿಗೆ ಮಾತ್ರ ಮಾತನಾಡಲು ಐದ್ಯೆದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ಬಾಲಕೃಷ್ಣರವರೆ, ರೇವಣ್ಣನವರೆ, ನೋಡಿ ಇದು ಜನರಲ್ ಸಬ್ಜೆಕ್ಟ್ ಅಲ್ಲ. ಅವರು ಮೊದಲು ಉತ್ತರ ಕೊಡಲಿ ನಂತರ ಬೇಕಾದರೆ ಅವರು ಸ್ಪಷ್ಟೀಕರಣ ಕೇಳಲಿ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ತೀರ್ಮಾನ ಮಾಡಿ ಹೇಳುತ್ತೇನೆಂದು ಹೇಳಿದ್ದಾರೆ. ದಯಮಾಡಿ ನಮಗೆ ಅವಕಾಶ ಮಾಡಿ ಕೊಡಬೇಕು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ವಿರೋಧ ಪಕ್ಷದ ನಾಯಕರು ಮೊದಲು ಮಾತನಾಡಲಿ. ನಂತರ ನಮಗೆ ಐದ್ಯೆದು ನಿಮಿಷ ಕೊಡಿ.

ಅಧ್ಯಕ್ಷರು: ನೋಡಿ ಶಿವಲಿಂಗೇಗೌಡರವರೆ, ನಾನು ನಿಮಗೆ ಮನವಿ ಮಾಡುತ್ತೇನೆ. ಇದು ಜನರಲ್ ಸಬ್ಜೆಕ್ಟ್ ಅಲ್ಲ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಈಗ ನಾನು ಮಾತನಾಡಲೆ ಅಥವಾ ಅವರಿಗೆ ಐದು ನಿಮಿಷ ನನಗಿಂತ ಮೊದಲೆ ಅವಕಾಶ ಕೊಟ್ಟುಬಿಡಿ. ಪಾಪ! ಅವರು ಮಾತನಾಡಲಿ.

ಅಧ್ಯಕ್ಷರು: ಐದು ನಿಮಿಷಕ್ಕೆ ಅವರು ತಮ್ಮ ಮಾತು ಮುಗಿಸುವುದಿಲ್ಲವೆನ್ನುವುದು ನನಗೆ ಗೊತ್ತಿದೆ. ಶಿವಲಿಂಗೇಗೌಡರವರು ಐದು ನಿಮಿಷಕ್ಕೆ ಎಲ್ಲಿ ಮುಗಿಸುತ್ತಾರೆ? ಈಗ ನೀವು ಏನು ಹೇಳಿದಿರಿ ಅವರು ಅದೇ ಭಾಷಣ ಹೊಡೆಯುವವರು. ಬೇರೆ ವಿಷಯ ಏನು ಇದೆ, ... ನೋಡಿ, ರೇವಣ್ಣನವರು ಬೇರೆ

ಹೊಸ ವಿಷಯ ಮಾತನಾಡಿದರೆ? ಬಾಲಕೃಷ್ಣರವರೆ ನೀವು ಏನು ಹೊಸ ವಿಷಯ ಮಾತನಾಡಿದಿರಿ? ಕಾಶಂಪೂರ್‌ರವರು ಏನು ಹೊಸ ವಿಷಯ ಮಾತನಾಡಿದರು? ನೋಡಿ, ಇದು ಜನರಲ್ ಸಬ್ಜೆಕ್ಟ್ ಇದ್ದರೆ ನಾನು ಅಲೊ ಮಾಡುತ್ತಿದ್ದೆ. ನನಗೆ ಅರ್ಥವಾಗುತ್ತದೆ. ಯಾವುದೋ ಅಗ್ರಿಕಲ್ಚರ್ ಮತ್ತಿತರ ವಿಷಯ ಇದ್ದರೆ ನಾನೇ ಹೇಳುತ್ತಿದ್ದೆ. ಇದೊಂದು ಸ್ಪೆಷಿಫಿಕ್‌ವಾದಂಥ ಫ್ಯಾಕ್ಟ್ಸ್ ಇವೆ, ಡಿಟೇಲ್ಸ್ ಇವೆ, ಅದನ್ನೆಲ್ಲಾ ನೀವು ಹೇಳಿದಿರಿ. ಈಗ ಸರ್ಕಾರದವರು ಉತ್ತರ ಕೊಟ್ಟ ಮೇಲೆ ಮತ್ತೇನಾದರೂ ಸ್ಪಷ್ಟೀಕರಣ ಇದ್ದರೆ ನಾನು ಅವರಿಗೆ ಅಲೊ ಮಾಡುತ್ತೇನೆ. ಆಗ ಅವರು ಹೊಸ ವಿಷಯ ಇದ್ದರೆ ಹೇಳಲಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಹೆಚ್.ಡಿ.ರೇವಣ್ಣನವರು ಹಾಗೂ ಇತರು ಸ್ನೇಹಿತರು ಹೌಸಿಂಗ್ ಬೋರ್ಡಿನಲ್ಲಿ ಜಮೀನು ಖರೀದಿಸುವಾಗ ಬಹಳ ದೊಡ್ಡ ಅವ್ಯವಹಾರ ನಡೆದಿದೆ, ಕೋಟಿಗಟ್ಟಲೆ ಹಣ ಮಧ್ಯವರ್ತಿಗಳ ಕೈ ಸೇರುತ್ತಾ ಇದೆ, ಅದರ ಪರಿಣಾಮವಾಗಿ ಹೌಸಿಂಗ್ ಬೋರ್ಡ್‌ಗೆ ಬಹಳ ದೊಡ್ಡ ನಷ್ಟವಾಗುತ್ತಿದೆ, ಈಗಾಗಲೇ ಹೌಸಿಂಗ್ ಬೋರ್ಡಿನಲ್ಲಿ ಸಂಬಳ ಕೊಡುವುದಕ್ಕೆ ಕೂಡ ದುಡ್ಡು ಇಲ್ಲದೇ ಇರುವಂಥ ಪರಿಸ್ಥಿತಿ ಬಂದಿದೆ. ಇಷ್ಟೊಂದು ದೊಡ್ಡ ಪ್ರಮಾಣದ ನಷ್ಟ ಮಾಡಿಕೊಂಡರೆ ಹೌಸಿಂಗ್ ಬೋರ್ಡ್‌ನ್ನು ಮುಚ್ಚಬೇಕಾಗುತ್ತದೆಂದು ಅಲ್ಲಿ ಇರುವ ನೌಕರರು ಆತಂಕ ವ್ಯಕ್ತಪಡಿಸಿದ್ದಾರೆ. ಅವರು ಅದಕ್ಕೆ ಸಂಬಂಧಪಟ್ಟಂತೆ ಆಯುಕ್ತರವರಿಗೆ ಒಂದು ಪತ್ರ ಕೂಡ ಬರೆದಿರುತ್ತಾರೆ. ಬೆಂಗಳೂರು ಅಕ್ಕ ಪಕ್ಕದಲ್ಲಿ ಸುಮಾರು 25 ಕಿ.ಮೀ.ದೂರದಲ್ಲಿ 25 ರಿಂದ 35 ಲಕ್ಷ ರೂಪಾಯಿಗೆ ಜಮೀನು ಸಿಗುತ್ತವೆ, ಆದರೆ, ಹೌಸಿಂಗ್ ಬೋರ್ಡ್‌ನವರು ಇಲ್ಲಿ ಬೆಂಗಳೂರಿನಿಂದ ಸುಮಾರು 60 ಕಿ.ಮೀ. ದೂರದಲ್ಲಿರುವ ಚಿಕ್ಕಬಳ್ಳಾಪುರ, ಅಲ್ಲಿಂದ ಶಿಡ್ಲಘಟ್ಟ ತಾಲ್ಲೂಕು, ಅಲ್ಲಿಂದ ಜಂಗಮಕೋಟೆ, ಅಲ್ಲಿ ಇವರು ಹೌಸಿಂಗ್ ಬೋರ್ಡ್ ಕಾಲೋನಿ ಮಾಡುವುದಕ್ಕೆ ಜಮೀನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈ ಜಮೀನು ಇಷ್ಟು ಪ್ರಮಾಣದಲ್ಲಿ ಬೇಕೋ ಬೇಡವೋ ಎಂದು ಹೌಸಿಂಗ್ ಬೋರ್ಡ್‌ನಿಂದ ಯಾವುದೇ ಸರ್ವೇ ಮಾಡುವುದಾಗಲಿ, ಅಲ್ಲಿ ಅಗತ್ಯವಿದೆ ಎನ್ನುವುದಾಗಲಿ, ಅಲ್ಲಿ ಜಮೀನಿನ ಬೆಲೆ ಎಷ್ಟು ಇದೆ ಎನ್ನುವುದಾಗಲಿ, ಇಷ್ಟೊಂದು ಜಮೀನು ನಮಗೆ ಬೇಕೋ ಬೇಡವೋ ಎಂದಾಗಲಿ, ಅಲ್ಲಿ ಕಾಲೋನಿ ಮಾಡಿದರೆ ಅಲ್ಲಿಗೆ ಜನಗಳು ವಾಸ ಮಾಡುವುದಕ್ಕೆ ಬರುತ್ತಾರೋ ಇಲ್ಲವೋ ಎಂದಾಗಲಿ, ಇವು ಯಾವುದರ ಬಗ್ಗೆಯೂ ಚರ್ಚೆ ಮಾಡಿಲ್ಲ. ಯಾರಿಗಾದರೂ ಕೂಡ ಅನ್ನಿಸುತ್ತದೆ. Any layman can make out ಹೌಸಿಂಗ್ ಬೋರ್ಡ್‌ನವರು ಶಿಡ್ಲಘಟ್ಟದಿಂದ 20 ಕಿ.ಮಿ. ದೂರದಲ್ಲಿರುವ ಜಂಗಮ ಕೋಟೆ ಹೋಬಳಿಯಲ್ಲಿ 959 ಎಕರೆ, ಇದೇನು 20–30 ಎಕರೆ ಅಲ್ಲ. ಇದು ಯಾವ ಪರ್ಪಸ್‌ಗೆ ಬೇಕಾಗುತ್ತದೆ ಎಂದು ಇಲ್ಲಿ ಆ

ಪರ್ಪಸ್ ಕೂಡ ಮೆನ್‌ಷನ್ ಮಾಡಿಲ್ಲ. 959 ಎಕರೆ ಯಾವ ಉದ್ದೇಶಕ್ಕಾಗಿ ಬೇಕಾಗುತ್ತದೆ? ಆ ಮಹಾನ್ ಉದ್ದೇಶ ಏನು? ಯಾವ ಕಾರಣಕ್ಕಾಗಿ ಅಷ್ಟೊಂದು ಎಕರೆ ಜಮೀನು ತೆಗೆದುಕೊಳ್ಳಬೇಕು? ಅಷ್ಟೊಂದು ಜನರನ್ನು ಒಮ್ಮೆಗೆ ಏಕೆ ನಿರ್ಗತಿಕರನ್ನು ಮಾಡಬೇಕು? ಶಿಡ್ಲಘಟ್ಟಕ್ಕೆ ಹೋಗಿ 959 ಎಕರೆ ಜಮೀನು ತೆಗೆದುಕೊಂಡು ಅಲ್ಲಿರತಕ್ಕಂಥ ಜನರನ್ನು ನಿರ್ಗತಿಕರನ್ನಾಗಿ ಏಕೆ ಮಾಡಬೇಕು? ಅಲ್ಲಿ ವಸತಿ ಅಗತ್ಯವಿದೆಯೆ? ಅಲ್ಲಿ ಬೇಡಿಕೆ ಇದೆಯೆ? ಇಲ್ಲವೆ? ಅಲ್ಲಿ ಯಾರಾದರೂ ತೆಗೆದುಕೊಳ್ಳುವುದಕ್ಕೆ ಬರುತ್ತಾರೆಯೇ? ಅದಕ್ಕಾಗಿ ಕೋಲಾರದ ಹತ್ತಿರ ಡಿ.ಸಿ.ಯವರು ಜಮೀನು ತೆಗೆದುಕೊಳ್ಳುವುದಕ್ಕೆ ಒಂದು ಸಭೆ ಮಾಡಿದ್ದಾರೆ. ಅಲ್ಲಿ ನ್ಯಾಷನಲ್ ಹೈವೇಗೆ ಸಂಬಂಧಪಟ್ಟಹಾಗೆ ಒಂದು ಎಕರೆಗೆ ಸುಮಾರು 35 ಲಕ್ಷ ಆಗಬಹುದು ಎಂದು ಅಂದಾಜು ಮಾಡಿದ್ದಾರೆ. ಇಲ್ಲಿ ಚಿಕ್ಕಬಳ್ಳಾಪುರದ ಡಿ.ಸಿ. 18-10-2008 ರಂದು ಅಂದು ಇದ್ದಂಥ ಡಿ.ಸಿ.ಯವರು ಮೀಟಿಂಗ್ ಮಾಡಿದ್ದಾರೆ. ಸರ್ವೇ ನಂಬರ್ ಜಂಗಮಕೋಟೆ ಹೋಬಳಿ ಸೇರಿದಂಥ ವೆಂಕಟಾಪುರ, ಸುಗಟೂರು, ಹೊಸಪೇಟೆ ಮತ್ತು ಬಳುವಣಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂಬರ್‌ಗಳು 2 ರಿಂದ 390. ಈ ಸರ್ವೇ ನಂಬರ್‌ಗಳಲ್ಲಿ ಬರುವ 959 ಎಕರೆ ತೆಗೆದುಕೊಳ್ಳಬೇಕೆಂದು ಡಿ.ಸಿ.ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಆ ದಿವಸ ಇದ್ದಂಥ ಡಿ.ಸಿ.ಯವರು ಎಲ್ಲರನ್ನೂ ಸಭೆಗೆ ಕರೆಯುತ್ತಾರೆ. ಆ ದಿವಸದ ಸಭೆಯಲ್ಲಿ ಯಾರ್‍ಯಾರು ಇದ್ದರು ಎಂದರೆ, ಜಿಲ್ಲಾಧಿಕಾರಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಸಬ್ ರಿಜಿಸ್ಟ್ರಾರ್ ಮತ್ತು ಅವರ ಜೊತೆಗೆ ಕೆಲವು ಜಮೀನು ಮಾಲೀಕರು ಮತ್ತೆ ಅವರನ್ನು ಪ್ರತಿನಿಧಿಸತಕ್ಕಂಥ ಜನರು. ಅವರು ಏಕೆ ಹೋಗಿದ್ದರೋ ಗೊತ್ತಿಲ್ಲ. ಅಲ್ಲಿ ಏನಾಗಿದೆಯೆಂದರೆ people who are representing the owners of the land, and who are not the owners of the land ಅಲ್ಲಿಗೆ ಅವರನ್ನು ಕರೆದಿದ್ದಾರೆ. ಅವರು ಯಾರ್‍ಯಾರು ರೈತರ ಹತ್ತಿರ ಪವರ್ ಆಫ್ ಅಟಾರ್ನಿ ಮಾಡಿಕೊಂಡಿದ್ದರು, as power of Attorney Holder ಅವರನ್ನು ಅಲ್ಲಿಗೆ ಕರೆದಿದ್ದಾರೆ. Actually they are not the owners of the land, they have purchased the land from farmers and they went there as representatives of the land owners. ಅಲ್ಲಿಗೆ ಹೋಗಿದ್ದಾರೆ. ಅಲ್ಲಿ ಹಿಂದೆ ಇದ್ದಂಥ ಡಿ.ಸಿ. 18-10-08 ರ ಸಭೆಯಲ್ಲಿ ಏನು ಮಾಡುತ್ತಾರೆ, ಅಲ್ಲಿ ಇದ್ದಂಥ ರೈತರು ಕರೆದು ಕೇಳುತ್ತಾರೆ. ಅಲ್ಲಿದ್ದಂಥ ಸಬ್ ರಿಜಿಸ್ಟ್ರಾರ್ ಗೆ ಇಲ್ಲಿ ಗೈಡೆನ್ಸ್ ವ್ಯಾಲ್ಯೂ ಎಷ್ಟು ಇದೆ ಎಂದು ಕೇಳುತ್ತಾರೆ. ಅಂದರೆ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟರ್ ಆದರೆ ಸ್ಟ್ಯಾಂಪ್ ಡ್ಯೂಟಿ ಸರ್ಕಾರಕ್ಕೆ ಬರುತ್ತದೆ. ಆ ವ್ಯಾಪ್ತಿಯಲ್ಲಿ ಆಗ ಎರಡರಿಂದ ಮುರೂವರೆ ಲಕ್ಷ ರೂಪಾಯಿ ಗೈಡೆನ್ಸ್ ವ್ಯಾಲ್ಯೂ ಇತ್ತು. ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟ್ರಾರ್ ಆಗುತ್ತದೆ, ಏಕೆಂದರೆ ರೈತರು ಒಬ್ಬರಿಂದ ಒಬ್ಬರಿಗೆ ಜಮೀನು ಮಾರಾಟ ಮಾಡುವುದು, ಖರೀದಿಸುವುದು, ಮಾರ್ಟ್‌ಗೇಜ್ ಮಾಡುವುದು, ಇವೆಲ್ಲಕ್ಕೂ ಕೂಡ ಗೈಡೆನ್ಸ್ ವ್ಯಾಲ್ಯೂ ಎಷ್ಟು ಫಿಕ್ಸ್

ಮಾಡಿದ್ದಾರೆಂದರೆ, ಆ ಗೈಡೆನ್ಸ್ ವ್ಯಾಲ್ಯೂ ಅನ್ನು ಸರ್ಕಾರವೇ ಫಿಕ್ಸ್ ಮಾಡುವುದು. ಆಗಿಂದಾಗ್ಗೆ ಸರ್ಕಾರವೇ ಗೈಡೆನ್ಸ್ ವ್ಯಾಲ್ಯೂವನ್ನು ಫಿಕ್ಸ್ ಮಾಡುತ್ತಿರುತ್ತದೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಅದನ್ನು ಫಿಕ್ಸ್ ಮಾಡುತ್ತಾರೆ. ಅನೇಕ ಸಾರಿ ಕ್ಯಾಬಿನೆಟ್‌ನಲ್ಲಿ ಆ ಬಗ್ಗೆ ಡಿಸಿಷನ್‌ಗಳಾಗುತ್ತವೆ. ಕ್ಯಾಬಿನೆಟ್ ಡಿಸಿಷನ್‌ಗಳಾದ ಮೇಲೆ ನಂತರ ಏನು ಫಿಕ್ಸ್ ಆಗಿರುತ್ತದೆ, ಆ ಪ್ರಕಾರ ಸಬ್ ರಿಜಿಸ್ಟ್ರಾರ್‌ರವರು ಕ್ರಮ ತೆಗೆದುಕೊಂಡಾದ ನಂತರ ಸ್ಟ್ಯಾಂಪ್ ಡ್ಯೂಟಿ ಸರ್ಕಾರಕ್ಕೆ ಬರುತ್ತದೆ. ಅಲ್ಲಿ ಎಷ್ಟೇ ಬೆಲೆಯಿದ್ದರೂ ಅವರು ಎಷ್ಟೇ ಮಾಡಿದರೂ ಕೂಡ ಮೂರೂವರೆ ಲಕ್ಷ ರೂಪಾಯಿಗೆ ಸ್ಟ್ಯಾಂಪ್ ಡ್ಯೂಟಿ ಬರುವುದು. ಅದಕ್ಕಿಂತ ಒಂದು ರೂಪಾಯಿ ಹೆಚ್ಚಿಗೆ ಬರುವುದಿಲ್ಲ. ಏಕೆಂದರೆ ಅವರು ಅಷ್ಟಕ್ಕೆ ಮಾತ್ರ ಮಾಡುತ್ತಾರೆ. ಇನ್ನು ಕೆಲವರು 50 ಲಕ್ಷ ರೂಪಾಯಿ ಇದೆಯೆಲ್ಲಾ, ಅದು ಯಾರದೋ ಒಂದು ಸೇಲ್ ಡೀಡ್ ನೋಡಿದೆ. ಒಂದು ಎಕರೆ ಹನ್ನೆರಡು ಗುಂಟೆಗೆ ಆರು ಲಕ್ಷ ಅರವತ್ತೆರಡು ಸಾವಿರ ರೂಪಾಯಿ ಕೊಟ್ಟು ಮಾಡಿಸಿದ್ದಾರೆ. ಅಂದರೆ ಒಂದು ಎಕರೆಗೆ ಸುಮಾರು ಐದು ಲಕ್ಷ ರೂಪಾಯಿ. ಅದು ಗೈಡೆನ್ಸ್ ವ್ಯಾಲ್ಯೂಗಿಂತ ಹೆಚ್ಚಾಗಿ ಮಾಡಿರತಕ್ಕಂಥದ್ದು. ರೈತರಿಗೆ ಹೆಚ್ಚಿಗೆ ಕೊಟ್ಟಿರತಕ್ಕಂಥದ್ದು. ನಮ್ಮ ಹಾಗೂ ಮಾನ್ಯ ಸದಸ್ಯರೆಲ್ಲರ ಸಮಸ್ಯೆ ಏನೆಂದರೆ, ಹೌಸಿಂಗ್ ಬೋರ್ಡ್‌ನವರು ನೇರವಾಗಿ ರೈತರಿಗೆ ಐವತ್ತು ಲಕ್ಷ ಕೊಟ್ಟುಬಿಟ್ಟರೆ, we will be very happy ನಾವು ಅದನ್ನು ತಕರಾರು ಮಾಡುವುದಕ್ಕೆ ಹೋಗುವುದಿಲ್ಲ. ಪಾಪ, ಆ ರೈತ ತನ್ನ ಜಮೀನು ಕಳೆದುಕೊಳ್ಳುತ್ತಾನೆ. ಐವತ್ತು ಲಕ್ಷ ರೂಪಾಯಿ ಸಿಗುತ್ತದೆ, ಬದುಕಲಿಕ್ಕೆ ಇನ್ನೇನಾದರೂ ದಾರಿ ಹುಡುಕಿಕೊಳ್ಳುತ್ತಾನೆ. ಅವನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ. ಒಂದು ಎಕರೆಗೆ ಐವತ್ತು ಲಕ್ಷ ಸಿಕ್ಕಿ ಬಿಟ್ಟರೆ ರೈತ ವ್ಯವಸಾಯ ಬಿಟ್ಟು ಬಿಟ್ಟು ಆರಾಮವಾಗಿ ಚೆನ್ನಾಗಿರಬಹುದು. ಅಲ್ಲಿ ಏಕೆ ಮೈಗೆ ಧೂಳು ಎಲ್ಲಾ ಹಾಕಿಕೊಂಡು, ಕಷ್ಟ ಪಡಬೇಕು? ನೀವು ಎಲ್ಲಾ ಜಮೀನುದಾರರು. ರೈತರಿಗೆ ಎಷ್ಟು ಕಷ್ಟ ಇದೆ ಎಂಬುದು ತಮಗೆ ಗೊತ್ತಿದೆ. ಏಕೆ ಕಷ್ಟಪಡಬೇಕು, ಐವತ್ತು ಲಕ್ಷಕ್ಕೆ ಮಾರಾಟ ಮಾಡಿ ಆರಾಮವಾಗಿರಬಹುದು.

ಮೈಸೂರಿನಿಂದ 20 ಕಿ.ಮೀ. ದೂರದಲ್ಲಿನ ನನ್ನ ಊರಿನಲ್ಲಿ ಜಮೀನು ಇದೆ. ತಾವು 50 ಲಕ್ಷ ರೂಪಾಯಿ ಕೊಟ್ಟರೆ ನಾನೂ ಕೂಡ ಮಾರಾಟ ಮಾಡುತ್ತೇನೆ. ಮೈಗೆಲ್ಲಾ ಮಣ್ಣು ಹಾಕಿಕೊಂಡು ಸ್ನಾನ ಇಲ್ಲದೆ ಕೊಳಕು ಬಟ್ಟೆಗಳೆಲ್ಲಾ ಹಾಕಿಕೊಂಡು ಏತಕ್ಕೋಸ್ಕರ ಕಷ್ಟಪಡಬೇಕು? ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ತಾವು ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದ್ದೀರಿ. ಮತ್ತೆ ಹಿಂದೆ ರೈತರ ಪರವಾಗಿ ಹೋರಾಟ ಮಾಡಿದ್ದೀರಿ. ಆದ್ದರಿಂದ, ತಾವು ದಯಮಾಡಿ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ತಾವು ಇದನ್ನು ಲಘುವಾಗಿ ಪರಿಗಣಿಸಬಾರದು. ಅವರು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವೇನೂ ಉತ್ತರ ಕೊಡೋಣವೆಂಬುದು ಬೇರೆ. ಸರ್ಕಾರ ಉತ್ತರ ಕೊಡಬೇಕಾಗುತ್ತದೆ, ಕೊಡಿ. ಆದರೆ, ನಾನು ಏನು ಹೇಳುತ್ತೇನೆಂದರೆ, ರೈತರಿಗೆ 50 ಲಕ್ಷ ರೂಪಾಯಿ

ಸೇರಿದೆಯೇ? 50 ಲಕ್ಷ ರೂಪಾಯಿ ಕೊಡುವುದಾದರೆ ಕೊಡಿ. ಮತ್ತೆ ಹೌಸಿಂಗ್ ಬೋರ್ಡ್‌ನವರಿಗೆ ಅಲ್ಲಿ 959 ಎಕರೆ ಭೂಮಿ ಬೇಕಾಗಿತ್ತೆ? ಅವಶ್ಯಕತೆ ಇದ್ದರೆ ತೆಗೆದುಕೊಳ್ಳಿ. ಆದರೆ, ಈ ಜಮೀನನ್ನು ನೇರವಾಗಿ ರೈತರಿಂದ ತೆಗೆದುಕೊಂಡಿದ್ದೀರಾ? ರೈತರಿಂದ ನೇರವಾಗಿ ತೆಗೆದುಕೊಂಡಿಲ್ಲ. ಹೌಸಿಂಗ್ ಬೋರ್ಡ್‌ನಲ್ಲಿ ಆಗಿರತಕ್ಕಂಥದ್ದು ಬಹಳ ಕ್ಲಿಯರ್ ಆಗಿ ಕಾಣುತ್ತದೆ. ತಾವು ಇದನ್ನು observe ಮಾಡಬೇಕು. ಒಂದು ಎಕರೆಗೆ 43 ಲಕ್ಷ ರೂಪಾಯಿಯಂತೆ ಎರಡನೇ ಡಿ.ಸಿ.ಯವರು ತೀರ್ಮಾನ ಮಾಡುತ್ತಾರೆ. ಮೊದಲು ಇದ್ದಂಥ ಡಿ.ಸಿ. ವರ್ಗಾವಣೆಯಾಗುತ್ತಾರೆ. I am not going to attribute any motive. ನೀವು ಎಲ್ಲಿಗೆ ಮತ್ತು ಏಕೆ ವರ್ಗಾವಣೆ ಮಾಡಿದ್ದೀರೆಂಬುದರ ಬಗ್ಗೆ ನಾನು ಕೇಳುವುದಿಲ್ಲ. ನೀವು administrative point of view ನಿಂದ ಮಾಡಿರಬಹುದು for the argument sake ತಾವು ಮಾಡಿದ್ದಿರಿ. But the point is ಆಗ ಇದ್ದ ಡಿ.ಸಿ. ಅವರ ಹೆಸರು ರೆಕಾರ್ಡ್‌ನಲ್ಲಿರುವುದರಿಂದ ಇಲ್ಲಿ ನಾನು ಹೇಳಲೇಬೇಕಾಗುತ್ತದೆ. D.C. Mr. Anwarpasha, has presided over the meeting. ಆ ಮೀಟಿಂಗ್‌ನಲ್ಲಿ ಉಪ ವಿಭಾಗಾಧಿಕಾರಿಗಳು ಮತ್ತು ಕಾರ್ಯಕಲಾಕ ಅಭಿಯಂತರರು ಹಾಗೂ ಜಿಲ್ಲಾ ನೋಂದಾವಣಿ ಅಧಿಕಾರಿ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಹಾಗೂ ಭೂ ಮಾಲೀಕರು ಮತ್ತು ಭೂ ಮಾಲೀಕರ ಪ್ರತಿನಿಧಿಗಳು ಇರುತ್ತಾರೆ. ಅಲ್ಲಿ ಏನು ತೀರ್ಮಾನ ಮಾಡುತ್ತಾರೆಂದರೆ, ಹಿಂದೆ 55 ಲಕ್ಷ ರೂಪಾಯಿ ಕೇಳಿರುತ್ತಾರೆ. ಆದರೆ, ಅದನ್ನು ಒಪ್ಪದೆ ಹಿಂದೆ ಇದ್ದಂಥ ಡಿ.ಸಿ. ಸಭೆಯನ್ನು ಮುಂದಕ್ಕೆ ಹಾಕಿರುತ್ತಾರೆ. ಆನಂತರ ಬಂದ ಡಿಸಿ ಏನು ಮಾಡುತ್ತಾರೆಂದರೆ ಇದರ ಬಗ್ಗೆ ಚರ್ಚೆ ಮಾಡಿ 43 ಲಕ್ಷ ರೂಪಾಯಿಗೆಂದು ಶಿಫಾರಸ್ಸು ಮಾಡುತ್ತಾರೆ. ಇದು very very relevant point. ಒಂದು ಎಕರೆಗೆ 43 ಲಕ್ಷ ರೂಪಾಯಿಯಂತೆ ತೆಗೆದುಕೊಳ್ಳಿ ಎಂದು ಡಿ.ಸಿ. ಶಿಫಾರಸ್ಸು ಮಾಡುತ್ತಾರೆ. 43 ಲಕ್ಷ ರೂಪಾಯಿಗೆ ತೆಗೆದುಕೊಂಡ ಮೇಲೆ ಹೌಸಿಂಗ್ ಬೋರ್ಡ್‌ನಲ್ಲಿ ಒಂದು ಸಭೆ ಆಗುತ್ತದೆ. ಹೌಸಿಂಗ್ ಬೋರ್ಡ್ ಮೀಟಿಂಗ್‌ನಲ್ಲಿ 43 ಲಕ್ಷ ರೂಪಾಯಿ ಇದ್ದಂಥದ್ದನ್ನು suo motto ಅವರೇ 7 ಲಕ್ಷ ರೂಪಾಯಿ ಹೆಚ್ಚು ಮಾಡುತ್ತಾರೆ. This is the fun of it. ಅಲ್ಲಿದ್ದವರು ದಾನ ಶೂರ ಕರ್ಣರು ಇರಬೇಕು. ಡಿ.ಸಿ.ಯವರೆ, ನೀವೇನು 43 ಲಕ್ಷ ರೂಪಾಯಿಗೆ ಮಾಡಿದ್ದೀರಿ ನಾವು ಇನ್ನು ಅದಕ್ಕೆ 7 ಲಕ್ಷ ರೂಪಾಯಿ ಹೆಚ್ಚಿಗೆ ಕೊಡುತ್ತೇವೆಂದು ಅದನ್ನು 50 ಲಕ್ಷ ರೂಪಾಯಿ ಮಾಡುತ್ತಾರೆ. "ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ" ತರಹ ಪುಕ್ಕಟೆಯಾಗಿ ದುಡ್ಡು ಬಂದರೆ ಯಾರಿಗೆ ಬೇಡ ಎನ್ನುವ ರೀತಿಯಲ್ಲಿ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳೆ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಇತ್ತ ಕಡೆ ಗಮನ ಹರಿಸಬೇಕು. ಡಿ.ಸಿ.ಯವರು ನಡೆಸಿದ ಸಭೆಯಲ್ಲಿ 43 ಲಕ್ಷ ರೂಪಾಯಿಗೆ ಶಿಫಾರಸ್ಸು ಮಾಡಿರತಕ್ಕಂಥದ್ದನ್ನು ಹೌಸಿಂಗ್ ಬೋರ್ಡ್ ಮೀಟಿಂಗ್‌ನಲ್ಲಿ it has been enhanced from 43 to 50

lakhs. ಆ ಡಿ.ಸಿ.ಯವರು 43 ಲಕ್ಷ ರೂಪಾಯಿ ನಿಗದಿ ಮಾಡಿರತಕ್ಕಂಥದ್ದೇ ತಪ್ಪು. ಅವರು ಯಾರೋ ಒತ್ತಡಕ್ಕೆ ಮಾಡಿದ್ದಾರೆ. ಹೌಸಿಂಗ್ ಬೋರ್ಡ್‌ನವರು ಒಂದು ಎಕರೆಗೆ ಮತ್ತೆ 7 ಲಕ್ಷ ರೂಪಾಯಿ ಹೆಚ್ಚು ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟಂಥ ಡಾಕ್ಯುಮೆಂಟ್‌ನ್ನು ದಾಖಲೆ ನಂಬರ್ 5 ಎಂದು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 21-3-2009 ರಂದು ಜರುಗಿದ ಜಿಲ್ಲಾಧಿಕಾರಿಗಳ ಭೂ ಖರೀದಿ ಸಮಿತಿ ಸಭೆಯಲ್ಲಿ ಒಂದು ಎಕರೆ ಜಮೀನಿಗೆ 51 ಲಕ್ಷ ರೂಪಾಯಿಗಳನ್ನು ನಿಗದಿ ಪಡಿಸಬೇಕೆಂದು ಭೂ ಮಾಲೀಕರು ಕೋರಿದ್ದರು, ಚರ್ಚೆಯ ನಂತರ 43 ಲಕ್ಷ ರೂಪಾಯಿ ಬೆಲೆಯನ್ನು ನಿಗದಿ ಮಾಡಲು ತೀರ್ಮಾನಿಸಿರುತ್ತಾರೆ. ಒಂದು ಎಕರೆಗೆ 50 ಲಕ್ಷ ರೂಪಾಯಿಗಳಂತೆ ಖರೀದಿಸಲು ನಿರ್ಣಯಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಈ ರೀತಿಯಾಗಿ ಕಮೀಷನರ್‌ರವರು ಸರ್ಕಾರಕ್ಕೆ ಬರೆದಿರುವ ಪತ್ರ. 43 ಲಕ್ಷ ರೂಪಾಯಿಯಿಂದ 50 ಲಕ್ಷ ರೂಪಾಯಿಗೆ ಮಾಡಿರುತ್ತಾರೆ. ಒಟ್ಟು 959 ಎಕರೆ ಜಮೀನುಗಳನ್ನು ವಸತಿ ಯೋಜನೆಗೆ ಖರೀದಿಸಲು ಸರ್ಕಾರದ ಅನುಮತಿಯನ್ನು ಕೋರಿರುತ್ತಾರೆಂದು ಇದರಲ್ಲಿ ಮಾಹಿತಿ ಇದೆ. ಅನುಮತಿಯನ್ನು ಕೋರಿದ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶ ಆಗುತ್ತದೆ. ದಿನಾಂಕ 20-2-2009 ರಂದು ವಸತಿ ಇಲಾಖೆಯಿಂದ ಈ ಆದೇಶ ಆಗುತ್ತದೆ. ಈ ಸರ್ಕಾರದ ಆದೇಶದಲ್ಲಿ ಏನು ಹೇಳುತ್ತಾರೆಂದರೆ, ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ ಹೋಬಳಿಯ ವೆಂಕಟಾಪುರ, ಸುಗಟೂರು, ಹೊಸಪೇಟೆ ಮತ್ತು ಬಳುವನಹಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್ 2 ರಿಂದ 399 ವರೆಗಿನ ಸರ್ವೆ ನಂಬರ್‌ಗಳಲ್ಲಿ ಒಟ್ಟು 959 ಎಕರೆ ಜಮೀನುಗಳನ್ನು ಎಕರೆ ಒಂದಕ್ಕೆ 50 ಲಕ್ಷ ದಂತೆ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗಾಗಿ ಖರೀದಿಸಲು ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತಹ ನಿಬಂಧನೆಗಳಿಗೆ ಒಳಪಡಿಸಿ ಸರ್ಕಾರದ ಅನುಮೋದನೆ ನೀಡಿದೆ. ಈ ರೀತಿಯಾಗಿ ಸರ್ಕಾರದ ಅನುಮೋದನೆ ನೀಡಬೇಕಾದರೆ, I don't know whether it has gone to the Finance Department or not? ಇಲ್ಲದಿದ್ದರೆ ಅದರ ಬಗ್ಗೆ ತಾವು ಹೇಳಿ? But I don't know, because heavy amount is involved in this. ಒಂದು ಎಕರೆಗೆ 50 ಲಕ್ಷ ರೂಪಾಯಿ ಪ್ರಕಾರ 959 ಎಕರೆಗೆ ಸುಮಾರು 479 ಕೋಟಿ ರೂಪಾಯಿ ಆಗುತ್ತದೆ. ಇವರು ರೈತರಿಗೆ 5 ಲಕ್ಷ ರೂಪಾಯಿ ಕೊಟ್ಟು 50 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದಾರೆ. ಇಲ್ಲಿ 45 ಲಕ್ಷದ ಪ್ರಕಾರ 959 ಎಕರೆಗೆ ಸುಮಾರು 400 ಕೋಟಿಗಿಂತ ಹೆಚ್ಚಾಗುತ್ತದೆ. It is not a small amount ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾವು ಅಷ್ಟು ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ, ಸುಮಾರು 30-35 ಎಕರೆಯಷ್ಟು ಮಾತ್ರ ತೆಗೆದುಕೊಂಡಿದ್ದೇವೆಂದು ನೀವು ಈಗಾಗಲೇ ಹೇಳಿದ್ದೀರಿ. ಆದರೆ, ಸರ್ಕಾರ ತೀರ್ಮಾನ ಮಾಡಿದೆ. The Housing

Department has given the approval, to go ahead with the purchase. 959 ಎಕರೆ ಜಮೀನನ್ನು ತೆಗೆದುಕೊಳ್ಳಿ ಎಂದು ಸರ್ಕಾರ ಅನುಮತಿ ಕೊಟ್ಟಿದೆ. what does it mean? ಇನ್ನು ಕ್ರಯ ಆಗದೇ ಇರಬಹುದು. ಆದರೆ, ಈಗ ನಿಮ್ಮ ಗಮನಕ್ಕೆ ಬಂದಿದೆ. ಮತ್ತೆ ನಾವೂ ಕೂಡ ನಿಮ್ಮ ಗಮನಕ್ಕೆ ತಂದಿದ್ದೇವೆ. ಹಾಗೆಯೇ ಇದು ಜನರ ಗಮನಕ್ಕೆ ಮತ್ತು ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಸುದೈವ, ಇದೆಲ್ಲಾ ಎಲ್ಲರ ಗಮನಕ್ಕೆ ಬಂತು. ಒಂದು ವೇಳೆ ಯಾರ ಗಮನಕ್ಕೂ ಬಂದಿಲ್ಲವೆಂದು ತಿಳಿದುಕೊಳ್ಳೋಣ. Suppose for argument sake, if it has not come to the knowledge of the government, because ಆರ್ಥಿಕ ಇಲಾಖೆಗೆ ಇದು ಗೊತ್ತಿಲ್ಲವೆಂದು ತಾವು ಹೇಳಿದ್ದೀರಿ. ನನಗೂ ಗೊತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಸಹ ಹೇಳುತ್ತಿದ್ದಾರೆ. I don't say that you are aware of it. At least concerned Minister is aware of it, without the knowledge of the concerned Housing Minister this type of order cannot be issued. It is not a small amount. ಇದೇನು 50 ಲಕ್ಷ, 2, 3, ಅಥವಾ 5 ಕೋಟಿ ಅಲ್ಲ. Anything above 5 crores it has to go to the cabinet. ಇದು ಕ್ಯಾಬಿನೆಟ್‌ಗೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ನಾನು ಏನು ಹೇಳುತ್ತೇನೆಂದರೆ, 5 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಇಲಾಖೆಯಲ್ಲಿ ಖರ್ಚು ಮಾಡಬೇಕಾದರೆ, ಅದು ಕ್ಯಾಬಿನೆಟ್‌ಗೆ ಬರಬೇಕು.

SRI.D.K.SHIVAKUMAR:- If there is a Government money involved, it has to go to the cabinet.

ಶ್ರೀ ಸಿದ್ದರಾಮಯ್ಯ: For any loan taken by the Public Undertakings, the Government has to give guarantee. Without guarantee no Board/Corporation can take the loan. ಮಾನ್ಯ ಯಡಿಯೂರಪ್ಪನವರೆ, ನಾನು ಹೇಳುವುದೇನೆಂದರೆ, 959 ಎಕರೆ ತೆಗೆದುಕೊಳ್ಳುವುದಕ್ಕೆ ಅವರ ಹತ್ತಿರ ಹಣ ಇದೆಯೇ? 50 ಲಕ್ಷ ರೂಪಾಯಿ ಪ್ರಕಾರ ಖರೀದಿ ಮಾಡುವುದಕ್ಕೆ ಅವರಿಗೆ ಸುಮಾರು 490 ಕೋಟಿ ರೂಪಾಯಿ ಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಬಹಳ ಒಳ್ಳೆಯ ಚರ್ಚೆಯಾಗುತ್ತಿದೆ. ನಾನು ಇದನ್ನು ಸ್ವಾಗತಿಸುತ್ತೇನೆ. ಕರ್ನಾಟಕ ಗೃಹ ಮಂಡಳಿ ಸ್ವೇಚ್ಛಾಚಾರವಾಗಿ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ಅಲ್ಲಿ ಆಗುವಂಥ ತೀರ್ಮಾನಗಳು unfortunately ಈಗಿರುವಂಥ ವ್ಯವಸ್ಥೆಯಲ್ಲಿ ಹಣಕಾಸಿನ ಇಲಾಖೆಗೂ ಮತ್ತು ಕ್ಯಾಬಿನೆಟ್‌ಗೂ ಬರುವುದಿಲ್ಲ. ನಾನು ಒಂದು ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ಮಾನ್ಯ ಶಿವಕುಮಾರ್‌ರವರೆ, ಇದು ಮಾರ್ಚ್ 2009 ರ ನಂತರ ಇದನ್ನು ಖರೀದಿಸಿದ ನಂತರ ಇದುವರೆವಿಗೂ ಒಂದು ಎಕರೆ, ಮೂವತ್ತೊಂದು

PH-2

ಚಿಲ್ಲರೆ ಎಕರೆ ಬಿಟ್ಟು ಖರೀದಿಸಲಿಕ್ಕೆ ಅಲ್ಲಿ ಅವಕಾಶ ಸಿಕ್ಕಿಲ್ಲ. ಈ ಬಗ್ಗೆ ಇವತ್ತು ಸೀರಿಯೆಸ್ ಆಗಿ ಯೋಚಿಸಬೇಕಾಗಿದೆ. ಈ ರೀತಿಯಾಗಿ ಗೃಹ ಮಂಡಳಿ ತೀರ್ಮಾನ ಮಾಡಿದರೆ, ಗೃಹ ಮಂಡಳಿಯ ಸಚಿವರು ಯಾರು ಇರುತ್ತಾರೋ ಅವರ ನಾಲೆಡ್ಜ್‌ಗೆ ಬಂದಿರುತ್ತದೆ. ಆದರೆ ಮುಖ್ಯಮಂತ್ರಿಗಳಿಗೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ, ಮಂತ್ರಿ ಮಂಡಲಕ್ಕೆ ಗೊತ್ತಿಲ್ಲದೆ ಈ ರೀತಿ ಮಾಡಕೂಡದು ಎಂದು ನಾವು ಒಂದು ನಿರ್ಬಂಧ ಹಾಕದೇ ಇದ್ದರೆ ಯಾರ ಕಾಲದಲ್ಲಿ ಯಾರು ಏನು ಬೇಕಾದರೂ ಮಾಡಬಹುದು. unfortunately ಮಾನ್ಯ ಸಿದ್ದರಾಮಣ್ಣನವರೆ, ಒಂದು ನಿಮಿಷ. ಉತ್ತರವನ್ನೂ ಕೊಡಬೇಕಾಗಿಲ್ಲ. ನಿಮ್ಮ ಉದ್ದೇಶ ಏನು? ದೇವನಹಳ್ಳಿ ತಾಲ್ಲೂಕಿನ ಜೊನ್ನೆನಹಳ್ಳಿ, ಬಾಲದಿಮ್ಮನಹಳ್ಳಿ, ಗೌಡದಾಸನಹಳ್ಳಿ, ಭಟ್ಟರಮಾರನಹಳ್ಳಿ, ಗ್ರಾಮಗಳ ಜಮೀನಿಗೆ KIADB ಎಕರೆಗೆ 55 ಲಕ್ಷ ರೂಪಾಯಿ ಪರಿಹಾರ ನೀಡಿ 25–03–2008 ರಂದು ಅಲ್ಲಿ ಪಕ್ಕದಲ್ಲಿಯೇ ಖರೀದಿ ಮಾಡಿದೆ. ಮಾನ್ಯ ಸಿದ್ದರಾಮಣ್ಣನವರೆ, ನನ್ನ ಪಾಯಿಂಟ್ ಏನೆಂದರೆ, ಇದು ಸರಿಯಿಲ್ಲದಿರಬಹುದು, ಸಮಗ್ರ ತನಿಖೆ ಮಾಡಿಸೋಣ, KIADB ಮಾಡಿದ್ದು ಮಾಡಿಸೋಣ, ಈಗ ಮಾಡಿದ್ದು ಮಾಡಿಸೋಣ, ಇದರ ಬಗ್ಗೆ ನಾನು ಯಾವುದೇ ಕಾರಣಕ್ಕೂ ಹಿಂದು ಮುಂದು ನೋಡುವುದಿಲ್ಲ. ನಾನು ಏನು ಹೇಳಲಿಕ್ಕೆ ಹೊರಟಿದ್ದೇನೆಂದರೆ, ಅದೇ ಹಳ್ಳಿಗಳಲ್ಲಿ KIADB ಯವರು ಮಾಡಬೇಕಾದರೆ ರೈತರಿಗೆ ತಾನೆ ಕೊಡಬೇಕು. ಅಲ್ಲಿ ಒಂದು ಎಕರೆಗೆ 55 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಇದು 2008 ರಲ್ಲಿ ಗೌರ್‍ನರ್ ಇದ್ದ ಕಾಲದಲ್ಲಿ. ಅದಕ್ಕಾಗಿ ಎಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಚರ್ಚಿಸೋಣ, ಉತ್ತರ ಕೊಡೋಣ. ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಕೂಡ ಹಿಂದೆ ಹಣಕಾಸಿನ ಸಚಿವರಾಗಿದ್ದವರು. ಇದು ಬರುವುದಿಲ್ಲ, ಗೃಹಮಂಡಳಿ ನೀವು ಇದ್ದಾಗಲೂ ಇತ್ತು, ಇದು ನಾವು ಬಂದ ಮೇಲೆ ಅಲ್ಲ. ಯಾವುದೇ ಸಂದರ್ಭದಲ್ಲಿ ಅವರು ಅಕ್ವೈರ್ ಮಾಡಿಕೊಂಡರೆ, ಅವರು ಖರೀದಿ ಮಾಡಿದರೆ, ಅವರಿಗೆ ಪರಿಹಾರ ಕೊಡುವಂಥದ್ದು, ಕ್ಯಾಬಿನೆಟ್ ಮುಂದೆ ಬರುವುದಿಲ್ಲ, ಮುಖ್ಯಮಂತ್ರಿಗಳ ಗಮನಕ್ಕೆ ತರುವುದಿಲ್ಲ ಎನ್ನುವುದು ನಿಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ನಾನು ನಿಮ್ಮ ಗಮನಕ್ಕೆ ಇದನ್ನು ತಂದು ಹೇಳುತ್ತಿರುವುದು. ಇದರ ಜೊತೆಗೆ KIADB ಗೆ ಯಾವುದೇ ಸರ್ಕಾರದ ಗ್ಯಾರಂಟಿಯನ್ನು ಕೊಡುವುದಿಲ್ಲ. ಇದು ನಿಮಗೆ ಗೊತ್ತಿದೆ ಹೀಗಾಗಿ ನಾನು ಮತ್ತೆ ಹೇಳುವುದಕ್ಕೆ ಇಚ್ಚಿಸುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಅದೇ ಹೌಸಿಂಗ್ ಬೋರ್ಡ್‌ನಿಂದ ಸೂರ್ಯನಗರ ಬಡಾವಣೆಯಾಯಿತು. ನಾನು ಆಗ ಹಣಕಾಸಿನ ಸಚಿವನಾಗಿದ್ದೆ, ಕ್ಯಾಬಿನೆಟ್‌ಗೆ ಬಂದು ಚರ್ಚೆಯಾಗಿ ತೀರ್ಮಾನವಾಯಿತು. I am very well aware of it, I will give you the document if you want. ನೀವು ಬೇಕಾದರೆ ಸರ್ಕಾರದಲ್ಲಿ ಇದ್ದೀರಿ,

ನೀವು ಅಲ್ಲಿಂದ ಮಾಹಿತಿ ತರಿಸಿಕೊಳ್ಳಿ, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೀರ್ಮಾನವಾಯಿತು. ನಾನು ಅದು ಪ್ರಾಜೆಕ್ಟ್ ಕಾಸ್ಟ್ ಎಷ್ಟು ಎಂಬುದನ್ನು ಮರೆತು ಬಿಟ್ಟಿದ್ದೇನೆ. But that days ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ನಾನು ಹಣಕಾಸಿನ ಸಚಿವನಾಗಿದ್ದಾಗ ಅದು ಕ್ಯಾಬಿನೆಟ್ ಮುಂದೆ ಬಂದು ಚರ್ಚೆಯಾಗಿ ತೀರ್ಮಾನವಾಗಿತ್ತು.

ಶ್ರೀ ಹೆಚ್.ಡಿ.ರೇವಣ್ಣ: ಅವರೇ ಒಪ್ಪಿಕೊಂಡಿದ್ದಾರೆ. ಸೂರ್ಯನಗರ ಕ್ಯಾಬಿನೆಟ್‌ಗೆ ಹೋಗಿ ಚರ್ಚೆಯಾಗಿ ನಂತರ ಅಪ್ರೂವಲ್ ಆಗಿರುವುದು ಬೇಕಾದರೆ ಕಡತ ತೆಗೆದು ನೋಡಿ. ಮಿನಿಸ್ಟರ್ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಇದ್ದೀರಿ. It has come to the knowledge of the Minister. Should he not discuss with the Hon'ble Chief Minister? ಇಷ್ಟೊಂದು ದೊಡ್ಡ ಪ್ರಾಜೆಕ್ಟ್, ಇಷ್ಟು ದೊಡ್ಡಮಟ್ಟದಲ್ಲಿ ಹಣ ಇನ್‌ವಾಲ್ವ್ ಆಗಿದೆ ಎಂದಾಗ should he not discussed with the Chief Minister?

ಶ್ರೀ ಬಿ.ಎಸ್.ಯಡಿಯೂರಪ್ಪ: ಆದಾದ ಮೇಲೆ ಒಂದು ಎಕರೆ ಖರೀದಿಸಲಿಕ್ಕೆ ನಾನು ಬಿಟ್ಟಿಲ್ಲ. ಮಾರ್ಚಿಯಲ್ಲಿ ಮೊದಲು 30.31 ಎಕರೆ ಖರೀದಿಯಾದ ತಕ್ಷಣ ಅಲ್ಲಿಗೆ ಸ್ಟಾಪ್ ಮಾಡಿಸಿರುವುದೇ ಅದಕ್ಕೋಸ್ಕರ. ಆವತ್ತೇ ನಾನು ಸ್ಟಾಪ್ ಮಾಡಿಸಿದ್ದೇನೆ.

ಶ್ರೀ ಸಿದ್ದರಾಮಯ್ಯ: O.K. I appreciate your stand and I agree with you.

ಉಪಾಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: Definitely, 100% it has gone to the knowledge of the Minister. It has been done. It cannot be disputed, it cannot be denied. ಆವತ್ತು ಯಾರು ಮಂತ್ರಿ ಇದ್ದರು, ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಅವತ್ತು ಯಾರು ಇದ್ದರೋ ನನಗೆ ಗೊತ್ತಿಲ್ಲ. ಅವತ್ತು ಯಾರು ಹೌಸಿಂಗ್ ಬೋರ್ಡಿನ ಛೇರ್ಮನ್ ಇದ್ದರೋ ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, 959 ಎಕರೆಯನ್ನು 50 ಲಕ್ಷ ರೂಪಾಯಿಯಂತೆ ಕೊಟ್ಟು ಅಲ್ಲಿ ಹೋಗಿ ತೆಗೆದುಕೊಂಡು, ಅದು ಈಗ ರೈತರಿಗೆ 31 ಎಕರೆ ಖರೀದಿಯಾಗಿದೆಯಲ್ಲ, ಅದರಲ್ಲಿ ಈ ಐವತ್ತು ಲಕ್ಷ ರೂಪಾಯಿ ಒಬ್ಬ ರೈತನಿಗಾದರೂ ಹೋಗಿದೆಯೆ? ಅಲ್ಲಿ ಒಬ್ಬ ರಮೇಶ್ ಎಂದು ಮಾರಿದ್ದಾನೆ, ಇನ್ನೊಬ್ಬ ಶ್ರೀನಿವಾಸ ಶೆಟ್ಟಿ ಎಂದು ಮಾರಿದ್ದಾನೆ. ಒಬ್ಬ ಶ್ರೀನಿವಾಸ ಶೆಟ್ಟಿ, ಇನ್ನೊಬ್ಬ ರಮೇಶ. ರಮೇಶ ಎನ್ನುವವರು ಮಾಲೂರಿನವನಂತೆ, ಶ್ರೀನಿವಾಸ ಶೆಟ್ಟಿ ಎನ್ನುವವರು ಯಾರೆಂದು ನನಗೆ ಗೊತ್ತಿಲ್ಲ. ಅವರು Power of Attorney Holder ರೈತರಿಂದ ಅವರು ಜಮೀನು ತೆಗೆದುಕೊಂಡಿದ್ದಾರೆ. ಅವರಿಂದ ಇವರು ತೆಗೆದುಕೊಂಡಿದ್ದಾರೆ.

Why the Housing Board has not purchased the land directly from the farmers, if they really wanted to help the farmers.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರಿಗೆ ನೀವು ಕೊಡಬಹುದಾಗಿತ್ತಲ್ಲವೆ? ನೀವು 50 ಲಕ್ಷ ರೂಪಾಯಿ ತೆಗೆದುಕೊಳ್ಳಿ ಎಂದು ಹೇಳಬಹುದಾಗಿತ್ತಲ್ಲವೆ? If they want this Project, if this project is very much necessary, 50 ಲಕ್ಷ ರೂಪಾಯಿ ರೈತರಿಗೆ ಕೊಟ್ಟು ನೀವು ಬದುಕಿ ಎಂದು ಹೇಳಬಹುದಾಗಿತ್ತು ಅಲ್ಲವೆ? ಇಲ್ಲಿ ರೈತರ ಹಿತ ಕಾಪಾಡಿದ್ದೀರಾ? No, farmers interest is not involved here. ಯಾವನೋ ಮಧ್ಯವರ್ತಿ ರೈತರ ಹತ್ತಿರ ಟೋಪಿ ಹಾಕಿ ಬಿಟ್ಟು ಜಮೀನು ತೆಗೆದುಕೊಂಡಿದ್ದಾನೆ, ಅವನಿಗೆ 50 ಲಕ್ಷ ರೂಪಾಯಿ ಹೌಸಿಂಗ್ ಬೋರ್ಡ್‌ನವರು ಕೊಟ್ಟಿದ್ದಾರೆ. ಸರ್ಕಾರ ಅದಕ್ಕೆ ಅನುಮತಿ ಕೊಡುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಾದರೆ, For any decision of the Government, as you are heading the Government, you are also responsible. Jointly all the Ministers are responsible. It is a Council of Ministers. It is not the Chief Minister, Government ಅಂದರೆ Chief Minister ಅಥವಾ ಒಬ್ಬರೇ ಮಿನಿಸ್ಟರ್ ಎಂದಲ್ಲ. ಹೌಸಿಂಗ್ ಬೋರ್ಡ್ ಮಿನಿಸ್ಟರ್ ಎಂದಲ್ಲ. ಯಾವಾಗಲೂ ನಾವು ಸಂವಿಧಾನದಲ್ಲಿ 'ಏನು ಹೇಳುತ್ತೇವೆ, Council of Ministers. Council is Headed by Mr.Yediyurappa, the Hon'ble Chief Minister, you are also responsible, if it had come to your knowledge. If it had not come to your knowledge, then also you are also responsible for this. Because it is a joint responsibility, you are also answerable to the Legislature, you are also responsible to the people. Not that ನೀವು ಇದರಲ್ಲಿ ಇನ್‌ವಾಲ್ವ್ ಆಗಿದ್ದೀರೆಂದು ನಾನು ಹೇಳುವುದಿಲ್ಲ. I don't say you are behind it, you are involved in this, I don't say, I am not going to attribute any such thing. You are also answerable to the money which is going to be paid by the Housing Board or KIADB whichever organization. It is a Government organization created by the legislature. Any Government organization is created by this Legislature. Ultimately the Government is responsible. Government is answerable. of without the knowledge of the Government if any chairman or Secretary entered into this type of agreement or deal, ultimately the Government is responsible. You are answerable to the people. This is the point to be considered seriously. ನಾನು ಅದಕ್ಕೆ ಏನು ಹೇಳುತ್ತೇನೆಂದರೆ,

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಸಾರ್ ಒಂದು ನಿಮಿಷ, ಬೆಳಗಾಂನಲ್ಲಿ ಏನಾಗಿದೆ ಎಂದು ಹೇಳುತ್ತೇನೆ. ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನೀವು ಈ ರೀತಿ ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಇದಕ್ಕೆ ನಿಮ್ಮ ಮಂತ್ರಿಗಳು ಒಬ್ಬರೇ ಜವಾಬ್ದಾರರು ಅಲ್ಲ. ನೀವು ಎಲ್ಲರೂ ಜವಾಬ್ದಾರರು. 400 ಕೋಟಿ ರೂಪಾಯಿ ಹಣವನ್ನು ಹೌಸಿಂಗ್ ಬೋರ್ಡ್‌ನವರು ಕೊಡುತ್ತಾರೆಂದರೆ ಸರ್ಕಾರದ ಅನುಮತಿ ಇಲ್ಲದೆ ಕೊಡುತ್ತಾರೆಯೆ? ಇವತ್ತು ಕುಡಿಯುವ ನೀರಿಗೆ ಕೊಡುವುದಕ್ಕೆ ದುಡ್ಡು ಇಲ್ಲ, ಮನೆಗಳನ್ನು ಕಟ್ಟುವುದಕ್ಕೆ ದುಡ್ಡು ಇಲ್ಲ. ಹೌಸಿಂಗ್ ಬೋರ್ಡ್‌ನವರು 2007–08 ನೇ ಸಾಲಿನಲ್ಲಿ ಒಂದು ಮನೆಯನ್ನು ಕೊಟ್ಟಿಲ್ಲ.
ರಾಜೀವ್‌ಗಾಂಧಿ ಹೌಸಿಂಗ್ ಸ್ಕೀಮ್‌ನಲ್ಲಿ 2008–09ರಲ್ಲಿ ಕೊಟ್ಟಿರುವಂತಹ ಮನೆಗಳಿಗೆ ಇವತ್ತಿನ ವರೆಗೂ beneficiary listನ್ನು ಮಾಡುವುದಕ್ಕಾಗಲಿಲ್ಲ. This is the Position today. Such being the case ಅಲ್ಲಿ ಹೋಗಿ 499 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತೇವೆಂದರೆ it is not a small amount. Assuming for the argument sake that farmer is given 10 lakhs. Another 40 lakhs ಅದು ಯಾರ ಕೈಗೆ ಹೋಗುವುದು, ಮಧ್ಯವರ್ತಿಗಳ ಕೈಗೆ, ಈ ದುಡ್ಡು ಯಾರದು? ultimately ಸರ್ಕಾರ ಒಂದು ವೇಳೆ Housing Board ಇದಾಗಿಬಿಟ್ಟರೆ ಅದಕ್ಕೆ ಯಾರು responsible. Government will be held responsible for any loss or any misappropriation or any other omission or commission. ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳೆ ನಾನು ಕೇಳುತ್ತೇನೆ, when it has come to your knowledge before this day? ಆ ತಕ್ಷಣ ನೀವು ಏನು ಮಾಡಿದಿರಿ? ಈ ತರಹ ಯಾವ ಯಾವ ಅಧಿಕಾರಿಗಳು ಇದರಲ್ಲಿ ಯಾರು ಯಾರು involve ಆಗಿದ್ದಾರೋ ಅವರ ಮೇಲೆ disciplinary action ತೆಗೆದುಕೊಂಡಿರಿ? As soon as it has come to your knowledge, what action you have taken? Without the knowledge of the Housing Secretary it cannot be approved. ಏನು Disciplinary action ತೆಗೆದುಕೊಂಡಿದ್ದೀರಿ? The Commissioner of the Housing Board, Secretary Housing, Land Acquisition Officer all these officers are involved in this. If really it has come to your knowledge, ನೀವು ನಿಲ್ಲಿಸಿದ್ದರೆ then what action you have taken against these officers? You have purchased land directly from Power of Attorney Holder without giving the price value to the farmers. ಇದು ಹೇಗೆ ಅಯಿತು? ನೀವು ಇದನ್ನು ನಿಲ್ಲಿಸಿದ್ದರೆ ನಿಮ್ಮನ್ನು ನಾನು

appreciate ಮಾಡುತ್ತಿದ್ದೆ. ನೀವು ಉತ್ತರದಲ್ಲಿ ಹೇಳುವುದಿದ್ದರೆ ಹೇಳಿ, I have no objection. ನೀವು ಉತ್ತರವನ್ನು ಹೇಳುವಾಗ ಅವರ ಸೆಕ್ರೆಟರಿಗೆ ಸಸ್ಪೆಂಡ್ ಮಾಡಿ enquiryಗೆ order ಮಾಡಿದ್ದೇವೆ. ಅವರು ಯಾರು ಕಮೀಷನರ್‌ಗೆ Suspend ಮಾಡಿ ಆರ್ಡರ್ ಮಾಡಿದ್ದೇವೆ. ಇದರಲ್ಲಿ ಯಾರ್‍ಯಾರು ಜವಾಬ್ದಾರರು ಇದ್ದಾರೆ, ಎಲ್ಲರ ಮೇಲೆಯೂ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಥವಾ ನನ್ನ knowledge ಗೆ ಬಂದಿದೆ, ಅವರು ಮಾಡಿರುವುದು ಸರಿ ನಾನು ಏನು ಮಾಡಲಿಲ್ಲವೆಂದಾದರೂ ಹೇಳಿ. ಇದೆಲ್ಲವೂ ನನ್ನ knowledge ಗೆ ಬಂದಿದೆ ಆದರೂ ನಾನು ಏನು ಮಾಡುವುದಕ್ಕೆ ಹೋಗಲಿಲ್ಲ. ಮಾಡಿರುವುದೆಲ್ಲವೂ ಕಾನೂನು ಪ್ರಕಾರ ಇದೆ. ಎಲ್ಲವೂ ಸರಿ ಇದೆ ಎಂದರೆ I kept quiet ಎಂದಾದರೂ ಕೂಡ ಉತ್ತರ ಹೇಳಿ. or it has come to my knowledge, immediately I called the concerned Officers, I have taken disciplinary action. I kept them under suspension and ordered for the enquiry, the enquiry is under process ಅಂತಾದರೂ ಹೇಳಿ. ನನಗೆ ಗೊತ್ತಿರುವ ಮಟ್ಟಿಗೆ ಹೇಳುವುದಾದರೆ ಇದು ಏನು ಆದ ಹಾಗೆ ಕಾಣಿಸುವುದಿಲ್ಲ. Nothing has been done. Today only it has come to the knowledge of the Government ಇದು ಒಂದು. ಈ ತರಹ ಆದರೆ ಮೊದಲೇ farmersಗೆ ಅನ್ಯಾಯವಾಗುತ್ತದೆಂದು ಎಲ್ಲಾ ಕಡೆಗಳಲ್ಲಿಯೂ ಗಲಾಟೆಯೂ ಆಗುತ್ತಿದೆ. ರೈತರ ಜಮೀನುಗಳನ್ನು ಈತರಹವೆಲ್ಲಾ discretion ಇಲ್ಲದೆ ತೆಗೆದುಕೊಳ್ಳಬಾರದು, ರೈತರಿಗೆ ಅನ್ಯಾಯವಾಗಬಾರದು, ರೈತರಿಗೆ ತೊಂದರೆ ಆಗಬಾರದು.

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಮಾನ್ಯ ಶ್ರೀನಿವಾಸ್‌ರವರೆ, ತಾವು ಮಾತನಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ: ನೀವು ಆಮೇಲೆ ಮಾತನಾಡಿ ಸ್ವಾಮಿ. ನಾನು ಯಾರಿಗೂ ಕೂಡ ಆರೋಪವನ್ನೇ ಮಾಡಿಲ್ಲ.

ಶ್ರೀ ಎಂ.ಶ್ರೀನಿವಾಸ್: ನಾನು ಏನು ಹೇಳುತ್ತೇನೆಂದರೆ,...

ಅಧ್ಯಕ್ಷರು: ಮಾನ್ಯ ಶ್ರೀನಿವಾಸ್‌ರವರೆ, ತಾವು ಮಾತನಾಡುವುದು ಬೇಡ.....

ಶ್ರೀ ಸಿದ್ದರಾಮಯ್ಯ: you are my good friend.

ಶ್ರೀ ಎಂ.ಶ್ರೀನಿವಾಸ್: acquition ಬಂದು ಏಜೆಂಟ್ ಹೆಸರಿಗೆ ಬರುವುದಿಲ್ಲ. ಯಾರು ರೈತರು ಇದ್ದಾರೆ, ಅವರಿಗೆ ಅಕ್ವಿಜಿಷನ್ ಬರುವುದು ಎಂದು ಹೇಳುವುದಕ್ಕೆ ಬಂದೆ.

ಶ್ರೀ ಸಿದ್ದರಾಮಯ್ಯ: ಅಯಿತು. ತಾವು ಅದನ್ನೂ ಅಮೇಲೆ ಹೇಳಿ. ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಎಂ.ಶ್ರೀನಿವಾಸ್: Farmerಗೆ ಬರುವುದಿಲ್ಲ. Agent ಗೆ ಬರುತ್ತದೆ ಎಂದು ಹೇಳಿದರಲ್ಲಾ ಅದಕ್ಕಾಗಿ acquisition ಮಾಡಬೇಕಾದರೆ ಯಾರದು ಪಹಣಿ ಇದೆ, ಅವರಿಗೆ ಅಕ್ವಿಜಿಷನ್ ಬರುತ್ತದೆಯೇ ಹೊರತು ಏಜೆಂಟ್‌ಗೆ ಬರುವುದಿಲ್ಲ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸ್‌ರವರೆ, Please,....

ಶ್ರೀ ಸಿದ್ದರಾಮಯ್ಯ: ಮಾನ್ಯ ಶ್ರೀನಿವಾಸ್‌ರವರೆ, ನೇರವಾಗಿ ಶ್ರೀನಿವಾಸಶೆಟ್ಟಿಯವರಿಗೆ Housing Bordನಿಂದ ಚೆಕ್‌ನ್ನು ಕೊಟ್ಟಿದ್ದಾರೆ. ರಮೇಶ್ ಏಜೆಂಟ್

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಸಿದ್ದರಾಮಯ್ಯನವರೆ, ನಾನು ಹೇಳಿರತಕ್ಕಂತಹದ್ದು allocation ಮಾಡದೆ ರೈತರ ಹೆಸರಿಗೆ ಬರುತ್ತದೆ ಎಂದು ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: you are correct ನಾನು ಅದನ್ನು welcome ಮಾಡುತ್ತೇನೆ.

ಶ್ರೀ ಎಂ.ಶ್ರೀನಿವಾಸ್: Immediate ಆಗಿ ಯಾರ ಹತ್ತಿರ ಪಹಣಿ ಇದೆಯೋ ಅದು ಅವರ ಹೆಸರಿಗೆ ಬರುವುದು.

ಶ್ರೀ ಸಿದ್ದರಾಮಯ್ಯ: ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅವರು ಅನುಭವದ ಮೇಲೆ ಹೇಳಿದ್ದಾರೆ. ಅವರು ಬಿಡಿಎನಲ್ಲಿ ಮೆಂಬರ್ ಆಗಿದ್ದರು. ಬೆಂಗಳೂರಿನ ಸುತ್ತಲೂ ಇದ್ದಾರೆ, ಅವರಿಗೆ ಎಲ್ಲೆಲ್ಲಿ ಏನು ನಡೆಯುತ್ತಿದೆ ಎಂದು ಎಲ್ಲವೂ ಗೊತ್ತಿದೆ. I am sorry. ಮಾನ್ಯ ಅಧ್ಯಕ್ಷರೇ ಇದು ಏನಾಗಿದೆ ಎಂದರೆ ನಮ್ಮ ತಾಲ್ಲೂಕಿನಲ್ಲಿಯೂ ಕೂಡ ಒಂದು ಹೋಬಳಿಯಲ್ಲಿ ಇದೇ ರೀತಿಯಾಗಿ ಹೌಸಿಂಗ್ ಬೋರ್ಡ್‌ನದು ನಡೆದಿದೆ. ನಾನು ಒಂದು ಸಾರಿ ಇದನ್ನು ನಿಲ್ಲಿಸಿ ಎಂದು ಹೇಳಿದ್ದೆ. ಅಮೇಲೆ ರೈತರುಗಳೆಲ್ಲರೂ ನನ್ನ ಹತ್ತಿರ ಬಂದರು. ಇಲ್ಲಾ ಸಾರ್, ನಮಗೆ ತೆಗೆದುಕೊಂಡರೆ ಹೇಗೆ? ಎಂದು ಕೇಳಿದರು. ನಿಮಗೆ ಕೊಟ್ಟರೆ ತೆಗೆದುಕೊಳ್ಳಿ ಎಂದು ಹೇಳಿದೆ. ನಿಮಗೆ ದುಡ್ಡು ಬಂದರೆ ತೆಗೆದುಕೊಳ್ಳಿ ಇಲ್ಲದೆ ಹೋದರೆ ಮಾರುವುದಕ್ಕೆ ಹೋಗಬೇಡಿ, ಜಮೀನು ಇಟ್ಟುಕೊಳ್ಳಿ ಎಂದು ಮೈಸೂರು ಸುತ್ತಮುತ್ತಲೂ ಜಮೀನುಗಳು ಹೋಗಿಬಿಟ್ಟಿದೆ. ಅದನ್ನು ಮಾರುವುದಕ್ಕೆ ಹೋಗಬೇಡಿ ಎಂದು ನಾನು ನನ್ನ ತಾಲ್ಲೂಕಿನವರಿಗೂ ಕೂಡ ಹೇಳಿದೆ. ಮೈಸೂರು ಹತ್ತಿರ ಇರುವ ಇಲವಾಲದಲ್ಲಿಯೂ ಎಕರೆಗೆ ಕೂಡ 36,500 ಲಕ್ಷ ರೂಪಾಯಿಗಳಿಗೆ ಖರೀದಿಯಾಗಿದೆ. ಅಲ್ಲಿ guidance value ಎಷ್ಟು ಇರಬಹುದು. 6 ಲಕ್ಷ ರೂಪಾಯಿಗಳು ಇರಬಹುದು. ಅದನ್ನು 36,500 ಲಕ್ಷ ರೂಪಾಯಿಗಳಿಗೆ ಮಾಡಿದ್ದಾರೆ. ಇರಲಿ ಬಿಡಿ, ಅದು ಬೇರೆ ಭಾಗ. ಇನ್ನು ಬೇರೆ ಕಡೆಗೆ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿಯವರು ಬೆಳಗಾಂ ಹಾಗೂ ಹುಬ್ಬಳ್ಳಿಯಲ್ಲಿಯೂ ಕೂಡ ಹೀಗೆ ಅಗಿದೆ ಎಂದು ಹೇಳುತ್ತಿದ್ದರು. ಬೇರೆ ಬೇರೆ

ಕಡೆಗಳಲ್ಲಿಯೂ ಇದೇ ರೀತಿಯಾಗಿದೆ. ಇದು ಒಂದು ಹೊಸ culture develop ಆಗಿಬಿಟ್ಟದೆ. ಈ ಮಧ್ಯವರ್ತಿಗಳು ಇದ್ದಾರಲ್ಲಾ ಮಾನ್ಯ ಮುಖ್ಯಮಂತ್ರಿಗಳೆ, ರೈತರಿಗೆ ಶೋಷಣೆಯನ್ನು ಮಾಡುವಂತಹ ಕೆಲಸವನ್ನು ಅನೇಕ ಕಡೆಗಳಲ್ಲಿಯೂ ನಡೆಯುತ್ತಿದೆ. ರೈತರಿಂದ 5 ಮತ್ತು 10 ಲಕ್ಷ ರೂಪಾಯಿಗಳಿಗೆ ಜಮೀನುಗಳನ್ನು ತೆಗೆದುಕೊಳ್ಳುವುದು. ಇಲ್ಲಿ ನನಗೆ ಗೊತ್ತಿರುವ ಮಟ್ಟಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡಿದ್ದಾರೆ. ಈ ತರಹ ಆದರೆ ನಾವು ಎಲ್ಲಿಗೆ ಹೋಗಿ ತಲುಪುತ್ತೇವೆಂಬ ಬಗ್ಗೆ ಯೋಚನೆಯನ್ನು ಮಾಡಬೇಕು. ರೈತರ ಗತಿ ಏನಾಗುತ್ತದೆ. ಯಾವ ಅಧಿಕಾರಿಗಳಿಗೂ ಭಯವಿಲ್ಲ. ಅವರ ಇಷ್ಟಬಂದ ಹಾಗೆ ಸ್ವೇಚ್ಛೆಯಾಗಿ ಮಾಡುತ್ತಾರೆ. ಸ್ವೇಚ್ಛೆಯಾಗಿ ಮಾಡುವುದಕ್ಕೆ ನಾನು ಬಿಡುವುದಿಲ್ಲವೆಂದು ಎಂದು ತಾವು ಹೇಳಿದ್ದೀರಿ, What does it mean? what you call this? How can you define this? ಇದನ್ನು ಸ್ವೇಚ್ಛೆ ಅಲ್ಲದೇ ಇನ್ನೇನೆಂದು ಕರೆಯಬೇಕು? ನಾನು ಅದಕ್ಕಾಗಿ ಬಹಳ ಉದ್ದನೇ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ, ಎಲ್ಲಾ ಅವರು ಹೇಳಿದ್ದಾರೆ. But prima facie there is a clear case ಇದಕ್ಕೆ ಏನು evidence ಬೇಕಾಗುವುದಿಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಹಿಡಿದುಕೊಂಡು ನೋಡಬೇಕಾಗಿಲ್ಲ. ಇದಕ್ಕೆ enquiry ಬೇಕಾಗಿಲ್ಲ, "ಅಂಗೈ ಹುಣ್ಣಿಗೆ ಕನ್ನಡಿ ಬೇಕೇ?" ಇಲ್ಲೇ ಇದೆಯಲ್ಲಾ, ಇಲ್ಲಿಯೇ documentsಗಳು ಇವೆಯಲ್ಲಾ. ನಿಮಗೂ ಸಹ documentsಗಳು ಬಂದಿವೆ. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ,

ಶ್ರೀ ಹೆಚ್.ಡಿ.ರೇವಣ್ಣ: documentsನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಕಳುಹಿಸಿಕೊಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರಿಗೂ ಕಳುಹಿಸಿಕೊಡಿ. ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ, ರೈತರ ಮೇಲೆ ಪ್ರಮಾಣ ಮಾಡಿದ್ದೀರಿ, ರೈತರಿಗೆ ಅನ್ಯಾಯವಾಗಬಾರದು, ರೈತರಿಗೆ ಮೋಸ ಆಗಬಾರದು ಎನ್ನುವುದು ಇದ್ದರೆ ಎಲ್ಲೆಲ್ಲಿ ಈ ರೀತಿ ರೈತರಿಗೆ ಅನ್ಯಾಯವಾಗಿದೆ, ಯಾರ್ಯಾರು ಈ ತರಹ ರೈತರಿಗೆ ಮೋಸ ಮಾಡಿದ್ದಾರೆ, As a matter of fact it is an offence under the Indian Penal Code. Those who are involved in this, they all should be charged under various sections of the Indian Penal Code. Cheating, Whoever may be the cheat, he should be punished in accordance with law. ಯಾರೇ ಆಗಲಿ, it is a cheating. That is why ಯಾರು ಈ ವಿಚಾರವನ್ನು ತೆಗೆದುಕೊಂಡು ಬಂದಿದ್ದಾರೆ, ನಾನು ಈ ವಿಚಾರಕ್ಕೆ ಬೆಂಬಲವನ್ನು ಕೊಡುತ್ತೇನೆ. ಇದು ಎಲ್ಲಿಯೂ ಕೂಡ ಆಗಬಾರದು. ರೈತರಿಗೆ ಎಲ್ಲಿಯೂ ಕೂಡ ಅನ್ಯಾಯವಾಗಬಾರದು. ಮೈಸೂರು ಹಾಗೂ ಬೆಂಗಳೂರು ಸುತ್ತಮುತ್ತ ಎಲ್ಲೆಲ್ಲಿ ನಗರಗಳು ಬೆಳೆಯುತ್ತಿದೆ, ಎಲ್ಲಾ ಕಡೆಗಳಲ್ಲಿ ಇದು ನಡೆಯುತ್ತಿದೆ. ಈಗ ಜಮೀನಿನ

ಬೆಲೆ ಕಡಿಮೆಯಾಗಿದೆ, ಹಾಗಾಗಿ ಬೆಲೆಯೂ ಗಗನಕ್ಕೆ ಹೊರಟು ಹೋಗಿಬಿಟ್ಟಿದೆ. ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿದೆ. ಎಲ್ಲಾಕಡೆ ನಡೆಯುತ್ತಿದೆ, ಇದನ್ನು ಯಾರು ಮಾಡುತ್ತಿದ್ದಾರೆ, ಇದರ ಹಿಂದೆ ಯಾರ ಜಾಲ ಇದೆ. ಹಿಂದೆ ನಿಜಲಿಂಗಪ್ಪನವರ ಕಾಲದಲ್ಲಿ ಶರಾವತಿ ಹಣದ ಬಗ್ಗೆ ಗಲಭೆ ಆದಾಗ ದೊಡ್ಡ ಕರ್ಮಕಾಂಡದ ರೀತಿ ಚರ್ಚೆಯಾಗಿದೆ. ಆಗೇನು ಲಕ್ಷಗಟ್ಟಲೆ ಇರಬೇಕೆಂದು ಕಾಣುತ್ತದೆ. ಬೋಫೋರ್ಸ್‌ದು ಇಡೀ ದೇಶದಲ್ಲಿಯೇ ದೊಡ್ಡ ಹಗರಣವಾಗಿತ್ತು. What is the amount involved in this case, Ok, I agree ಇನ್ನು 31 ಎಕರೆ ಜಮೀನಿಗೆ ಸುಮಾರು 9-10 ಕೋಟಿ ರೂ.ಗಳಾಗಿವೆ. ಇದರಲ್ಲಿ ಯಾರಿಗೆ ಮಾರಿದರು, ಅವರಿಗೆ ಲಾಭ ಬಂದು ಬಿಟ್ಟಿದೆ, ಹೌಸಿಂಗ್ ಬೋರ್ಡ್‌ನವರಿಂದ 15.00 ಕೋಟಿ ರೂ.ಗಳಷ್ಟು ಹಣ ಅವರಿಗೆ ಹೊರಟು ಹೋಗಿದೆ, ಇನ್ನು ಮುಂದೆ ನಿಲ್ಲಿಸುತ್ತೇವೆಂದು ನೀವು ಹೇಳುತ್ತೀರಿ, 15.00 ಕೋಟಿ ರೂ.ಗಳು ಹೋಗಿರುವವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು. 15.00 ಕೋಟಿ ತೆಗೆದುಕೊಂಡಿರುವವರು for which they are not entitled, is going to be wrongful gain. The gain is not in accordance with law. 15.00 ಕೋಟಿ ತೆಗೆದುಕೊಂಡಿದ್ದಾರೆ, ಅವರಿಗೆ ಏನು ಮಾಡಬೇಕು? ಇನ್ನು ಮುಂದೆ ಏನು ಮಾಡಬೇಕು. ಮುಂದೆ ಈ ರೀತಿ ನಡೆಯದೆ ಇರಲಿಕ್ಕೆ ಏನು ಮಾಡಬೇಕು, ಇದಕ್ಕೆಲ್ಲಾ ಆರ್ಡರ್ ಕೊಡುವವರು ಯಾರು? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಇದೆಲ್ಲಾ ಆಗಬೇಕೋ ಬೇಡವೋ? ಅದಕ್ಕೆ ಯಾರು ರಕ್ಷಣೆ ಕೊಡಬೇಕು? Only Government has to protect the interest of the farmers,

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರೆ, ಕೃಷ್ಣಾ ಬೈರೆಗೌಡರು ಆಮೇಲೆ ಮಾತನಾಡಿ, ಈಗ ಅವಕಾಶ ಕೊಡುವುದಿಲ್ಲ. ಬೇಡ, ನಾನು ಆಗಲೇ ಹೇಲಿದ್ದೇನೆ, ನಿಮ್ಮದಾದ ಮೇಲೆ ಉತ್ತರ ಕೊಡಲಿ. ವಿರೋಧ ಪಕ್ಷದ ನಾಯಕರೇ ಈಗ ನಿಮ್ಮದು 40 ನಿಮಿಷವಾಯಿತು. I have given sufficient time. No, No. ಕೃಷ್ಣಾಬೈರೇಗೌಡರೇ I will not allow anybody. ಈಗ ವಿರೋಧ ಪಕ್ಷದ ನಾಯಕರಾದ ಮಾತನಾಡಿದ ಮೇಲೆ ಸರ್ಕಾರದವರು ಉತ್ತರ ಕೊಡಲಿ. ನಂತರ ಅವರು ಸ್ಪಷ್ಟೀಕರಣ ಕೇಳಲಿ.

ಶ್ರೀ ಕೃಷ್ಣಾಬೈರೇಗೌಡ: ನಾನು ಭಾಷಣ ಮಾಡುವುದಿಲ್ಲ. ಕೇವಲ ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: 400 ಕೋಟಿ ರೂ.ಗಳ ಅವ್ಯವಹಾರ ಆಗಿದೆ. ವಿರೋಧ ಪಕ್ಷದ ನಾಯಕರಿಗೆ ಇದರ ಬಗ್ಗೆ ಮಾತನಾಡಲಿಕ್ಕೆ ಎರಡು ಗಂಟೆಗಳ ಕಾಲ ಅವಕಾಶ ಕೊಡಬೇಕು.

ಕೃಷ್ಣಾಬೈರೇಗೌಡ: ಮಾನ್ಯ ಮುಖ್ಯಮಂತ್ರಿಗಳು ಹೇಳಿದರು..

ಅಧ್ಯಕ್ಷರು: ಇಲ್ಲ, ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ, ಈಗ ಮಾತನಾಡಬೇಡಿ, ಸರ್ಕಾರದಿಂದ ಉತ್ತರ ಕೊಡಲಿ, ಆಮೇಲೆ ನೀವು ಸ್ಪಷ್ಟೀಕರಣ ಕೇಳಿ, ಈಗ ನಾನು ಅವಕಾಶ ಕೊಡುವುದಿಲ್ಲ.

ಕೃಷ್ಣಾಬೈರೇಗೌಡ: ದೇವನಹಳ್ಳಿಗೂ ಶಿಡ್ಲಘಟ್ಟಕ್ಕೂ ಬಹಳ ಅಂತರವಿದೆ, ದೇವನಹಳ್ಳಿಯಲ್ಲಿ ಏನು ಬೆಲೆ ಕೊಟ್ಟಿದ್ದಾರೆ, ಅದನ್ನು ಶಿಡ್ಲಘಟ್ಟಕ್ಕೆ ಹೋಲಿಕೆ ಮಆಡಲಿಕ್ಕಾಗುವುದಿಲ್ಲ. ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇದೆ, ದೇವನಹಳ್ಳಿಗೂ ಶಿಡ್ಲಘಟ್ಟಕ್ಕೂ ಬಹಳ ಅಜಗಜಾಂತರ ವ್ಯತ್ಯಾಸ ಇದೆ.

ಅಧ್ಯಕ್ಷರು: ನಾನು ಈಗ ಯಾರಿಗೂ ಅವಕಾಶ ಕೊಡುವುದಿಲ್ಲ.. ದಯಮಾಡಿ ಕುಳಿತುಕೊಳ್ಳಿ.. ಸರ್ಕಾರ ಉತ್ತರ ಕೊಡಲಿ, ಆಮೇಲೆ ನೀವು ಸ್ಪಷ್ಟೀಕರಣ ಕೇಳಿ.

ಶ್ರೀ ಸಿದ್ಧರಾಮಯ್ಯ: ನಾನು ದಯಮಾಡಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದು ಬಹಳ ಗಂಬೀರವಾದಂಥ ಒಂದು ಘಟನೆ. ಆಮೇಲೆ ನೋಡಿ ಹೌಸಿಂಗ್ ಕಮಿಷನರ್ ಸರ್ಕಾರಕ್ಕೆ, chief Electoral Officerಗೆ ಆಗ ಚುನಾವಣೆ ಮುಂಚಿತವಾಗಿ ಪತ್ರ ಬರೆದಿದ್ದಾರೆ. ಚುನಾವಣೆ ಆದಮೇಲೆ ದಿನಾಂಕ 23.32009 ರಲ್ಲಿ ಬರೆದಿದ್ದಾರೆ, "the Government has approved the purchase of land in above mentioned places." A copy of purchase of the land ಕಳುಹಿಸಿದ್ದಾರೆ. ಇವೆಲ್ಲಾ ಮಾಡಿ ಆದ ಮೇಲೂ ಕೂಡ ಚುನಾವಣೆ ಸಂದರ್ಭದಲ್ಲಿಯೇ ಗೊತ್ತಾಗಿರಬೇಕು ಎಂದು ನಾನು ಅಂದುಕೊಂಡಿದ್ದೇನೆ, ಚುನಾವಣೆ ಸಮಯದಲ್ಲಿಯೇ ಸರ್ಕಾರಕ್ಕೆ ಗೊತ್ತಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. I do not know, I am not cretain about it. ಇದರ ಮೇಲೆ circumstances of the case ಮೇಲೆ I am drawing inference. ಇದು ಸರ್ಕಾರಕ್ಕೆ ಗೊತ್ತಾಗಿರಬೇಕು. ಚುನಾವಣಾ ಆಯುಕ್ತರಿಗೂ ಬರೆದಿದ್ದಾರೆ. ನಮಗೆ ಪರ್ಮಿಷನ್ ಕೊಡಿ, ನೀತಿ ಸಂಹಿತೆ ಇದೆ ಎಂದು ಪತ್ರ ಬರೆದಿದ್ದಾರೆ. ಇವೆಲ್ಲಾ ಹಿನ್ನೆಲೆಯಲ್ಲಿ ಇದರಲ್ಲಿ ದೊಡ್ಡ ಜಾಲ ಇದೆ. ಯಾವ ಮಟ್ಟದ ಅಧಿಕಾರಿಗಳು ಇದರಲ್ಲಿ involve ಆಗಿದ್ದಾರೆ, ಯಾವ ಮಂತ್ರಿಗಳು, ವ್ಯಕ್ತಿಗಳು ಇದರಲ್ಲಿ involve ಆಗಿದ್ದಾರೆ, ಇದರ ಹಿಂದೆ ಯಾರ‍್ಯಾರು ಇದ್ದಾರೆ, ಏಕೆ ಹೀಗೆ ಆಯಿತು ಎನ್ನುವ ಸತ್ಯ ಹೊರಗಡೆ ಬರಬೇಕು. ಇದು ಹೌಸಿಂಗ್ ಬೋರ್ಡ್ ಹಣವಾಗಲಿ, ಸರ್ಕಾರದ ಹಣವಾಗಲಿ ಇದು ಜನರ ಹಣವಾಗಿದೆ, ಅದಕ್ಕೋಸ್ಕರ ನಾನು ಹೇಳುತ್ತೇನೆ, ಇನ್ನು ಬೇರೆ ಬೇರೆ ಕಡೆ ಆಗಿವೆ ಅವುಗಳ ಬಗ್ಗೆ ನನ್ನ ಹತ್ತಿರ ಈಗ ದಾಖಲಾತಿಗಳು ಇಲ್ಲ. ಮೈಸೂರಿನಲ್ಲಾಗಿರುವ ಎಲ್ಲಾ ದಾಖಲೆಗಳನ್ನು ಬೇರೆ ಬೇರೆ ಜಿಲ್ಲೆಗಳ ದಾಖಲೆಗಳನ್ನು ತರಿಸಿ ಕೊಡುತ್ತೇನೆ. ಒಟ್ಟಾರೆ ಕರ್ನಾಟಕದಲ್ಲಿ ಎಲ್ಲೆಲ್ಲಿ ಈ ರೀತಿ ನಡೆದಿದೆ, ರೈತರಿಗೆ ಇದರಿಂದ ಬಹಳಷ್ಟು ಅನ್ಯಾಯವಾಗುತ್ತಿದೆ, ಯಾರ‍್ಯಾರು ಇದರಲ್ಲಿ involve

ಆಗಿದ್ದಾರೆ, ಯಾರು ಇದರಲ್ಲಿ shreholders ಆಗಿದ್ದಾರೆ, ಯಾರ್ಯಾರಿಗೆ ಈ ಹಣ ತಲುಪಿದೆ, ಇವೆಲ್ಲಾ ವಿಷಯಗಳು ಬಹಿರಂಗವಾಗಬೇಕು. ಏಕೆಂದರೆ ಬಹಳಷ್ಟು ಜನ ಇಷ್ಟೊಂದು ಚರ್ಚೆಯಾದ ಮೇಲೆ ನಿಮ್ಮ ಮೇಲೂ ಕೂಡ ಅನುಮಾನದಿಂದ ನೋಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಈ ಅನುಮಾನ ಇವತ್ತು ಹೋಗಬೇಕಾದರೆ ಇದೊಂದು ಸರಿಯಾದಂಥ ಏಜೆನ್ಸಿಯಿಂದ enquiry ಆಗಬೇಕು. ಇದು ನಿಮಗೆ ಗೊತ್ತೂ ಇಲ್ಲ, ನೀವು ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿ. ಯಾರ್ಯಾರು ಇದ್ದಾರೆ ಎಲ್ಲರೂ ಸಿಕ್ಕಿಹಾಕಿಕೊಳ್ಳಲಿ, ಯಾರಾದರೂ ಜೈಲಿಗೆ ಹೋಗಲಿ, ಅನುಭವಿಸಲಿ, ಪಾಠ ಕಲಿಯಲಿ. ಮುಂದಕ್ಕೆ ಅದರಿಂದ ಅವರಿಗೆ ಭಯ ಬರುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ನಾವು ಲೂಟಿ ಹೊಡೆದಿದ್ದೀರಿ ಎಂದು ನೀವು ಹೇಳುವುದು, ನೀವು ಲೂಟಿ ಹೊಡೆದಿದ್ದೀರಿ ಎಂದು ನಾವು ಹೇಳವುದು. ಯಾರದ್ದನ್ನು ಯಾರು ಲೂಟಿ ಮಾಡಿದ್ದಾರೆಂಬುದು ಗೊತ್ತಾಗಬೇಕಲ್ಲವೆ? Who has looted? Immediately I demand the Government, if the Government is very serious ಅನ್ನುವುದಾದರೆ the Officers who are responsible for this should be kept under suspension immediately. ಈ ಘಳಿಗೆಯಿಂದ ಅವರನ್ನು ಅಮಾನತ್ತಿನಲ್ಲಿಡಬೇಕು. They have no right to continue in their officers I force that they should be kept under suspension from this time. C.B.I. enquiry ಆಗಬೇಕು. ಸತ್ಯ ಹೊರಗಡೆ ಬರಬೇಕು, ಯಾರ್ಯಾರು ಇದರಲ್ಲಿ involve ಆಗಿದ್ದಾರೆ. ಅವರು ಜೈಲಿಗೆ ಹೋಗಬೇಕು. ಕಾನೂನು ಪ್ರಕಾರ ನಮ್ಮ Law of the Land ಏನು ಹೇಳುತ್ತದೆ, ಅದರ ಪ್ರಕಾರ ಅವರಿಗೆ ಶಿಕ್ಷೆ ಆಗಬೇಕು. That's what I want. ಹಾಗಾಗಿ ನಾನು ಸಹ ಅವರು ತಂದಿರುವಂಥ ಈ ನಿಲುವಳಿ ಸೂಚನೆಗೆ ಬೆಂಬಲ ಕೊಡುತ್ತೇನೆ. ನೀವು ನನಗೆ ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ದಯಮಾಡಿ ತಾವು ಸಹ ಇದನ್ನು ಗಂಭೀರವಾಗಿ ಪರಿಗಣಿಸುತ್ತೀರಿ ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಕೋಲಾರ ಜಿಲ್ಲೆಯವರು ಸಹ ಇದರಲ್ಲಿ ಇದ್ದಾರೆ, ಕೃಷ್ಣಾ ಬೈರೇಗೌಡರವರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: No, No, ನಾನು ಇದಕ್ಕೆ ಅವಕಾಶ ಕೊಡುವುದಿಲ್ಲ. ಸರ್ಕಾರದಿಂದ ಉತ್ತರ ಕೊಡಲಿ, ಅವರೇನು ನಿಲುವಳಿ ಸೂಚನೆಗೆ ಸಹಿ ಮಾಡಿದ್ದಾರೆಯೇ? ಇಲ್ಲ, ಇಲ್ಲ, ಅವರಿಗೆ, ಇವರಿಗೆ ಅವಕಾಶ ಕೊಡಿ ಎಂದರೆ ಆಗುವುದಿಲ್ಲ. ಈಗ ಸರ್ಕಾರದಿಂದ ಉತ್ತರ, ಪ್ಲೀಸ್ ಸೋಮಣ್ಣವರು ಉತ್ತರ ನೀಡಿ. ಸರ್ಕಾರದಿಂದ ಉತ್ತರ ಬಂದ ಮೇಲೆ ಸ್ಪಷ್ಟೀಕರಣ ಕೇಳಿ. ನಾನು ಮೊದಲೇ ಹೇಳಿದ್ದೇನೆ. ಉತ್ತರ ಬರಲಿ ಆಮೇಲೆ ಕೇಳಲಿ, ಏನಾದರೂ ಸಬ್ಜೆಕ್ಟ್ ಇದ್ದರೆ

ಕೃಷ್ಣಾಬೈರೆಗೌಡರವರು ಪ್ರತ್ಯೇಕವಾದ ನೋಟಿಸ್ ಕೊಡಿ. ಈಗ ನಾನು ಅಲೋ ಮಾಡುವುದಿಲ್ಲ. ರೇವಣ್ಣನವರೇ ಪ್ಲೀಸ್, ಬಾಲಕೃಷ್ಣರವರೇ ಪ್ಲೀಸ್, ಸರ್ಕಾರದಿಂದ ಉತ್ತರ ಕೊಡಲಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಅಧ್ಯಕ್ಷರೇ, ಕೃಷ್ಣಬೈರೇಗೌಡರು ಕೋಲಾರ ಕ್ಷೇತ್ರದ ಶಾಸಕರು. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ನಾನು ಈಗ ಅವರಿಗೆ ಅವಕಾಶ ಕೊಡುವುದಿಲ್ಲ, ಆಮೇಲೆ ಅವರಿಗೆ ಅವಕಾಶ ಕೊಡುತ್ತೇನೆ. ಪದೇ ಪದೇ ಇದನ್ನೇ ಹೇಳುವುದಿಲ್ಲ. ಸರ್ಕಾರ ಉತ್ತರ ಕೊಡಲಿ, ಆಂಏಲೆ ನೀವು ಕೇಳಿ. ನಿಮಗೂ ಅವಕಾಶ ಕೊಡುತ್ತೇನೆ. ಉತ್ತರ ಕೊಟ್ಟ ನಂತರ ಏನೇ ವಿಷಯವಿದ್ದರೂ ಕೇಳಿ. ಉತ್ತರ ಕೊಟ್ಟ ಮೇಲೆ ಮತ್ತೆ ಕೇಳಿ. ಪದೇ ಪದೇ ಈ. ರೀತಿ ಮಾಡುವುದು ಸರಿಯಲ್ಲ, I will not allow. No, No, ಸೋಮಣ್ಣನವರೇ ಉತ್ತರ ಕೊಡಿ, ಪ್ಲೀಸ್ ಶರಣಪ್ರಕಾಶ್ ಕುಳಿತುಕೊಳ್ಳಿ, ರೇವಣ್ಣನವರೇ ಉತ್ತರದ ನಂತರ ನಿಮಗೆ ಅವಕಾಶ ಕೊಡುತ್ತೇನೆ. ಆಗ ಸ್ಪಷ್ಟೀಕರಣ ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಕೋಲಾರ ಜಿಲ್ಲೆಯ ಶಾಸಕರಿಗೆ ಐದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು: ನಾನು ಮತ್ತೆ ಅವಕಾಶ ಕೊಡುತ್ತೇನೆ. ಸ್ಪಷ್ಟವಾಗಿ ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಶಿಡ್ಲಘಟ್ಟ ತಾಲ್ಲೂಕಿನ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೇ, ನಾನು ನಿನಗೆ request ಮಾಡುತ್ತಿದ್ದೇನೆ. ಅವರದು ಏನಾದರೂ ಇದ್ದರೆ ಅವರು request ಮಾಡಲಿ. ನಿಮ್ಮದು ಏನಾದರೂ ಇದ್ದರೆ ಮಾತ್ರ ಹೇಳಿ? ಅವರ ಪರವಾಗಿ ನೀವು ಏಕೆ ಮಾತನಾಡುತ್ತೀರಿ? ಅಲ್ಲಿ ನಿಮ್ಮದು ಏನು special? ನಿಮಗೆ ಅವಕಾಶ ಕೊಟ್ಟಿದ್ದೇನೆ. ನೀವು ಅವರ ಪರವಾಗಿ ಏಕೆ ಮಾತನಾಡುತ್ತೀರಿ? please, ಬಾಲಕೃಷ್ಣರವರೇ ಕುಳಿತುಕೊಳ್ಳಿ. Please ದಯವಿಟ್ಟು ಕುಳಿತುಕೊಳ್ಳಿ, ಇದು ಸರಿಯಲ್ಲ. ಆಮೇಲೆ ಕೇಳಿ. ನಿಮಗೂ ಅವಕಾಶ ಕೊಡುತ್ತೇನೆ. I will not allow.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, clarification ಕೇಳುತ್ತೇನೆ. ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು: ಅವರೂ ಹೇಳುತ್ತಾರೆ. ಅವರೂ ಹೇಳಬಹುದು. concerned minister ಇದ್ದಾರೆ. ಅವರು ಉತ್ತರ ಕೊಡುತ್ತಾರೆ. ಬಾಲಕೃಷ್ಣರವರೇ, ನೀವು ಅರ್ಥ ಮಾಡಿಕೊಳ್ಳಿ, concerned Minister ಉತ್ತರ ಕೊಡುತ್ತಾರೆ. ಅವಶ್ಯಕತೆ ಬಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಏಕೆ ನೀವು insist ಮಾಡುತ್ತೀರಿ? ನಿಮಗೆ ಉತ್ತರ ಬೇಕಾಗಿಲ್ಲವೇ? You are not expecting answer. ನಿಮಗೆ ಉತ್ತರ ಬೇಕಾಗಿಲ್ಲ.

ಶ್ರೀ ವಿ.. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಏನು ಈ ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕಿನ ಜಂಗಮ ಕೋಟಿ ಹೋಬಳಿಯಲ್ಲಿ 959 ಎಕರೆ ಈ ಬಗ್ಗೆ ಆದೇಶವಾದ ಮೇಲೆ ಇಲ್ಲಿಯವರೆಗೆ 31 ಎಕರೆ ಖರೀದಿಯಾಗಿದೆ. ನಾವು 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ವಿಶೇಷವಾಗಿ ಎರಡು ವಿಚಾರಗಳನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಯಾವ ಉದ್ದೇಶಕ್ಕೋಸ್ಕರವಾಗಿ ಇದನ್ನು ಖರೀದಿ ಮಾಡಿದರು? ಎಲ್ಲವನ್ನೂ ಕೂಡ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಮತ್ತು ಅನೇಕ ಸದಸ್ಯರು, ಹಿರಿಯ ಸದಸ್ಯರಾಗಿರತಕ್ಕಂಥ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯ ಸಾಹೇಬರು, ಮಾನ್ಯ ರೇವಣ್ಣನವರು, ಮಾನ್ಯ ಬಾಲಕೃಷ್ಣರವರು ಹಾಗೂ ಅನೇಕರು ಮಾತನಾಡಿದ್ದಾರೆ. ಈ ಒಂದು ಯೋಜನೆಯನ್ನು ಕೈಗೆತ್ತಿಕೊಂಡಾಗ ಅಂದಿನ ಸಾಧ್ಯ ಅಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗಮನಕ್ಕೆ ಬಂದ ತಕ್ಷಣ ಈ ರೀತಿ ರೈತರಿಗೆ ಎಲ್ಲೋ ಒಂದು ಕಡೆ ಅನ್ಯಾಯವಾಗುತ್ತಿದೆ. ಇದು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ ತಕ್ಷಣವೇ ಈ ಒಂದು ಯೋಜನೆಯ ಪ್ರಕ್ರಿಯೆಯನ್ನು 31 ಎಕರೆ ಏನು ಪರ್ಚೇಸ್ ಮಾಡಿದ್ದಾರೆ, ಅಲ್ಲಿಗೆ ಅದನ್ನು ನಿಲ್ಲಿಸತಕ್ಕಂಥ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಯಾವತ್ತು?

(ಗೊಂದಲ)

ಅಧ್ಯಕ್ಷರು: answer ಮೊದಲು ಕೊಡಲಿ.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ಹೊತ್ತು ಕುಳಿತುಕೊಂಡು ಕೇಳಿ.

(ಗೊಂದಲ)

ಶ್ರೀ ವಿ.ಸೋಮಣ್ಣ: ಮಾನ್ಯ ಬಾಲಕೃಷ್ಣರವರೇ ನೀವು ಹೇಳಿದ್ದನ್ನೆಲ್ಲಾ ನಾವು ಕೇಳಲಿಲ್ಲವೇ? ಸನ್ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಸಾಮಾನ್ಯ ಜನರಿಗೆ ವಸತಿಯನ್ನು ಕೊಡತಕ್ಕಂಥ ಉದ್ದೇಶದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಕರ್ನಾಟಕ ಹೌಸಿಂಗ್ ಬೋರ್ಡ್ ಒಂದು ಸ್ವಾಯತ್ತ ಸಂಸ್ಥೆ. ಈ ಸ್ವಾಯತ್ತ ಸಂಸ್ಥೆಗೆ ಒಂದು ಸಾರಿ ಸರ್ಕಾರದ ಅನುಮತಿಯನ್ನು ಪಡೆದ ಮೇಲೆ Financial ಆಗಿ Self-assessment ಅವರೇ ಮಾಡಿಕೊಳ್ಳುವುದರಿಂದ Self-finance scheme ಆಗಿರುವುದರಿಂದ ಇದನ್ನು ಮಾಡಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ವಿವರವಾಗಿ ಕೆಲವಾರು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಸಭಾ ನಾಯಕರು ಕೂಡ ಅಷ್ಟೇ ತೀಕ್ಷ್ಣವಾಗಿ ಸಾಮಾನ್ಯ ಜನರ ಹಣ ಯಾವುದೇ ಕಾರಣಕ್ಕೂ ಯಾರದ್ದೋ ಕಿಸೆಗೆ ಹೋಗಬಾರದು ಎನ್ನುವ ಉದ್ದೇಶದಿಂದ ಇವತ್ತು ಈ ಒಂದು ತೀರ್ಮಾನ ಮಾಡುವುದರ ಜೊತೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ಮಾಡಿರತಕ್ಕಂಥ ವಿಚಾರಗಳಲ್ಲಿ ಏನು ಇವತ್ತು ಈಗಾಗಲೇ ಇದರ ಜೊತೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಾಡಿದ್ದಾರೆ. KIADB ನವರು 55 ಲಕ್ಷ ರೂಪಾಯಿಗಳನ್ನು ಮಾಡಿದ್ದಾರೆ. ಅದಾದಮೇಲೆ ಅದೇ KIADBನವರು ರಾಜ್ಯಪಾಲರ ಆಡಳಿತದಲ್ಲಿ ಪಕ್ಕದ ಐದು ಕಿಲೋಮೀಟರ್ ದೂರದಲ್ಲಿ 70 ಲಕ್ಷ ರೂಪಾಯಿಗಳನ್ನು ಮಾಡಿದ್ದಾರೆ. ಹಾಗೆಂದು ಹೇಳಿ ನಾನು ಒಂದು ಮಾತನ್ನು ಹೇಳುತ್ತೇನೆ. ರೈತರಿಗೆ directಆಗಿ ಹಣ ಕೊಡತಕ್ಕಂಥಾದ್ದರಲ್ಲಿ ನಾನೂ ಕೂಡ ಒಬ್ಬ ಹಾಗೂ ಈ ಸರ್ಕಾರ ಕೂಡ ಒಂದು. ಯಾವುದೇ ಹಣ ಬ್ರೋಕರ್‌ಗಳು ಏನು ಇದ್ದಾರೆ, ಏಜೆಂಟ್‌ಗಳು ಏನು ಇದ್ದಾರೆ, GPA holdersಗೆ ಹೋಗಬಾರದು ಎನ್ನುವುದು ಈ ಸರ್ಕಾರದ ದೃಢ ನಿರ್ಧಾರ. ಈ ಅಚಲವಾದ ನಿರ್ಧಾರವನ್ನು ಚಾಚೂ ತಪ್ಪದೇ ತರುವುದಕ್ಕೆ ನಾವು ಬದ್ಧರಾಗಿದ್ದೇವೆ. ಮತ್ತೊಂದು ವಿಚಾರವೇನೆಂದರೆ, ಏನು 959 ಎಕರೆ ಇದೆ, ಇದರಲ್ಲಿ ನಾವು ಏನು 31 ಎಕರೆಯನ್ನು ತೆಗೆದುಕೊಂಡಿದ್ದೇವೆ, ಇದರಲ್ಲಿ ಕೊಟ್ಟರತಕ್ಕಂಥ ಹಣ ರೈತರಿಗೆ ಖರೀದಿ ಆಗಲಿಲ್ಲವೆಂದರೆ, ರೈತರಿಗೆ ಅನ್ಯಾಯವಾಗಿದೆ ಎಂದರೆ, ಅದನ್ನೂ ಕೂಡ ಈ ಸರ್ಕಾರ, ಇದರಲ್ಲಿ ಯಾರು ಇದ್ದಾರೆ ಅದರ ಬಗ್ಗೆ enquiry ಕೂಡ ಮಾಡುವುದಕ್ಕೆ ತಯಾರಿದ್ದೇವೆ. ಅದರ ಜೊತೆಯಲ್ಲಿ Karnataka Housing Board ತನ್ನದೇ ಆದಂಥ ಈ ರೀತಿಯಾಗಿ ಇರತಕ್ಕಂಥ ಕೆಲವು ಸ್ಕೀಂಗಳನ್ನು ಮಾಡುವ ಉದ್ದೇಶದಲ್ಲಿ, ಕೆಲವು ಯೋಜನೆಗಳನ್ನು ಜಾರಿಗೆ ತರುತ್ತದೆ. ಇದು International airportಗೆ ಕೇವಲ 8–10 ಕಿಲೋಮೀಟರ್ ದೂರದಲ್ಲಿದೆ. ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಇದ್ದರೂ ಕೂಡ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರದಲ್ಲಿದೆ. ಇನ್ನೊಂದು ಏನಾಗಿದೆ ಎಂದರೆ, ಇವತ್ತು ಅಲ್ಲಿನ valuation ಎರಡು ಲಕ್ಷ– ಮೂರು ಲಕ್ಷ ರೂಪಾಯಿಗಳು ಇರುವುದು Guidelines value ಇದ್ದರೂ ಕೂಡ ರೈತರಿಗೆ 43 ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ ಎಂದು ಏನು ಚರ್ಚೆಯಾಗಿದೆ. ಅಲ್ಲಿ ರೈತರು

ಏನು ಇದ್ದಾರೆ, ನಮಗೆ 55 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಮಾತ್ರ ನಾವು ಇದನ್ನು ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದಾರೆ. ಇಲ್ಲದಿದ್ದರೆ ಇಲ್ಲ.......

(ಗೊಂದಲ)

ಅಧ್ಯಕ್ಷರು: ಸ್ಪಷ್ಟೀಕರಣ ಕೇಳಿ. ನಿಮಗೆ ಉತ್ತರ ಬೇಕಾಗಿಲ್ಲ. ಸ್ಪಷ್ಟೀಕರಣ ಕೇಳಿ. ನಿಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ, ಅವರು ಏನು ಉತ್ತರ ಕೊಡುತ್ತಾರೆ ಕೊಡಲಿ. ಇಲ್ಲದೇ ಹೋದರೆ ಗೊತ್ತಿಲ್ಲ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು: ಸ್ಪಷ್ಟೀಕರಣ ಕೇಳುವಾಗ ನಿಮಗೆ ಅವಕಾಶ ಕೊಡುತ್ತೇನೆ. ಒಂದು ಹತ್ತು ನಿಮಿಷ wait ಮಾಡಿ. ಇಲ್ಲವಾದರೆ ನೀವೇ ಉತ್ತರ ಬರೆದು ಅವರಿಗೆ ಕೊಟ್ಟುಬಿಡಿ.

(ಗೊಂದಲ)

ಅಧ್ಯಕ್ಷರು: ಕೃಷ್ಣ ಬೈರೇಗೌಡರೇ ಕುಳಿತುಕೊಳ್ಳಿ. ಅವರು ಏನು ಉತ್ತರ ಕೊಡುತ್ತಾರೆ ಕೊಡಲಿ. ಆಮೇಲೆ ನೀವು ಸ್ಪಷ್ಟೀಕರಣವನ್ನು ಕೇಳಿ. ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತೇನೆ. ಮಾನ್ಯ ಕೃಷ್ಣ ಬೈರೇಗೌಡರೇ,....

(ಗೊಂದಲ)

ಅಧ್ಯಕ್ಷರು: ಆಮೇಲೆ ತಾವು ಹೇಳಿ. ರೆಕಾರ್ಡ್ ಸರಿಯಿಲ್ಲವೆಂದರೆ ಹೇಳಿ.

(ಗೊಂದಲ)

ಅಧ್ಯಕ್ಷರು: ನೀವು ಸ್ಪಷ್ಟೀಕರಣವನ್ನು ಕೇಳುವಾಗ ಹೇಳಿ.

(ಗೊಂದಲ)

ಅಧ್ಯಕ್ಷರು: ನೀವು ಸ್ಪಷ್ಟೀಕರಣದಲ್ಲಿ ಹೇಳಿ. ಈ ರೀತಿ ನೀವು ಮಾಡುವುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೇ ನೀವು ಚರ್ಚೆ ಮಾಡುವಾಗ ಹೇಳಿದ್ದೀರಿ. ತಪ್ಪು ಇದ್ದರೆ ತಪ್ಪು ಎಂದು ಹೇಳಿ. ಅವರು ಉತ್ತರ ಹೇಳಲಿ. complete ಮಾಡಲಿ. I don't understand. ಈ ರೀತಿ ತಾವು ಮಾಡುತ್ತಿರುವುದನ್ನು ನೋಡಿದರೆ ನನಗೆ ಅರ್ಥವಾಗುತ್ತಿಲ್ಲ. ಅವರು ಉತ್ತರ ಕೊಡಲಿ. ನಂತರ ಕೇಳಿ.

ಶ್ರೀ ಆರ್. ಅಶೋಕ್: ಇವತ್ತು ಏನಾದರೂ ಇದ್ದರೆ ಹೇಳುತ್ತಾರೆ. ಹೇಳಿ ಆದಮೇಲೆ ನೀವು clarification ಕೇಳಿ. ಮಧ್ಯೆ ಮಧ್ಯೆ ಮಾತನಾಡುವುದು ಏನಿದೆ?

ಅಧ್ಯಕ್ಷರು: ಅಶೋಕ್ please, please......

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರ ಇವತ್ತು ಹೌಸಿಂಗ್ ಬೋರ್ಡ್‌ಗೆ ಸೂಚನೆಯನ್ನು ಕೊಡುತ್ತಿದ್ದೇವೆ. ಒಂದು ಎಕರೆ ಜಮೀನನ್ನು ಕೂಡ, ನಾವು ಇನ್ನೂ ಇರತಕ್ಕಂಥ 31 ಎಕರೆಯನ್ನು ಬಿಟ್ಟರೆ, ಈ 959 ಎಕರೆಯಲ್ಲಿ ಒಂದು ಎಕರೆಯನ್ನು ಕೂಡ ಖರೀದಿ ಮಾಡದ ಹಾಗೆ ಸೂಚನೆಗಳನ್ನು ತಕ್ಷಣವೇ ಜಾರಿಗೆ

ಬರುವಂತೆ ನಾವು ಆದೇಶವನ್ನು ಮಾಡುತ್ತೇವೆ. 900 ಚಿಲ್ಲರೆ ಎಕರೆಗೂ ಕೂಡ 31 ಎಕರೆ ಹೊರತುಪಡಿಸಿ ಇನ್ನು ಉಳಿದಿರತಕ್ಕಂಥ ಜಾಗವನ್ನು...

ಶ್ರೀ ಆರ್.ರೋಷನ್ ಬೇಗ್: ಯಾವಾಗ ಆದೇಶ ಮಾಡುತ್ತೀರಿ?

ಶ್ರೀ ವಿ.ಸೋಮಣ್ಣ: ಇನ್ನು ಉಳಿದಿರತಕ್ಕಂಥ ಜಾಗವನ್ನು ಈ ನಿಮಿಷದಲ್ಲೇ ಕೂಡ ಅದು ಜಾರಿಗೆ ಬರುವಂತೆ ಸೂಚನೆ ಕೊಡುತ್ತೇವೆ. ಅದರ ಜೊತಿಯಲ್ಲಿ ಈಗಾಗಲೇ ಏನು ಮಾನ್ಯ ಸದಸ್ಯರು ಹೇಳಿದರು, 20 ಲಕ್ಷಕ್ಕೆ, 30 ಲಕ್ಷ ರೂಪಾಯಿಗಳಿಗೆ ಸಿಗುತ್ತದೆ ಎನ್ನುವ ಮಾತನ್ನು ಸನ್ಮಾನ್ಯ ರೇವಣ್ಣನವರು ಹೇಳಿದ್ದಾರೆ. ರೇವಣ್ಣನವರು 30 ಲಕ್ಷ ರೂಪಾಯಿಗಳಿಗೆ ಕೊಡಿಸುವುದಾದರೆ, ನಾವು ಏನು ಇವತ್ತು 15 ಕೋಟಿ ರೂಪಾಯಿಗಳನ್ನು ಸರ್ಕಾರ ಇವತ್ತು ವ್ಯಯ ಮಾಡಿದೆ, ಜಮೀನು ಖರೀದಿಗೆ ಏನು ವ್ಯಯ ಮಾಡಿದೆ, 30 ಲಕ್ಷ ರೂಪಾಯಿಗಳ ಹಾಗೆ ಜಮೀನನ್ನು ಈ ಜಾಗದಲ್ಲಿ ನಮಗೆ ಕೊಡಿಸಿದರೆ ಒಳ್ಳೆಯದು. ಉಳಿದಿರತಕ್ಕಂಥ ಹಣವನ್ನು ವಸೂಲು ಮಾಡಲು ಅಧಿಕಾರಿಗಳು ಮತ್ತು ಯಾರು ಏಜೆಂಟರು ಇದ್ದಾರೆ, ಅವರ ಮೇಲೆ ಕಾನೂನು ಪ್ರಕಾರ ಕ್ರಮಕೈಗೊಳ್ಳುವುದಕ್ಕೆ ಈ ಸರ್ಕಾರ ಹಿಂದೆ-ಮುಂದೆ ಮೋಡುವುದಿಲ್ಲ. ಈ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಈ ಸರ್ಕಾರ ಪಾರದರ್ಶಕ ಸರ್ಕಾರ.

(ಗೊಂದಲ)

ಶ್ರೀ ರಮಾನಾಥ್ ರೈ : ಯಾರು ಏಜೆಂಟರು ಎಂದು ಲಿಸ್ಟ್ ಔಟ್ ಮಾಡಿ. ಏಜೆಂಟರು ಯಾರು?

(ಗೊಂದಲ)

ಶ್ರೀ ವಿ ಸೋಮಣ್ಣ: ಹೌಸಿಂಗ್ ಬೋರ್ಡ್ ನಿಂತ ನೀರಲ್ಲ. ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿತಕ್ಕಂಥ, ಸಂಸ್ಥೆ ಕೆಲವಾರು ಬದಲಾವಣೆಗಳನ್ನು ಮಾಡತಕ್ಕಂಥಾದ್ದು. ಸನ್ಮಾನ್ಯ ರೇವಣ್ಣನವರು ವಸತಿ ಸಚಿವರಾಗಿದ್ದರು. ವಸತಿ ಸಚಿವರಾಗಿ ಸಾಕಷ್ಟು ಬಡಾವಣೆಗಳನ್ನು ಮಾಡಿದ್ದಾರೆ, ಹಾಸನದಲ್ಲಿ ಬಡಾವಣೆ ಮಾಡಿದ್ದಾರೆ, ಬೇರೆ ಬೇರೆ ಕಡೆ ಬಡಾವಣೆ ಮಾಡಿದ್ದಾರೆ. ಎಲ್ಲೋ ಒಂದು ಕಡೆ ಈ ಪಾರದರ್ಶಕತೆ ಇರುವುದರಿಂದ ಸರ್ಕಾರ ತೆಗೆದುಕೊಂಡಿರುವ ತೀರ್ಮಾನವನ್ನು ನಾವು ಹೇಳಿದ್ದೇವೆ. ಈ ಒಂದು ಯೋಜನೆ ಏನಿದೆ, 959 ಎಕರೆ ಜಾಗ, 31 ಎಕರೆಯನ್ನು ಏನು purchase ಮಾಡಿದ್ದೇವೆ, ಇನ್ನು ಒಂದು ಎಕರೆಯನ್ನೂ ಕೂಡ purchase ಮಾಡುವುದಿಲ್ಲ. ಮಾನ್ಯ ರೇವಣ್ಣನವರು ಹೇಳಿದ್ದಾರೆ, ಸ್ಥಳಕ್ಕೆ ನಾವೂ ಹೋಗೋಣ. 30 ಲಕ್ಷ ರೂಪಾಯಿಯ ಹಾಗೆ ಕೊಡಿಸುವುದಾದರೆ, ನಾವು ಖರೀದಿ ಮಾಡುತ್ತೇವೆ. ಬಾಕಿ ಹಣ ಬಂದಾಗ ಕಾನೂನು ಪ್ರಕಾರ ತೆಗೆದುಕೊಳ್ಳುತ್ತೇವೆ. ಅದನ್ನು ಬಿಟ್ಟು ಎಲ್ಲೋ ಒಂದು ಕಡೆ...

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಅವರು ಉತ್ತರವನ್ನು complete ಮಾಡಲಿ, ಆಮೇಲೆ ಕೇಳುವಿರಂತೆ ನಿಮಗೆ ಯಾರು ಬೇಡ ಎಂದು ಹೇಳುತ್ತಾರೆ? ಉತ್ತರವನ್ನು ಅವರು ಹೇಳಲಿ, ಆಮೇಲೆ ನೀವು ಸ್ಪಷ್ಟೀಕರಣ ಕೇಳುವಿರಂತೆ, wait for a moment.

ಶ್ರೀ ವಿ.ಸೋಮಣ್ಣ: ಸನ್ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ಹೌಸಿಂಗ್ ಬೋರ್ಡ್, ನಿನ್ನೆ ಮೊನ್ನೆ ಬಂದಿದ್ದು ಅಲ್ಲ. ಈ ಹೌಸಿಂಗ್ ಬೋರ್ಡ್ ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂಥಾದ್ದು, ಸುಮಾರು ಜನ ಗೌರವಾನ್ವಿತ ಸದಸ್ಯರು ಅದಕ್ಕೆ ಮಂತ್ರಿಗಳಾಗಿದ್ದಾರೆ, ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ಒಂದು ಸಣ್ಣ ಲೋಪವಾಗಿದ್ದರೂ ಕೂಡ ನಮ್ಮ ಸರ್ಕಾರದಲ್ಲಿ ಅದನ್ನು ಕಾನೂನು ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಈ ಯೋಜನೆಯನ್ನು ಸ್ಥಗಿತಗೊಳಿಸುತ್ತೇವೆ. 30 ಲಕ್ಷ ರೂಪಾಯಿ, 40 ಲಕ್ಷ ರೂಪಾಯಿ, ಜನರ ಹತ್ತಿರ ಹೋಗುತ್ತೇವೆ. ರೈತರ ಹತ್ತಿರ ಕೇಳುತ್ತೇವೆ. ರೈತರಿಗೆ direct ಆಗಿ ಏನು ಹಣ ಕೊಡಬೇಕು, ಯಾವ ರೀತಿಯಾಗಿ ಮಾಡಬೇಕೆನ್ನುವುದನ್ನು ತೀರ್ಮಾನ ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಚರ್ಚೆಗೆ ಸಿದ್ಧರಿದ್ದೇವೆ. ಯಾರೂ ಸಹಾ ಇದಕ್ಕೆ ಹಿಂದೆ-ಮುಂದೆ ನೋಡುವ ಪ್ರಶ್ನೆ ಇಲ್ಲ. ಸ್ವಲ್ಪ wait ಮಾಡಿ.

ಶ್ರೀ ಡಿ.ಕೆ.ಶಿವಕುಮಾರ್ (ಕನಕಪುರ): ಎಲ್ಲರಿಗೂ ಏಕೆ ಆತುರವೆಂದರೆ, ನೀವು ಹೌದು ಇದು ತಪ್ಪಾಯಿತು, ತಕ್ಷಣ ನಾವು ನಿಲ್ಲಿಸಿದ್ದೇವೆಂದು ಹೇಳಿದಿರಿ. ನಮ್ಮ ಸ್ನೇಹಿತರು ಹೊಸದಾಗಿ ಮಂತ್ರಿಗಳಾಗಿದ್ದಾರೆ, ಅವರೂ ಕೂಡ ಅವರ ಒಂದು ವ್ಯಕ್ತಿತ್ವವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ನನ್ನದು ತಪ್ಪಾಗಿದೆ, ಆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎನ್ನುವ ವಿಚಾರವನ್ನು ಹೇಳಬೇಕಾಗಿತ್ತು. ಆದರೆ, ಆಗಿರುವಂಥ ತಪ್ಪನ್ನು ಒಪ್ಪಿಕೊಂಡು ಇಂಥವರನ್ನು ನಾನು suspend ಮಾಡಿದ್ದೇನೆ. ಇಂಥವರ ಮೇಲೆ ಇಂಥ ಶಿಕ್ಷೆ ಮಾಡಿದ್ದೇನೆ, ಎಂದು ಹೇಳುವುದನ್ನು ಬಿಟ್ಟು, ಅದನ್ನು ಸಮರ್ಥಿಸಿಕೊಳ್ಳುವ ಹಾಗೆ ಮಾತನಾಡಿದರೆ, ಏನರ್ಥ? ತಪ್ಪು ಆಗಿದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದಾರೆ. ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಾನು ಇವತ್ತು ನಡೆದಿರುವಂಥ ಚರ್ಚೆಯನ್ನು ಸ್ವಾಗತ ಮಾಡುತ್ತೇನೆ. ಬಹಳ ಗಂಭೀರವಾದ ಚರ್ಚೆಯಾಗಿದೆ. ಈ ರಾಜ್ಯದ ರೈತರ ಹಿತದೃಷ್ಟಿಯಿಂದ, ರೈತರಿಂದ ಯಾವುದೇ ಇಲಾಖೆ ಅಭಿವೃದ್ಧಿ ಕಾರ್ಯಕ್ಕೆ ಜಮೀನನ್ನು ಖರೀದಿ ಮಾಡಿದಾಗ, ಆ ರೈತರಿಗೆ ಹಣ ಸಲ್ಲಬೇಕು. ಮಾರುಕಟ್ಟೆ ಬೆಲೆಗೆ ಕೊಂಡುಕೊಳ್ಳಬೇಕು, ವ್ಯವಹಾರಗಳು ಪಾರದರ್ಶಕವಾಗಿರಬೇಕು, ಮಧ್ಯವರ್ತಿಗಳ ಪಾಲಿನ ಭಾಗ ಅದರಲ್ಲಿ ಇರಬಾರದು,

ಇದರ ಬಗ್ಗೆ ನಾನು ಸಂಪೂರ್ಣ ಸ್ವಾಗತ ಮಾಡುತ್ತೇನೆ. ಈಗಾಗಲೇ ಸಚಿವರು ಹೇಳಿದ್ದಾರೆ. ಉತ್ತರವನ್ನು ಕೊಟ್ಟಿದ್ದಾರೆ. ನೀವು ಚರ್ಚೆ ಮಾಡಿದಂತಹ ಧಾಟಿಯನ್ನು ನೋಡಿದಾಗ, ಅತ್ಯಂತ ಗೌರವದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ವಾಸ್ತವಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಮಾತನಾಡಬಾರದು. Airport ಸಮೀಪ, airport ಆದ ಮೇಲೆ, ಸುತ್ತಮುತ್ತ ಈ 2–3 ವರ್ಷಕ್ಕೆ ಹೋಲಿಕೆ ಮಾಡ್ಡಿದರೆ, 10 ಪಟ್ಟು ಜಮೀನಿನ ಬೆಲೆಯಲ್ಲಿ ಜಾಸ್ತಿಯಾಗಿರುವುದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ಸಂಗತಿ. ಈ recession ಆದ ಮೇಲೆ, investors ಕಡಿಮೆ ಆದ ಮೇಲೆ, ಖರೀದಿ ಮಾಡುವವರು ಕಡಿಮೆಯಾಗಿರಬಹುದು. ಆದರೆ, ರೈತರು ಯಾರು ಜಮೀನು ಕೊಡುವುದಕ್ಕೆ ಸಿದ್ಧರಿಲ್ಲ. ಇದು ನಿಮಗೂ, ನಮಗೂ ಗೊತ್ತಿರತಕ್ಕಂಥ ಸಂಗತಿ. ಇನ್ನು ಈ ಕೆ.ಹೆಚ್.ಬಿ. ಯಿಂದ ಏನು ಜಮೀನನ್ನು ಖರೀದಿ ಮಾಡಿದ್ದಾರೆ, ಈವರೆಗೆ ಖರೀದಿಯಾಗಿರುವಂಥಾದ್ದು, 30 ಎಕರೆ, 31ಗುಂಟೆ ಮಾತ್ರ, 15 ಕೋಟಿ 39 ಲಕ್ಷ ರೂಪಾಯಿ ಪಾವತಿಯಾಗಿದೆ. ಈಗಾಗಲೇ ನಾನು ತಿಳಿಸಿದಂತೆ, ಕರ್ನಾಟಕ ಗೃಹ ಮಂಡಳಿ ಖರೀದಿ ಮಾಡುವಂತಹ ಜಮೀನಿನ ವಿಷಯದಲ್ಲಿ ಇದುವರೆಗೆ ಹಣಕಾಸಿನ ಇಲಾಖೆಗೂ ಇದು ಬರಬೇಕಾಗಿಲ್ಲ. ಸಚಿವ ಸಂಪುಟದ ಗಮನಕ್ಕೂ ಇದನ್ನು ತರುವ ಪ್ರಶ್ನೆ ಉದ್ಭವವಾಗುವುದಿಲ್ಲ. ಈ ಯೋಜನೆಗಳಿಗೆ ಸರ್ಕಾರ ಯಾವುದೇ ಧನಸಹಾಯ ಮಾಡುತ್ತಿಲ್ಲ, ಮಾಡುವುದಿಲ್ಲ. ಅದು self-finance ನಿಂದ ಮಾಡಿಕೊಂಡು ಮುಂದೆ ಹೋಗುತ್ತಿದ್ದೇವೆ. ಈಗಾಗಲೇ ನಾವು ತಿಳಿಸಿದಂತೆ, ಮಾರ್ಚ್ 2009ರ ನಂತರ, ಈ 30 ಎಕರೆ, 31 ಗುಂಟೆ ಬಿಟ್ಟು ಯಾವುದೇ ಖರೀದಿಯನ್ನು ಮಾಡಿಲ್ಲ. ನಾನು ಈ ಮನೆಗೆ ಇದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಾನೇ ಮಾರ್ಚ್‌ನಲ್ಲಿ ಈ ಒಂದು ಖರೀದಿ ಆಗುತ್ತಿರುವುದು ಗೊತ್ತಾದ ಮೇಲೆ, ಯಾವುದೇ ಕಾರಣಕ್ಕೂ ಖರೀದಿಯನ್ನು ಮುಂದುವರೆಸಬಾರದು ಎಂದು ಹೇಳಿ ಸೂಚನೆ ಕೊಟ್ಟು, ಹೊಸದಾಗಿ ಖರೀದಿ ಮಾಡುವುದಕ್ಕೆ ನಾನು ಬಿಟ್ಟಿಲ್ಲ. ಈಗ ತಾನೇ ಮಾನ್ಯ ಸಿದ್ಧರಾಮಯ್ಯನವರು, ಪ್ರತಿಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಮೈಸೂರಿನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ, ಬೇರೆ ಕಡೆಯೂ ಈ ತರಹ ದುಬಾರಿ ಬೆಲೆಗೆ ಖರೀದಿಯಾಗುತ್ತಿದೆ ಎನ್ನುವ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಸಮಗ್ರವಾಗಿ ಕಳೆದ 5 ವರ್ಷದಿಂದ, ಕರ್ನಾಟಕ ಗೃಹ ಮಂಡಳಿ ಏನೇನು ಖರೀದಿ ಮಾಡಿದೆ, ಆ ಜಮೀನಿನ ಬಗ್ಗೆ Additional Chief Secretary ಅವರಿಂದ ತನಿಖೆ ಮಾಡಿಸುತ್ತೇನೆ. ಯಾರ್ಯಾರು ಈ ತನಿಖೆಯಿಂದ ತಪ್ಪು ಮಾಡಿದ್ದಾರೆ, ಅಂತಹ ಅಧಿಕಾರಿಗಳ ಮೇಲೆ ತೀವ್ರತರವಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಯಾವುದೇ ಕಾರಣಕ್ಕೂ ಹಿಂದೆ ಮುಂದೆ ನೋಡುವ ಪ್ರಶ್ನೆ ಇಲ್ಲ.

ಸನ್ಮಾನ್ಯ ಅಧ್ಯಕ್ಷರೆ, ಸೂರ್ಯನಗರ ಬಡಾವಣೆಯ ಬಗ್ಗೆ ಪ್ರಸ್ತಾಪ ಮಾಡಿದರು. 2 ವರ್ಷದ ಹಿಂದೆ 35 ಲಕ್ಷ ಎಕರೆಗೆ ಜಮೀನನ್ನು ಕೊಂಡುಕೊಂಡಿದ್ದಾರೆ. ಇದು 2 ವರ್ಷದ ಹಿಂದೆ. ಆಗಲೂ ಸಹ ಸಚಿವ ಮಟ್ಟದಲ್ಲಿಯೇ ತೀರ್ಮಾನವಾಗಿತ್ತು.

ಶ್ರೀ ಸಿದ್ದರಾಮಯ್ಯ: ಆಗ ಸಚಿವ ಸಂಪುಟಕ್ಕೆ ಬಂದಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ. ಸ್ಕೀಂ ಬಗ್ಗೆ ಬರುತ್ತದೆ. ಸ್ವಲ್ಪ ಕೇಳಿ, ದಾಖಲೆಗಳಿವೆ, ಸರ್ಕಾರ ಬರುತ್ತದೆ ಹೋಗುತ್ತದೆ. ದಾಖಲೆಗಳು ಎಲ್ಲಿ ಹೋಗುತ್ತವೆ?

ಶ್ರೀ ಸಿದ್ದರಾಮಯ್ಯ: ನಾನೂ ಅದನ್ನೇ ಹೇಳಿದ್ದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲಾಖೆಯಿಂದ ಖರೀದಿ ಮಾಡಿದಾಗ, ಬೋರ್ಡ್ ತೀರ್ಮಾನದ್ದು ಯಾವುದೂ ಸಚಿವ ಸಂಪುಟಕ್ಕೆ ಬರುವುದಿಲ್ಲ, Finance ಮುಂದೆ ಬರುವುದಿಲ್ಲ, ಸ್ಕೀಂ ಯಾವುದಾಗಬೇಕೆಂದು approval ಗೆ ಮಾತ್ರ ಸಚಿವ ಸಂಪುಟದ ಮುಂದೆ ಬರುತ್ತಾರೆ. ಬೇಕಾದರೆ, verify ಮಾಡಿ ತಿಳಿದುಕೊಳ್ಳಿ. ನನಗೆ ಗೊತ್ತಿರುವಂಥ ಮಾಹಿತಿಯನ್ನು ನಿಮಗೆ ನಾನು ತಿಳಿಸುತ್ತಿದ್ದೇನೆ. ಅದರಲ್ಲೇನೂ ಮುಚ್ಚುಮರೆ ಮಾಡುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಈ ಹಿಂದೆ ನಮ್ಮ Governor period ನಲ್ಲಿ ನಾನು ಆಗಲೇ ಹೇಳಿದಂತೆ, ದೇವನಹಳ್ಳಿ ತಾಲ್ಲೂಕಿನ ಜೊನ್ನೆನಹಳ್ಳಿ, ಬಾಲತಿಮ್ಮನಹಳ್ಳಿ, ಕವಡಾದಾಸನಹಳ್ಳಿ, ಗೊಟ್ಟರಮಾರನಹಳ್ಳಿ ಗ್ರಾಮದ ಜಮೀನಿಗೆ KIADB ಎಕರೆಗೆ 55 ಲಕ್ಷ ರೂಪಾಯಿ ಪರಿಹಾರ ರೈತರಿಗೆ ಕೊಟ್ಟು, ನಿಗದಿ ಮಾಡಿ, ಖರೀದಿ ಮಾಡಿದೆ. 25.3.2008ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಅಲ್ಲಿಯ ಸಲಹಾ ಸಮಿತಿ ಶಿಫಾರಸ್ಸು ಮಾಡಿದಂತಹ ಆಧಾರದ ಮೇಲೆ ಈ KIADB ಅಭಿವೃದ್ಧಿಪಡಿಸುವುದಕ್ಕೋಸ್ಕರ, ಈ ಕೈಗಾರಿಕಾ ಎಸ್ಟೇಟ್‌ಗೆ ಇದನ್ನು ಖರೀದಿ ಮಾಡಿದ್ದಾರೆ ಆಗ ರಾಷ್ಟ್ರಪತಿ ಆಡಳಿತ ಇತ್ತು. ಮಾನ್ಯ ಸದಸ್ಯರಿಗೆ ಗೊತ್ತಿರಲಿ, ಈಗ ಕೆ.ಹೆಚ್.ಬಿ ಖರೀದಿ ಮಾಡಿದಂಥ ಜಮೀನಿಗೂ ಅಲ್ಲಿಗೂ 5 ಕಿ.ಮೀ ಮಾತ್ರ ದೂರ ಇದೆ. ಇವತ್ತು ಏನು ಇಲ್ಲಿ ಚರ್ಚೆಯಾಗುತ್ತಿದೆ, 50 ಲಕ್ಷ ರೂಪಾಯಿಂದ ಖರೀದಿ ಮಾಡಿರುವಂಥಾದ್ದು, ಬಹಳ ದುಬಾರಿಯಾಗಿ ಖರೀದಿ ಮಾಡಿದ್ದಾರೆಂದು ನೀವೇನು ಹೇಳುತ್ತಿದ್ದೀರಿ, ನಾನು ಯಾವುದೇ ಕಾರಣಕ್ಕೂ ಈ ಬಗ್ಗೆ ಮಾಹಿತಿ ಇಲ್ಲದೇ ಈ ಸದನದ ಮುಂದೆ ಏನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅಲ್ಲಿ ವಾಸ್ತವಿಕ ಮಾರುಕಟ್ಟೆಯ ಬೆಲೆ ಏನಿದೆ, 2008ರಲ್ಲಿ 55 ಲಕ್ಷ ರೂ.ಗಳನ್ನು ಕೊಟ್ಟು ಖರೀದಿಸಿರುತ್ತಾರೆ. ಅಕ್ಕಪಕ್ಕದ ಜಮೀನಿನ ರೈತರು ಅದಕ್ಕೆ ಒಂದು ರೂ. ಕಡಿಮೆಯಾದರೂ ಕೊಡುವುದಿಲ್ಲ ಎಂದು ಹಠ ಮಾಡುವುದು ನಿಜ. ಅದು ವಾಸ್ತಾವಿಕ ಸಂಗತಿ. ನಿಮಗೆ ಗೊತ್ತಿದೆ. ಈ ರಾಜ್ಯದ ಯಾವುದೇ ಮೂಲೆಯಲ್ಲಿ ನಾನು ಸ್ವಾಗತಿಸುತ್ತೇನೆ. ರೈತರು ತಾಲ್ಲೂಕು ಪಕ್ಕದಲ್ಲಿ 50 ಸಾವಿರ, 1 ಲಕ್ಷ ರೂ. ಬೆಲೆ

ಬಾಳುತ್ತಿದ್ದ ಜಮೀನು ಇವತ್ತು 5 ಲಕ್ಷ ರೂಗಳಿಗೆ ಸಿಗುವುದಿಲ್ಲ. ರೈತರಿಗೆ ಆ ದುಡ್ಡು ಸಿಗುತ್ತಿದೆ, ಸಿಗಬೇಕು. 10 ಲಕ್ಷ ಸಿಗಬೇಕು, 25 ಲಕ್ಷ ಸಿಗಬೇಕು. ಇವತ್ತು ಇಲ್ಲಿ ಏನೋ ಬಹಳ ಅನ್ಯಾಯವಾಗಿದೆ, 50 ಲಕ್ಷ ಕೊಟ್ಟು, 5 ಲಕ್ಷಕ್ಕೆ, 10 ಲಕ್ಷಕ್ಕೆ ಜಮೀನು ಸಿಗುತ್ತಿತ್ತು, ಇಷ್ಟು ದುಬಾರಿಗೆ ಮಾರಾಟ ಮಾಡಿದ್ದಾರೆಂದರೆ, ಯಾರಿಗೆ influence ಇದೆ, ನೀವೇ ಹೋಗಿ ಅಲ್ಲಿ ಸಲಹೆ ಕೊಟ್ಟು ನಮ್ಮ KHB ಮತ್ತು KIADB ಅಭಿವೃದ್ಧಿಗೆ ಯಡಿಯೂರಪ್ಪನವರೆ, ಇಷ್ಟು ಕಡಿಮೆ ಬೆಲೆಗೆ ನೇರವಾಗಿ ರೈತರಿಗೆ ಕೊಡಿಸುತ್ತೇವೆ ಎಂದರೆ, ನಮಗೂ ಇನ್ನು ಸಾವಿರಾರು ಎಕರೆಗಳಷ್ಟು ಜಮೀನು ಬೇಕಾಗಿದೆ.. ತಾವು ಈ ನಿಟ್ಟಿನಲ್ಲಿ ಸಲಹೆ ಕೊಟ್ಟರೆ ನೀವು ಎಲ್ಲೆಲ್ಲಿ ಖರೀದಿಸಬೇಕೆಂದು ಹೇಳುತ್ತೀರೋ, ಅಲ್ಲಿ ಅಭಿವೃದ್ಧಿಗೆ ಖರೀದಿಸುವುದಕ್ಕೆ ನಾವು ಸಿದ್ಧರಿದ್ದೇವೆ, ನಿಮ್ಮನ್ನು ಕರೆದು ನಿಮ್ಮ ಅಭಿಪ್ರಾಯಗಳನ್ನು ಪಡೆದುಕೊಳ್ಳುತ್ತೇವೆ. ಆದುದರಿಂದ, ಈ ಘಟನೆ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗೆ ಹೋಗದೇ ಈ ಜಮೀನಿಗೆ ಸಂಬಂಧಿಸಿದಂತೆ Additional Chief Secretary ಅವರಿಂದ ಕಳೆದ ಐದು ವರ್ಷಗಳಲ್ಲಿ KHBಯಲ್ಲಿ ಏನೇನು ಖರೀದಿಗಳಾಗಿವೆ, ಇದರ ಬಗ್ಗೆ ಸಮಗ್ರ ತನಿಖೆ ಮಾಡಿಸುತ್ತೇನೆ. ಆ ವರದಿ ಬಂದ ನಂತರ ಯಾವ್ಯಾವ ಅಧಿಕಾರಿಗಳು ಇದರಲ್ಲಿ involve ಆಗಿದ್ದಾರೋ, ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಈ ಸರ್ಕಾರ ಹಿಂದು–ಮುಂದು ನೋಡುವ ಪ್ರಶ್ನೆಯೇ ಇಲ್ಲ.

ಎರಡನೆಯದು, ಇವತ್ತು ನಾನು ಈ ಪ್ರಕರಣವನ್ನು ಏನು ನಾವು ವೈಭವೀಕರಿಸಿ ಮಾತನಾಡುತ್ತಿದ್ದೇವೆ, ಹಾಗಾದರೆ ಈ ಮನೆಯಲ್ಲಿ ನಾನು ನಿಮ್ಮನ್ನೇ ಕೇಳುತ್ತೇನೆ. ಅವತ್ತು ಚುನಾಯಿತ ಸರ್ಕಾರ ಇರಲಿಲ್ಲ. ರಾಜ್ಯಪಾಲರ ಕಾಲದಲ್ಲಿ ಒಳ್ಳೆಯ ಆಡಳಿತ ನಡೆಸಲಾಗಿದೆ ಎಂದು ನಾವೆಲ್ಲರೂ ಒಳ್ಳೆಯ ಭಾವನೆ ಇಟ್ಟುಕೊಂಡಿದ್ದೇವೆ. ಈಗಲೂ ನಾನು ಅದೇ ಭಾವನೆ ಇಟ್ಟುಕೊಂಡಿದ್ದೇನೆ. ಅವತ್ತಿನಿಂದ ಸುತ್ತಮುತ್ತಲೂ ಜಮೀನು ಖರೀದಿಸಿರುವಂಥಾದ್ದು, ಜೊತೆಗೆ 55 ಲಕ್ಷ ಆದ್ದರಿಂದ, ವಾಸ್ತವಿಕ ಸತ್ಯ ಸಂಗತಿಗಳು ಗೊತ್ತಿಲ್ಲದೇ ನಾನು ಯಾವುದನ್ನೂ ಮರೆಮಾಚಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಹಂತದಲ್ಲಿ ನಾನು ಯಾರ ಮೇಲೂ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. Additional Chief Secretary ಅವರಿಂದ ತನಿಖೆ ಮಾಡಿಸುತ್ತೇನೆ ವರದಿ ಬರಲಿ. ಅಲ್ಲಿಯವರೆಗೆ, ಕಳೆದ ಐದು ವರ್ಷಗಳಿಗೆ ಸಂಬಂಧಸಿದಂತೆ ನಾನು ತನಿಖೆ ಮಾಡಿಸುತ್ತೇನೆ, ಅಲ್ಲಿಯವರೆಗೆ, ಹೊಸದಾಗಿ 900 ಚಿಲ್ಲರೆ ಎಕರೆಗಳಷ್ಟು ಜಮೀನು ಏನಿದೆ, ಅಲ್ಲಿ ಇವತ್ತು 30 ಎಕರೆ 31 ಗುಂಟೆಗಳಷ್ಟು ಜಮೀನು ಏನು ಖರೀದಿಸಿದ್ದೇವೆ, ಇದಕ್ಕಿಂತಲೂ ಹೆಚ್ಚಿಗೆ ಒಂದು ಎಕರೆಯಷ್ಟೂ ಜಮೀನನ್ನು ಖರೀದಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಆದೇಶ ಮಾಡುತ್ತೇನೆ. ದಯಮಾಡಿ ನಮ್ಮ ಪ್ರಾಮಾಣಿಕತೆ ಮತ್ತು ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು. ಮತ್ತು ಯಾವುದೇ ರೀತಿಯ ಆಧಾರವಿಲ್ಲದೆ ನೀವು

ಊಹೆ ಮಾಡಿ ಇಲ್ಲ, ಅದು 5 ಲಕ್ಷ ಮಾತ್ರ ಬೆಲೆ ಬಾಳುತ್ತದೆ, 10 ಲಕ್ಷ ಮಾತ್ರ ಬಾಳುತ್ತದೆ, 100 ಕೋಟಿ ಹೊಡೆಯುವುದಕ್ಕೆ ಹೊರಟಿದ್ದಾರೆ.. ..ಖರೀದಿಸಿರುವುದು 30 ಎಕರೆ ಚಿಲ್ಲರೆಯಷ್ಟು ಜಮೀನು, ನೀವು ಊಹೆ ಮಾಡುತ್ತಿರುವುದು ಜನರ ಮುಂದೆ ಏನು ದೊಡ್ಡ ಅವ್ಯವಹಾರ ನಡೆದಿದೆ ಎಂದು ಹಳುವುದು ಸರಿಯಲ್ಲ. ಜವಾಬ್ದಾರಿಯುತರಾಗಿರುವ ರೇವಣ್ಣನವರು ಅಲ್ಲಿಯೇ ಅವರು ಕೆಲಸ ಮಾಡಿದ್ದಾರೆ. ಇವರ ಕಾಲದಲ್ಲಿ ಏನೇನಾಯಿತು ಎಂಬುದೆಲ್ಲವನ್ನೂ ತನಿಖೆ ಮಾಡಿಸೋಣ. ಗೃಹ ಮಂಡಳಿ ಇಲಾಖೆಯಲ್ಲಿ ಕಳೆದ ಐದು ವರ್ಷಗಳಿಂದ ಆವತ್ತು ಎಲ್ಲೆಲ್ಲಿ ಎಷ್ಟೆಷ್ಟು ಮಾರುಕಟ್ಟೆ ಬೆಲೆ ಇತ್ತು, ಎಷ್ಟು ದರಕ್ಕೆ ನೀವು ಖರೀದಿಸಿದ್ದೀರಿ, ಅದೆಲ್ಲವನ್ನೂ ನಾನು ಸಮಗ್ರ ತನಿಖೆ ಮಾಡಿಸುವುದಕ್ಕೆ ಸಿದ್ಧನಿದ್ದೇನೆ, ಕಳೆದ ಐದು ವರ್ಷಗಳಿಗೆ ಸಂಬಂಧಿಸಿದಂತೆ Additional Chief Secretary ಅವರಿಂದ ತನಿಖೆ ಮಾಡಿಸುತ್ತೇನೆ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು: ರಾಮನಗರದಲ್ಲಿ 2 ಲಕ್ಷ ಇದ್ದುದನ್ನು 40ರಿಂದ 42 ಲಕ್ಷ ರೂ. ಎಂದು ನಿಗದಿಪಡಿಸಿ ತೀರ್ಮಾನ ಕೈಗೊಂಡ ಘಟನೆಗಳಿವೆ. Guidance value ಬೇರೇನೆ ಇದೆ, ವಾಸ್ತವಾಂಶವೇ ಬೇರೆ ಇದೆ. ರಾಜೀವ್‌ಗಾಂಧಿ ಯೂನಿವರ್ಸಿಟಿಗೆ 2 ಲಕ್ಷ ರೂ.ಗಳಿಗೆ ಅವರು ಜಮೀನು ಕೊಡಿಸುತ್ತಾರೆಯೇ? ಹೇಳಲಿ.

ಶ್ರೀ ಎಂ.ಶ್ರೀನಿವಾಸ್: ಖರಾಬ್ ಜಮೀನನ್ನು ನೈಸ್ ಕಂಪನಿಗೆ ಕೊಟ್ಟರು. ಇದು ಯಾರ ಕಾಲದಲ್ಲಿ ಆದದ್ದು?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಸಭಾ ನಾಯಕರಾಗಿರುವ ಸನ್ಮಾನ್ಯ ಮುಖ್ಯಮಂತ್ರಿಗಳು ನಿಜ ಹೇಳಿದ್ದಾರೆ. ಅಲ್ಲಿ ಪಕ್ಕದಲ್ಲಿರುವ ಜಮೀನನ್ನು ಯಾವುದೇ ರೈತರು ಕೊಡಲು ಮುಂದೆ ಬರುವುದಿಲ್ಲವೆಂದು ಹೇಳುತ್ತಾರೆ. ಆ ಪಕ್ಕದಲ್ಲಿರುವವರು ಯಾರು ಗೊತ್ತೇ ಸ್ವಾಮಿ? ಇದರ ಸ್ಪಷ್ಟೀಕರಣ ಕೇಳುತ್ತೇನೆ. ಅದರ ಪಕ್ಕದಲ್ಲಿರುವುದು ಶ್ರೀನಿವಾಸಶೆಟ್ಟಿಯವರ ಜಮೀನು, ಒಟ್ಟು 60 ಎಕರೆ. ಇದು ಒಂದನೇ ಪಾಯಿಂಟ್. ಎರಡನೆಯ ಪಾಯಿಂಟ್ ಏನೆಂದರೆ, 2ನೇ ಮಾರ್ಚಿ ತಿಂಗಳಿನಲ್ಲಿ ಇದು ನನ್ನ ಗಮನಕ್ಕೆ ಬಂದ ತಕ್ಷಣ ಅದನ್ನು ನಿಲ್ಲಿಸುವುದಕ್ಕೆ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೆವು ಎಂದು ಹೇಳುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಲು ಈ ರೀತಿ ಅನ್ಯಾಯ ನಡೆಯುತ್ತಿದೆಯೆಂದು ನನ್ನ ಗಮನಕ್ಕೆ 2ನೇ ತಾರೀಖಿನಂದು ಬಂದ ತಕ್ಷಣ ನಾನು ಡೈರೆಕ್ಷನ್ ಕೊಟ್ಟೆ ಎಂದು ಹೇಳುತ್ತಾರೆ. ಆದರೆ, 10ನೇ ತಾರೀಖಿನಂದು ವಸತಿ ಸಚಿವರು ಉತ್ತರಿಸುವಾಗ 958 ಎಕರೆಯನ್ನು 50 ಲಕ್ಷ ರೂ.ಗಳಿಗೆ ಇವತ್ತೂ ಖರೀದಿಸುತ್ತಿದ್ದೇವೆಂದು ಹೇಳುತ್ತಿದ್ದಾರಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಾನು ಹೇಳುವವರೆಗೆ ತಾವು ದಯಮಾಡಿ ಕೇಳಬೇಕು. ಮುಖ್ಯಮಂತ್ರಿಯವರು ಡೈರೆಕ್ಷನ್ ಕೊಟ್ಟ ನಂತರ ಅವತ್ತೇ ನೀವು ಏನು ಆರ್ಡರ್ ಮಾಡಿದಿರಿ?

ಶ್ರೀ ವಿ.ಸೋಮಣ್ಣ: ರೇವಣ್ಣನವರೆ, ಇದು DLF ಅಲ್ಲ, ನಂದಿಗ್ರಾಮವೂ ಅಲ್ಲ. ನಾನು ಸರ್ಕಾರದ ತೀರ್ಮಾನವನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಂದಿಗ್ರಾಮ ಅಲ್ಲದಿದ್ದರೆ, ಯಾವ ಗ್ರಾಮವನ್ನು ಬೇಕಾದರೂ ಮಾಡಿಕೊಳ್ಳಿರಿ.

ಶ್ರೀ ವಿ.ಸೋಮಣ್ಣ: ನಾನು ಸರ್ಕಾರದ ತೀರ್ಮಾನ ಹೇಳುತ್ತಿದ್ದೇನೆ. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ನಾನು ಹೇಳುತ್ತಿರುವುದೇನೆಂದರೆ, ಮುಖ್ಯಮಂತ್ರಿಗಳು ಮಾರ್ಚಿ 2ನೇ ತಾರೀಖಿನಿಂದ ನಿಲ್ಲಿಸಿದ್ದೇವೆಂದು ಹೇಳಿದ ನಂತರ ಸದನದಲ್ಲಿ ಹೇಗೆ ಹೇಳಿದರು?

ಶ್ರೀ ವಿ.ಸೋಮಣ್ಣ: ಇದು ನಂದಗುಡಿಯಲ್ಲ, ಇದು ಸರ್ಕಾರದ ತೀರ್ಮಾನವಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ: ಬಚ್ಚೇಗೌಡರೆ, ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ನಂದಗುಡಿ, SEZ ಏನು ಬೇಕಾದರೂ ಮಾಡಿಕೊಳ್ಳಿರಿ. ಅದು ನನಗೆ ಸಂಬಂಧವಿಲ್ಲ. ನಾನು ಕೇಳುತ್ತಿರುವುದೇನೆಂದರೆ, ಮುಖ್ಯಮಂತ್ರಿಗಳು ಮಾರ್ಚಿ 2ನೇ ತಾರೀಖಿನಂದು ಡೈರೆಕ್ಷನ್ ಕೊಟ್ಟ ಮೇಲೆ ಸದನಕ್ಕೆ ಹೇಳಬಹುದಾಗಿತ್ತಲ್ಲವೇ? ಈ ಯೋಜನೆಯನ್ನು ಕೈಬಿಡಲಾಗಿದೆ ಎಂದು Housing Minister ಅವರು ಅಲ್ಲೊಂದು ಹೇಳಿಕೆ ಕೊಡುತ್ತಾರೆ, ಇಲ್ಲೊಂದು ಹೇಳಿಕೆ ಕೊಡುತ್ತಾರೆ. ಇದರ ಬಗ್ಗೆ ನಾವು ನಿಲುವಳಿ ಸೂಚನೆ ತಂದ ಮೇಲೆ....

ಶ್ರೀ ವಿ.ಸೋಮಣ್ಣ: ಅದು ಹೇಳಿಕೆ ಅಲ್ಲ, ಉತ್ತರ. ದಯಮಾಡಿ ತಾವು ಓದಿ.

ಶ್ರೀ ಹೆಚ್.ಡಿ.ರೇವಣ್ಣ: ನನಗೆ ಅಷ್ಟೂ ಅರ್ಥವಾಗುವುದಿಲ್ಲವೇ? ನನಗೆ ಅಷ್ಟು ಅನುಭವವಿಲ್ಲ. ನನಗೆ ಸೋಮಣ್ಣನವರಿಗೆ ಇರುವಷ್ಟು ಅನುಭವವಿಲ್ಲ. ಸ್ವಲ್ಪ ದಯಮಾಡಿ ಓದಿ. ಸಭಾ ನಾಯಕರಿಗೆ ಕಳುಹಿಸಿಕೊಡುತ್ತೇನೆ, ಓದಲಿ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ಅದು unstarred question ಆಗಿದೆ. ಮಾನ್ಯ ಸಚಿವರು ಸದನದಲ್ಲಿ ಉತ್ತರಿಸುವುದಕ್ಕೆ ಅವಕಾಶ ಇರಲಿಲ್ಲ. ಅದು ಚುಕ್ಕೆರಹಿತ ಪ್ರಶ್ನೆಯಾಗಿದೆ. ಪ್ರಶ್ನೆಗೆ ಸೀಮಿತವಾಗಿ ಉತ್ತರಿಸಿದ್ದಾರೆ. ಅದನ್ನು ತಾವು ಅರ್ಥ ಮಡಿಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಅವರು ಏನು ಹೇಳುತ್ತಿದ್ದಾರೆಂದರೆ, 31 ಕೋಟಿ ಲೂಟಿ ಮಾಡಿದ್ದು, ಈಗ ಲೂಟಿ ಮಾಡಲಿ ಎಂದು ಹೇಳಿದ ಹಾಗೆ ಆಯಿತು. ಮಾನ್ಯ ಅಧ್ಯಕ್ಷರೆ, 15 ಕೋಟಿ ರೂ.ಗಳನ್ನು 31 ಎಕರೆಯನ್ನು ಮಾರಾಟ

ಮಾಡುವುದಕ್ಕೆ ಈಗ ಸರ್ಟಿಫಿಕೇಟ್ ಕೊಟ್ಟಂತಾಯಿತು, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ವಸತಿ ಸಚಿವರು 15 ಕೋಟಿ ರೂ.ಗಳನ್ನು ಹಿಂದಿನ ವಸತಿ ಸಚಿವರಿಗೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದು ಕ್ಲೀನ್ ಆಗಿ ಇಲ್ಲಿ ಸರ್ಟಿಫಿಕೇಟ್ ಕೊಟ್ಟಿದ್ದೇವೆ, 15 ಕೋಟಿ ರೂ.ಗಳನ್ನು ಹೊಡೆದಿದ್ದೀರಿ, ಇದಕ್ಕೆ ಏನೂ ಇಲ್ಲ, ನೀವು ಹೊಡೆದಿದ್ದು ನಿಜವೆಂದು ವಸತಿ ಮಂತ್ರಿಗಳೂ ಹೇಳಿದ್ದಾರೆ, ಮುಖ್ಯಮಂತ್ರಗಳೂ ಹೇಳಿದ್ದಾರೆ. ಇದರ ಬಗ್ಗೆ ಒಬ್ಬ Additional Chief Secretary ಅವರು ಒಬ್ಬರು ಕಾರ್ಯದರ್ಶಿಯವರ ಮೇಲೆ ಎನ್‌ಕ್ವೆರಿ ಮಾಡುವುದಕ್ಕಾಗುತ್ತದೆಯೇ? Additional Chief Secretary ಅವರು ಯಾರ ಕೈ ಕೆಳಗಿರುತ್ತಾರೆ? ಮುಖ್ಯಮಂತ್ರಿಗಳು ಏನು ಹೇಳುತ್ತಾರೆ, ಅವರು ಸೀಲ್ ಒತ್ತಿಕೊಂಡು ಬರುತ್ತಾರೆ. ಇದು ನಾನೇನು ಕಾಣದ ಬೇಳೆ ಕಾಳೇ? ಇವತ್ತು ನಾನು ಹೇಳುವುದೇನೆಂದರೆ, ದಯಮಾಡಿ ಸಿ.ಬಿ.ಐ. ತನಿಖೆ ಮಾಡಿ. ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ಆ ಪಾಪದ ಕೆಲಸ ಮಾಡಿಲ್ಲ. ನಿಮ್ಮ ಮುಖ್ಯಮಂತ್ರಿಯವರು ತನಿಖೆ ಮಾಡಿಸುತ್ತಿದ್ದಾರೆ, ಮಾಡಿಸಲಿ. ನಾನು ಎಲ್ಲಿಗೆ ಹೋಗುತ್ತೇನೆ, ಇಲ್ಲಿಯೇ ಇರುತ್ತೇನೆ. ಇದೇ ಸದನದಲ್ಲಿ ಇರುತ್ತೇನೆ, ಹೇಡಿಯಂತೆ ಹೆದರಿಕೊಂಡು ಓಡಿಹೋಗುವುದಿಲ್ಲ. ನಾನೇನು ಹೆದರಿಕೊಂಡು ಯಾರ ಮನೆ ಬಾಗಿಲಿಗೂ ಹೋಗುತ್ತಿಲ್ಲ. ತನಿಖೆ ಮಾಡಲಿ. ಟೈಮ್ ಬಂದಾಗ ಯಾರು ಯಾರ ಮನೆ ಬಾಗಿಲಿಗೆ ಬಂದಿದ್ದರು ಎಂದು ಹೇಳುತ್ತೇನೆ.

ಹೆಚ್.ಸಿ.ಬಾಲಕೃಷ್ಣ: ಸೋಮಣ್ಣನವರ ಕೈಯಲ್ಲಿ ಬಹಳ ಚೆನ್ನಾಗಿ ಉತ್ತರವನ್ನು ಹೇಳಿಸಿದ್ದಾರೆ. ಸೋಮಣ್ಣನವರು ಬಹಳ ಬುದ್ಧಿವಂತಿಕೆಯಿಂದ ಮುಖ್ಯಮಂತ್ರಿಯವರನ್ನು ಒಪ್ಪಿಸಿದ್ದಾರೆ. ಇನ್ನು ಮುಂದೆ ಏಕಾಏಕಿ ನಾವು ಖರೀದಿ ಮಾಡುವುದಿಲ್ಲ, ಇದನ್ನು ನಿಲ್ಲಿಸಿದ್ದೇವೆಂದು ಹೇಳಿದರು. ಇದರಿಂದ ಎಲ್ಲೋ ಒಂದು ಕಡೆ ಅವ್ಯವಹಾರವಾಗಿದೆಯೆಂದು ಒಪ್ಪಿಕೊಂಡಂತೆ ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಈ ರೀತಿಯ ಭಂಡವಾದಕ್ಕೆ ಏನು ಹೇಳಬೇಕು? ನಾನು ಪ್ರತಿಪಕ್ಷದ ನಾಯಕರನ್ನೂ ಕೇಳಿದೆ. ಸಾಕಷ್ಟು ಚರ್ಚೆ ಮಾಡಿದ್ದೀರಿ. ಮಾರ್ಚ್‌ನಲ್ಲಿ ತನಿಖೆಯಾಯಿತು. ಅದಾದಮೇಲೆ ಚುನಾವಣೆ ಫಲಿತಾಂಶ ಬಂದಮೇಲೆ ನಮಗೆ ಸುಮಾರು ಒಂದೂವರೆ ತಿಂಗಳ ಸಮಯ ಇತ್ತು. ಜಮೀನನ್ನೇ ಖರೀದಿ ಮಾಡಬೇಕೆಂದಿದ್ದರೆ ಖರೀದಿ ಮಾಡಿ ಇಲ್ಲಿಗೆ ಬರಬಹುದಿತ್ತು. ಅಭಿವೃದ್ಧಿ ಕಾರ್ಯಕ್ಕೂ 50–55 ಲಕ್ಷಕ್ಕೆ ಖರೀದಿಯಾಗಿದೆ. ಆಗಲೇ ನಾವು ಮಾಡಿದ್ದೇವೆಂದು ಹೇಳಬಹುದಾಗಿತ್ತು. ಆದರೆ, ಇಷ್ಟು ದೊಡ್ಡ ಪ್ರಮಾಣದ ಅಗತ್ಯತೆ ಇಲ್ಲ, ನಾನು ಎಕರೆಗೆ ಇದ್ದ ಬೆಲೆಯ ಬಗ್ಗೆ ಅನುಮಾನ ಪಡಲಿಲ್ಲ. ನಿಮ್ಮ ಸ್ಕೀಮ್ ಏನು ಎಂದು ಕೇಳಿದೆ. ಸ್ಪಷ್ಟವಾದಂಥ ಯಾವುದೇ ಸ್ಕೀಮ್ ಇಲ್ಲದೆಯೇ ಈ ರೀತಿ 900 ಎಕರೆ ಖರೀದಿ ಮಾಡುವ ಅಗತ್ಯತೆ ಇಲ್ಲ, ಇದನ್ನು stop ಮಾಡಿಯೆಂದು ಅಧಿಕಾರಿಗಳಿಗೆ ನಾನು direction ಕೊಟ್ಟೆ, ಇದರ ಬಗ್ಗೆ ಆವತ್ತಿನ ಸಚಿವರಿಗೂ ನಾನು

ಹೇಳಿದ್ದೆ. ಇದರಲ್ಲೇನು ಮುಚ್ಚುಮರೆ ಇಲ್ಲ. ಈಗ ಇಷ್ಟು ಚರ್ಚೆಯಾದ ಮೇಲೆ, ಈ ಮನೆ ಎಲ್ಲರಿಗಿಂತಾ ದೊಡ್ಡದು. ಪ್ರತಿಪಕ್ಷದವರು ಮತ್ತು ಎಲ್ಲರ ಒಕ್ಕೊರಲಿನಿಂದ ಕೇವಲ ಇದು ಮಾತ್ರವಲ್ಲ, ಮೈಸೂರು ಮತ್ತು ಬೇರೆ ಬೇರೆ ಕಡೆ ಹೆಚ್ಚು ಬೆಲೆ ಕೊಟ್ಟು ಖರೀದಿ ಮಾಡುತ್ತಿದ್ದೀರಿ ಎಂಬ ಭಾವನೆ ಇಲ್ಲಿ ಬಂದಿರುವುದರಿಂದ, ಈ 33 ಎಕರೆ ಬಿಟ್ಟು ಹೊಸದಾಗಿ ಖರೀದಿ ಮಾಡುವುದಿಲ್ಲ, Additional Chief Secretary ಯಿಂದ ಎಲ್ಲಾ ಕಡೆ ಕಳೆದ 5 ವರ್ಷದಿಂದ ಏನೇನು ಖರೀದಿಯಾಗಿದೆ ಅದರ ಬಗ್ಗೆ ಸಮಗ್ರ ತನಿಖೆ ಮಾಡಿಸುತ್ತೇನೆ, ಅಲ್ಲಿಯವರೆಗೆ ನಾವು ಹೊಸದಾಗಿ ಖರೀದಿ ಮಾಡುವುದಿಲ್ಲವೆಂದು ಹೇಳಿದರೆ ಇಲ್ಲಿ ಅವ್ಯವಹಾರವಾಗಿದೆಯೆಂದು ಒಪ್ಪಿಕೊಂಡಂತೆ ಆಗಿದೆಯೆಂದರೆ ಹೇಗೆ? ನಾವು ಇಲ್ಲಿ ಸರಿಯಾಗಿಯೇ ಮಾಡಿದ್ದೇವೆ. ಅಲ್ಲಿ ಬೆಲೆಯೇ ಇರುವಂಥದ್ದು. ನಾವು ಆ ಖರೀದಿಯನ್ನು ಮುಂದುವರೆಸಬಹುದಾಗಿತ್ತು. ಯಾರೂ ತಡೆಯುವುದಕ್ಕೆ ಬರುತ್ತಿರಲಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವು walkout ಮಾಡುತ್ತಿದ್ದಿರಿ, ಧರಣಿ ಮಾಡುತ್ತಿದ್ದಿರಿ. ನಾನು ಏಕೆ ಗೌರವ ಕೊಡುತ್ತಿದ್ದೇನೆ. ವಾಸ್ತವಿಕ ಸತ್ಯಸಂಗತಿಯನ್ನು ತಿಳಿದುಕೊಳ್ಳಬೇಕು. ಆಡಳಿತ ಪಾರದರ್ಶಕವಾಗಿರಬೇಕು. ಈ ನಾಡಿನ ಜನರಿಗೆ ತಪ್ಪು ಮಾಹಿತಿ ಹೋಗಬಾರದು ಎಂಬ ಉದ್ದೇಶದಿಂದ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಇದು ರೈತರ ಪರವಾಗಿ ಇರತಕ್ಕ ಸರ್ಕಾರ. ರೈತರ ಪರವಾಗಿಯೇ ಪ್ರಮಾಣವಚನ ಸ್ವೀಕಾರ ಮಾಡಿರುವಂಥದ್ದು. 3–4 ಲಕ್ಷ ಬೆಲೆ ಇದ್ದ ಜಮೀನಿಗೆ ನಾವು ಬಂದ ಮೇಲೆ ಇವತ್ತು 25–30 ಲಕ್ಷವಾಗಿದೆ. ಜನರು ನೆಮ್ಮದಿಯಿಂದ ಆ ದುಡ್ಡನ್ನು ತೆಗೆದುಕೊಂಡು ಬದುಕುತ್ತಿರುವ ಕಾಲ ಇದಾಗಿದೆ. ಮಾನ್ಯ ಬಾಲಕೃಷ್ಣರವರೆ, ತಾವು ಈ ರೀತಿ ಆರೋಪ ಮಾಡಿದರೆ, ಹೇಗೆ? ಇಲ್ಲಿ ಖಂಡಿತವಾಗಿ ತಪ್ಪಾಗಿಲ್ಲ. ಮಾರುಕಟ್ಟೆಯಲ್ಲಿ ಖರೀದಿ ಬೆಲೆ ಇರುವುದೇ ಅಷ್ಟು, ಈಗ ಹೌಸಿಂಗ್ ಬೋರ್ಡ್‌ಗೆ ಒಂದು ಸಾವಿರ ಎಕರೆ ಬೇಕು ನಿಮ್ಮನ್ನೇ ಬಿಡುತ್ತೇನೆ 40 ಲಕ್ಷಕ್ಕೆ ಖರೀದಿ ಮಾಡಿಸಿಕೊಡಿ. ನಾನು ನಿಮಗೇ ಜವಾಬ್ದಾರಿ ಕೊಡುತ್ತೇನೆ. ಈ ಮನೆಯಲ್ಲಿ ಬಹಿರಂಗವಾಗಿ ಹೇಳುತ್ತಿದ್ದೇನೆ. ಇವತ್ತೇನು ರಾಜ್ಯದ ಜನತೆಗೆ 5–10 ಲಕ್ಷ ಬಾಳುವ ಭೂಮಿಯನ್ನು 50 ಲಕ್ಷ ಕೊಟ್ಟು ಖರೀದಿ ಮಾಡುತ್ತಿದ್ದೀರೆಂದು ತಾವು ಹೇಳುತ್ತಿದ್ದೀರಿ, ನಮಗೆ ಈಗ ಅಭಿವೃದ್ಧಿ ಕಾರ್ಯಕ್ಕೆ ಸಾವಿರ ಎಕರೆ ಬೇಕು, ಶಿವಕುಮಾರ್, ಬಾಲಕೃಷ್ಣ ಮತ್ತು ರೇವಣ್ಣನವರನ್ನು ಒಳಗೊಂಡ ಸಮಿತಿ ಮಾಡುತ್ತೇನೆ, ಜಮೀನನ್ನು ಕೊಡಿಸಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ರೈತರ ಜಮೀನನ್ನು ಈ ರಾಜ್ಯದ ಶಿವಮೊಗ್ಗ, ಹಾಸನ, ಬೆಳಗಾಂ, ಕೋಲಾರ ಮುಂತಾದ ಕಡೆ ಮಾಡಿದ್ದಾರೆ. ಒಬ್ಬ ರೈತ ಜಮೀನನ್ನು ಸರ್ಕಾರಕ್ಕೆ ಕೊಟ್ಟು, ಪಾಪ! ಅವನು ಹೇಳಿದಷ್ಟು ದುಡ್ಡು ಕೊಟ್ಟು ತೆಗೆದುಕೊಳ್ಳುವುದು, ಮೂರು, ನಾಲ್ಕು ವರ್ಷವಾದರೂ ಅವನು ಹಣವನ್ನು ತೆಗೆದುಕೊಳ್ಳಲಾರದೇ ಓಂಕಾರ ಹತ್ತಿರುವುದನ್ನು ನಾವೆಲ್ಲಾ ಕಂಡಿದ್ದೇವೆ. ಸತ್ಯವನ್ನು

ಮುಚ್ಚಿ ಇಡುವುದು ಬೇಡ. ಈಗ ಮಾತನಾಡಿದ ವ್ಯವಹಾರ ಎಷ್ಟು ಹರಿಬಿರಿಯಲ್ಲಿ ನಡೆಯಿತು. ಮಾಜಿ ಮಂತ್ರಿಯ ಒಬ್ಬ ತಮ್ಮ ಇಲ್ಲಿದ್ದ. ಬೆಳಗೆಯಿಂದ ಈ ಕಡೆಯಿಂದ ಒಂದು ಕತೆ ಕೇಳಿದೆವು, ಈಗ ತಾವು ಒಂದು ಕತೆ ಹೇಳಿದಿರಿ. ಪಾಪದ ರೈತ ಓಟು ಕೊಟ್ಟಿರುವುದು. ಇದು ದಲ್ಲಾಳಿಗಳ ಸರ್ಕಾರವೆಂದು ಹೇಳುತ್ತಾರೆ. ಆ ರೀತಿ ಆಗಬಾರದು, ನಿಮಗೆ ನೈತಿಕವಾದ ಹಕ್ಕಿದ್ದರೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇನೆ, ಎಂದು ಹೇಳಿ. ಯಾರೇ ಆಗಿರಲಿ ನೀವು ತಕ್ಕ ಪಾಠ ಕಲಿಸಿದ್ದರೆ ನಿಜವಾಗಿಯೂ ನಾವು ಮೆಚ್ಚುತ್ತಿದ್ದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಹಿಂದೆ ನೀವೂ ಅಧಿಕಾರದಲ್ಲಿದ್ದಿರಿ. ಜನರು ನಿಮ್ಮನ್ನು ಮನೆಗೆ ಕಳುಹಿಸಿ ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಈ ಹಿಂದೆ ನೀವು ಅಧಿಕಾರ ನಡೆಸಿದ್ದೀರಲ್ಲಾ, ಆಗ ದಲ್ಲಾಳಿ ಮಾಡುತ್ತಿದ್ದೀರೆಂದು ಗೊತ್ತಾದ ಮೇಲೆಯೇ ನಿಮ್ಮನ್ನು ಮನೆಗೆ ಕಳುಹಿಸಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ನೀವು ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಿ. ಜೆ.ಡಿ.ಎಸ್.ನ ನಿಮ್ಮ ಸ್ಥಿತಿಯೇನಾಗಿದೆ? ನಿಮ್ಮ ಪಕ್ಷದ ಸ್ಥಿತಿ ಏನಾಗಿದೆ? ನಮಗೆ 19 ಜನ ಎಂ.ಪಿ.ಯವರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ದಲ್ಲಾಳಿಗಳ ಸರ್ಕಾರ ನಿಮ್ಮದು ಇರಬಹುದು. ದಲ್ಲಾಳಿಗಳ ಸರ್ಕಾರ ಮಾಡಿದ್ದವರು ಅವರು. ಏನು ಬೇಕಾದರೂ ಬೇಜವಾಬ್ದಾರಿಯಿಂದ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು: ಈಗ ನಿಮಗೆ ಮಾತನಾಡಲು ಬಾಯಿ ಇದೆಯೇ? ನಂದಗುಡಿ ಆದಾಗ ಏನು ಮಾಡುತ್ತಿದ್ದಿರಿ? ಆವತ್ತು ಮಾತನಾಡಲು ತಮಗೆ ಬಾಯಿ ಇರಲಿಲ್ಲವೇ?

(ಗೊಂದಲ)

ಅಧ್ಯಕ್ಷರು: ಯಾರದರೂ ಒಬ್ಬರು ಮಾತನಾಡಿ. ಏನಾದರು ಸ್ಪಷ್ಟೀಕರಣ ಕೇಳುವುದಾದರೆ ಕೇಳಿ.

(ಗೊಂದಲ)

ಶ್ರೀ ಆರ್. ಅಶೋಕ್: ಇಪ್ಪತ್ತೆರಡೂವರೆ ಸಾವಿರ ಎಕರೆ ಕೊಡುವಾಗ ಆವತ್ತು ತಾವು ಏನು ಮಾಡುತ್ತಿದ್ದಿರಿ?

(ಗೊಂದಲ)

ಅಧ್ಯಕ್ಷರು: ಸುಮ್ಮನೆ ಈ ರೀತಿ ವಾದ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಆರ್. ಅಶೋಕ್: ನಿಮ್ಮ ಸಕಾರವಿದ್ದಾಗ ಇದು ಜ್ಞಾಪಕಕ್ಕೆ ಬಂದಿರಲಿಲ್ಲವೇ? ಬಿ.ಜೆ.ಪಿ. ಸರ್ಕಾರ ಬಂದಾಗ ನೆನಪಿಗೆ ಬಂದಿತೇ? ಜೆ.ಡಿ.ಎಸ್. ಸರ್ಕಾರವಿದ್ದಾಗ ಏನು ಮಾಡುತ್ತಿದ್ದಿರಿ? ಆಗ ತಮಗೆ ಬುದ್ಧಿ ಇರಲಿಲ್ಲವೇ?

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಏನಾದರೂ ಸ್ಪಷ್ಟೀಕರಣ ಕೇಳುವುದಾದರೆ ಕೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆವತ್ತು ಇಪ್ಪತ್ತೆರಡೂವರೆ ಸಾವಿರ ಎಕರೆ ಮಾಡುವಾಗ ಏನು ಮಾಡಿತ್ತಿದ್ದಿರಿ. ಆಗ ದಲ್ಲಾಳಿ ಕೆಲಸ ಮಾಡಿದ್ದಿರಾ? ಯಾರು ಇಲ್ಲದೇ ಇರುವಾಗ ಮಾಡಿದ್ದಿರಲ್ಲಾ ಆಗ ಯಾರು ದಲ್ಲಾಳಿ ಆಗಿದ್ದರು?

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್. ಬಚ್ಚೇಗೌಡ: ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ನಂದಗುಡಿಯಲ್ಲಿ ಸುಮಾರು ಹದಿನೆಂಟು ಸಾವಿರ ಎಕರೆಯನ್ನು ಸ್ವಾಧಿನ ಮಾಡಿದರು. ಅದರಲ್ಲಿ ನಾಲ್ಕುಸಾವಿರ ಎಕರೆ ಸರ್ಕಾರಿ ಜಮೀನು.

(ಗೊಂದಲ)

ಅಧ್ಯಕ್ಷರು: ಈ ರೀತಿ ಪರಸ್ಪರ ಮಾತನಾಡಬೇಡಿ. ಇದು ಒಳ್ಳೆಯದಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಈ ರೀತಿ ಆಗಿರುವ ಎಲ್ಲದರ ಬಗ್ಗೆಯೂ ವಿಚಾರಣೆ ಆಗಲಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ಅವರಿಗೆ ನಾಚಿಕೆಯಾಗುವುದಿಲ್ಲವೇ? ಆಗ ಕೈಗಾರಿಕಾ ಸಚಿವರು ಆಗಿದ್ದವರು ಯಾರು ಕೇಳಿ?

(ಗೊಂದಲ)

ಶ್ರೀ ಬಿ.ಎಸ್.ಬಚ್ಚೇಗೌಡ: ಎಸ್.ಇ.ಜೆಡ್. ಗೆ ಪರೀಕ್ಷೆ ಮಾಡಿಸಬೇಕೆಂದು ಮಾನ್ಯ ಶಿವಕುಮಾರ್‌ರವರು, ಖರ್ಗೆಯವರೂ ಬಂದಿದ್ದರು. 14 ಸಾವಿರ ಎಕರೆ ಖಾಸಗಿ ಜಮೀನನ್ನು ಸ್ವಾಧಿನಮಾಡಿಕೊಟ್ಟರು. ಒಟ್ಟು 18 ಸಾವಿರ ಎಕರೆ ಕೊಟ್ಟರು. ಹೊಸಕೋಟೆಯಲ್ಲಿ ರೈತರ ಭೂಮಿಯನ್ನೇ ಕೊಟ್ಟರು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಸರ್ಕಾರ 400 ಕೋಟಿ ಹಗರಣವನ್ನು ವಾಪಸ್ ತೆಗೆದುಕೊಂಡಿರಲ್ಲಾ, ನಿಮಗೆ ನಾಚಿಕೆ ಆಗುವುದಿಲ್ಲವೇ?

(ಗೊಂದಲ)

ಶ್ರೀ ಆರ್. ಅಶೋಕ್: ನಾಚಿಕೆ ನಮಗೆ ಏಕೆ ಆಗಬೇಕು? ನಾಚಿಕೆ ನಿಮಗೆ ಆಗಬೇಕು.

(ಗೊಂದಲ)

ಶ್ರೀ ಆರ್ ಅಶೋಕ್:- ...... ಈಗ 30 ಎಕರೆ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ. 18 ಸಾವಿರ ಎಕರೆಯನ್ನು ಬಾಂಬೆಯವರಿಗೆ ಮಾರಾಟ ಮಾಡಿದರಲ್ಲಾ, ಆಗ ಏಕೆ ರೈತರ ಬಗ್ಗೆ ಯೋಚನೆ ಮಾಡಲಿಲ್ಲ?...

[ಗೊಂದಲ]

ಅಧ್ಯಕ್ಷರು:- ಈ ವಿಷಯವನ್ನು ನಾನು ಇಲ್ಲಿಗೇ ಮುಕ್ತಾಯಗೊಳಿಸುತ್ತೇನೆ. ಈ ರೀತಿ ಪರಸ್ಪರ ನೀವೇ ಸಂಘರ್ಷ ಮಾಡುತ್ತಿದ್ದರೆ, ಸದನದ ಗೌರವ ಉಳಿಯುವುದಿಲ್ಲ. ಈ subject ಅನ್ನು ನಾನು ಇಲ್ಲಿಗೆ close ಮಾಡುತ್ತೇನೆ. ಯಾರಾದರೂ ಒಬ್ಬರು ಮಾತನಾಡಿದರೆ ಅಡ್ಡಿಯಿಲ್ಲ. ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಲಿಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಯಾರಾದರೂ ಒಬ್ಬರು ಸ್ಪಷ್ಟೀಕರಣ ಕೇಳಿದರೆ ಮುಗಿಯಿತು.

[ಗೊಂದಲ]

ಅಧ್ಯಕ್ಷರು:- ಒಬ್ಬರು ಅಥವಾ ಇಬ್ಬರು ಸ್ಪಷ್ಟೀಕರಣ ಕೇಳಿದರೆ ಅಡ್ಡಿಯಿಲ್ಲ. ಆದರೆ ಎಲ್ಲರೂ ಈ ರೀತಿ ಕೇಳಿದರೆ ಅವರು ಏನು ಹೇಳುತ್ತಾರೆ? ಇದೇ ರೀತಿ ಗೊಂದಲ ಮುಂದುವರೆಯುತ್ತದೆ ಅಷ್ಟೆ. ಯಾರಾದರೂ ಒಬ್ಬರು ಸ್ಪಷ್ಟೀಕರಣ ಕೇಳಿ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಸನ್ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ಮನವಿ.

ಅಧ್ಯಕ್ಷರು: ಆಯಿತು, ಹೇಳಿ. ಆದರೆ ಒಬ್ಬರೇ ಮಾತನಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಎಲ್ಲಾ ಮಾತುಗಳನ್ನು ಅನಿಸಿಕೊಂಡಿದ್ದು ಆಯಿತು, ಕೇಳಿಸಿಕೊಂಡಿದ್ದು ಆಯಿತು. ದಲ್ಲಾಳಿಗಳ ಸರ್ಕಾರ...

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- .... ಯಾರ್‍ಯಾರು ಇದರಲ್ಲಿ ಶಾಮೀಲಾಗಿದ್ದರು? ಈ ಬಗ್ಗೆ ತನಿಖೆಯಾಗಬೇಕು.

[ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ :- ಅವರ ರಾಜೀನಾಮೆಯನ್ನು ತೆಗೆದುಕೊಂಡು ತನಿಖೆ ಮಾಡಿ.

[ಗೊಂದಲ]

ಅಧ್ಯಕ್ಷರು:- ಈ ಚರ್ಚೆಯನ್ನು ನಾನು ಈಗ ಮುಕ್ತಾಯಗೊಳಿಸುತ್ತೇನೆ.

[ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ :- ನಾಳೆ ಬೆಳಿಗ್ಗೆಯೇ ಸಿ.ಬಿ.ಐ.ಗೆ ಕೊಡಿ ಸ್ವಾಮಿ.

[ಗೊಂದಲ]

ಅಧ್ಯಕ್ಷರು:- ಇದು ಮುಗಿಯುವುದೇ ಇಲ್ಲ. ಪರಸ್ಪರ ಈ ರೀತಿ ಮಾತನಾಡುವುದಾದರೆ, ನಾನು ಈ ವಿಷಯದ ಚರ್ಚೆಯನ್ನು ಇನ್ನು ಮೇಲೆ ಮುಕ್ತಾಯಗೊಳಿಸುತ್ತೇನೆ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದೆ. ಮಾನ್ಯ ಮಂತ್ರಿಗಳು ಎಲ್ಲೋ ಒಂದು ಕಡೆ ಇದರಲ್ಲಿ ಹಣದ ದುರುಪಯೋಗವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ನನ್ನ ಪ್ರಶ್ನೆ ಇಷ್ಟೇ...

[ಗೊಂದಲ]

ಶ್ರೀ ವಿ.ಸೋಮಣ್ಣ :- ಮಾನ್ಯ ಸದಸ್ಯರು ಸದನವನ್ನು ತಪ್ಪು ದಾರಿಗೆ ಎಳೆಯಬಾರದು.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. Governor periodನಲ್ಲಿ 55 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ ಎಂದು ಅವರು ಹೇಳಿದರು. ಅಲ್ಲಿಂದ ಐದು ಕಿಲೋಮೀಟರ್ ಒಳಗಡೆಯೋ, ಹೊರಗಡೆಯೋ ನನಗೆ ಗೊತ್ತಿಲ್ಲ. ದುಡ್ಡು ಕೊಟ್ಟಿದ್ದಾರೆ, ಅದು confirm ಆಗಿದೆ. ಅದು ಯಾರಿಗೆ ತಲುಪಿದೆ? ರೈತರಿಗೆ ತಲುಪಿದೆ. ಅಲ್ಲಿ ...

[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಬಾಲಕೃಷ್ಣರವರೆ, ಏಕೆ ಆತ್ಮವಂಚನೆ ಮಾಡಿಕೊಳ್ಳುತ್ತೀರಿ? ಏಕೆ ಈ ಕಥೆ ಹೇಳುತ್ತೀರಿ? ನೀವಾದರೆ ನೇರವಾಗಿ ರೈತರಿಗೆ ಕೊಡುತ್ತೀರಿ. ನಾವು ಕೊಟ್ಟಿರುವವರು ರೈತರಲ್ಲವೇ? ಏನು ನೀವೆಲ್ಲಾ ಸತ್ಯ ಹರಿಶ್ಚಂದ್ರನ ತುಂಡುಗಳೇ?

[ಗೊಂದಲ]

ಅಧ್ಯಕ್ಷರು:- ಈ subject ಅನ್ನು ನಾನು close ಮಾಡುತ್ತೇನೆ.

[ಗೊಂದಲ]

ಶ್ರೀ ಸಿದ್ದು ಸವದಿ :- ಆ ಭಾಗದಲ್ಲಿ ಎಕರೆಗೆ 55 ಲಕ್ಷ ರೂ.ಗಳ ಬೆಲೆ ಇದೆ ಎಂದು ಬಾಲಣ್ಣನವರು ಒಪ್ಪಿಕೊಂಡಂತಾಯಿತು...

[ಗೊಂದಲ]

ಅಧ್ಯಕ್ಷರು :- ನಾನು ಈ subjectಅನ್ನು ಇಲ್ಲಿಗೆ close ಮಾಡುತ್ತೇನೆ. ಚರ್ಚೆ ಮುಗಿಯಿತು.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ಮನವಿ ಮಾಡುತ್ತೇನೆ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮೇಲ್ನೋಟಕ್ಕೆ ಆರೋಪವಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. 'ಇದು ನನ್ನ ಗಮನಕ್ಕೆ ಬಂದ ತಕ್ಷಣವೇ, ನಾನು ಮಾರ್ಚ್‌ನಲ್ಲಿ ಇದನ್ನು ನಿಲ್ಲಿಸಿದ್ದೇನೆ, ಇದರ ಬಗ್ಗೆ ತನಿಖೆಗೆ ನಾನು ಆದೇಶಿಸಿದ್ದೇನೆ, ಸಂಬಂಧಪಟ್ಟವರ ವಿರುದ್ಧ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಆದೇಶಿಸಿದ್ದೇನೆ' ಎಂದು ಅವರು ಹೇಳಿದರು. ಆದರೆ, ಅವರು ಹೇಳಿದ್ದು ಮಾರ್ಚ್. ನೀವು ಉತ್ತರ ಕೊಟ್ಟಿರುವುದು ಯಾವಾಗ ಸ್ವಾಮಿ?

[ಗೊಂದಲ]

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಈ ವಿಷಯವನ್ನು close ಮಾಡುತ್ತೇನೆ. ಇದಿನ್ನು ಸಾಕು. ನಾನು next agenda ತೆಗೆದುಕೊಳ್ಳುತ್ತೇನೆ.

[ಗೊಂದಲ]

ಅಧ್ಯಕ್ಷರು :- ನೀವು ಹೇಳಿದ್ದೀರಿ, ಅವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ನನ್ನ ಮೂಲ ಪ್ರಶ್ನೆ ಏನೆಂದರೆ, ಇವರು 50 ಲಕ್ಷ ರೂ.ಗಳನ್ನು ನಿಗದಿ ಮಾಡುತ್ತಾರೋ, 60 ಲಕ್ಷ ರೂ.ಗಳನ್ನು ನಿಗದಿ ಮಾಡುತ್ತಾರೋ...

[ಗೊಂದಲ]

ಅಧ್ಯಕ್ಷರು :- ಒಂದೆರೆಡು ಸ್ಪಷ್ಟೀಕರಣ ಕೇಳಿ ಮುಗಿಸಿಬಿಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ನನಗೆ ಮಾತನಾಡಲಿಕ್ಕೇ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು :- ನೀವು ಹೇಳಿದ್ದು ಗೊತ್ತಾಯಿತು, ಸರ್ಕಾರ ಹೇಳಿದ್ದು ಗೊತ್ತಾಯಿತು. ಸ್ಪಷ್ಟೀಕರಣ ಬೇಕಿದ್ದರೆ ಕೇಳಿ. ಪದೇ ಪದೇ ಅದನ್ನೇ ಮಾತನಾಡುವುದರಿಂದ ಏನೂ ಆಗುವುದಿಲ್ಲ.

[ಗೊಂದಲ]

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಅವರಿಗೇ ಏಕೆ ಸರ್ಕಾರ ದುಡ್ಡು ಕೊಟ್ಟಿತು ಎಂಬುದಕ್ಕೆ ಇನ್ನೂ ಸ್ಪಷ್ಟೀಕರಣ ಕೊಟ್ಟಿಲ್ಲ. ಶ್ರೀನಿವಾಸಶೆಟ್ಟಿ ಎಂಬುವವರು ಯಾರು? ಹೌಸಿಂಗ್ ಬೋರ್ಡ್‌ನವರು ರೈತರಿಗೆ ಕೊಡಬೇಕಾಗಿರತಕ್ಕ ದುಡ್ಡನ್ನು ಮಧ್ಯವರ್ತಿಗಳಿಗೆ ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಲಿ...

[ಗೊಂದಲ]

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ....ಸರ್ಕಾರದಲ್ಲಿ ಸಚಿವರಾಗಿದ್ದವರ ಸಹೋದರ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದಾರೆ...... Is it a joke?

[ಗೊಂದಲ]

ಅಧ್ಯಕ್ಷರು :– ಸ್ಪಷ್ಟೀಕರಣ ಕೇಳುವುದಿದ್ದರೆ, ಕೇಳಿಬಿಡಿ.

[ಗೊಂದಲ]

ಅಧ್ಯಕ್ಷರು :– ಮಾನ್ಯ ಬಾಲಕೃಷ್ಣರವರೆ, ಏನಾದರೂ specific ಆಗಿ ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಿ. ಪದೇ ಪದೇ ಆದನ್ನೇ ಮಾತನಾಡುತ್ತಿದ್ದರೆ, ಹೀಗೆಯೇ action and reaction ಆಗುತ್ತಿರುತ್ತದೆ.

[ಗೊಂದಲ]

ಶ್ರೀ ಆರ್.ಅಶೋಕ್ :– ... ಹೊಸ ವಿಚಾರ ಏನನ್ನೂ ಹೇಳುತ್ತಿಲ್ಲ. ಹೇಳಿದ್ದನ್ನೇ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೇಳಿರುವುದನ್ನೇ ಹೇಳುವುದು. ಹೊಸ ವಿಚಾರವೇನಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ಹೆಚ್ .ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಆಗಿನಿಂದ ಅದೇ ಮಾತನಾಡುತ್ತಿದ್ದೀರಿ. ಬೇರೆ ವಿಚಾರ ಇದ್ದರೆ ಕೇಳಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ..

(ಗೊಂದಲ)

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, ಹೆಚ್.ಸಿ.ಬಾಲಕೃಷ್ಣರವರು ರಾಜ್ಯಪಾಲರ ಆಡಳಿತದಲ್ಲಿ 55 ಲಕ್ಷ ಕೊಟ್ಟು ಖರೀದಿ ಮಾಡಿರುವುದು ನಿಜವಾಗಿದೆಯೆಂದು ಹೇಳಿದರು. ಆದರೆ, ಆ ಹಣ ನೇರವಾಗಿ ರೈತರಿಗೆ ಮುಟ್ಟಿದೆಯೋ ಇಲ್ಲವೋ ಎಂಬುದು ಗೊತ್ತಾಗಬೇಕಾಗುತ್ತದೆ. ನೀವೇ ಆ ರೀತಿ ಮಾಡಿರಬೇಕಾದರೆ ಮತ್ತೆ ಇಲ್ಲಿ ನ್ಯಾಯವನ್ನೇಕೆ ಕೇಳುತ್ತೀರಿ? ಮತ್ತೆ ಯಾವ ರೈತರು ಅದಕ್ಕಿಂತಾ ಕಡಿಮೆಗೆ ಕೊಡಲು ತಯಾರಿದ್ದಾರೆ ಹೇಳಿ?

(ಗೊಂದಲ)

ಅಧ್ಯಕ್ಷರು: ನಾನು ಈ ವಿಷಯದ ಬಗ್ಗೆ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿದ್ದೇನೆ. ಇದು ಸಾಕು. ಈಗ ಚರ್ಚೆಯಾಗುವುದಿಲ್ಲ. ನೀವುಗಳೇ ಪರಸ್ಪರ ಗುದ್ದಾಡಿದಂತೆ ಆಗುತ್ತದೆ. ಇದು ಮುಂದೆ ಚರ್ಚೆಯಾಗುವುದಿಲ್ಲ. ಇದನ್ನು

ಕ್ಲೋಸ್ ಮಾಡಿದ್ದೇನೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸದನವು ರಾತ್ರಿ 7 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 15ನೇ ಜುಲೈ ಮಾಹೆ 2009ರ ಬುಧವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ I

ಕರ್ನಾಟಕ ವಿಧಾನಸಭೆ

12. ಶ್ರೀ ಪಾಟೀಲ್ ಎ.ಎಸ್.

ಮಾನ್ಯ ಸಾರಿಗೆ ಸಚಿವರು.

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಎಷ್ಟು ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ, ಇದರ ವಿಭಾಗಗಳು, ಘಟಕಗಳು ಮತ್ತು ಪ್ರಾದೇಶಿಕ ಕಾರ್ಯಗಾರಗಳೆಷ್ಟು (ಹೆಸರು ಸಮೇತ ವಿವರ ನೀಡುವುದು);

(1)7 ಜಿಲ್ಲೆಗಳು ಇದರ ವ್ಯಾಪ್ತಿಗೆ ಬರುತ್ತದೆ.

(2)ವಿಭಾಗಗಳು : 8.

(3)ಘಟಕಗಳು: 53

(4)ಪ್ರಾದೇಶಿಕ ಕಾರ್ಯಗಾರ: 1.

ವಿವರಗಳು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಸಂಸ್ಥೆಯಲ್ಲಿ ಎಷ್ಟು ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; ವಿಭಾಗೀಯವಾರು ವಿವರ ನೀಡುವುದು, ಇವರಿಗೆ ಲಭ್ಯವಿರುವ ಪ್ರತಿ ತಿಂಗಳ ವೇತನ ಭತ್ಯೆ, ಪಾವತಿ ಮಾಡಲಾಗುತ್ತಿದೆಯೇ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು;

25,355 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಕ್ರ. ಸ.	ವಿಭಾಗದ ಹೆಸರು	ಉದ್ಯೋಗಿಗಳ ಸಂಖ್ಯೆ
1	ಕೇಂದ್ರಕಚೇರಿ	189
2	ಹುಬ್ಬಳ್ಳಿ	4098
3	ಬೆಳಗಾವಿ	3661
4	ಬಿಜಾಪುರ	3415
5	ಸಿರ್ಸಿ	2702
6	ಬಾಗಲಕೋಟೆ	3138
7	ಗ್ದದಗ	2584
8	ಚಿಕ್ಕೋಡಿ	3000
9	ಹಾವೇರಿ	2061

10	ಪ್ರಾದೇಶಿಕಕಾರ್ಯಾಗಾರ, ಹುಬ್ಬಳ್ಳಿ	474
11	ತರಬೇತಿ ಕೇಂದ್ರ ಹುಬ್ಬಳ್ಳಿ	13
12	ತರಬೇತಿ ಕೇಂದ್ರ ಬಿಜಾಪುರ	8
13	ಕಾಮಗಾರಿವಿಭಾಗ, ಹುಬ್ಬಳ್ಳಿ	6
14	ಕಾಮಗಾರಿವಿಭಾಗ, ಬೆಳಗಾವಿ	6
	ಒಟ್ಟು	**25,355**

ನಿಗದಿತ ಸಮಯದಲ್ಲಿ ವೇತನವನ್ನು ಸಂಸ್ಥೆಯ ನೌಕರರಿಗೆ ಪಾವತಿಸಲಾಗುತ್ತಿದೆ.

ಇ) ಈ ಸಂಸ್ಥೆಯಿಂದ ಅಪಘಾತ ಪ್ರಕರಣಗಳಲ್ಲಿ ನೀಡಬೇಕಾಗಿರುವ ಪರಿಹಾರದ ಮೊತ್ತ ಎಷ್ಟು; ಪೂರ್ಣ ಪ್ರಮಾಣದಲ್ಲಿ ಪರಿಹಾರ ನೀಡಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ರೂ.15,02,03,304/-

ಸಂಸ್ಥೆಯು ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಪರಿಹಾರ ನೀಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಹಣಕಾಸಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಆದ್ಯತೆಯ ಮೇರೆಗೆ ಪರಿಹಾರ ಹಣ ಸಂದಾಯ ಮಾಡಲಾಗುತ್ತಿದೆ.

ಈ) ಈ ಸಂಸ್ಥೆಯಿಂದ ಅಂದಾಜು ಪ್ರತಿ ದಿನದ ಆದಾಯ ಮತ್ತು ಖರ್ಚು ಎಷ್ಟು (ಕಳೆದ 3 ವರ್ಷದ ಆದಾಯ ಮತ್ತು ಹಾನಿ ವಿವರ ಒದಗಿಸುವುದು);

ಪ್ರತಿ ದಿನದ ಅಂದಾಜು ಆದಾಯ ಮತ್ತು ಖರ್ಚು:

ವರ್ಷ	ಸರಾಸರಿ ಆದಾಯ	ಸರಾಸರಿ ಖರ್ಚು
2006–07	221.87	218.40
2007–08	247.88	266.20
2008–09	272.58	291.37
2009–10 (ಜೂನ್–09)	289.63	282.55

ಕಳೆದ 3 ವರ್ಷಗಳ ಆದಾಯ ಮತ್ತು ಹಾನಿಯ ವಿವರಗಳು:

ವರ್ಷ	ಆದಾಯ	ನಿವ್ವಳಲಾಭ	ನಿವ್ವಳಹಾನಿ
2006–07	80984.64	12.67	--
2007–08	90724.42	--	67.06
2008–09	99493.81	--	68.56

ಉ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸತತವಾಗಿ ಹಾನಿ ಅನುಭವಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ಮತ್ತು ಸಂಸ್ಥೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಇದರ ಸುಧಾರಣೆಗಾಗಿ ಕೈಗೊಂಡ ಕ್ರಮವೇನು?

ಹೌದು.

ಖಾಸಗೀ ವಾಹನಗಳ ಪೈಪೋಟಿಯಿಂದ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸಬೇಕಾದ ಪ್ರಯಾಣಿಕರು ಖಾಸಗೀ ವಾಹನಗಳಲ್ಲಿ ಪ್ರಯಾಣ, ಟ್ರೇನುಗಳ ಸರದಿಗಳಲ್ಲಿ ಹೆಚ್ಚಳ ಮತ್ತು ಅತೀ ಕಡಿಮೆ ದರ, ಸಾಮಾಗ್ರಿಗಳ ಬೆಲೆಗಳ ಹೆಚ್ಚಳ ಕೆಟ್ಟ ರಸ್ತೆಗಳು ನಷ್ಟಕ್ಕೆ ಮುಖ್ಯ ಕಾರಣವಾಗಿವೆ. ಭ್ರಷ್ಟಾಚಾರ ಕಂಡುಬಂದ ಸಂದರ್ಭಗಳಲ್ಲಿ ನಿಗಮದ ನಿಯಮಾವಳಿಗಳ ಹಿನ್ನೆಲೆಯಲ್ಲಿ ಅಗತ್ಯ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಸಾರಿಇ 41. ಸಾಸಂಪ್ರ 2009

ಸಹಿ/-

(ಆರ್. ಅಶೋಕ)

ಸಾರಿಗೆ ಸಚಿವರು

(ಕೆ.ಎಸ್.ಶ್ರೀಧರ)

ಸರ್ಕಾರದ ಅಧೀನ ಕಾರ್ಯದರ್ಶಿ

<u>ಅನುಬಂಧ-ಅ</u>

ಬೆಳಗಾವಿ-ವಿಭಾಗ	ಹುಬ್ಬಳ್ಳಿ-ವಿಭಾಗ	ಬಿಜಾಪುರ-ವಿಭಾಗ	ಸಿರ್ಸಿ-ವಿಭಾಗ
ಬೆಳಗಾವಿ-1	ಹುಬ್ಬಳ್ಳಿ(ಗ್ರಾ-1)	ಬಿಜಾಪುರ-1	ಸಿರ್ಸಿ
ಬೆಳಗಾವಿ-2	ಹುಬ್ಬಳ್ಳಿ(ಗ್ರಾ-2)	ಬಿಜಾಪುರ-2	ಕುಮುಟಾ
ಬೆಳಗಾವಿ-3	ಹುಬ್ಬಳ್ಳಿ(ನ.ಸಾ-1)	ಇಂಡಿ	ಕಾರವಾರ
ಬೈಲಹೊಂಗಲ	ಹುಬ್ಬಳ್ಳಿ(ನ.ಸಾ-2)	ಸಿಂಧಗಿ	ಹಳಿಯಾಳ
ಸವದತ್ತಿ	ಧಾರವಾಡ	ಮುದ್ದೆಬಿಹಾಳ	ಭಟ್ಕಳ
ರಾಮದುರ್ಗ	--	ತಾಳೀಕೋಟೆ	ಎಲ್ಲಾಪುರ
ಖಾನಾಪುರ	--	ಬ.ಬಾಗೇವಾಡಿ	ದಾಂಡೇಲಿ
-	---	---	ಅಂಕೋಲ

ಬಾಗಲಕೋಟೆ-ವಿಭಾಗ	ಗದಗ-ವಿಭಾಗ	ಚಿಕ್ಕೋಡಿ-ವಿಭಾಗ	ಹಾವೇರಿ-ವಿಭಾಗ
ಬಾಗಲಕೋಟೆ	ಗದಗ	ಚಿಕ್ಕೋಡಿ	ಹಾವೇರಿ
ಮುಧೋಳ	ರೋಣ	ಸಂಕೇಶ್ವರ	ಹಿರಿಕೆರೂರು
ಬಾದಾಮಿ	ನರಗುಂದ	ಗೋಕಾಕ	ರಾಣಿಬೆನ್ನೂರು
ಇಳಕಲ್	ಲಕ್ಷ್ಮೇಶ್ವರ	ನಿಪ್ಪಾಣಿ	ಹಾನಗಲ್

PJH-25

ಜಮಖಂಡಿ	ಮುಂಡರಗಿ	ರಾಯಭಾಗ	ಬ್ಯಾಡಗಿ
ಬೀಳಗಿ	ಬೆಟಗೇರಿ	ಅಥಣಿ	ಸವಣೂರು
ಗುಳೇದಗುಡ್ಡ	ಗಜೇಂದ್ರಗಡ	--	--

ಕರ್ನಾಟಕ ವಿಧಾನಸಭೆ

13. ಶ್ರೀ ಪಾಟೀಲ್ ಎ.ಎಸ್.

ಮಾನ್ಯ ಸಾರಿಗೆ ಸಚಿವರು.

ಅ) ಕರ್ನಾಟಕ ರಾಜ್ಯ ಸಾರಿಗೆ ನಿಗಮವು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಕಳೆದ ವರ್ಷ ವರ್ಗಾವಣೆ 10,000 ರೂ.ಗಳು ತೆಗೆದುಕೊಂಡಿದ್ದು ನಿಜವೇ;

ಹೌದು.

ಆ) ಅಂತಹ ಎಷ್ಟು ಅರ್ಜಿಗಳು ಇಲ್ಲಿಯವರೆಗೆ ಬಂದಿವೆ; ಅದರಿಂದ ಎಷ್ಟು ಹಣ ಸಂಗ್ರಹವಾಗಿದೆ; ಈ ಹಣ ಯಾವ ಕೆಲಸಕ್ಕಾಗಿ ಉಪಯೋಗಿಸಲಾಗುತ್ತಿದೆ;

ಸಂಸ್ಥೆಗಳು	ಅರ್ಜಿಗಳ ಸಂಖ್ಯೆ	ಹಣಸಂಗ್ರಹ (ರೂ. ಗಳಲ್ಲಿ)	ಉಪಯೋಗ
KSRTC	631	63,10,000	ಕಾರ್ಮಿಕಕಲ್ಯಾಣ ಚಟುವಟಿಕೆ ಗಳಿಗಾಗಿ
BMTC	1080(ಇವುಗಳಲ್ಲಿ 544 ಅರ್ಜಿಗಳನ್ನು ಮಾತ್ರ ಪರಿಗಣಿಸಿದೆ ಉಳಿದ ಅರ್ಜಿ ದಾರರಿಗೆ ಅವರ ಹಣ ಹಿಂದಿರುಗಿಸಲಾಗಿದೆ)	58,35,000 (ಖಾಯಂ ನೌಕರರಿಂದ 15,000, ಪರೀಕ್ಷಾರ್ಥಿ/ತರಬೇತಿ ನೌಕರರಿಂದ 10,000)	–do-
NWKRTC	188	18,80,000	-do-
NEKRTC	218	21,80,000	-do-

ಇ) ಹಣ ತುಂಬಿ ವರ್ಗಾವಣೆಗೆ ಬಂದ ಅರ್ಜಿಗಳ ಎಲ್ಲಾ ನೌಕರರಿಗೆ ವರ್ಗಾವಣೆ ಮಾಡಲಾಗಿದೆಯೇ;

ಇಲ್ಲ.

ಈ) ಅರ್ಜಿ ನೀಡಿದರೂ ವರ್ಗಾವಣೆಯಾಗದ ನೌಕರರೆಷ್ಟು; ವರ್ಗಾವಣೆ ಮಾಡದಿದ್ದಲ್ಲಿ ಅವರ ಹಣ ಮರಳಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು;

KSRTC	143
BMTC	536 ವರ್ಗಾವಣೆ ಅರ್ಜಿಗಳನ್ನು ಪರಿಗಣಿಸಿರುವುದಿಲ್ಲ. ಹಣವನ್ನು ಪಾವತಿಸಿಕೊಂಡಿಲ್ಲ.
NWKRTC	14 ನೌಕರರ ವರ್ಗಾವಣೆ ಆದೇಶವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬಂದಿರುವುದಿಲ್ಲ. ವರ್ಗಾವಣೆ ಕೋರಿಕೆಯನ್ನು ಪರಿಗಣಿಸದಿರುವಂತೆ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ಹಣವನ್ನು ಮರಳಿ ನೀಡಲಾಗುವುದು.
NEKRTC	25 ವರ್ಗಾವಣೆಗಳನ್ನು ಪರಿಗಣಿಸಿರುವುದಿಲ್ಲ. ಹಣ ಹಿಂದಿರುಗಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

ಉ) ಹಣತೆಗೆದುಕೊಂಡು ವರ್ಗಾವಣೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿ ಇದೆಯೇ?

KSRTC	ಜಾರಿಯಲ್ಲಿದೆ.
BMTC	ಜಾರಿಯಲ್ಲದೆ.
NWKRTC	ಜಾರಿಯಲ್ಲಿದೆ.
NEKRTC	ಜಾರಿಯಲ್ಲಿದೆ.

ಸಾರಿಇ 42 ಸಾಸಂಪ್ರ 2009

(ಆರ್.ಅಶೋಕ)
ಸಾರಿಗೆ ಸಚಿವರು

<u>ಕರ್ನಾಟಕ ವಿಧಾನಸಭೆ</u>

14. ಶ್ರೀ ಪಾಟೀಲ್ ಎ.ಎಸ್.
ಮಾನ್ಯ ಸಾರಿಗೆ ಸಚಿವರು.

ಅ) ರಾಜ್ಯದಲ್ಲಿರುವ ಸರಕಾರಿ ಸ್ವಾಮ್ಯದ 4 ಸಂಸ್ಥೆಗಳ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ ಕ್ಷೇತ್ರದ ಕೇಂದ್ರ ಸ್ಥಾನವಾದ ದೇವರ ಹಿಪ್ಪರಗಿ ಮತ್ತು ಹೂವಿನ ಹಿಪ್ಪರಗಿ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆಯೇ:

ದೇವರ ಹಿಪ್ಪರಗಿ ಬಸ್‌ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು ರೂ.30.00ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮಂಜೂರಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಹೂವಿನ ಹಿಪ್ಪರಗಿ ಬಸ್ ನಿಲ್ದಾಣವನ್ನು ಡಾಂಬರೀಕರಣಗೊಳಿಸಲು ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಆದರೆ ಬಸ್ ನಿಲ್ದಾಣದ ನಿವೇಶನ ಕುರಿತಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಅಭಿವೃದ್ಧಿ ಪಡಿಸಲು ಸಾಧ್ಯವಾಗಿಲ್ಲ.

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು;
ಉದ್ಭವಿಸಿರುವುದಿಲ್ಲ.

ಈ) ಹೂವಿನ ಹಿಪ್ಪರಗಿ ಬಸ್ ನಿಲ್ದಾಣ ಪ್ರಕರಣ ನ್ಯಾಯಾಲಯದಲ್ಲಿ ಇರುವುದು ನಿಜವೇ; ಇದಕ್ಕೆ ಕಾರಣವೇನು (ವಿವರ ಒದಗಿಸುವುದು);

ನಿಜ. 29ಗುಂಟೆ ಒಟ್ಟು ನಿವೇಶನದ ಪೈಕಿ 2 ಗುಂಟೆ ನಿವೇಶನದ ಸಲುವಾಗಿ ಶ್ರೀಪರಮಪ್ಪ ಶಂಕರಪ್ಪ ಚೌದರಿ ಹಾಗೂ ಇತರರು ಬಸವನ ಬಾಗೇವಾಡಿ(ಸಿವಿಲ್ ಜಡ್ಜ್) ಇವರ ನ್ಯಾಯಾಲಯದಲ್ಲಿ ಅಸಲು ದಾವಾ ನಂ.169/93ನ್ನು ದಾಖಲಿಸಿದ್ದು ಪ್ರಕರಣ ಚಾಲ್ತಿಯಲ್ಲಿರುತ್ತದೆ.

ಉ) ನ್ಯಾಯಾಲಯದಲ್ಲಿರುವ ಪ್ರಕರಣ ಪತ್ಯರ್ಥಪಡಿಸಲು ಸಂಸ್ಥೆ ಕೈಗೊಂಡ ಕ್ರಮವೇನು?

ಸದರಿ ಪ್ರಕರಣವನ್ನು ಸಂಸ್ಥೆಯ ಪರ ನ್ಯಾಯವಾದಿ ಶ್ರೀ ಎನ್.ಎಸ್.ಪಾಟೀಲರವರಿಗೆ ವಹಿಸಿರುತ್ತದೆ. ಸದರಿ ಪ್ರಕರಣದಲ್ಲಿ ಸಂಸ್ಥೆಯ ಪರ ತಕರಾರು ಅರ್ಜಿ, ಸಾಕ್ಷಿ ಪುರಾವೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತದೆ. ಸದರಿ ಪ್ರಕರಣವು ಚಾಲ್ತಿಯಲ್ಲಿದ್ದು ಪ್ರಕರಣವನ್ನು ನ್ಯಾಯಾಲಯವು ತೀರ್ಪಿಗಾಗಿ ಕಾಯ್ದಿರಿಸಿದೆ.

ಸಾರಿಇ 43 ಸಾಸಂಪ್ರ 2009

(ಆರ್. ಅಶೋಕ)
ಸಾರಿಗೆ ಸಚಿವರು

<u>**ಕರ್ನಾಟಕ ವಿಧಾನ ಸಭೆ**</u>

15 ಶ್ರೀ ಎ.ಎಸ್.ಪಾಟೀಲ್,ಎಂ.ಎಲ್.ಎ
ಮಾನ್ಯ ಗೃಹ ಸಚಿವರು

ಅ) ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿ ಟಿಬೇಟಿಯನ್ನರು ಎಷ್ಟು ವರ್ಷದಿಂದ ವಾಸಿಸುತ್ತಿದ್ದಾರೆ ಮತ್ತು ಎಷ್ಟು ಎಕರೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಹಾಗೂ ಇವರ ದಿನನಿತ್ಯದ ಕೆಲಸಗಳೇನು:

1966 ರಿಂದ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದಲ್ಲಿ ಟಿಬೇಟಿಯನ್ನರು 4045.29 ಎಕರೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ವ್ಯವಸಾಯ ಹಾಗೂ ಉಲನ್ ಬಟ್ಟೆ ಮಾರಾಟ ಮಾಡುವುದು ಇವರ ದಿನನಿತ್ಯದ ಕೆಲಸವಾಗಿರುತ್ತದೆ.

ಆ) ಪ್ರಸ್ತುತ ಎಷ್ಟು ಜನ ವಾಸಿಸುತ್ತಿದ್ದಾರೆ; ಇವರು ಎಲ್ಲಿಂದ ಬಂದವರು, ಇಲ್ಲಿ ವಾಸಿಸಲು ಕಾರಣವೇನು ಹಾಗೂ ಇವರ ಉದ್ದೇಶ ಮತ್ತು ಜೀವನ ನಿರ್ವಹಣೆಗೆ ಎಲ್ಲಿಂದ ಹಣ ಬರುತ್ತದೆ;

ಪ್ರಸ್ತುತ 15050 ಜನರು ವಾಸಿಸುತ್ತಿರುತ್ತಾರೆ. ಇವರುಗಳು ಟಿಬೇಟಿನಿಂದ ಬಂದಿರುತ್ತಾರೆ. ಚೀನಾ ದೇಶವು ಟಿಬೇಟನ್ನು ಆಕ್ರಮಿಸಿಕೊಂಡ ನಂತರ ಅವರು ಮುಂಡಗೋಡಕ್ಕೆ ಬಂದಿರುತ್ತಾರೆ. ವ್ಯವಸಾಯ ,ಊಲನ್ ಬಟ್ಟೆ ಮಾರಾಟ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುತ್ತಾರೆ. ನಿರಾಶ್ರಿತರೆನ್ನುವ ಕಾರಣದಿಂದ ಬೇರೆ ದೇಶಗಳಿಂದ ಕೆಲವು ಲಾಮಾಗಳಿಗೆ ಸ್ಪಾನಸರ್ ಶಿಪ್ ಹಣ ಬರುತ್ತದೆ.

ಇ) ಈ ಟಿಬೇಟಿಯನ್ನರು 50ಕ್ಕೂ ಹೆಚ್ಚಿನ ಎಕರೆ ಪ್ರದೇಶವನ್ನು ಅತಿಕ್ರಮಣ ಮಾಡಿದ್ದು ನಿಜವೇ; ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮಕೈಗೊಂಡಿದೆ;

ನಿಜ ಇರುವುದಿಲ್ಲ

ಈ) ಕಳೆದ 3 ವರ್ಷಗಳಲ್ಲಿ ಈ ಟಿಬೇಟಿಯನ್ ಪ್ರದೇಶಕ್ಕೆ ಅನಧಿಕೃತವಾಗಿ ಬಂದಿರುವ ಎಷ್ಟು ವ್ಯಕ್ತಿಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಹಾಗೂ ಈ ಪ್ರಕರಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆಯೇ;

ಕಳೆದ 3 ವರ್ಷದ ಅವಧಿಯಲ್ಲಿ ಈ ಟಿಬೇಟಿಯನ್ ಪ್ರದೇಶಕ್ಕೆ ಅನಧಿಕೃತವಾಗಿ ಯಾವುದೇ ವ್ಯಕ್ತಿಗಳು ಬಂದಿರುವ ಪ್ರಕರಣ ದಾಖಲಾಗಿರುವುದಿಲ್ಲ.

ಉ) ಹಾಗಿದ್ದಲ್ಲಿ, ಸದರಿ ವ್ಯಕ್ತಿಗಳ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ;

ಯಾವುದೂ ಇರುವುದಿಲ್ಲ.

ಊ) ಟಿಬೇಟಿಯನ್ನರು ತಮ್ಮ ಹಬ್ಬಗಳಲ್ಲಿ ಭಾರತೀಯ ನೋಟುಗಳನ್ನು (ರೂಪಾಯಿ) ಸುಡುತ್ತಿರುವುದು ನಿಜವೇ;

ಟಿಬೇಟಿಯನ್ನರು ಹಬ್ಬಗಳಲ್ಲಿ ಚಲಾವಣೆಗೆ ಬಾರದ ಭಾರತೀಯ ನಾಣ್ಯಗಳನ್ನು ಹಾಗೂ ದವಸಧಾನ್ಯಗಳನ್ನು ದುಷ್ಟಶಕ್ತಿಯನ್ನು ನಿಗ್ರಹಿಸುವ ಸಲುವಾಗಿ ಅಗ್ನಿಗೆ ಹಾಕುವ ಸಂಪ್ರದಾಯ ಇರುತ್ತದೆಂದು ಮಾಹಿತಿ ಇರುತ್ತದೆ. ಆದರೆ ಕಳೆದ ಒಂದು ವರ್ಷದಿಂದ ಈ ಸಂಪ್ರದಾಯವನ್ನು ಬಿಟ್ಟಿರುತ್ತಾರೆ.

ಋ) ಹಾಗಿದ್ದಲ್ಲಿ, ಅಂಥವರ ಮೇಲೆ ಸರ್ಕಾರ ಯಾವ ಕ್ರಮಕೈಗೊಂಡಿದೆ?

ಯಾವುದೂ ಇರುವುದಿಲ್ಲ.

ಸಂ.ಒಇ 13 ಪಿಸಿಕ್ಯು 09

ಮಿನಿ ವಿಧಾನ ಸೌಧದ ಕಾಮಗಾರಿ

17 ಶ್ರೀ ಸತ್ಯನಾರಾಯಣ.ಎಂ.(ಚಾಮುಂಡೇಶ್ವರಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಮೈಸೂರಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಕಾಮಗಾರಿಯು ದಿ: 28.4.2005ರಂದು ಪ್ರಾರಂಭಿಸಿದ್ದು, ಇದುವರೆವಿಗೂ ಪೂರ್ಣಗೊಳಿಸದೇ ವಿಳಂಬವಾಗಿರುವುದಕ್ಕೆ ಕಾರಣಗಳೇನು;

ಮೈಸೂರಿನಲ್ಲಿ ಮಿನಿ ವಿಧಾನಸೌಧ ಕಾಮಗಾರಿಯು ದಿ: 28.4.2005ರಂದು ಪ್ರಾರಂಭಿಸಿದ್ದು, ಕಟ್ಟಡ ಕಾಮಗಾರಿಯಲ್ಲಿ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದ ಐಟಂಗಳಾದ ಆರ್‌ಸಿಸಿ ಕಪೋತಾ, ಕರಣಕು, ಪದ್ಮ ಜಗದಿ ಲೋಟಸ್, ವಿಂಡೋ ಆರ್ಚ್‌ಸ್ ಮುಂತಾದ ಕಾಮಗಾರಿಗಳಿಗೆ ಇಡಗಂಟನ್ನು ಒದಗಿಸಲಾಗಿದ್ದು, ಅವುಗಳಿಗೆ ಡೇಟಾದರ ಅನುಮೋದನೆ ಪಡೆದು ಪ್ರತ್ಯೇಕವಾಗಿ ಅನುದಾನದೊಂದಿಗೆ ಟೆಂಡರನ್ನು ಕರೆದು ಕಾಮಗಾರಿಯನ್ನು ನಿರ್ವಹಿಸಬೇಕಾಗಿದ್ದರಿಂದ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಆ) ಈ ಕಾಮಗಾರಿಯುನ್ನು ಯಾವ ದಿನಾಂಕಕ್ಕೆ ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು.

ಸದರಿ ಕಟ್ಟಡ ಕಾಮಗಾರಿಯನ್ನು ದಿ: 30.11.2009ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು.

ಇ) ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನವೆಷ್ಟು;

ಈ ಕಟ್ಟಡ ಕಾಮಗಾರಿಗೆ ಇಲ್ಲಿಯವರೆಗೆ ರೂ. 527.21 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ ಹಾಗೂ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟು ರೂ. 402.79 ಲಕ್ಷಗಳ ಅನುದಾನ ಬೇಕಾಗಿರುತ್ತದೆ.

ಈ) ಈ ಕಾಮಗಾರಿಯ ಬಾಕಿ ಬಿಲ್ಲಿನ ಮೊತ್ತವೆಷ್ಟು;

ಈ ಕಾಮಗಾರಿಗೆ ಸದ್ಯಕ್ಕೆ ಬಾಕಿ ಬಿಲ್ಲು ಇರುವುದಿಲ್ಲ.

ಉ) ಈ ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;

ಹೌದು.

ಊ) ಹಾಗಿದ್ದಲ್ಲಿ, ಎಷ್ಟು ಮೊತ್ತಕ್ಕೆ ತಯಾರಿಸಲಾಗಿದೆ ಹಾಗೂ ಇದಕ್ಕೆ ಅನುಮೋದನೆ ನೀಡಲಾಗಿದೆಯೇ; ಮಾಹಿತಿ ನೀಡುವುದು.

ಈ ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ರೂ. 930–00 ಲಕ್ಷಗಳಿಗೆ ತಯಾರಿಸಿ ಕಂದಾಯ ಇಲಾಖೆಗೆ ದಿ: 11.8.2008ರಂದು ಸಲ್ಲಿಸಲಾಗಿದೆ.

ಋ) ಮೈಸೂರು ತಾಲ್ಲೂಕು ಕೆ.ಆರ್.ಎಸ್.ಹಿನ್ನೀರಿನಲ್ಲಿ ಸಾಗರ ಕಟ್ಟೆ ಹತ್ತಿರ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಕೆ.ಆರ್.ಡಿ.ಸಿ.ಎಲ್. ವತಿಯಿಂದ ನಿರ್ಮಿಸುತ್ತಿರುವ ಸೇತುವೆ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗಬಹುದು(ಮಾಹಿತಿ ನೀಡುವುದು)

ಮೈಸೂರು ತಾಲ್ಲೂಕಿನ ಕೆ.ಆರ್.ಎಸ್.ಹಿನ್ನೀರಿನ ಸಾಗರಕಟ್ಟೆ ಹತ್ತಿರ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣವನ್ನು ಕೆಆರ್‌ಡಿಸಿಎಲ್ ವತಿಯಿಂದ 3ನೇ ಹಂತದ ಸೇತುವೆಯ ನಿರ್ಮಾಣದ ಯೋಜನೆಯಡಿಯಲ್ಲಿ

ಹೆಚ್ಚುವರಿಯಾಗಿ ತೆಗೆದುಕೊಳ್ಳಲಾಗಿದೆ. ಪ್ರಸ್ತುತ ಈ ಕಾಮಗಾರಿಯು 9 ಗುದಕಂಬಗಳು ಮತ್ತು 1 ಅಬಟ್‌ಮೆಂಟ್ ಅಡಿಪಾಯದ ಕಾಮಗಾರಿಗಳು ಮುಕ್ತಾಯಗೊಂಡಿದೆ ಬಾಕಿ ಕಾಮಗಾರಿಗಳು ವಿವಿಧ ಹಂತದಲ್ಲಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನದ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುವುದು.

ಎ) ಮೈಸೂರು ವಿಜಯನಗರ(ಹೂಟಗಳ್ಳಿ) ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಕಳೆದ ಮೂರು ವರ್ಷಗಳ ಹಿಂದೆಯೆ ಅನುದಾನ ನೀಡಿದ್ದರೂ ಇದುವರೆವಿಗೂ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಇದಕ್ಕೆ ಕಾರಣಗಳೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮೈಸೂರು ವಿಜಯನಗರ(ಹೂಟಗಳ್ಳಿ) ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಕಳೆದ ಮುರು ವರ್ಷಗಳ ಹಿಂದೆಯೇ ಅನುದಾನ ನೀಡಲಾಗಿದ್ದರೂ, ಸದರಿ ಕಟ್ಟಡ ಕಾಮಗಾರಿಗೆ ನಿವೇಶನಕ್ಕಾಗಿ ಮೂಡ ಕಛೇರಿಗೆ ರೂ.30.30 ಲಕ್ಷಗಳನ್ನು ಪಾವತಿ ಮಾಡಲಾಗಿರುತ್ತದೆ. ಆದರೆ, ಮೂಡ ಕಛೇರಿಯವರು ಸಭೆ ನಡೆಸಿ ನಿವೇಶನ ನೀಡುವುದಾಗಿ ತಿಳಿಸಿರುವುದರಿಂದ ಇದುವರೆಗೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತಂದಿರುವುದಿಲ್ಲ.

<u>**ಕರ್ನಾಟಕ ವಿಧಾನ ಸಭೆ**</u>

55 ಶ್ರೀ ಜಾರ್ಜ.ಕೆ.ಜೆ

ಶ್ರೀ ಆರ್ ಅಶೋಕ ಮಾನ್ಯ ಸಾರಿಗೆ ಸಚಿವರು

ಅ) ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳ ಕೊರತೆ ಇರುವುದು ಮತ್ತು ಬಸ್ ನಿಲ್ದಾಣಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ವಜ್ಞನಗರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕೆಲವು ಸ್ಥಳಗಳಲ್ಲಿ ಬಸ್ ತಂಗುದಾಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಬಸ್ ನಿಲ್ದಾಣಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೆ(ವಿವರ ನೀಡುವುದು)?

ಸರ್ವಜ್ಞನಗರವು ಸೇರಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಸ್ ತಂಗುದಾಣಗಳ ವಿವರಗಳನ್ನು ಪಾಲಿಕೆಗೆ ಸಲ್ಲಿಸಿದ್ದು, ಬಸ್ ತಂಗುದಾಣಗಳನ್ನು ನಿರ್ಮಿಸುವಂತೆ ಕೋರಲಾಗಿದೆ.

ಕರ್ನಾಟಕ ವಿಧಾನಸಭೆ

56 ಶ್ರೀ ಕೆ.ಜೆ. ಜಾರ್ಜ್

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲಿಂಗರಾಜಪುರ, ಹೆಚ್.ಬಿ.ಆರ್.ಲೇಔಟ್ ಮೊದಲ ಹಂತಗಳಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯ ಜಮೀನು ಇರುವುದಿಲ್ಲ. ಆದರೆ ಅರಣ್ಯ ಇಲಾಖೆಯ ಸುಪರ್ದಿನಲ್ಲಿ ಈ ಕೆಳಕಂಡ ಕೆರೆಗಳಿರುತ್ತವೆ.

(1) ಲಿಂಗರಾಜಪುರ ಕೆರೆ – 5.48 ಹೆ.
(2) ಬ್ಯಾಟಗುಟ್ಟೆಪಾಳ್ಯ ಕೆರೆ – 1.98 ಹೆ.
(3) ಚನ್ನಸಂದ್ರ ಕೆರೆ – 7.48 ಹೆ.

ಆ) ಹಾಗಿದ್ದಲ್ಲಿ, ಜಮೀನಿನ ವಿವರ ನೀಡುವುದು.

ಅನ್ವಯಿಸುವುದಿಲ್ಲ.

ಇ) ಈ ಜಮೀನನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ನೀಡಲು ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಅರಣ್ಯ ಇಲಾಖೆಯ ಜಮೀನಿಲ್ಲದಿರುವುದರಿಂದ ಅಭಿವೃದ್ಧಿ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಲಿಂಗರಾಜಪುರ ಕೆರೆ ಟ್ಯಾಂಕ್ ಬೆಡ್‌ನಲ್ಲಿ 2009-10ನೇ ಸಾಲಿನ ಮಳೆಗಾಲದಲ್ಲಿ 2000 ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಬೇತಿ ಕೇಂದ್ರಗಳ ವಿವರ

57 ಶ್ರೀ ಜಾರ್ಜ್ ಕೆ.ಜೆ

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಯವರು

ಅ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರಗಳು ಎಷ್ಟು (ಕೇಂದ್ರಗಳ ವಿವರ ನೀಡುವುದು)?

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವತಿಯಿಂದ ನಡೆಸಲ್ಪಡುತ್ತಿರುವ ಹೊಲಿಗೆ/ನಿಟ್ಟಿಂಗ್ ತರಬೇತಿಯ 15 ಕೇಂದ್ರಗಳಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಾರ್ಡ್	ತರಬೇತಿ	ತರಬೇತಿ ಕೇಂದ್ರದ ವಿಳಾಸ
1.	86	ಹೊಲಿಗೆ	ಕಾಕ್ಸ್‌ಟೌನ್, ಜೀವನಹಳ್ಳಿ, ಬೆಂಗಳೂರು.

2.	86	ಹೊಲಿಗೆ	ರಾಘವೇಂದ್ರಸ್ವಾಮಿ ದೇವಸ್ಥಾನದ ಪಕ್ಕದ ರಸ್ತೆ, ಬಿ.ಬಿ.ಎಂ.ಪಿ. ಕಟ್ಟಡ, ಜೀವನಹಳ್ಳಿ ಸ್ಲಂ, ಬೆಂಗಳೂರು.
3.	86	ನಿಟ್ಟಿಂಗ್	ಕಾಕ್ಸ್‌ಟೌನ್, ಜೀವನಹಳ್ಳಿ ಐ.ಟಿ.ಸಿ.ಕಾಲೋನಿ, ಬೆಂಗಳೂರು.
4.	87	ಹೊಲಿಗೆ	ಸುಬ್ಬಯ್ಯನ ಪಾಳ್ಯ, ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು.
5.	87	ಹೊಲಿಗೆ	ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪಕ್ಕ, ಬಾಳೆ ಅಂಗಡಿ ಮಂಡಿ ಮೇಲೆ, ಚಿಕ್ಕಬಾಣಸವಾಡಿ, ಬೆಂಗಳೂರು.
6.	87	ನಿಟ್ಟಿಂಗ್	ಸುಬ್ಬಯ್ಯನ ಪಾಳ್ಯ, ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು.
7.	88	ಹೊಲಿಗೆ	ಆಂಜನೇಯ ದೇವಸ್ಥಾನದ ಎದುರು, ಬಾಣಸವಾಡಿ, ಬೆಂಗಳೂರು.
8.	88	ಹೊಲಿಗೆ	ಪಾಪ್ಲಂ ಲೇ ಔಟ್, ಸೆಂಟ್. ಥಾಮಸ್ ಟೌನ್ ಪೋಸ್ಟ್, ಬಾಣಸವಾಡಿ, ಬೆಂಗಳೂರು.
9.	88	ನಿಟ್ಟಿಂಗ್	ಮಾರುತಿ ಯುವಕರ ಸಂಘ, ದೊಡ್ಡಬಾಣಸವಾಡಿ, ಬೆಂಗಳೂರು.
10.	89	ಹೊಲಿಗೆ	1035/3, ಕಾಚರಕನಹಳ್ಳಿ, ಬೆಂಗಳೂರು-84.
11.	89	ಹೊಲಿಗೆ	ನಂ. 1984, ಯಾದವ ಲೇಔಟ್, ಅರವಿಂದ್ ನಗರ, ಕಾಚರಕನಹಳ್ಳಿ, ಬೆಂಗಳೂರು-84.
12.	89	ನಿಟ್ಟಿಂಗ್	3ನೇ ಅಡ್ಡರಸ್ತೆ, ಲಕ್ಷ್ಮಯ್ಯರೆಡ್ಡಿ ರಸ್ತೆ, ಕಾಚರಕನಹಳ್ಳಿ, ಬೆಂಗಳೂರು-84.
13.	94	ಹೊಲಿಗೆ	7ನೇ ಅಡ್ಡರಸ್ತೆ, ವಿನೋಬಾ ನಗರ, ಕಾಡುಗೊಂಡನಹಳ್ಳಿ, ಬೆಂಗಳೂರು-45
14.	94	ಹೊಲಿಗೆ	ನಂ. 27, 7ನೇ ಅಡ್ಡರಸ್ತೆ, ವಿನೋಬಾ ನಗರ, ಕಾಡುಗೊಂಡನಹಳ್ಳಿ, ಬೆಂಗಳೂರು-45
15.	94	ನಿಟ್ಟಿಂಗ್	ವಿನೋಬಾನಗರ, ಕಾಡುಗೊಂಡನಹಳ್ಳಿ, ಬೆಂಗಳೂರು-45.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಪಾಲಿಕೆಯ ವತಿಯಿಂದ ಯಾವುದೇ ಕಂಪ್ಯೂಟರ್ ತರಬೇತಿ ಕೇಂದ್ರಗಳು ನಡೆಯುತ್ತಿರುವುದಿಲ್ಲ.

ಆಟದ ಮತ್ತು ಸಾರ್ವಜನಿಕ ಮೈದಾನ.

58 ಶ್ರೀ ಜಾರ್ಜ್ ಕೆ.ಜೆ

ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿ ಯವರು

ಅ) ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿ:ಬಿ.ಎಂ.ಪಿ. ಮತ್ತು ಬಿ.ಡಿ.ಎ.ಗಳ ಎಷ್ಟು ಆಟದ ಮತ್ತು ಸಾರ್ವಜನಿಕ ಮೈದಾನಗಳಿವೆ (ವಿವರ ನೀಡುವುದು);

ಸದರಿ ಕ್ಷೇತ್ರದ ವ್ಯಾಪ್ತಿಯ ಬಿ.ಡಿ.ಎ. ಬಡಾವಣೆಗಳಾದ ಹೆಚ್.ಬಿ.ಆರ್. ಮತ್ತು ಹೆಚ್.ಆರ್.ಬಿ.ಆರ್. ಬಡಾವಣೆಗಳನ್ನು ಬಿ.ಬಿ.ಎಂ.ಪಿ.ಗೆ 2002ರಲ್ಲಿ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆ. ಅಲ್ಲಿ ಬಿ.ಡಿ.ಎ. ದ ಯಾವುದೇ ಆಟದ ಮತ್ತು ಸಾರ್ವಜನಿಕ ಮೈದಾನಗಳಿವೆ.

ಆದರೆ, ಸದರಿ ಕ್ಷೇತ್ರದಲ್ಲಿ ಬಿ.ಬಿ.ಎಂ.ಪಿ ಅಧೀನದಲ್ಲಿ ಈ ಕೆಳಕಂಡ 07 ಆಟದ ಮತ್ತು ಸಾರ್ವಜನಿಕ ಮೈದಾನಗಳು ಇರುವುದಿಲ್ಲ.

1. ಜೀವನಹಳ್ಳಿ ಕೃಷ್ಣಪ್ಪ ಲೇನ್ – ವಾರ್ಡ್ 86.
2. ಮಾರುತಿಸೇವಾನಗರದ ಕಾರ್ಪೋರೇಷನ್ ಸ್ಟೇಡಿಯಂ – ವಾರ್ಡ್ 86
3. ಜಾನ್ ಬಾಸ್ಕೋ ಚರ್ಚ್ ಎದುರು – ವಾರ್ಡ್ 87
4. ಕರಿಬಂಡೆಯ ಹತ್ತಿರ – ವಾರ್ಡ್ 87
5. ಸೀತಮ್ಮ ಲೇಔಟ್ ಆರ್.ಎಸ್.ಪಾಳ್ಯ – ವಾರ್ಡ್ 87
6. ಅಂಬೇಡ್ಕರ್ ಆಟದ ಮೈದಾನ, ಅಂಚೆಕಛೇರಿ ಎದುರು – ವಾರ್ಡ್ 94
7. ನಾಗವಾರ ಹೊರವರ್ತುಲ ರಸ್ತೆಯ ಅಂಬೇಡ್ಕರ್ ಲೇಔಟ್ – ವಾರ್ಡ್ 11

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿ ಆಟದ ಮೈದಾನ ನಿರ್ಮಿಸಲು ಹಾಗೂ ಹೊಸದಾಗಿ ಪಾರ್ಕ್‌ಗಳನ್ನು ನಿರ್ಮಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ?

ಬಿ.ಡಿ.ಎ. ವತಿಯಿಂದ ಸದರಿ ಕ್ಷೇತ್ರದಲ್ಲಿ ಯಾವುದೇ ಹೊಸ ಉದ್ಯಾನವನ ಅಥವಾ ಆಟದಮೈದಾನದ ಅಭಿವೃದ್ಧಿಯ ಪ್ರಸ್ತಾಪವಿರುವುದಿಲ್ಲ.

ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ.ಯು 2009–10ನೇ ಸಾಲಿನಲ್ಲಿ ವಾರ್ಡ್ ಸಂಖ್ಯೆ:86ರಲ್ಲಿ ಜೀವನಹಳ್ಳಿಯಲ್ಲಿ ಆಟದ ಮೈದಾನ ನಿರ್ಮಿಸಲು ಕ್ರಮ ತೆಗೆದುಕೊಂಡಿರುತ್ತದೆ ಹಾಗೂ ಹೊಸದಾಗಿ ಕೆಳಕಂಡ ಎರಡು ಉದ್ಯಾನವನಗಳನ್ನು ನಿರ್ಮಿಸುವ ಪ್ರಸ್ತಾವನೆ ಇದೆ.

1. ಲಿಂಗರಾಜಪುರ ಚೌಡೇಶ್ವರಿ ರಸ್ತೆ ಉದ್ಯಾನವನ.
2. ಹೆಚ್.ಆರ್.ಬಿ.ಆರ್. ಲೇಔಟ್ ಮೂರನೇ ಬ್ಲಾಕ್, ಬಾಣಸವಾಡಿ ಮುಖ್ಯ ರಸ್ತೆ.

ಹಾಲಿ ಇರುವ ಈ ಕೆಳಕಂಡ 7 (ಏಳು) ಉದ್ಯಾನವನಗಳ ಉನ್ನತೀಕರಣ ಕಾರ್ಯಕ್ರಮವಿದೆ.

1. ಎಮ್‌ಇಜಿ ವಿವೇಕಾನಂದ ಉದ್ಯಾನವನ.
2. ಆಯಿಲ್‌ಮಿಲ್ ರಸ್ತೆ ಉದ್ಯಾನವನ
3. ಲಿಂಗರಾಜಪುರ ಉದ್ಯಾನವನ

4. ಹೆಚ್‌ಆರ್‌ಬಿಆರ್ ಲೇಔಟ್ 2ನೇ ಬ್ಲಾಕ್, 6ನೇ ಮುಖ್ಯರಸ್ತೆ ಉದ್ಯಾನವನ.
5. ಓಎಮ್‌ಬಿಆರ್ ಲೇಔಟ್ ರಿಂಗ್‌ರಸ್ತೆ ಪಕ್ಕ ಉದ್ಯಾನವನ.
6. ಕಮ್ಮನಹಳ್ಳಿ ಡಾ|| ರಾಜ್‌ಕುಮಾರ್ ಉದ್ಯಾನವನ.
7. ಕುವೆಂಪು ಉದ್ಯಾನವನ.

ವಾಹನ ಸಂಚಾರ ರಸ್ತೆ ತೊಂದರೆ

59

ಶ್ರೀ.ಕರಡಿ ಸಂಗಣ್ಣ ಅಮರಪ್ಪ

ಸಿ.ಎಂ. ಉದುಸಿ ಮಾನ್ಯ ಲೋಕೋಪ-ಯೋಗಿ ಸಚಿವರು

ಅ) ರಾಷ್ಟ್ರೀಯ ಹೆದ್ದಾರಿಗಳಾದ 13 ಮತ್ತು 63ರ ಮರಿಯಮ್ಮನ ಹಳ್ಳಿಯ ರೈಲ್ವೇ ಗೇಟಿನಿಂದ ಶಿಮ್ಲಾ ಕ್ರಾಸ್‌ವರೆಗೆ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ರಾಷ್ಟ್ರೀಯ ಹೆದ್ದಾರಿ-13ರ ರಸ್ತೆಯನ್ನು ಆಯ್ದ ಭಾಗಗಳಲ್ಲಿ ನಾಲ್ಕು ಪಥಗಳಾಗಿಸುವ ಯೋಜನೆಯು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ NHDP-III ಯೋಜನೆಯಲ್ಲಿ ಸೇರಿರುತ್ತದೆ. ತಾಂತ್ರಿಕ ಸಮಾಲೋಚಕರು ಯೋಜನಾ ವರದಿ ತಯಾರಿಸಿ, ಭೂಸಾರಿಗೆ ಹಾಗು ಹೆದ್ದಾರಿ ಮಂತ್ರಾಲಯಕ್ಕೆ ಮಂಡಿಸಿರುತ್ತಾರೆ. ಅಹ್ ಬಿಡ್‌ದಾರರನ್ನು ನಿಯೋಜಿಸಲು NHAI ಪ್ರಕಟಣೆ ಹೊರಡಿಸಿರುತ್ತದೆ. ವಾಹನ ದಟ್ಟಣೆಯನ್ನು ಗಮನಿಸಿ ಮರಿಯಮ್ಮನಹಳ್ಳಿಯ ಗೇಟ್‌ನಿಂದ ಶಿಮ್ಲಾ ಗೇಟ್‌ವರೆಗೆ ಆರು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ ವರದಿ ಮಾರ್ಪಡಿಸಿ ಸಲ್ಲಿಸುವಂತೆ ತಾಂತ್ರಿಕ ಸಮಾಲೋಚಕರಿಗೆ NHAI ಪ್ರಾಧಿಕಾರದವರು ನಿರ್ದೇಶಿಸಿರುತ್ತಾರೆ.

ಇ) ಈ ರಾಷ್ಟ್ರಿಯ ಹೆದ್ದಾರಿಗಳಲ್ಲಿ ಬರುವ ತುಂಗಭದ್ರಾ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರದಿಂದ ಮೇಲ್ಸೇತುವೆಗೆ ಮತ್ತು ರಸ್ತೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಈ) ಹಾಗಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ತುಂಗಾಭದ್ರಾ ನದಿಗೆ ಅಡ್ಡಲಾಗಿ ನಾಲ್ಕು ಪಥದ ಹೊಸ ಸೇತುವೆಗಳನ್ನು ನಿರ್ಮಿಸಲು ಹಾಗೂ ಹಾಲಿ ಇರುವ ಸೇತುವೆಗಳನ್ನು ಪುನರುಜ್ಜೀವನಗೊಳಿಸುವ ಕಾಮಗಾರಿ NHDP-III ಯೋಜನೆಯಲ್ಲಿ ಸೇರಿದ್ದು, ರೂ.95.43 ಲಕ್ಷಗಳಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಅನುಮೋದನೆಗೆ ಸಲ್ಲಿಸಲಾಗಿದೆ. ಹಾಗೂ ಭೂಸಾರಿಗೆ

ಮಂತ್ರಾಲಯದಿಂದ ಈ ಭಾಗದಲ್ಲಿನ ಸದರಿ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುತ್ತದೆ.

ಉ) ಈ ರಸ್ತೆಯಲ್ಲಿ ಸಂಚರಿಸುವ ಅದಿರಿನ ವಾಹನಗಳಿಗೆ ಹಾಗೂ ಭಾರೀ ವಾಹನಗಳ ಸಂಚಾರಕ್ಕೆ ಪರ್ಯಾಯ ರಸ್ತೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ;

ಈಗಾಗಲೇ ಸದರಿ ರಸ್ತೆಯನ್ನು ಆರು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅನುಮೋದನೆಯ ಅಂತಿಮ ಹಂತದಲ್ಲಿರುವುದರಿಂದ ಪ್ರತ್ಯೇಕ ರಸ್ತೆ ಅಗತ್ಯವಿರುವುದಿಲ್ಲ.

ಊ) ಹಾಗಿದ್ದಲ್ಲಿ, ಎಂದಿನಿಂದ ಪರ್ಯಾಯ ವ್ಯವಸ್ಥೆಯನ್ನು ತರಲಾಗುವುದು?

ಉದ್ಭವಿಸುವುದಿಲ್ಲ.

ಸಂಚಾರಿ ಪೊಲೀಸ್ ಠಾಣೆ

60 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಡಾ|| ವಿ.ಎಸ್.ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಕೊಪ್ಪಳ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಹಾಗಿದ್ದಲ್ಲಿ, ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಸಂಚಾರಿ ಆರಕ್ಷಕ ಠಾಣೆಯನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು? ಈ ಕಾಮಗಾರಿಗೆ ಬಿಡುಗಡೆ ಮಾಡಲಾಗುವ ಅನುದಾನದ ಮೊತ್ತವೆಷ್ಟು?

ಊ) ಕೊಪ್ಪಳ ನಗರವು ಜಿಲ್ಲಾ ಕೇಂದ್ರ ಸ್ಥಾನವಾಗಿರುವುದರಿಂದ ನಗರವು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ, ಇದುವರೆವಿಗೂ ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/130/ ಪಿಒಪಿ/08, ದಿನಾಂಕ:23–7–2008 ರಲ್ಲಿ ಕೊಪ್ಪಳ ನಗರ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆ ಕಳುಹಿಸಲು ನಿರ್ದೇಶಿಸಿತ್ತು, ಅದರಂತೆ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ರಾಷ್ಟ್ರೀಯ ಪೊಲೀಸ್ ಆಯೋಗದ 7ನೇ ವರದಿಯಂತೆ ಹೊಸದಾಗಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯಲು ವಾರ್ಷಿಕ ಸಂಚಾರ ಅಪಘಾತ ಪ್ರಕರಣಗಳ ಸಂಖ್ಯೆಯನ್ನು ಪರಿಗಣಿಸಬೇಕಾಗಿರುತ್ತದೆ.

ಕೊಪ್ಪಳ ನಗರದಲ್ಲಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯಲು ಅವಶ್ಯವಿರುವ ಭಾರೀ ಸಂಚಾರ ದಟ್ಟಣೆ ಇರುವುದಿಲ್ಲ. ಅಲ್ಲದೆ, ಈ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗವು ನಿಗಧಿಪಡಿಸಿರುವ ಮಾನದಂಡಗಳಿಗೆ ಒಳಪಡದ ಕಾರಣ ಸದ್ಯಕ್ಕೆ ಈ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಮಠಾಧೀಶರುಗಳಿಗೆ ಪೊಲೀಸ್ ರಕ್ಷಣೆ

62 ಶ್ರೀ ಬಸವರಾಜನ್ ಎಸ್.ಕೆ. (ಚಿತ್ರದುರ್ಗ)

ಡಾ. ವಿ.ಎಸ್.ಆಚಾರ್ಯ ಗೃಹ ಸಚಿವರು

ಅ) ರಾಜ್ಯದಲ್ಲಿರುವ ಎಷ್ಟು ಮಠಾಧೀಶರುಗಳಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ (ಮಠಗಳಾವಾರು ವಿವರಗಳನ್ನು ನೀಡುವುದು)

ರಾಜ್ಯದಲ್ಲಿನ 11 ಮಠಾಧೀಶರಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ. ಮಠಗಳವಾರು ವಿವರಗಳನ್ನು ಅನುಬಂಧ 'ಎ' ದಲ್ಲಿ ನೀಡಲಾಗಿದೆ.

ಆ) ಸರ್ವಸಂಘ ಪರಿತ್ಯಾಗಿಗಳಾದ ಯಾವ ಯಾವ ಮಠಾಧೀಶರುಗಳಿಗೆ ಯಾರಿಂದ ಜೀವ ಬೆದರಿಕೆ ಇದೆ; ಹಾಗೂ ರಕ್ಷಣೆ ಒದಗಿಸಲು ಕಾರಣಗಳೇನು;

ಭದ್ರತೆ ಒದಗಿಸಿರುವ ಮಠಾಧೀಶರುಗಳಿಗೆ ಅವರವರಿಗೆ ಇರುವ ಬೆದರಿಕೆಯ ಸ್ವರೂಪ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಭದ್ರತೆಯನ್ನು ಒದಗಿಸಲಾಗಿದೆ.

ಇ) ಮಠಾಧೀಶರುಗಳಿಗೆ ಮತ್ತು ಖಾಸಗಿ ವ್ಯಕ್ತಿಗಳಿಗೆ ಪೊಲೀಸ್ ರಕ್ಷಣೆ ನೀಡುವುದರಿಂದ ಪ್ರತಿ ವರ್ಷ ಸರ್ಕಾರಕ್ಕೆ ತಗಲುತ್ತಿರುವ ವೆಚ್ಚವೆಷ್ಟು (ಸಂಪೂರ್ಣ ವಿವರಗಳನ್ನು ನೀಡುವುದು);

ಅನುಬಂಧದಲ್ಲಿ ತೋರಿಸಿರುವ 11 ಮಠಾಧೀಶರಿಗೆ ಅವರಿಗೆ ಇರುವ ಬೆದರಿಕೆಯ ಆಧಾರದ ಮೇರೆಗೆ ಸರ್ಕಾರದಿಂದ ಭದ್ರತೆಯನ್ನು ಒದಗಿಸಲಾಗಿದ್ದು, ಇದಕ್ಕೆ ತಗಲುವ ವಾರ್ಷಿಕ ವೆಚ್ಚ ರೂ. 54,67,676-00ಗಳಾಗಿರುತ್ತವೆ. ಈ ಹಣವನ್ನು ಸರ್ಕಾರವೇ ಭರಿಸುತ್ತಿದೆ.

ರಾಜ್ಯದಲ್ಲಿ ಕೆಲವು ಖಾಸಗಿ ವ್ಯಕ್ತಿಗಳಿಗೆ ಅವರ ಕೋರಿಕೆ ಮತ್ತು ಅವರಿಗಿರುವ ಬೆದರಿಕೆಯ ಆಧಾರದ ಮೇರೆಗೆ ಭದ್ರತೆಯನ್ನು ಸ್ಥಳೀಯ ಪೊಲೀಸರು ಒದಗಿಸಿದ್ದು, ಇದಕ್ಕೆ ತಗಲುವ ವಾರ್ಷಿಕ ವೆಚ್ಚ ರೂ. 26,42,623-00 ಗಳಾಗಿದ್ದು, ಇದನ್ನು ಭದ್ರತೆ ಪಡೆದಿರುವ ವ್ಯಕ್ತಿಗಳೇ ಸರ್ಕಾರಕ್ಕೆ ಭರಿಸುತ್ತಿದ್ದಾರೆ.

ಈ) ಪೊಲೀಸ್ ರಕ್ಷಣೆ ಪಡೆದಿರುವ ಮಠಾಧೀಶರುಗಳು ಹಾಗೂ ಖಾಸಗಿ ವ್ಯಕ್ತಿಗಳು ಸರ್ಕಾರಕ್ಕೆ ಹಣ ಪಾವತಿಸುತ್ತಿದ್ದಾರೆಯೇ;

11 ಮಠಾಧೀಶರಿಗೆ ನೀಡಿರುವ ಭದ್ರತೆಗೆ ಸಂಬಂಧಿಸಿದಂತೆ ವೆಚ್ಚವನ್ನು ಸರ್ಕಾರವೇ ಭರಿಸುತ್ತಿದೆ. ಖಾಸಗಿ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಭದ್ರತಾ ವೆಚ್ಚವನ್ನು ಖಾಸಗಿ ವ್ಯಕ್ತಿಗಳೇ ಭರಿಸುತ್ತಿದ್ದಾರೆ.

ಉ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಪಾವತಿಸುತ್ತಿದ್ದಾರೆ?

ಖಾಸಗಿ ವ್ಯಕ್ತಿಗಳಿಗೆ ಒದಗಿಸಿರುವ ಭದ್ರತಾ ಸಿಬ್ಬಂದಿಯ ಸಂಖ್ಯಾ ಬಲ ಮತ್ತು ಹುದ್ದೆಯ ಆಧಾರದ ಮೇರೆಗೆ ಅವರಿಂದ ಸರ್ಕಾರಕ್ಕೆ ಹಣ ಪಾವತಿ ಮಾಡಿಸಿಕೊಳ್ಳಲಾಗುತ್ತದೆ.

ಅನುಬಂಧ–ಎ

ಮಾನ್ಯ ವಿಧಾನ ಸಭೆ ಸದಸ್ಯರು ಶ್ರೀ ಬಸವರಾಜನ್ ಎಸ್.ಕೆ.(ಚಿತ್ರದುರ್ಗ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 62ಕ್ಕೆ ಉತ್ತರ

01	ವೀರಭದ್ರ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ನಿಡುಮಾಮಡಿ ಮಠ, ಬೆಂಗಳೂರು
02	ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರು, ಮಂಡ್ಯ ಜಿಲ್ಲೆ
03	ಶ್ರೀ ದೇಶೀಕೇಂದ್ರ ಮಹಾಸ್ವಾಮೀಜಿ, ಸುತ್ತೂರು ಮಠ, ಮೈಸೂರು ನಗರ
04	ಶ್ರೀ ಎಸ್.ಎಸ್. ಮುರುಘರಾಜೇಂದ್ರ ಸ್ವಾಮೀಜಿ, ಪೀಠಾಧಿಪತಿ, ಜೆಡಗ, ಮುಗಳಗೊಂಡ ಮಠ, ಬೆಳಗಾಂ ಜಿಲ್ಲೆ
05	ಶ್ರೀ ಭಾರತೀತೀರ್ಥ ಸ್ವಾಮೀಜಿ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ
06	ಶ್ರೀ ತರಳಬಾಳು ಜಗದ್ಗುರು ಡಾ: ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ
07	ಡಾ: ಶಿವಮೂರ್ತಿ ಮುರುಘಶರಣರು, ಶ್ರೀ ಮುರುಘಾ ಮಠ, ಚಿತ್ರದುರ್ಗ
08	ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ಶ್ರೀ ರಾಮಚಂದ್ರಪುರ ಮಠ, ಶಿವಮೊಗ್ಗ
09	ಶ್ರೀ ಶಿವಕುಮಾರಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠಾಧೀಶರು, ತುಮಕೂರು
10	ಶ್ರೀ ವಿಶ್ವೇಶ್ವರತೀರ್ಥ ಸ್ವಾಮೀಜಿ, ಪೇಜಾವರ ಮಠ, ಉಡುಪಿ
11	ಶ್ರೀ ಸುಜ್ಞೇಂದ್ರತೀರ್ಥ ಸ್ವಾಮೀಜಿ, ಪುತ್ತಿಗೆಮಠ, ಉಡುಪಿ

ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರು

63 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ)
ಎಸ್.ಸುರೇಶ್ ಕುಮಾರ್ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕು, ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಸೌಲಭ್ಯದ ಕಾಮಗಾರಿಯನ್ನು ಯಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಇದರ ಅಂದಾಜು ಮೊತ್ತವೆಷ್ಟು;

ಚಿಕ್ಕೋಡಿ ಪಟ್ಟಣದ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಕೇಂದ್ರ ಸರ್ಕಾರ ಪುರಸ್ಕೃತ ಸಣ್ಣ ಹಾಗೂ ಮಧ್ಯಮ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ (UIDSSMT) ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ಅಂದಾಜು ಮೊತ್ತ ರೂ.2039.91 ಲಕ್ಷಗಳು.

ಆ) ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಿಸಿರುವ ಮೊತ್ತವೆಷ್ಟು;

ಮೇಲಿನ ಯೋಜನೆಯ ಆರ್ಥಿಕ ಮಾದರಿ (Funding Pattern) ಈ ಕೆಳನಂತಿದೆ.

ಕೇಂದ್ರ ಸರ್ಕಾರ	ರೂ.1631.93 ಲಕ್ಷಗಳು (ಶೇ 80)
ರಾಜ್ಯ ಸರ್ಕಾರ	ರೂ.203.99 ಲಕ್ಷಗಳು (ಶೇ 10)
ಸ್ಥಳೀಯ ಸಂಸ್ಥೆ	ರೂ.203.99 ಲಕ್ಷಗಳು (ಶೇ 10)
ಒಟ್ಟು	ರೂ.2039.91 ಲಕ್ಷಗಳು

ಇ) ಈ ಯೋಜನೆಗೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;

ತಯಾರಿಸಲಾಗಿದೆ.

ಈ) ಈ ಯೋಜನೆಗೆ ಕುಡಿಯುವ ನೀರಿನ ಮೂಲ ಯಾವುದು;

ಕೃಷ್ಣ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಮಾಡಲಾಗುವುದು.

ಉ) ಕಾಮಗಾರಿ ಯಾವ ಹಂತದಲ್ಲಿದೆ;

ಕಾಮಗಾರಿಗಳನ್ನು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ಕಾಮಗಾರಿಗಳು ಪ್ರಗತಿಯದ್ದು ಇಲ್ಲಿಯವರೆಗೆ ರೂ.575.89 ಲಕ್ಷಗಳು ಖರ್ಚಾಗಿರುತ್ತದೆ.

ಊ) ಕಾಮಗಾರಿ ಕುಂಠಿತವಾಗಲು ಕಾರಣಗಳೇನು;

ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿ ಕುಂಠಿತವಾಗಿರುವುದಿಲ್ಲ.

ಋ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನೇನಾದರೂ ವಿಧಿಸಲಾಗಿದೆಯೇ, ವಿವರ ನೀಡುವುದು;

ಮೇಲಿನ ಯೋಜನೆಯ ಅನುಷ್ಠಾನದ ಒಟ್ಟು ಅವಧಿ 3 ವರ್ಷಗಳಿದ್ದು ಯೋಜನೆಯನ್ನು 2010-11 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಬಸ್ ನಿಲ್ದಾಣದ ಕಾಮಗಾರಿ

64. ಶ್ರೀ ಎಂ.ಟಿ.ಕೃಷ್ಣಪ್ಪ.

ಆರ್. ಅಶೋಕ ಮಾನ್ಯ ಸಾರಿಗೆ ಸಚಿವರು.

ಅ) ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಬಸ್‌ನಿಲ್ದಾಣದ ಕಾಮಗಾರಿಯ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತುರುವೇಕೆರೆ ಬಸ್ ನಿಲ್ದಾಣದ ಕಾಮಗಾರಿಗಳನ್ನು ದಿನಾಂಕ: 02-06-2008ರಂದು ಪ್ರಾರಂಭಿಸಲಾಗಿದ್ದು, ನಿಗದಿತ ಕಾಲಾವಧಿಯಾದ ದಿ: 1-6-2009 ಕ್ಕೆ ಪೂರ್ಣಗೊಳ್ಳಬೇಕಾಗಿತ್ತು. ಈ ಕಾಮಗಾರಿಯು ಆಗಸ್ಟ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ.

ಆ) ಈ ಕಾಮಗಾರಿಯು ಕಳಪೆ ಕಾಮಗಾರಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಾಮಗಾರಿಯನ್ನು ವಿಸ್ತೃತ ವಿವರಣೆಯಂತೆ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯ ಕಂಡುಬರುವುದಿಲ್ಲ.

ಇ) ಹಾಗಿದ್ದಲ್ಲಿ ಈ ಕಳಪೆ ಕಾಮಗಾರಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಅನುದಾನ

200 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)

ಬಿ.ಎಸ್. ಯಡಿಯೂರಪ್ಪ ಮಾನ್ಯ ಮುಖ್ಯ ಮಂತ್ರಿಯವರು

ಅ) 2008-09ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯಾದ: ಮೀಸಲಿರಿಸಿದ್ದ ಒಟ್ಟು ಅನುದಾನವೆಷ್ಟು (ಯೋಜನಾವಾರು ವಿವರ ಒದಗಿಸುವುದು)?

2008-09ನೇ ಸಾಲಿನ ಪರಿಷ್ಕೃತ ಅಂದಾಜಿನಂತೆ ಯೋಜನೇತರಕ್ಕಾಗಿ 34167 ಕೋಟಿ ರೂ.ಗಳನ್ನು ಮತ್ತು ಯೋಜನೆಗಾಗಿ 20063 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ತಾತ್ಕಾಲಿಕ ಲೆಕ್ಕದಂತೆ, ಯೋಜನೇತರದಲ್ಲಿ 34276 ಕೋಟಿ ರೂ.ಗಳನ್ನು ಹಾಗೂ ಯೋಜನೆಯಲ್ಲಿ 19884 ರೂ.ಗಳನ್ನು ಈ ಸಾಲಿನಲ್ಲಿ ಖರ್ಚು ಮಾಡಲಾಗಿದೆ. ಮಹಾಲೇಖಪಾಲರು ಸವಿವರ ಯೋಜನಾವಾರು ಲೆಕ್ಕವನ್ನು ಇದುವರೆಗೂ ಒದಗಿಸಿರುವುದಿಲ್ಲ.

ಆ) 2008-09ನೇ ಸಾಲಿನ ಆಯವ್ಯಯದಲ್ಲಿ ಶೇಕಡಾ 18ರ ಮೀಸಲಾತಿಗೆ ಬಿಡುಗಡೆ ಮಾಡಿದ ಹಾಗೂ ಮೀಸಲಿಟ್ಟಿದ್ದ ಒಟ್ಟು ಅನುದಾನವೆಷ್ಟು (ಸಂಪೂರ್ಣ ವಿವರ ಒದಗಿಸುವುದು)?

2008-09ನೇ ಸಾಲಿಗಾಗಿ ಆಯವ್ಯಯದಲ್ಲಿ 4060.64 ಕೋಟಿ ರೂ.ಗಳನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

(ರೂ. ಕೋಟಿಗಳಲ್ಲಿ)

	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ
ರಾಜ್ಯವಲಯ	2413.11	975.67
ಜಿಲ್ಲಾ ವಲಯ	503.48	168.38

ತಾತ್ಕಾಲಿಕವಾಗಿ ಕ್ರೋಢೀಕರಿಸಿದಂತೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಈ ಸಾಲಿನಲ್ಲಿ 3564 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ವಿಷಯ : ಗುಹಾಂತರ ದೇವಸ್ಥಾನದ ಅಭಿವೃದ್ಧಿ.

202 ಶ್ರೀ ತಿಪ್ಪೇಸ್ವಾಮಿ

ಜಿ.ಜನಾರ್ಧನ ರೆಡ್ಡಿ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ದಿ ಸಚಿವರು.

ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಬೆರೀಸಮಂಡಲಹಟ್ಟಿ ಹತ್ತಿರದ ಹೊಸಗುಡ್ಡ ಐತಿಹಾಸಿಕ ಗುಹಾಂತರ ದೇವಾಲಯವನ್ನು ಐತಿಹಾಸಿಕ ಪ್ರವಾಸೀತಾಣವನ್ನಾಗಿ ಮಾಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಈ ಗುಹಾಂತರ ದೇವಾಲಯವು ರಾಜ್ಯ ಸಂರಕ್ಷಿತ ಸ್ಮಾರಕವಾಗಿದೆ. ಪ್ರಸ್ತುತ ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಆ) ಇದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡಿರುವ ಕ್ರಮಗಳಾವುವು;

ಚಿತ್ರದುರ್ಗ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಈ ಸ್ಥಳದ ಬಗ್ಗೆ ವರದಿ ತರಿಸಿಕೊಳ್ಳಲಾಗುವುದು.

ಇ) ಹಾಗಿಲ್ಲದಿದ್ದಲ್ಲಿ ಎಂದಿನಿಂದ ಈ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗುವುದು?

ವರದಿ ಬಂದ ನಂತರ ಅಗತ್ಯವಿದ್ದಲ್ಲಿ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು

P.II-27

ಕರ್ನಾಟಕ ವಿಧಾನ ಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

204 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)
ಮಾನ್ಯ ಗೃಹ ಸಚಿವರು

ಅ) ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುದ್ದಾಪುರದಲ್ಲಿ ಹೊರ ಪೊಲೀಸ್ ಠಾಣೆ ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು? ಎಷ್ಟು ದಿನಗಳಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ?

ತುರುವನೂರು ಪೊಲೀಸ್ ಠಾಣೆಯ ಅಪರಾಧಗಳ ಸಂಖ್ಯೆಗಳನ್ನು ಅವಲೋಕಿಸಲಾಗಿ, ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮುದ್ದಾಪುರ ಗ್ರಾಮದಲ್ಲಿ ಹೆಚ್ಚಿನ ಅಪರಾಧ ಪ್ರಕರಣಗಳು ವರದಿಯಾಗದೇ ಇರುವುದರಿಂದ ಹಾಗೂ ಸದರಿ ಗ್ರಾಮದಲ್ಲಿ ಯಾವುದೇ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉದ್ಭವಿಸದೇ ಇರುವುದರಿಂದ, ಮುದ್ದಾಪುರ ಗ್ರಾಮದಲ್ಲಿ ಪೊಲೀಸ್ ಉಪಠಾಣೆಯನ್ನು ಪ್ರಾರಂಭಿಸುವ ಅವಶ್ಯಕತೆಯು ಕಂಡುಬರುವುದಿಲ್ಲ.

ಆ) ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಾಜೂರು ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸಲು ಕೈಗೊಂಡಿರುವ ಕ್ರಮಗಳೇನು?

ಪರಶುರಾಂಪುರ ಠಾಣಾ ವ್ಯಾಪ್ತಿಯ ಜಾಜೂರು ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಸೇರಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಎಷ್ಟು ದಿನಗಳಲ್ಲಿ ಈ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸಲಾಗುವುದು?

ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

208 ಶ್ರೀ ಮಹೇಶ್ ಎಸ್.ಆರ್ (ಕೃಷ್ಣರಾಜನಗರ)

ಮುಖ್ಯಮಂತ್ರಿ

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿ ವರ್ಗದವರು ಅಕಾಲಿಕ ಮರಣ ಹೊಂದಿದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗಕ್ಕಾಗಿ ನಿರೀಕ್ಷಿಸುತ್ತಿರುವವರ ಸಂಖ್ಯೆ ಎಷ್ಟು (ಜಿಲ್ಲಾ ಮತ್ತು ಇಲಾಖಾವಾರು ವಿವರಗಳನ್ನು ನೀಡುವುದು);

ಬೆಂಗಳೂರು ವಿಭಾಗ – 823

ಮೈಸೂರು ವಿಭಾಗ – 245

ಬೆಳಗಾವಿ ವಿಭಾಗ – 895

ಗುಲ್ಬರ್ಗಾ ವಿಭಾಗ – 493

ಒಟ್ಟು – 2456

ಆ) ಈವರೆವಿಗೆ ಎಷ್ಟು ಜನರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗಿದೆ (ಜಿಲ್ಲಾ ಮತ್ತು ಇಲಾಖಾವಾರು ವಿವರಗಳನ್ನು ನೀಡುವುದು)

ಬೆಂಗಳೂರು ವಿಭಾಗ – 707

ಮೈಸೂರು ವಿಭಾಗ – 225

ಬೆಳಗಾವಿ ವಿಭಾಗ – 749

ಗುಲ್ಬರ್ಗಾ ವಿಭಾಗ – 476

ಒಟ್ಟು – 2157

ಇ) ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಸಾಕಷ್ಟು ಪ್ರಮಾಣದಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದಿರುವುದು.

ಈ) ಮೈಸೂರು ಜಿಲ್ಲೆಯಲ್ಲಿ ಕಳೆದ 8 ತಿಂಗಳಿನಿಂದ ಅಭ್ಯರ್ಥಿಗಳು ಅನುಕಂಪದ ಆಧಾರದ ಮೇಲಿನ ಉದ್ಯೋಗಕ್ಕಾಗಿ ನಿರೀಕ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ನಿರೀಕ್ಷೆಯಲ್ಲಿರುವ ಅನುಕಂಪದ ಆಧಾರದ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು (ವಿವರಗಳನ್ನು ನೀಡುವುದು);

ಮೈಸೂರು ಜಿಲ್ಲಾ ಕಂದಾಯ ಘಟಕದಲ್ಲಿ 2009–10ನೇ ಸಾಲಿಗೆ ಸಂಬಂಧಿಸಿದ ಮೂರು ಪ್ರಕರಣಗಳು ಮಾತ್ರ ಬಾಕಿ ಇರುತ್ತದೆ. ಈ ಪ್ರಕರಣಗಳಲ್ಲಿ ಸಂಬಂಧಿತ ಅಭ್ಯರ್ಥಿಗಳಿಗೆ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಮೈಸೂರು ಜಿಲ್ಲಾಧಿಕಾರಿಗಳು

ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ. ಹಾಗೂ ಪೋಲೀಸ್ ಇಲಾಖೆಯಿಂದ ನಡತೆ ಮತ್ತು ಪೂರ್ವ ಚರಿತ್ರೆಯ ಬಗ್ಗೆ ವರದಿ ಕೋರಿದ್ದು ವರದಿ/ಮಾಹಿತಿ/ದಾಖಲಾತಿಗಳು ಸ್ವೀಕೃತವಾದ ಕೂಡಲೇ ಈ ಅಭ್ಯರ್ಥಿಗಳಿಗೆ ಅನುಕಂಪ ಆಧಾರದ ನೇಮಕಾತಿಯನ್ನು ನೀಡಲಾಗುವುದು.

ಊ) ಅನುಕಂಪದ ಆಧಾರದ ಉದ್ಯೋಗದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಈ ಕೂಡಲೇ ವಿವಿಧ ಇಲಾಖೆಗಳಲ್ಲಿ ಸರ್ಕಾರ ಉದ್ಯೋಗ ದೊರಕಿಸಿಕೊಡುವುದೇ?

ಖಾಲಿ ಹುದ್ದೆಗಳು ಲಭ್ಯವಾದ ಕೂಡಲೇ ಬಾಕಿ ಇರುವ ಪ್ರಕರಣಗಳಲ್ಲಿ ನಿಯಾಮನುಸಾರ ಪರಿಶೀಲಿಸಿ ನೇಮಕಾತಿ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಸಂಖ್ಯೆ: ಸಿಆಸುಇ 60 ಸೇಅನೇ 2009

ಸಹಿ/-
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

(ದೇವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಸೇವಾ ನಿಯಮಗಳು-1).

ಕರ್ನಾಟಕ ವಿಧಾನ ಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

209
ಶ್ರೀ ಮಹೇಶ್.ಎಸ್.ಆರ್.(ಕೃಷ್ಣರಾಜನಗರ)
ಮಾನ್ಯ ಲೋಕೋಪಯೋಗಿ ಸಚಿವರು.

ಅ) ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಸಚಿವರ ನಿವಾಸಗಳನ್ನು ನವೀಕರಿಸಲು ತಯಾರಿಸಲಾದ ಅಂದಾಜು ಮೊತ್ತವೆಷ್ಟು(ಪ್ರತಿ ಸಚಿವರ ನಿವಾಸವಾರು ಮಾಹಿತಿ ನೀಡುವುದು ಹಾಗೂ ನವೀಕರಿಸಲು ನೀಡಲಾಗಿರುವ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಒದಗಿಸುವುದು);

ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಸಚಿವರ ನಿವಾಸಗಳನ್ನು ನವೀಕರಿಸಲು ಮಂಜೂರಾಗಿರುವ ಅಂದಾಜು ಮೊತ್ತ ರೂ. 417.96ಲಕ್ಷಗಳಾಗಿರುತ್ತದೆ.

ಪ್ರತಿ ಸಚಿವರ ನಿವಾಸವಾರು ಹಾಗೂ ನವೀಕರಿಸಲು ನೀಡಲಾಗಿರುವ ಗುತ್ತಿಗೆದಾರರ ಹೆಸರನ್ನು ಅನುಬಂಧ 1 ರಲ್ಲಿ ಒದಗಿಸಲಾಗಿದೆ.

ಆ) ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಜ್ಯೇಷ್ಠತೆ ಆಧಾರದ ಮೇಲೆ ಹಾಗೂ ನಿಯಮಾವಳಿಗಳನ್ವಯ ಹಣ ಪಾವತಿ ಮಾಡಲಾಗಿದೆಯೇ (ಮಾಹಿತಿ ನೀಡುವುದು)?

ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ನಿಗಧಿಪಡಿಸಿದ ನಿಯಮಾವಳಿ ಹಾಗೂ ಮಾನದಂಡ ಪ್ರಕಾರ ಹಣ ಪಾವತಿ ಮಾಡಲಾಗಿದೆ. ಅನುಬಂಧ-1.

ಸಂಖ್ಯೆ: ಲೋಇ 17 ಬಿಎಲ್‌ಕ್ಯೂ 2009

(ಸಿ.ಎಂ.ಉದಾಸಿ)
ಲೋಕೋಪಯೋಗಿ ಸಚಿವರು

ಅನುಬಂಧ-1

ಕ್ರ ಸಂ.	ನಿವಾಸ ಹಾಗೂ ಸಚಿವರ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ವಿವರ
1	2	3	4
	ಮಾನ್ಯ ಮುಖ್ಯ ಮಂತ್ರಿಯವರ ನಿವಾಸ (ಅನುಗ್ರಹ)		
1	Supplying and fixing Brass Hardwares, pump and motor repairs and other works at Hon'ble Chief Ministers Official Residence "Anugraha", K.K.Road Bangalore.	5.50	Work Order has to be issued
2	Providing Internal painting, renovation of Kitchen Block, Extension of portico of Hon'ble Chief Minister residence (Sri.B.S.Yeddiyurappa) Anugraha at K.K.Road, Bangalore.	11.30	Sri.K.N.Prakash, Banglore.
3	Improvement works to Internal roads and drains at Official Residence of Hon'ble Chief Minister "Anugraha", K.K.Road, Bangalore.	9.50	Work Order has to be issued
4	Providing and fixing Sanitary and water supply fixtures and fittings to toilets at Hon'ble Chief Minister Official Residence "Anugraha", K.K.Road, Bangalore.	9.00	Work Order has to be issued
5	Providing painting to external wall surfaces and other improvement works at Hon'ble Chief Minister's Official Residence "Anugraha", K.K.Road, Bangalore.	10.00	Work Order has to be issued
6	Construction of Servant Qtrs and Horiticulture improvements and	11.15	Work Order has to be

	construction of rest rooms and other works at "Anugraha" the Official residence of Hon'ble Chief Minister at K.K.Road, Bangalore.		issued
		56.45	
	ಮಾನ್ಯ ಸಭಾಪತಿಯವರ ನಿವಾಸ (ಕಾವೇರಿ)		
1	Providing and laying ceramic tiles flooring, glazed tiles, dadooing and other improvement works to Servant Qtrs, South-Western side of K.K.Annexe-II, Official Residence of Hon'ble Speaker, Kaveri, K.K.Road, Bangalore.	4.35	Work Order has to be issued
2	Providing painting and other improvement works at FF, K.K.Annexe-II, Official Residence of Honble Speaker, Kaveri, K.K.Road , Bangalore.	4.60	Work Order has to be issued
3	Improvement works to Kitchen block at K.K.Annexe-II, Official Residence of Hon'ble Speaker, Kaveri, K.K.Road, Bangalore.	4.00	Work Order has to be issued
4	Providing painting to walls and celling in the GF, at K.K.Annexe-II, Official Residence of Hon'ble Speaker, Kaveri, K.K.Road, Bangalore.	4.50	work Order has to be issued
5	Providing painting to external wall surfaces and other improvement works at K.K.Annexe-II, Official residence of Hon'ble Speaker, Kaveri, K.K.Road, Bangalore.	5.10	Work Order has to be issued
		22.55	
	ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರ ಅಧಿಕೃತ ನಿವಾಸ		
1	Providing ultra design granite tiles over the pathway at the Official residence of Hon'ble RDPR Minister	4.00	Work Order has to be issued

	at Quarters No.1 K.K. South, K.K.Road, Bangalore		
2	Providing pathway with kerbstone edge and fixing ultra design granite tiles at the rear side of the Official residence of Hon'ble RDPR Minister at Quarters No.1 K.K. South, K.K.Road, Banglore.	3.95	Work Order has to be issued
3	Providing Internal and External painting works at the Official residence of Hon'ble RDPR Minister at Quarters No.1 K.K. South, K.K.Road, Banglore	3.10	Work Order has to be issued
4	Repairs to water supply and sanitary works, providing aluminum partition and other repair works to Servants Quarters & Security Room at the Official residence of Hon'ble RDPR Minister at Quarters No.1 K.K. South, K.K.Road, Bangalore.	3.90	Work Order has to be issued
5	Providing C.C. flooring to Servent Quarters and other improvement works to Srcurity Room at the Official residence of Hon'ble RDPR Minister at Quarters No.1 K.K. South, K.K.Road, Bangalore.	3.50	Work Order has to be issued
		18.45	
	ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸ		
1	Providing improvement works including construction of compound wall, N.W., S.E. side of Race View Cottage, Race Course Road, Bangalore.	5.65	Sri.T.R.Jagadesh, Bangalore.
2	Providing and fixing TW Windows, wall papers to central passage and from Dressing room to bed room II, G.F., at Race View Cottage Building, Race Course Road, Bangalore.	4.81	Sri.M.P.Ramesh, Bangalore.

3	Providing and laying Eurocon tiles and other improvements at Western side of Race View Cottage, Race Course Road, Bangalore	4.68	Sri.M.P.Ramesh, Bangalore.
4	Providing and fixing improted wall papers to bed room No.II, Living room (G.F) at Race View Cottage Building, Race Course Road, Bangalore	4.65	Sri.M.P.Ramesh, Bangalore.
5	Providing Structural steel frame, truss works to the security launch area, East side of Race Course Road, Bangalore	4.75	Sri.T.R.Jagadesh, Bangalore.
6	Improvement to general toilet, police security toilets at Race View Cottage, Race Course Road, Bangalore	4.14	Sri.M.P.Ramash, Bangalore.
7	Improvement works to Police Officers rest room and sanitary pipe line works at Eastern side of Race View Cottage Building, Race Course Road, Bangalore	4.68	Sri.M.P.Ramesh, Bangalore.
8	Providing, Supplying and fixing G.I. Roofing sheets to Security Launch, DFMD, hold area, Reception Lounge and improvements to servent Quarters toilet South-East, Eastern side of Race View Cottage Building , Race Course Road, Bangalore	4.98	Sri.T.R.Jagadesh, Bangalore.
9	Providing painting and other improvement Race View Cottage Building, Race Couse Road, Bangalore	4.93	Sri.M.P.Ramesh, Bangalore.
10	Providing improvement works to Security Launch, Eastern Side of Race View Cottage, Building, Race Course Road, Bangalore	5.80	Sri.T.R.Jagadesh, Bangalore.
11	Improvement works to VIP Toilet and interiors of Master bed room at	10.00	Sri.M.P.Ramesh,

	FF at Race View Cottage, Race Course Road, Bangalore		Bangalore.
12	Providing and fixing ceramic tiles flooring, dadooing to Security launch toilet, VIP toilet and other works to Race View Cottage, Race Course Road, Bangalore.	10.00	Sri.M.P.Ramesh, Bangalore.
13	Providing and laying parlato royal marble flooring, dadooing to bed room and toilets and other works at FF of Race View Cottage, Race Course Road, Bangalore.	10.00	Sri.M.P.Ramesh, Bangalore.
14	Providing and laying parloto royal marble flooring, dadooing to master bed room and other works at FF of Race View Cottage, Race Course Road, Bangalore.	10.00	Sri.M.P.Ramesh, Bangalore.
15	Construction of Additioal two rooms at FF of Race View Cottage, Race Coures Road, Bangalore.	10.00	Sri.M.P.Ramesh, Bangalore.
16	Supplying and fixing sanitary and water supply fixtures and fittngs at Race View Cottage Building, Race Course Road, Bangalore.	5.10	Sri.M.P.Ramesh, Bangalore.
17	Supplying, fabricating, errecting in position Security Police elevated Watch tower at North West side of Race View Cottage, Race Course Road, Bangalore.	5.00	Sri.M.P.Ramesh, Bangalore.
18	Providing plumbing works to Toilets at FF of Race View Cottage, Race Course Road, Bangalore.	4.66	Work Order has to be issued
19	Providing and fixing POP (Gypusm Board) false ceiling, wall designs at Master bed room at F.F Race View Cottage, Race Course Road, Bangalore.	4.40	Work Order has to be issued
20	Improvement works to meeting hall, Eastern side fountain and other works at Race View Cottage, Race	8.62	Work Order has to be issued

	Course Road, Bangalore.		
21	Providing painting, melamine polishing, lamination works to Celling walls, doors and windows of additional rooms at 1st floor of Race View Cottage, Race Course Road, Bangalore.	5.40	Work Order has to be issued
		132.25	
	ಮಾನ್ಯ ಎ.ಪಿ.ಎಂ.ಸಿ ಹಾಗೂ ಸಕ್ಕರೆ ಸಚಿವರ ಅಧಿಕೃತ ನಿವಾಸ		
1	Improvements and providing painting and water supply works to the residence of Hon'ble Minister for APMC & Sugar at Quarters No.30, Sankey Road, Bangalore	6.95	Sri.B.G.Nanj unda swamy, Bangalore.
2	Providing new sanitary line, masonry drain and other improvement works at the residence of Hon'ble Minister for Agriculture Marketing and Sugar at No.30, Sankey Road, Bangalore.	4.00	Sri.B.G.Nanj unda swamy, Bangalore.
3	Construction of visitors room in the premises of the residence of Hon'ble Minister of Agriculture, Marketing and Sugar at No.30, Sankey Road, Bangalore.	6.00	M/s.Parvathi Construction s, Bangalore.
4	ಬೆಂಗಳೂರು ಸ್ಯಾಂಕಿ ರಸ್ತೆಯಲ್ಲಿರುವ ವಸತಿಗೃಹ ಸಂ.30 ರಲ್ಲಿ ವಸತಿಗೃಹದ ಬದಿಗಳಲ್ಲಿ ಯುರೋಕಾನ್ ಟೈಲ್ಸ್ ಅಳವಡಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ.	6.00	Sri.P.B.Kesh ava Murthy, Bangalore.
5	Providing House Keeping Services to the Quarters No.30 and 31 at Sankey Road, Bangalore.	3.15	Sri.Lingaraju , Bangalore.
		26.10	
	ಮಾನ್ಯ ಕಂದಾಯ ಸಚಿವರ ಅಧಿಕೃತ ನಿವಾಸ		
1	Providing vitrified tiles flooring, painting and other works to Quarters No.1, Race View, Race Course	14.25	Sri.K.Devku mar, Bangalore.

	Road, Bangalore.		
2	Providing pathway with kerbstone and fixing ultra design granite tiles at Left side of Park at Hon'ble Revenue Minister's Official Residence at Race Course Road, Bangalore.	4.00	Work Order has to be issued
3	Providing plastering, vitrified flooring, granite for steps and other works to Quarters No.1, Residence of Hon'ble Revenue Minister, Race view Building, Race Course Road, Bangalore.	4.00	Work Order has to be issued
4	Renovation of Qurters No.1, Residence of Hon'ble Revenue Minister, Race view Building, Race Course Road, Bangalore.	4.00	Work Order has to be issued
5	Removing of existing wooden paniling, providing aluminium false ceiling, G.I. sheet roofing and other works to Quarters No.1, (Residence of Hon'ble Revenue Minister), Race View Building, Race Course Road, Bangalore.	3.40	Work Order has to be issued
5	Providing gypsum boards false ceiling to Quarters No.1, (Residence of Hon'ble Revenue Minister), Race View Building, Race Course road, Bangalore.	3.60	Work Order has to be issued
6	Removing and redoing the plastering of Eastern side Walls of Quarters No.1, (Residence of Hon'ble Revenue Minister), Race View Building, Race Course Road, Bangalore.	4.00	Work Order has to be issued
7	Removing and redoing the plastering of Southern side Walls of Quarters No.1, (Residence of Hon'ble Revenue Minister), Race View Building, Race Course Road,	4.00	Work Order has to be issued

	Bangalore.		
		41.25	
	ಮಾನ್ಯ ಇಂಧನ ಸಚಿವರ ಅಧಿಕೃತ ನಿವಾಸ		
1	ಬೆಂಗಳೂರು ಕುಮಾರ ಕೃಪ ರಸ್ತೆಯಲ್ಲಿರುವ ಕೆ.ಕೆ.-2 (ದಕ್ಷಿಣ) ಮಾನ್ಯ ಇಂಧನ ಸಚಿವರು ಇವರ ಅಧಿಕೃತ ನಿವಾಸದಲ್ಲಿ ಬಣ್ಣ ಬಳಿಯುವುದು. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ.	6.00	Sri.Dashratha nandan, Bangalore.
		6.00	
	ಮಾನ್ಯ ನಗರಾಭಿವೃದ್ಧಿ ಸಚಿವರ ಅಧಿಕೃತ ನಿವಾಸ		
1	Improvements and water supply works to the residence of Hon'ble Minister for Urban Development at No.31, Sankey Road, Bangalore	7.50	Sri.C.Sathish, Bangalore.
	ಮಾನ್ಯ ಲೋಕೋಪಯೋಗಿ ಸಚಿವರ ಅಧಿಕೃತ ನಿವಾಸ		
1	Providing vitrified tiles flooring to the official residence of Hon'ble Public Works Minister at Qtrs No.2, Crescent Road, Bangalore.	3.71	Sri.C.Sriniva s, Bangalore.
2	Construction of retaining wall, providing ceramic tiles flooring and works at Eastern, Southern side of Hon'ble PW Minister's Residence No.2, Crescent Road, Bangalore	2.70	Sri.M.G.Kes hava Murthy, Bangalore.
3	Providing and laying Eurocon tiles pavements and other works at side of Hon'ble P.W. Minister's Official Residence at Qtrs no.2, Crescent Road, Bangalore.	9.55	Sri.M.G.Kes hava Murthy, Bangalore.
4	Providing and laying Eurocon tiles flooring at Front side of Building RHS, LHS of Roadways at H.B. Qtrs No.2 Hon'ble P.W. Minister Official residence at Creacent Road, Bangalore.	6.25	Sri.M.G.Kes hva Murthy, Bangalore.

5	ಬೆಂಗಳೂರು ಕ್ರಿಸೆಂಟ್ ರಸ್ತೆಯಲ್ಲಿರುವ ಮಾನ್ಯ ಲೋಕೋಪಯೋಗಿ ಸಚಿವರ ನಿವಾಸ ಗೃಹಮಂಡಳಿ ವಸತಿಗೃಹ ಸಂ.02 ರಲ್ಲಿ ಒಳಭಾಗದ ದುರಸ್ಥಿ ಹಾಗೂ ಬಣ್ಣ ಬಳಿಯುವುದು ಮತ್ತು ಇತರೆ ಕಾಮಗಾರಿ.	1.87	C.Narayan, Bangalore.
6	ಬೆಂಗಳೂರು ಕ್ರೆಸೆಂಟ್ ರಸ್ತೆಯಲ್ಲಿರುವ ಮಾನ್ಯ ಲೋಕೋಪಯೋಗಿ ಸಚಿವರ ನಿವಾಸ ಗೃಹಮಂಡಳಿ ವಸತಿಗೃಹ ಸಂ.02 ರಲ್ಲಿ ಇದರ ಹೊರಭಾಗದ ದುರಸ್ಥಿ ಹಾಗೂ ಬಣ್ಣ ಬಳಿಯುವುದು ಮತ್ತು ಇತರೆ ಕಾಮಗಾರಿ.	1.60	C.Srinivas, Bangalore.
		25.68	
	ಮಾನ್ಯ ನೀರಾವರಿ ಮತ್ತು ಯೋಜನಾ ಸಚಿವರ ಅಧಿಕೃತ ನಿವಾಸ		
1	ಬೆಂಗಳೂರು ಕ್ರಿಸೆಂಟ್ ರಸ್ತೆಯಲ್ಲಿರುವ ಮಾನ್ಯ ಸಣ್ಣ ನೀರಾವರಿ ಮತ್ತು ಯೋಜನಾ ಸಚಿವರ ನಿವಾಸ ಗೃಹಮಂಡಳಿ ವಸತಿಗೃಹ ಸಂ.03 ರಲ್ಲಿ ಹೊರಭಾಗದ ದುರಸ್ಥಿ ಹಾಗೂ ಬಣ್ಣ ಬಳಿಯುವುದು ಮತ್ತು ಇತರೆ ಕಾಮಗಾರಿ	1.60	C.Narayan, Bangalore.
2	ಬೆಂಗಳೂರು ಕ್ರಿಸೆಂಟ್ ರಸ್ತೆಯಲ್ಲಿರುವ ಮಾನ್ಯ ಸಣ್ಣ ನೀರಾವರಿ ಮತ್ತು ಯೋಜನಾ ಸಚಿವರ ನಿವಾಸ ಗೃಹಮಂಡಳಿ ವಸತಿಗೃಹ ಸಂ.03 ರಲ್ಲಿ ಒಳಭಾಗದ ದುರಸ್ಥಿ ಹಾಗೂ ಬಣ್ಣ ಬಳಿಯುವುದು ಮತ್ತು ಇತರೆ ಕಾಮಗಾರಿ.	1.86	C.Narayana, Bangalore.
		3.46	
	ಮಾನ್ಯ ಸಭಾಧ್ಯಕ್ಷರು, ವಿಧಾನಸಭೆ, ಇವರ ಅಧಿಕೃತ ನಿವಾಸ		
1	ಬೆಂಗಳೂರು ಕುಮಾರಕೃಪ ರಸ್ತೆಯಲ್ಲಿರುವ ಕೆ.ಎ.3 (ದಕ್ಷಿಣ), ಮಾನ್ಯ ಅಧ್ಯಕ್ಷರು, ಕರ್ನಾಟಕ ವಿಧಾನಸಭೆ, ರವರ ಅಧಿಕೃತ ನಿವಾಸದಲ್ಲಿ ವಾರ್ಡ್‌ರೋಬ್ ಮತ್ತು ಸ್ಟೋರೇಜ್ ಕ್ಯಾಬಿನೆಟ್ ನಿರ್ಮಾಣ ಹಾಗೂ ಅಡುಗೆ ಮನೆ ಮತ್ತು ಸ್ನಾನದ ಕೋಣೆ ಅಭಿವೃದ್ಧಿ ಕಾಮಗಾರಿ.	4.70	Work Order has to be issued
2	ಬೆಂಗಳೂರು ಕುಮಾರಕೃಪ ರಸ್ತೆಯಲ್ಲಿರುವ ಕೆ.ಎ. 3 (ದಕ್ಷಿಣ), ಮಾನ್ಯ ಅಧ್ಯಕ್ಷರು, ಕರ್ನಾಟಕ ವಿಧಾನಸಭೆ, ರವರ ಅಧಿಕೃತ ನಿವಾಸದಲ್ಲಿ ಒಳಭಾಗ ಹಾಗೂ ಹೊರಬಾಗಕ್ಕೆ ಬಣ್ಣ ಬಳಿಯುವುದು ಮತ್ತು ನೀರು ಸರಬರಾಜು ಹಾಗೂ ಶೌಚಾಲಯಗಳ ಅಭಿವೃದ್ಧಿ ಕಾಮಗಾರಿ.	4.55	Work Order has to be issued

		9.25	
ಮಾನ್ಯ ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರ ಅಧಕೃತ ನಿವಾಸ			
1	Repairs and renovation of bath rooms, providing floor painting, supplying and fixing water supply and sanitary fittings to the Govt quarters No.MQ-4, Sankey road, Bangalore allotted for the Hon'ble Minister for Sericulture and small Industries.	2.85	M/s.Srirama Construction s(K.R.Raju), Bangalore.
2	Providing flooring erecting M.S.Truss and other works at the Govt quarters No.MQ-4, Sankey road, Bangalore.	4.98	Sri.P. Girija Shankar, Bangalore.
		11.83	
ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧಕೃತ ನಿವಾಸ			
1	Providing vitrified tiles, ceramic tiles for the flooring of Govt quarters No.MQ-1 sankey road, allotted for the Hon'ble social welfare minister Sri.Sudhakara.	4.99	Sri.A.B.Ravi prakash, Banglore.
2	Providing GRP shutters painting and related works of the GOvt Qtrs No.MQ-1, at Sankey road, Bangalore.	3.95	Sri.A.B.Ravi prakash, Bangalore.
3	Providing plastering inside and out side ceramic tiles, glazed tiles, sanitary line, sintex tank, GI pipe printing and other works to Govt quarters No.MQ-1	4.00	Sri.A.B.Ravi prakash, Bangalore.
4	Providing wooden flooring, wardrobes and related works of the Govt quarters No.MQ-1 @ Sankey road, Bangalore.	4.95	Sri.B.Shekar appa, Bangalore.
5	Construction of dust bin, toilet and bath room for the visitors, repairs and improvements, water supply line and related works to the Govt Qtrs	10.45	M/s.Rank Engineering Construction, Bangalore.

	No:MQ-1 @ Sankey road, Bangalore.		
6	Providing and fixing bath room fittings to the Govt quarters No.MQ-1 at Sankey road, Bangalore.	4.00	Sri.A.B.Ravi prakash, Bangalore.
7	ಬೆಂಗಳೂರು ಸ್ಯಾಂಕಿ ರಸ್ತೆಯಲ್ಲಿರುವ ಸಪ್ತ ಸಚಿವರ ನಿವಾಸ ಸಂ.ಎಂ.ಕ್ಯೂ. 1ರಿಂದ 7 ರವರೆಗೆ ಹೌಸ್ಕೀಪಿಂಗ್ ಕೆಲಸ, ಮುಖ್ಯ ರಸ್ತೆ ಮತ್ತು ಒಳಭಾಗದ ರಸ್ತೆಗಳನ್ನು ಸ್ವಚ್ಛ ಮಾಡುವ ಕಾಮಗಾರಿ.	1.60	B.B.Rajanna, Bangalore.
		33.94	
	ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಅಧಿಕೃತ ನಿವಾಸ		
1	Providing internal and external painting, supplying and fixing water supply and sanitary fittings to the Govt quarters No.MQ-7 Sankey road, Banalore allotted for the Hon'ble Minister for Children and women welfare.	2.80	Sri.Sahadeva Ramaswamy, Bangalore.
2	Providing carshed, dinning shed, floorings and related works to the Govt quarters No.MQ-7at Sankey road, B'lore.	3.90	Sri.H.S.Malli karjuna, Bangalore.
3	Providing meeting hall, constructing dust bin, providing flooring and related works to the Govt quarters No:MQ-7 at Sankey road, Bangalore.	4.00	Sri.H.S.Malli karjuna, Bangalore.
4	Construction of additional room, extending parapet wall on the first floor of Govt quarters No.MQ-7, Sankey road, Bangalore.	4.95	Sri.Sahadeva ramaswamy, Bangalore.
		15.65	
	ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರ ಅಧಿಕೃತ ನಿವಾಸ		
1	Providing vitirified tiles, ceramic tiles to the Govt quarters No.MQ-6, Sankey road, Bangalore allotted for Housing and Muzarai.	4.60	Sri.C.V.Naga raja, Bangalore.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧಿಕೃತ ನಿವಾಸ			
1	Construction of bath room, toilet to fixing MS grill and aluminium partition, painting and repair to water supply and sanitary line to the Govt Qtrs No.MQ-3, sankey road, Bangalore.	3.00	Sri.G.C.Mahadevappa, Bangalore.

ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ (ಕಟ್ಟಡಗಳು)

ಕರ್ನಾಟಕ ವಿಧಾನ ಸಭೆ

210
ಶ್ರೀ ಹೆಚ್.ಕೆ.ಕುಮಾರಸ್ವಾಮಿ, ಎಂ.ಎಲ್.ಎ
ಗೃಹ ಸಚಿವರು

ಅ) ಕಳೆದ 1 ವರ್ಷದಲ್ಲಿ ರಾಜ್ಯದಲ್ಲಿ ನಡೆದಿರುವ ಕಳ್ಳತನ, ದರೋಡೆ ಮತ್ತು ಡಕಾಯಿತಿ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು)

ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದಿರುವ ಕಳ್ಳತನ, ದರೋಡೆ ಮತ್ತು ಡಕಾಯಿತಿ ಪ್ರಕರಣಗಳ ವಿವರ ಕೆಳಗಿನಂತಿದೆ.

ವರ್ಷ	ಮನೆ ಕಳ್ಳತನ	ಕಳ್ಳತನ	ದರೋಡೆ	ಡಕಾಯಿತಿ
2008	6258	17820	1615	518
2009 (ಮೇಮಾಹೆ ವರೆಗೆ)	2503	8164	731	274

ವರ್ಷವಾರು ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕಳ್ಳತನ, ದರೋಡೆ ಮತ್ತು ಡಕಾಯಿತಿ ಪ್ರಕರಣಗಳಲ್ಲಿ ಹಲ್ಲೆಯಿಂದ ಸಾವಿಗೀಡಾದ ಮತ್ತು ಗಾಯಗೊಂಡ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ನೀಡಲು ಯಾವುದಾದರೂ ಆದೇಶವನ್ನು ಹೊರಡಿಸಲಾಗಿದೆಯೇ (ಆದೇಶದ ಪ್ರತಿಯನ್ನು ನೀಡುವುದು)

ಈ ಬಗ್ಗೆ ಯಾವುದೇ ಸರ್ಕಾರದ ಆದೇಶವನ್ನು ಹೊರಡಿಸಿರುವುದಿಲ್ಲ.

ಇ) ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಪರಿಹಾರವನ್ನು ನೀಡಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಉದ್ಭವಿಸುವುದಿಲ್ಲ.

ಈ) ಹಾಗಿಲ್ಲದಿದ್ದಲ್ಲಿ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇಲ್ಲ

ಉ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು?
(ಈ) ಅಂಶಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂ. ಒಇ 12 ಪಿಸಿಕ್ಯು 09

ಸಹಿ/-
(ಡಾ.ವಿ.ಎಸ್.ಆಚಾರ್ಯ)
ಗೃಹ ಸಚಿವರು

(ಪಿ.ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಅಪರಾಧಗಳು)

		2008				2009 (up to May)			
SL. NO.	COMISSIONERATE/ DISTRICT/UNIT	Dacoity	Robbery	Bur-glary	Theft	Dacoity	Robbery	Bur-glary	Theft
1	BAGALORE CITY	291	702	1787	9681	142	322	691	4894
2	MYSORE CITY	07	92	194	630	02	44	42	254
3	HUBLI-DHARWAD CITY	09	78	155	422	03	26	67	138
4	BANGALORE DISTRICT	29	49	185	527	17	36	111	252
5	KOLAR	08	14	73	213	04	01	48	60
6	K.G.F.	02	10	59	64	00	01	22	22
7	TUMKUR	19	41	244	453	11	20	80	242
8	MYSORE DISTRICT	08	14	220	228	01	11	84	114
9	MANDYA	10	18	212	362	05	12	111	150
10	HASSAN	09	35	245	368	12	16	62	127
11	KODAGU	02	09	110	105	01	03	47	34
12	DAKSHINA KANNADA	05	38	187	256	01	11	105	115
13	UTTARA KANNADA	05	13	89	95	03	08	20	26
14	CHICKMAGALUR	05	26	151	201	00	07	46	57
15	BELGAUM	10	53	311	599	13	35	131	199
16	DHARWAD	03	07	23	49	01	01	07	21

17	BIJAPUR	11	19	146	151	01	07	59	68
18	GULBARGA	12	74	236	297	15	33	88	111
19	RAICHUR	05	20	72	137	03	04	26	35
20	BIDAR	03	24	147	203	03	09	60	74
21	CHITRADURGA	08	29	118	281	02	09	26	71
22	SHIMOGA	05	65	263	326	05	35	71	141
23	BELLARY	05	24	123	284	05	12	58	117
24	K.RAILWAYS	05	28	00	301	03	10	00	163
25	BAGALKOT	02	08	68	128	00	04	44	48
26	CHAMARAJNAGAR	04	10	76	128	00	01	34	58
27	UDUPI	05	19	127	133	03	12	49	43
28	KOPPAL	02	11	74	107	02	05	42	32
29	GADAG	02	06	58	87	00	02	25	23
30	HAVERI	06	09	72	118	04	06	35	69
31	DAVANAGERE	05	16	138	268	03	10	66	122
32	CHICKBALLAPUR	02	13	98	209	02	06	52	64
33	RAMNAGAR	14	41	199	409	07	12	94	220
	TOTAL	**518**	**1615**	**6258**	**17820**	**274**	**731**	**2503**	**8164**

ಕರ್ನಾಟಕ ವಿಧಾನ ಸಭೆ

211 ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಮಾನ್ಯ ಮುಖ್ಯಮಂತ್ರಿಗಳು

ಅ) ರಾಜ್ಯದ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-

1. ಆನೆಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ನಿರೋಧಕ ಕಂದಕಗಳ ನಿರ್ಮಾಣ ಮಾಡುವುದು.
2. ಆನೆಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.
3. ಆನೆಗಳು ಅರಣ್ಯ ಪ್ರದೇಶದಿಂದ ಸಾರ್ವಜನಿಕರ ವಸಾಹತುಗಳಿಗೆ ನುಗ್ಗಿ ಹಾವಳಿ ನಡೆಸುವುದನ್ನು ನಿಯಂತ್ರಿಸಲು ಕಾವಲುಗಾರರ ತಾತ್ಕಾಲಿಕ ಕಾವಲು ಪಡೆಗಳನ್ನು ನಿಯೋಜಿಸುವುದು.
4. ಅರಣ್ಯ ಪ್ರದೇಶಗಳಲ್ಲಿ ಆನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳುತೆಗೆಯುವುದು.
5. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಅರಣ್ಯಗಳಿಗೆ ಹಿಂದಕ್ಕೆ ಕಳುಹಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಇ) ರಾಜ್ಯದಲ್ಲಿ ಆಕಸ್ಮಿಕವಾಗಿ ಆನೆಗಳು ಸಾವಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಈ) ಹಾಗಿದ್ದಲ್ಲಿ, ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಆಕಸ್ಮಿಕ ಸಾವಿಗೀಡಾದ ಆನೆಗಳ ಸಂಖ್ಯೆ ಎಷ್ಟು (ವಲಯವಾರು ವಿವರಗಳನ್ನು ನೀಡುವುದು);

ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಆಕಸ್ಮಿಕ ಸಾವಿಗೀಡಾದ ಆನೆಗಳ ವಿವರ ಈ ಕೆಳಗಿನಂತಿದೆ.

ವಿಭಾಗ	ವಲಯ	2004 –05	2005 –06	2006 –07	2007 –08	2008 –09
ಬೆಂಗಳೂರು	ಆನೆಕಲ್					1
ರಾಮನಗರ	ಕನಕಪುರ					1
ಭದ್ರಾ ವಜೀ	ಲಕ್ಕವಳ್ಳಿ	1				
ಕೊಳ್ಳೇಗಾಲ	ಗುಂಡ್ಲುಪೇಟೆ	1	3	2	4	
	ಕೊಳ್ಳೇಗಾಲ			1		1
	ರಾಮಾಪುರ	1		1	2	
	ಎಂ.ಎಂ.ಹಿಲ್ಸ್	3	6	1	6	
	ಹಾನೂರು			1	1	
ಹುಣಸೂರು ವಜೀ	ಆನೆಚೌಕೂರು	1	1			1
	ನಾಗರಹೊಳೆ			1	1	1
	ವೀರನಹೊಸಳ್ಳಿ				1	
	ಮೇಟಿಕುಪ್ಪೆ				1	
	ಅಂತರಸಂತೆ					1
	ಡಿ.ಬಿ.ಕುಪ್ಪೆ					1
ಮಡಿಕೇರಿ	ಸೋಮವಾರ ಪೇಟೆ	1		1	3	
	ಕುಶಾಲನಗರ	2	3		1	1
	ಶನಿವಾರಸಂತೆ		1		5	1
	ತಿತಿಮತಿ			1		
ಹಳಿಯಾಳ	ಹಳಿಯಾಳ		1			
ಕಾವೇರಿ ವಜೀ	ಕೌದಳ್ಳಿ		1			
ಬಂಡೀಪುರ ವಜೀ	ಎ.ಎಂ. ಗುಡಿ		2			
	ಹೆಡಿಯಾಲ			1		
	ಓಂಕಾರ					9
ಮೈಸೂರು	ಹೆ.ಡಿ.ಕೋಟೆ			1	2	2
	ನಂಜನಗೂಡು			1	1	5
	ಸರಗೂರು					1

ಹಾಸನ	ಯಸಲೂರು			1	1	
ಒಟ್ಟು:		10	18	13	29	25

ಉ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಊ) ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಹಾಸನ ಜಿಲ್ಲೆಯ ಆಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯನ್ನು ಹತ್ತಿಕ್ಕುವ ಸಲುವಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಕಾಡಾನೆಗಳ ತಡೆಶಿಬಿರಗಳನ್ನು ಸ್ಥಾಪಿಸಿ ಕಾಡಾನೆಗಳು ಹಿಡುವಳಿ ಪ್ರದೇಶಗಳಿಗೆ ದಾಳಿಮಾಡದಂತೆ ಕ್ರಮಕೈಗೊಳ್ಳಲಾಗಿದೆ. ಪ್ರತಿಯೊಂದು ಕ್ಯಾಂಪಿನಲ್ಲಿ ನಾಲ್ಕು ಮಂದಿ ನುರಿತ ಸಿಬ್ಬಂದಿಯನ್ನು ನಿಯೋಜಿಸಿ ಅವರುಗಳಿಗೆ ನಿಸ್ತಂತು ಉಪಕರಣ, ಬಂದೂಕು ಹಾಗೂ ವಾಹನಗಳ ಸೌಲಭ್ಯ ಒದಗಿಸಲಾಗಿದೆ. ಅದಲ್ಲದೇ ಅವರುಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿದ್ದು ಕಾಡಾನೆಗಳು ಹಿಡುವಳಿ ಪ್ರದೇಶಗಳಿಗೆ ಬರದಂತೆ ಅಗತ್ಯ ಮುಂಜಾಗ್ರತೆ ವಹಿಸಲಾಗಿರುತ್ತದೆ. ಮಾನವ ಹತ್ಯೆಯನ್ನು ಮಾಡಿ ಉದ್ವಿಗ್ನ ಸ್ಥಿತಿಯನ್ನು ಉಂಟುಮಾಡಿದಂತಹ ಪುಂಡ ಕಾಡಾನೆಗಳನ್ನು ಗುರುತಿಸಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ 2005-06ನೇ ಸಾಲಿನಲ್ಲಿ ಎರಡು, 2006-07ನೇ ಸಾಲಿನಲ್ಲಿ ಒಂದು, 2007-08ನೇ ಸಾಲಿನಲ್ಲಿ ಮೂರು ಮತ್ತು 2009-10ನೇ ಸಾಲಿನಲ್ಲಿ ಎರಡು ಕಾಡಾನೆಗಳನ್ನು ಸೆರೆಹಿಡಿಯಲಾಗಿದೆ.

ಅಲ್ಲದೇ ಯಸಳೂರು ವಲಯದ ಬಿಸಲೆ ರಕ್ಷಿತಾರಣ್ಯದ ಸುತ್ತ 3 ಕಿ.ಮೀ. ಉದ್ದದ ಆನೆ ತಡೆ ಕಂದಕವನ್ನು ರಚಿಸಲಾಗಿದ್ದು ಬಹಳ ಹಿಂದಿನಿಂದಲೂ ಇರುವ ಆನೆಹಾವಳಿಯನ್ನು ಶಾಶ್ವತವಾಗಿ ನಿಯಂತ್ರಿಸುವ ಸಲುವಾಗಿ ಭಾರತ ಸರ್ಕಾರದ ಸ್ಟೀರಿಂಗ್ ಕಮಿಟಿ ಸದಸ್ಯರಾದ ಶ್ರೀ. ಎಂ. ಕೆ. ಅಪ್ಪಯ್ಯ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಶ್ರೀ ಅಜಯ್ ದೇಸಾಯಿ ರವರು ದಿನಾಂಕ: 3 ಮತ್ತು 4 ಜನವರಿ 2007ರಂದು ಹಾಸನ ಜಿಲ್ಲೆಗೆ ಬೇಟಿಕೊಟ್ಟು ಇಲ್ಲಿನ ಸ್ಥಿತಿಗತಿಗಳನ್ನು ಅವಲೋಕಿಸಿ ವರದಿಯ ಶಿಫಾರಸ್ಸಿನ ಮೇರೆಗೆ 25 ಕಾಡಾನೆಗಳನ್ನು ಸೆರೆಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಅನುಮತಿ ನೀಡಬೇಕೆಂದು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರವು ಕೆಲವು ಮಾಹಿತಿ ಕೋರಿದ್ದು, ಸದರಿ ಮಾಹಿತಿಯನ್ನು ಸಧ್ಯದಲ್ಲಿಯೇ ಕೇಂದ್ರ ಸರ್ಕಾರಕ್ಕೆ ಒದಗಿಸಲಾಗುವುದು.

ಋ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಸತ್ತವರ ಸಂಖ್ಯೆ ಎಷ್ಟು; ಸತ್ತವರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ;

ಕಳೆದ 3 ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಸತ್ತವರ ವಿವರ ಈ ಕೆಳಗಿನಂತಿದೆ

ವರ್ಷ	ಆನೆ ಹಾವಳಿಯಿಂದ ಸತ್ತವರ ಸಂಖ್ಯೆ
2006-07	24
2007-08	36
2008-09	40

ಮೃತರ ಕುಟುಂಬಗಳಿಗೆ ಸರ್ಕಾರದ ಆದೇಶ ಪ್ರಕಾರ ಈಗಾಗಲೇ ಎಕ್ಸ್‌ಗ್ರೇಷಿಯಾವನ್ನು ಪಾವತಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಅಪಜೀ 259 ಡಫ್‌ಡಬ್ಲ್ಯೂಎಲ್ 2006 ದಿನಾಂಕ: 17-01-2007ರ ಪ್ರಕಾರ ಪ್ರಸ್ತುತ ಕಾಡಾನೆಯಿಂದ ಮಾನವಹತ್ಯೆಯಾದ ಪ್ರಕರಣದಲ್ಲಿ ಗರಿಷ್ಠ ರೂ. 1,50,000/- ಗಳ ದಯಾತ್ಮಕ ಧನವನ್ನು ನೀಡಲಾಗುತ್ತಿದೆ.

ಎ) ಈಗ ನೀಡುತ್ತಿರುವ ಪರಿಹಾರ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು;

2008-09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ 13ನೇ ವಿಧಾನ ಸಭೆ ಮೊದಲನೆ ವರದಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಹಾನಿ ಪ್ರಕರಣಗಳಿಗೆ ದಯಾತ್ಮಕಧನವನ್ನು ಪಾವತಿಸುವ ವಿಷಯದ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಕನಿಷ್ಠ ರೂ. 2.00 ಲಕ್ಷಗಳ ವರೆಗೆ ಪರಿಷ್ಕರಿಸಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಏ) ಹಾಸನ ಜಿಲ್ಲೆಯಲ್ಲಿ ಆನೆಧಾಮ ಸ್ಥಾಪಿಸುವುದಾಗಿ ಸರ್ಕಾರ ಭರವಸೆ ನೀಡಿದ್ದು ನಿಜವೇ; ಹಾಗಿದ್ದಲ್ಲಿ, ಭರವಸೆಯನ್ನು ಈಡೇರಿಸಲಾಗಿದೆಯೇ?

ಇಲ್ಲ.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಸಂಖ್ಯೆ: ಅಪಜೀ 100 ಎಫ್‌ಡಬ್ಲ್ಯೂಎಲ್ 2009

ಕರ್ನಾಟಕ ವಿಧಾನ ಸಭೆ
13ನೇ ವಿಧಾನಸಭೆ
3ನೇ ಅಧಿವೇಶನ

212
ಶ್ರೀ. ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
ಮಾನ್ಯ ಲೋಕೋಪಯೋಗಿ ಸಚಿವರು.

ಅ) ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಯೋಜನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ರಸ್ತೆಗಳೆಷ್ಟು (ಪ್ಯಾಕೇಜ್‌ವಾರು ವಿವರಗಳನ್ನು ನೀಡುವುದು);

ಪಿಪಿಪಿ ಯೋಜನೆಯಲ್ಲಿ 8597 ಕಿಮೀ. ಉದ್ದದ ರಾಜ್ಯ ಹೆದ್ದಾರಿಗಳು, 1176 ಕಿಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು 2866 ಕಿಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.
ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಪ್ಯಾಕೇಜ್‌ವಾರು ವಿವರಗಳನ್ನು ಅನುಬಂಧ-1 ರಲ್ಲಿ ಮತ್ತು ಗ್ರಾಮೀಣ ರಸ್ತೆಗಳ ವಿವರಗಳನ್ನು ಅನುಬಂಧ-2 ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಿದೆ.

ಆ) ಈ ಯೋಜನೆ ಯಾವ ಹಂತದಲ್ಲಿದೆ; ಇದಕ್ಕೆ ಖಾಸಗಿ ಗುತ್ತಿಗೆದಾರರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆಯೇ;

ಈ ಯೋಜನೆಯ ಮೊದಲನೇ ಹಂತದ ರಸ್ತೆಗಳಿಗೆ ಕಾರ್ಯಸಾಧ್ಯತಾ ವರದಿ ಮತ್ತು ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ಯೋಜನಾ ವಿವರಗಳು ತಯಾರಿಕೆಯ ಹಂತದಲ್ಲಿರುತ್ತದೆ. ಪೂರ್ವಾರ್ಹತೆ ಸಭೆಗಳಲ್ಲಿ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಉತ್ತಮ ಪ್ರತಿಕ್ರಿಯೆ ಬಂದಿರುತ್ತದೆ.

ಇ) ಹಾಗಿದ್ದಲ್ಲಿ, ಈ ಯೋಜನೆ ಯಾವಾಗ ಅನುಷ್ಠಾನಗೊಳ್ಳುತ್ತದೆ (ಯೋಜನೆಯ ವೇಳಾಪಟ್ಟಿಯನ್ನು ನೀಡುವುದು);

ಮೊದಲ ಹಂತದ ರಸ್ತೆಗಳನ್ನು 2009-10ನೇ ಸಾಲಿನಲ್ಲಿ ಅನುಷ್ಠಾನಗೋಳಿಸಲು ಉದ್ದೇಶಿಸಿದೆ.

ಈ) ಈ ಯೋಜನೆಯನ್ನು 2009-10ನೇ ಆಯವ್ಯಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪ್ರಸ್ತಾಪಿಸಿರುವುದು ನಿಜವೇ;

ಈ ಯೋಜನೆಯನ್ನು 2009-10 ರಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

ಉ) ಹಾಗಿದ್ದಲ್ಲಿ, ಇದಕ್ಕಾಗಿ ಈ ಸಾಲಿನಲ್ಲಿ ಎಷ್ಟು ಹಣ ನಿಗಧಿಪಡಿಸಲಾಗಿದೆ;

ಈ ಯೋಜನೆಯ ಅನುಷ್ಠಾನಕ್ಕಾಗಿ 500 ಕೋಟಿ ರೂ.ಗಳ ಮೂಲ ನಿಧಿಯನ್ನು (corpus fund) ನಿಗದಿಪಡಿಸಲಾಗಿದೆ.

ಊ) ಇಲ್ಲಿಯವರೆಗೆ ಈ ಯೋಜನೆಯಲ್ಲಿ ಎಷ್ಟು ಹಣ ಖರ್ಚುಮಾಡಲಾಗಿದೆ? (ಪ್ಯಾಕೇಜುವಾರು ವಿವರ ನೀಡುವುದು)

ಈ ಯೋಜನೆಯ ಕಾರ್ಯಸಿದ್ಧತೆ ಪ್ರಕ್ರಿಯೆಯಲ್ಲಿರುವುದರಿಂದ, ಯಾವುದೇ ವೆಚ್ಚ ಮಾಡಲಾಗಿರುವುದಿಲ್ಲ.

ಸಂಖ್ಯೆ:ಲೋಇ/100/ಎಲ್‌ಎಕ್ಯೂ/ಇಎಪಿ/2009

(ಸಿ.ಎಂ.ಉದಾಸಿ)
ಲೋಕೋಪಯೋಗಿ ಸಚಿವರು.

Y-II-50

PPP-Package 1 (6 Lane Road)							
District	**Road Name**	**Taluk**	**Road No.**	**Road Connectivity with Origin & Destination**	**Length in Taluk (Kms)**	**PCU**	**Total length**
Banglore South	Bangalore-Mysore Road	Bangalore	SH-17	From Bangalore to Ramnagar Taluk Border	12.72	67511	201.12
Ramnagar		Ramnagara		From Ramnagara Taluk border to Channapatna Taluk border	28.90		
		Channapatna	SH-17	From Channapatna Taluk border-Maddur Taluk border	16.20	59669	
Mandya		Maddur	SH-17	From maddur Taluk border- Mandya Taluk border	15.87	71651	
		Mandya	SH-17	From Mandya Taluk border-Srirangapatna Taluk border	25.53	30969	
		Srirangapatna	SH-17	From Mandya Taluk border to Mysore Taluk border	18.20	25982	
Mysore		Mysore	SH-17	From Srirangapatna Taluk border-Mysore	9.20		
ಅ) ರಾಜ್ಯದಲ್ಲಿ ಕೋಮುವಾದಿ ಹಾಗೂ ಮತೀಯ ಶಕ್ತಿಗಳನ್ನು ನಿಯಂತ್ರಿಸಲು ಸರ್ಕಾರ ಯಾವುದಾದರೂ ಕಾನೂನು ಜಾರಿಗೊಳಿಸುವುದೇ?

ರಾಜ್ಯದಲ್ಲಿ ಕೋಮುವಾದಿ ಹಾಗೂ ಮತೀಯ ಶಕ್ತಿಗಳನ್ನು ನಿಯಂತ್ರಿಸಲು ಸರ್ಕಾರ ಬೇರೆ ಯಾವುದಾದರೂ ಕಾನೂನು ಜಾರಿಗೊಳಿಸುವ ಅವಶ್ಯಕತೆ

ಇರುವುದಿಲ್ಲ. ಪ್ರಸ್ತುತ ಈಗಿರುವ ಕಾನೂನಿನಂತೆ ಕಟ್ಟುನಿಟ್ಟಾಗಿ ಕ್ರಮಕೈಗೊಂಡರೆ ಸಾಕು. ಮತೀಯ ಗಲಭೆಗಳಲ್ಲಿ ಈ ಕೆಳಕಂಡಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

1. ಆರೋಪಿಗಳನ್ನು ದಸ್ತಗಿರಿ ಮಾಡಿ, ದಸ್ತಗಿರಿ ಮಾಡಿರುವ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸುವುದು.
2. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಪೊಲೀಸ್ ಪ್ಯಾಟ್ರೋಲಿಂಗ್ ವ್ಯವಸ್ಥೆ ಮಾಡುವುದು.
3. ಜಿಲ್ಲಾ ಮಟ್ಟದಲ್ಲಿ ಶಾಂತಿ ಸಭೆ ನಡೆಸಲು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಅಧೀಕ್ಷಕರು, ಜಿಲ್ಲೆಯ ಶಾಸಕರು, ಹಿಂದುಳಿದ ವರ್ಗದ ಮುಖಂಡರನ್ನೊಳಗೊಂಡಂತೆ 2 ತಿಂಗಳಿಗೊಮ್ಮೆ ಶಾಂತಿಸಭೆಯನ್ನು ಏರ್ಪಡಿಸಲು ಸಂಬಂಧಪಟ್ಟ ಪೊಲೀಸ್ ಅಧೀಕ್ಷಕರಿಗೆ ಸೂಚನೆಗಳನ್ನು ನೀಡಲಾಗಿದೆ.
4. ಪೂಜಾ ಸ್ಥಳಗಳಿಗೆ ಭದ್ರತೆಯನ್ನು ಒದಗಿಸಲಾಗಿದೆ.

ಎಲ್ಲಾ ಘಟಕಾಧಿಕಾರಿಗಳಿಗೆ ಕೋಮು ಗಲಭೆಗಳು ಸಂಭವಿಸಿದಲ್ಲಿ ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲು ಸೂಚನೆಯನ್ನು ಈಗಾಗಲೇ ನೀಡಲಾಗಿದೆ.

ಯಾರಾದರೂ ಕಾನೂನು ಬಾಹಿರ ಮತ್ತು ಹಿಂಸಾಚಾರ ಚಟುವಟಿಕೆಗಳಲ್ಲಿ ತೊಡಗಿದ್ದಲ್ಲಿ ಅಂತಹವರ ವಿರುದ್ಧ ಹಿಂಜರಿಯದೇ ಕಾನೂನು ರೀತಿಯಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. ಮುಂಗಡ ಗುಪ್ತಮಾಹಿತಿ ಸಂಗ್ರಹಿಸಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಇಂತಹ ಘಟನೆಗಳನ್ನು ನಡೆಯುವುದನ್ನು ತಡೆಗಟ್ಟಲು ಸೂಚಿಸಿದೆ.

ಆ) ಹಾಗಿದ್ದಲ್ಲಿ, ಈ ಕಾನೂನಿನ ರೂಪರೇಷೆಗಳೇನು;

(ಅ) ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ

(ಆ) ಉಪ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಈ ಕಾನೂನನ್ನು ಯಾವಾಗ ಜಾರಿಗೆ ತರಲಾಗುವುದು?

(ಅ) ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ

(ಆ) ಉಪ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

<u>ಕರ್ನಾಟಕ ವಿಧಾನ ಸಭೆ</u>

582 ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಮುಖ್ಯ ಮಂತ್ರಿಗಳು

ಅ) ನಿವೃತ್ತ ಸರ್ಕಾರಿ ನೌಕರರಿಗೆ 5ನೇ ವೇತನ ಆಯೋಗವು ಶಿಫಾರಸ್ಸು ಮಾಡಿದ ಸೌಲಭ್ಯಗಳು ಯಾವುವು?

5ನೇ ವೇತನ ಆಯೋಗವು ನಿವೃತ್ತಿ ವೇತನದಾರರಿಗೆ ಈ ಕೆಳಗಿನಂತೆ ಶಿಫಾರಸ್ಸುಗಳನ್ನು ಮಾಡಿದೆ.

(1) ಕನಿಷ್ಟ ನಿವೃತ್ತಿ ವೇತನ, ಕುಟುಂಬ ನಿವೃತ್ತಿ ವೇತನವನ್ನು ರೂ.2250ಕ್ಕೆ ಹೆಚ್ಚಿಸುವುದು.

(2) ಹಿಂದೆ ನಿವೃತ್ತಿಯಾದವರ ನಿವೃತ್ತಿ ವೇತನವನ್ನು ಅವರು ನಿವೃತ್ತಿ ದಿನಾಂಕದಂದು ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದ ಶೇಕಡ 50ರಷ್ಟು ನಿವೃತ್ತಿ ವೇತನ ನೀಡುವುದು ಹಾಗೂ ಕುಟುಂಬ ವೇತನವು ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಟ ಹಂತದ ಶೇಕಡ 30ರಷ್ಟು ನೀಡುವುದು.

(3) ನಿವೃತ್ತಿದಾರರ ಕುಂದು ಕೊರತೆಗಳನ್ನು ಸಕಾಲದಲ್ಲಿ ಪರಿಶೀಲಿಸಿ ಪರಿಹಾರ ನೀಡಲು ನಿವೃತ್ತಿ ವೇತನದಾರರ ನಿರ್ದೇಶನಾಲಯ ಸ್ಥಾಪಿಸುವುದು.

(4) ರಾಜ್ಯ ನಿವೃತ್ತ ನೌಕರರಿಗೂ ಮತ್ತು ಕುಟುಂಬ ವೇತನದಾರರಿಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಸಲುವಾಗಿ ಒಂದು ಯೋಜನೆಯನ್ನು ಜಾರಿಗೆ ತರುವುದು.

ಆ) ಆಯೋಗದವರು ಮಾಡಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಜರುಗಿಸಿದೆಯೇ

ಹೌದು.

ಕನಿಷ್ಟ ನಿವೃತ್ತಿ ವೇತನ ಮತ್ತು ಕನಿಷ್ಟ ಕುಟುಂಬ ನಿವೃತ್ತಿ ವೇತನವನ್ನು ರೂ2250ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಇನ್ನುಳಿದ ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ.

ಇ) ಹಾಗಿಲ್ಲದಿದ್ದಲ್ಲಿ ಸಕಾಲದಲ್ಲಿ ಶಿಫಾರಸ್ಸುಗಳ ಜಾರಿ ಕುರಿತಾದ ಕ್ರಮ ಜರುಗಿಸಲು ಸರ್ಕಾರ ಮುಂದಾಗುವುದೇ?

ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

<u>ಕರ್ನಾಟಕ ವಿಧಾನ ಸಭೆ</u>

584 ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈಗಾಗಲೇ ನಿವೇಶನ ಹಂಚಿಕೆ ಪ್ರಕ್ರಿಯೆ ಮುಗಿದು ಹಲವಾರು ವರ್ಷಗಳು ಕಳೆದರೂ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸದೇ ಇರುವ ಬಡಾವಣೆಗಳಾವುವು; (ವಿವರ ನೀಡುವುದು);

1) ಅಂಜನಾಪುರ ಮುಂದುವರೆದ ಬಡಾವಣೆ	ವಿದ್ಯುತ್ ಸೌಲಭ್ಯ ಒದಗಿಸಲಾಗಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ.
2) ಬನಶಂಕರಿ 6ನೇ ಹಂತದ ಮುಂದುವರೆದ ಬಡಾವಣೆ	ವಿದ್ಯುಚ್ಛಕ್ತಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ.
3) ಸರ್.ಎಂ.ವಿ. ನಗರ ಬಡಾವಣೆ	ವಿದ್ಯುಚ್ಛಕ್ತಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ.
4) ಸರ್.ಎಂ.ವಿ. ನಗರ ಮುಂದುವರೆದ ಬಡಾವಣೆ	ವಿದ್ಯುಚ್ಛಕ್ತಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ.
5) ಅರ್ಕಾವತಿ ಬಡಾವಣೆ	ಸದರಿ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಸಂಬಂಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ, ವಿಚಾರಣೆ ಮುಗಿದಿದ್ದು, ತೀರ್ಪು ನಿರೀಕ್ಷಿಸಲಾಗಿರುವ ಹಿನ್ನೆಲೆಯಲ್ಲಿ ಯಾವುದೇ ಸೌಲಭ್ಯ ಕಲ್ಪಿಸಲಾಗಿರುವುದಿಲ್ಲ.

ಆ) ಅವುಗಳಿಗೆ ಅವಶ್ಯಕ ಸೌಕರ್ಯಗಳನ್ನು ಒದಗಿಸಿಕೊಡಲು ತುರ್ತು ಕ್ರಮಗಳನ್ನು ಸರಕಾರ ಜರುಗಿಸುವುದೆ;

ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಬಡಾವಣೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ಕೋರಲಾಗಿದ್ದು, ಅಗತ್ಯ ವೆಚ್ಚವನ್ನು ಭರಿಸಲು ಪ್ರಾಧಿಕಾರವು ಸನ್ನದ್ಧವಾಗಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಬಡಾವಣೆಗಳಲ್ಲಿ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಲು ಪ್ರಾಧಿಕಾರವು ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.

ಇ) ನಿವೇಶನದಾರರು ವಸತಿ ನಿರ್ಮಿಸಿ ಕೊಳ್ಳಲು ಅನಾನುಕೂಲತೆಗಳನ್ನು ಎದುರಿಸುತ್ತಿದ್ದು, ತೆರಿಗೆ ಪಾವತಿ ಮಾಡುತ್ತಿದ್ದರೂ ಸೌಕರ್ಯಗಳಿಂದ ವಂಚಿತ ರಾಗಿರುವುದನ್ನು ಗಮನಿಸಿ ಕೂಡಲೇ ಗೃಹ ನಿರ್ಮಾಣಕ್ಕೆ ಅನುಕೂಲ ಮಾಡಿಕೊಡಲು ಸರಕಾರದ ಕ್ರಮಗಳೇನು?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ ಬಡಾವಣೆಗಳಲ್ಲಿ ರಸ್ತೆ ಕಾಮಗಾರಿಗಳು, ಚರಂಡಿ ಕಾಮಗಾರಿಗಳನ್ನು ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ

ಮಂಡಳಿಯು ಅಂದಾಜುಗಳನ್ನು ಸಿದ್ಧಪಡಿಸಿದ್ದು, ಸರ್.ಎಂ.ವಿ.ನಗರ ಬಡಾವಣೆಗೆ ಮೊದಲ ಕಂತಿನ ಠೇವಣಿಯನ್ನು ಸಹ ಪ್ರಾಧಿಕಾರದಿಂದ ಪಾವತಿಸಲಾಗಿದೆ.

ಕರ್ನಾಟಕ ವಿಧಾನ ಸಭೆ

586 ಶ್ರೀ ಹ್ಯಾರಿಸ್ ಎನ್.ಎ.

ಮಾನ್ಯ ಮುಖ್ಯಮಂತ್ರಿಯವರು

ಅ) ಬೃಹತ್ ಬೆಂಗಳೂರು ಮಹಾನಗರದ ಸಮಗ್ರ ಅಭಿವೃದ್ಧಿಗಾಗಿ ಸರಕಾರ ಹಮ್ಮಿಕೊಂಡ ನೂತನ ಯೋಜನೆಗಳೇನು (ವಿವರ ನೀಡುವುದು);

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.

ಆ) ಅವುಗಳನ್ನು ಅನುಷ್ಠಾನಕ್ಕೆ ನಿಗದಿಪಡಿಸಿರುವ ಕಾಲಾವಧಿ ಎಷ್ಟು;

ಬಿ.ಬಿ.ಎಂ.ಪಿ.ಯಿಂದ ಕೈಗೊಂಡ ಎಲ್ಲಾ ಕಾಮಗಾರಿಗಳನ್ನು ಮುಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಿದೆ.

ಬಿ.ಡಿ.ಎ. ವತಿಯಿಂದ ಕೈಗೊಂಡ ಎಲ್ಲಾ ಕಾಮಗಾರಿಗಳ ಕಾಲಾವಧಿಯ ವಿವರಗಳು **ಅನುಬಂಧ-2**ರಲ್ಲಿಯೇ ಒಳಗೊಂಡಿದೆ.

ಇ) ಸಮಗ್ರ ಅಭಿವೃದ್ಧಿ ಕುರಿತಾದ ಯೋಜನೆಗಳ ಜಾರಿಗೆ ಅಗತ್ಯವಿರುವ ಸಂಪನ್ಮೂಲಗಳೇನು (ವಿವರ ನೀಡುವುದು);

ಬಿ.ಬಿ.ಎಂ.ಪಿ.ಗೆ ಸಂಬಂಧಿಸಿದ ಯೋಜನೆಗಳಿಗೆ ಸಂಪನ್ಮೂಲವನ್ನು ಪಾಲಿಕೆಯ ಆಸ್ತಿ ತೆರಿಗೆ ಮುಖಾಂತರ, ಸಾಲದ ಮುಖಾಂತರ ಹಾಗೂ ರಾಜ್ಯ ಮತ್ತು ಕೇಂದ್ರಗಳ ಮೂಲಕ ವಿಶೇಷ ಅನುದಾನದ ಮೂಲಕ ಅನುಷ್ಠಾನಗೊಳಿಸಿ ಯೋಜಿಸಲಾಗಿದೆ.

ಬಿ.ಡಿ.ಎ.ಗೆ ಸಂಬಂಧಿಸಿದ ಯೋಜನೆಗಳಿಗೆ ಪ್ರಾಧಿಕಾರದ ಸ್ವಂತ ಸಂಪನ್ಮೂಲಗಳಿಂದ ಜಾರಿಗೊಳಿಸಲಾಗುವುದು.

ಈ) ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಸರಕಾರದಿಂದ ಎಷ್ಟು ಮೊತ್ತದ ಅನುದಾನವನ್ನು ಪಡೆಯಲಾಗುತ್ತಿದೆ?

2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಜೆ.ಎನ್.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ ಬೆಂಗಳೂರಿನ 15 ಅನುಮೋದಿತ ಯೋಜನೆಗಳಿಗಾಗಿ ರೂ.126.28 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಜೆ.ಎನ್.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ 2006-07ನೇ ಸಾಲಿನಿಂದ ಈವರೆವಿಗೂ ರೂ.3612.95 ಕೋಟಿಗಳ ಮೊತ್ತದ 47 ಯೋಜನೆಗಳು

ಬೆಂಗಳೂರು ನಗರಕ್ಕೆ ಮಂಜೂರಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ.1320.17 ಕೋಟಿಗಳು.

ಅನುಬಂಧ-1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ವರ್ತುಲ ರಸ್ತೆಯಿಂದ ಥಣಿಸಂದ್ರ ಮುಖ್ಯ ರಸ್ತೆ ಮಾರ್ಗ ಬೆಳ್ಳಳ್ಳಿ ಕ್ರಾಸ್ ವರೆಗಿನ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	2500.00
2	ಯಶವಂತಪುರದಲ್ಲಿ – ಯಲಹಂಕ ಮುಖ್ಯ ರಸ್ತೆಯನ್ನು ಎಂ.ಎಸ್.ಪಾಳ್ಯದಿಂದ ಯಲಹಂಕ ಮದರ್ ಡೈರಿ ಸರ್ಕಲ್‌ವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	1200.00
3	ಬಾಗಲೂರು ಮುಖ್ಯರಸ್ತೆಯನ್ನು ಬೆಂಗಳೂರು – ಬಳ್ಳಾರಿ ಮುಖ್ಯರಸ್ತೆಯಿಂದ ಬಾಗಲೂರುವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ ಡಾಂಬರೀಕರಣಗೊಳಿಸುವ ಕಾಮಗಾರಿ.	3194.00
4	ಕೋಗಿಲು ಮುಖ್ಯರಸ್ತೆಯನ್ನು ಬೆಂಗಳೂರು – ಬಳ್ಳಾರಿ ಮುಖ್ಯರಸ್ತೆಯಿಂದ (ಕೋಗಿಲು ಕ್ರಾಸ್) ಕಣ್ಣೂರು ಜಂಕ್ಷನ್‌ವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	2143.00
5	ಹೆಣ್ಣೂರು ಮುಖ್ಯರಸ್ತೆಯನ್ನು ವರ್ತುಲ ರಸ್ತೆಯಿಂದ ಮೈಲನ ಹಳ್ಳಿ ಗ್ರಾಮದವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	7775.00
6	ಯಲಹಂಕ – ಯಶವಂತಪುರ ಮುಖ್ಯ ರಸ್ತೆಯಿಂದ ತಿಂಡ್ಲು ಗ್ರಾಮ, ಜಿ.ಕೆ.ವಿ.ಕೆ ಮಾರ್ಗವಾಗಿ ರಾ.ಹೆ–7 ನ್ನು ಸಂಪರ್ಕಿಸುವ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	2356.00
7	ರಾ.ಹೆ – 7 ರಸ್ತೆಯಿಂದ ಜಕ್ಕೂರು ಫ್ಲೈಯಿಂಗ್ ಕ್ಲಬ್ ಮಾರ್ಗವಾಗಿ ಕ್ಯಾಲಸನಹಳ್ಳಿ ಸಂಪರ್ಕಿಸುವ ರಸ್ತೆಯನ್ನು	2918.00

	ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	
8	ಡಿಫೆನ್ಸ್ ಬಡಾವಣೆಯ ಜುಮ್ ಜುಮ್ ಗೇಟ್‌ನಿಂದ ಗಂಗಮ್ಮ ವೃತ್ತದವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಿಸುವ ಕಾಮಗಾರಿ.	2000.00
9	ದೊಡ್ಡಬಳ್ಳಾಪುರ ರಸ್ತೆಯನ್ನು ಯಲಹಂಕ ಪೋಲೀಸ್ ಠಾಣೆ ವೃತ್ತದಿಂದ ನಾಗೇನಹಳ್ಳಿ ಗೇಟ್‌ವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ.	2640.00
10	ಅಳ್ಳಾಳ ಸಂದ್ರ ಕೆರೆ ಅಭಿವೃದ್ಧಿ ಕಾಮಗಾರಿ.	1008.00
11	ಅಳ್ಳಾಳ ಸಂದ್ರ ಮುಖ್ಯ ರಸ್ತೆಯನ್ನು ರೈಲ್ವೆ ಗೇಟ್‌ನಿಂದ ಪೋಲೀಸ್ ಠಾಣೆವರೆಗೆ ರಸ್ತೆಯನ್ನು ಅಗಲೀಕರಿಸಿ, ಅಭಿವೃದ್ಧಿಗೊಳಿಸಿ, ಡಾಂಬರೀಕರಣಗೊಳಿಸುವ ಕಾಮಗಾರಿ ಮತ್ತು ಸೇತುವೆ ವಿಸ್ತರಣೆ ಕಾಮಗಾರಿ.	658.00
12	ಬೆಂಗಳೂರು ನಗರದಲ್ಲಿನ ಆಯ್ದ ಪ್ರಮುಖ 12 ರಸ್ತೆಗಳನ್ನು (109 ಕಿ.ಮೀ ಉದ್ದ) ಸಿಗ್ನಲ್ ಮುಕ್ತ ಕಾರಿಡಾರ್ ಅನ್ನಾಗಿ ಪರಿವರ್ತಿಸುವ ಯೋಜನೆ.	2500.00
13	ಬೆಂಗಳೂರು ನಗರದಲ್ಲಿ ಪ್ರಮುಖ ರಸ್ತೆಗಳಲ್ಲಿ ಮೇಲು ಸೇತುವೆ ರಸ್ತೆ, ಗ್ರೇಡ್ ಸೆಪರೇಟರ್, ಅಂಡರ್‌ಪಾಸ್, ಪಾದಚಾರಿ ಸುರಂಗ ಮಾರ್ಗ ನಿರ್ಮಾಣದ ಯೋಜನೆ.	2178.00
14	ಬೆಂಗಳೂರು ನಗರದಲ್ಲಿ ಪ್ರಮುಖ ರಸ್ತೆಗಳಲ್ಲಿ ರೈಲ್ವೆ ಮಾರ್ಗ ಸಂಧಿಸುವ ಭಾಗದಲ್ಲಿ ಗುರುತಿಸಿರುವ ಸುಮಾರು 40 ಸ್ಥಳಗಳಲ್ಲಿ ರೈಲ್ವೆ ಸಂಚಾರಕ್ಕಾಗಿ ಕೆಳ ಮತ್ತು ಮೇಲು ಸೇತುವೆ ನಿರ್ಮಾಣದ ಯೋಜನೆ.	355.00
15	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ 5 ವಲಯಗಳಲ್ಲಿನ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಜಾಲವನ್ನು ಉನ್ನತಮಟ್ಟದ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸುವ ಯೋಜನೆ.	2500.00

(ಎಸ್.ಎನ್.ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

2009-10ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉದ್ದೇಶಿತ ಕಾಮಗಾರಿಗಳ ಪಟ್ಟಿ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)	ಅನುಷ್ಠಾನಕ್ಕೆ ನಿಗಧಿಪಡಿಸಿರುವ ಕಾಲಾವಧಿ
1	ಮೈಸೂರು ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ಕಾಮಗಾರಿ	1000.00	24
2	ತುಮಕೂರು ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ಕಾಮಗಾರಿ	500.00	24
3	ಜೆ.ಸಿ.ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ಕಾಮಗಾರಿ	100.00	24
4	ಲಾಲ್‌ಬಾಗ್ ರಸ್ತೆಯಲ್ಲಿ ಮೇಲ್ಸೇತುವೆ ಕಾಮಗಾರಿ	60.00	18
5	ಕಿತ್ತೂರು ರಾಣಿ ಚೆನ್ನಮ್ಮವೃತ್ತದಲ್ಲಿ ಮೇಲ್ಸೇತುವೆ ಕಾಮಗಾರಿ	35.00	18
6	ಕನಕಪುರ ಮುಖ್ಯರಸ್ತೆ ಮತ್ತು ಕೋಣನಕುಂಟೆ ಮುಖ್ಯರಸ್ತೆ, ಉತ್ತರಹಳ್ಳಿ ಮುಖ್ಯರಸ್ತೆ ಕೂಡುಸ್ಥಳದಲ್ಲಿ ರಸ್ತೆ ವಿಭಜಕ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಯನ್ನು ಹೊರವರ್ತುಲ ರಸ್ತೆಯಿಂದ ನೈಸ್ ರಸ್ತೆಯವರೆಗೆ ನಿರ್ಮಾಣ	35.00	18
7	ರಾಜಾಜಿನಗರ ಕಾರ್ಡ್ ರಸ್ತೆ ಅಡ್ಡಲಾಗಿ ವಾಟಾಳ್ ನಾಗರಾಜ್ ರಸ್ತೆ ಸೇರುವ ಜಂಕ್ಷನ್ ಬಳಿ ಅಂಡರ್ ಪಾಸ್ ನಿರ್ಮಾಣ ಹಾಗೂ ರಾಜಾಜಿನಗರ 41ನೇ ಅಡ್ಡರಸ್ತೆ ಹಾಗೂ ಶಿವನಗರ 8ನೇ ಮೈನ್ ಜಂಕ್ಷನ್ ಬಳಿ ಅಂಡರ್‌ಪಾಸ್ ನಿರ್ಮಾಣ	50.00	24

8	ಕೇಂದ್ರೀಯ ಸದನದ ಹತ್ತಿರ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ	35.00	18
9	80 ಅಡಿ ರಸ್ತೆ ಮತ್ತು ಕೋರಮಂಗಳ ರಿಂಗ್ ರಸ್ತೆ ಕೂಡುಸ್ಥಳದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ	25.00	18
10	ಹೊರವರ್ತುಲ ರಸ್ತೆಯಲ್ಲಿ ತಡೆರಹಿತ ಸಂಚಾರ ವ್ಯವಸ್ಥೆ	125.00	24
11	ಹಡ್ಸನ್ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ	50.00	24
12	ಮಾಗಡಿ ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ಕಾಮಗಾರಿ	800.00	24
13	ಗೋವಿಂದರಾಜನಗರದ ಸಂಗೊಳ್ಳಿರಾಯಣ್ಣ ರಸ್ತೆಯಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ	30.00	24
14	ಮೂಡಲಪಾಳ್ಯ ಜಂಕ್ಷನ್ ಹತ್ತಿರ ಗ್ರೇಡ್ ಸೆಪರೇಟರ್ ಕಾಮಗಾರಿ	25.00	18
15	ಬೆಂಗಳೂರು ನಗರದಾದ್ಯಂತ 32 ಸ್ಥಳಗಳಲ್ಲಿ ಆರ್.ಓ.ಬಿ/ಆರ್.ಯು.ಬಿ ನಿರ್ಮಾಣ	350.00	24
16	ಹೊಸೂರು ರಸ್ತೆಯಿಂದ ಬಿಟಿಎಂ ಬಡಾವಣೆವರೆಗೆ ಮಡಿವಾಳ ಕೆರೆಯ ಏರಿಯ ಮೇಲೆ 20 ಮೀ ಅಗಲದ ರಸ್ತೆ ನಿರ್ಮಾಣ ಯೋಜನೆ	25.20	18
17	ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಎಲಿವೇಟೆಡ್ ಕಾರಿಡಾರ್ ಕಾಮಗಾರಿ	76.00	12

ಅನುಬಂಧ–2

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿರುವ ಯೋಜನೆಗಳು:

ಕ್ರಮ ಸಂಖ್ಯೆ	ಯೋಜನೆಗಳು	ಅಂದಾಜು ಮೊತ್ತ	ಷರಾ

		ಕೋಟಿ ರೂಗಳಲ್ಲಿ	
I. ನೂತನ ಯೋಜನೆಗಳು:			
(1)	ಹೊರವರ್ತುಲ ರಸ್ತೆಯಲ್ಲಿ ಹೆಚ್.ಎಸ್.ಆರ್. ಬಡಾವಣೆಯ 14ನೇ ಮುಖ್ಯ ರಸ್ತೆಯ ಬಳಿ ಮೇಲ್ಸೇತುವೆ	34.56	ಸೆಪ್ಟೆಂಬರ್ 2010ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
(2)	ಬೆಳ್ಳಂದೂರು ಬಳಿ ಮೇಲ್ಸೇತುವೆ	39.963	–"–
(3)	ದೇವರಬೀಸನಹಳ್ಳಿ ಬಳಿ ಮೇಲ್ಸೇತುವೆ	39.07	–"–
(4)	ಕಾಡುಬೀಸನಹಳ್ಳಿ ಬಳಿ ಕೆಳಸೇತುವೆ	39.08	–"–
(5)	ಮಹಾದೇವಪುರ ಬಳಿ ಮೇಲ್ಸೇತುವೆ	38.66	–"–
(6)	ಕಲ್ಯಾಣನಗರ ಬಳಿ ಮೇಲ್ಸೇತುವೆ	38.93	–"–
(7)	ಹೆಣ್ಣೂರು ಬಳಿ ಗ್ರೇಡ್ ಸೆಪರೇಟರ್	54.76	–"–
(8)	ವೀರಣ್ಣಪಾಳ್ಯ ಬಳಿ ಮೇಲ್ಸೇತುವೆ	37.06	–"–
(9)	ಮೈಸೂರು ರಸ್ತೆಯಲ್ಲಿ ನಾಯಂಡಹಳ್ಳಿ ಬಳಿ ಗ್ರೇಡ್ ಸೆಪರೇಟರ್	60.00	ಯೋಜನಾ ವರದಿ ತಯಾರಿಸಲಾಗುತ್ತಿದೆ
(10)	ಕಂಠೀರವ ಸ್ಟುಡಿಯೋದಿಂದ ಹೆಬ್ಬಾಳ ಮೇಲ್ಸೇತುವೆವರೆಗೆ 6 ಜಂಕ್ಷನ್‌ಗಳ ಅಭಿವೃದ್ಧಿ	450.00	ಯೋಜನಾ ವರದಿ ತಯಾರಿಸಲು ಸಲಹೆಗಾರರನ್ನು ನೇಮಿಸಲಾಗುತ್ತಿದೆ.
(11)	ಸರ್ಕಾರದ ಆದೇಶದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1554 ಕಾಮಗಾರಿಗಳು	623.09	2009–10ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
(12)	5 ಹೊಸ ಬಡಾವಣೆಗಳ ನಿರ್ಮಾಣ: a) ನಾಡಪ್ರಭು ಶ್ರೀ ಕೆಂಪೇಗೌಡ ಬಡಾವಣೆ b) ಡಾ॥ ಶಿವರಾಮ ಕಾರಂತ ಬಡಾವಣೆ c) ಡಿ.ದೇವರಾಜ ಅರಸ್ ಬಡಾವಣೆ d) ಕೆ.ಸಿ.ರೆಡ್ಡಿ ಬಡಾವಣೆ. e) ನಿಜಲಿಂಗಪ್ಪ ಬಡಾವಣೆ	2610.00 1847.00 1008.00 1170.00	ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಬಡಾವಣೆ ನಿರ್ಮಾಣ ಪ್ರಾರಂಭಿಸಲಾಗುವುದು.

		1550.00	
(13)	ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಉನ್ನತೀಕರಣದ ಕಾಮಗಾರಿಗಳು	3.00	2009–10ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
(14)	ಬೆಂಗಳೂರು ಹೈಗ್ರೌಂಡ್ಸ್ ಪ್ರದೇಶದಲ್ಲಿ ರಾಷ್ಟ್ರೀಯ ಸೈನಿಕ ಸ್ಮಾರಕ ನಿರ್ಮಾಣ	5.00	2009–10ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
II. <u>ಪ್ರಗತಿಯಲ್ಲಿರುವ ಯೋಜನೆಗಳು:–</u>			
(1)	ಹೊರವರ್ತುಲ ರಸ್ತೆಯಲ್ಲಿ ಅಗರ ಬಳಿ ಮೇಲ್ಸೇತುವೆ	41.09	ಏಪ್ರಿಲ್ 2010 ರೊಳಗೆ ಪೂರ್ಣಗೊಳಿಸಲು ಯೋಜಿಸಿದೆ.
(2)	ಹೊರವರ್ತುಲ ರಸ್ತೆಯ ಇಬ್ಲೂರು ಬಳಿ ಮೇಲ್ಸೇತುವೆ	20.22	–"–
(3)	ಮಾಗಡಿ ರಸ್ತೆ ಕಾರ್ಡ್ ರಸ್ತೆ ಜಂಕ್ಷನ್ನಲ್ಲಿ ಕೆಳಸೇತುವೆ	27.82	ಕಾಮಗಾರಿಯನ್ನು 25/2/2009 ರಂದು ಪೂರ್ಣಗೊಳಿಸಲಾಗಿದೆ.
(4)	ಹೊರವರ್ತುಲ ರಸ್ತೆ ಮತ್ತು ಮಾಗಡಿ ರಸ್ತೆ ಕೂಡುವಲ್ಲಿ ಮೇಲ್ಸೇತುವೆ	33.15	ಕಾಮಗಾರಿಯನ್ನು ಸೆಪ್ಟೆಂಬರ್ 2009 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
(5)	ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯವರೆಗೆ ನಾಯಂಡಹಳ್ಳಿ ಬಳಿ ರೈಲು ಮಾರ್ಗಕ್ಕೆ RUB ಗೆ ನಿರ್ಮಾಣ	12.12	ಈ ಕಾಮಗಾರಿಯನ್ನು ನೈಋತ್ಯ ರೈಲ್ವೆ ಇಲಾಖೆಯು ಕೈಗೊಳ್ಳುತ್ತಿದೆ (ಠೇವಣಿ ಕಾಮಗಾರಿ). ಜೂನ್ 2010 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

(6)	ನಾಯಂಡಹಳ್ಳಿ ಬಳಿ RUB ಗೆ ಹೊರವರ್ತುಲ ರಸ್ತೆ ಹಾಗೂ ಕೂಡು ರಸ್ತೆಗಳ ನಿರ್ಮಾಣ (800ಮೀ)	49.00	ಈ ಕಾಮಗಾರಿಯನ್ನು ಅಕ್ಟೋಬರ್ 2009 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕರ್ನಾಟಕ ವಿಧಾನ ಸಭೆ

587 ಶ್ರೀ.ಸಿದ್ದು ಸವದಿ (ತೇರದಾಳ್)

ಮಾನ್ಯ ಅಬಕಾರಿ ಸಚಿವರು

ಅ) ಅಬಕಾರಿ ಇಲಾಖೆಯಿಂದ ರಾಜ್ಯದ ಖಜಾನೆಗೆ ಬರುವ ಒಟ್ಟು ಆದಾಯವೆಷ್ಟು; 01-04-2006 ರಿಂದ ಇಲ್ಲಿಯವರೆಗೆ ವರ್ಷವಾರು ಮಾಹಿತಿ ನೀಡುವುದು;

01-04-2006 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆಯಿಂದ ರಾಜ್ಯದ ಖಜಾನೆಗೆ ಬಂದಿರುವ ವರ್ಷವಾರು ಆದಾಯ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

ಕ್ರ ಸಂ	ವರ್ಷ	ಮೊತ್ತ
1	2006-07	4528.99
2	2007-08	4811.93
3	2008-09	5792.58

ಆ) ಅಬಕಾರಿ ಇಲಾಖೆಯಿಂದ ನೀಡಿರುವ ಎಲ್ಲಾ ತರಹದ ಲೈಸೆನ್ಸ್ ಸೇರಿ ಎಷ್ಟು ಲೈಸೆನ್ಸ್ ಕೊಡಲಾಗಿದೆ (ಪ್ರತ್ಯೇಕವಾಗಿ ಪಟ್ಟಿ ನೀಡುವುದು);

8415.

ವಿವರವನ್ನು ಅನುಬಂಧ-I ರಲ್ಲಿ ನೀಡಿದೆ.

ಇ) 2008-09 ರಿಂದ ಇಲ್ಲಿಯವರೆಗೆ ನೀಡಲಾದ ಹೊಸ ಲೈಸೆನ್ಸ್‌ಗಳೆಷ್ಟು; ಯಾವ ಯಾವ ತರಹದ ಎಷ್ಟೆಷ್ಟು ಲೈಸೆನ್ಸ್‌ಗಳನ್ನು ನೀಡಲಾಗಿದೆ;

103.

ವಿವರಗಳನ್ನು ಅನುಬಂಧ- II ರಲ್ಲಿ ನೀಡಿದೆ.

ಈ) ಈ ಇಲಾಖೆಯಿಂದ ಇನ್ನೂ ಹೆಚ್ಚಿನ ಆದಾಯ ತರುವ ಯೋಜನೆಗಳನ್ನು ಹಾಕಿ ಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಯೋಜನೆಯ ವಿವರ ನೀಡುವುದು.

ಹೌದು.

ಟೌನ್ ಮುನ್ಸಿಪಲ್ ಕೌನ್ಸಿಲ್/ ಟೌನ್ ಪಂಚಾಯಿತ್ ಏರಿಯಾ ಮತ್ತು ಇತರೆ ಪ್ರದೇಶಗಳಿಗೆ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳ ಶುಲ್ಕವನ್ನು ಹೆಚ್ಚಿಸುವ ಮೂಲಕ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಆದಾಯವನ್ನು ತರಲು ನಿಯಮಗಳಿಗೆ ತಿದ್ದುಪಡಿ ಮಾಡಿ ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ.

ANNEXURE-1
STATEMENT SHOWING DIFFERENT KIND OF LICENCES ISSUED DURING THE YEAR 2008-09

Sl No.	Kind of Licence		No. of Licence
1	Distilleries		
	1	Primary Distillery (Only Spirit)	16
	2	Composite (IML and Spirit)	15
	3	IML Distillery	28
2	Brewary		6
3	Winery		
	1	Winery and Bottling Licence	10
	2	Winery only Bottling Licence	1
4	Licence for Manufacture possession and sale of Molasses		58
5	Licence for purchase and use of Molasses		45
6	M and TP, DS and RS Licence		
	1	L-1	16
	2	L-2	6
	3	DL-3	67
	4	RS-2	55
	5	ND-5	7
	6	SP-2	2
	7	DD-2	1
7	SALE AND CONSUMPTION OF LIQUOR		
	1	CL 2	3741
	2	CL 4	190
	3	CL 6A	26
	4	CL 7	418
	5	CL 8	51
	6	CL 8A	9
	7	CL 9	3429
	8	CL-11-C	3
	9	CL 14	7
	10	CL 15	8
	11	CL 16	1
	12	CL 17	1
	13	CL 18	2

	14	Wine Tavern (Only Wine)	4
	15	RVB (Only Beer)	192
TOTAL			8415

for Excise Commissioner

ANNEXURE-2
STATEMENT SHOWING DIFFERENT KIND OF NEW LICENCES ISSUED FROM 2008-09 TO TODATE

Sl No.	Kind of Licence		No. of Licence
1	Distilleries		
	1	Primary Distillery (Only Spirit)	1
	2	Composite (IML and Spirit)	0
	3	IML Distillery	0
2	Brewary		0
3	Winery		0
	1	Winery and Bottling Licence	5
	2	Winery only Bottling Licence	1
4	Licence for Manufacture possession and sale of Molasses		3
5	Licence for purchase and use of Molasses		3
6	M and TP, DS and RS Licence		
	1	L-1	0
	2	L-2	0
	3	DL-3	0
	4	RS-2	0
	5	ND-5	0
	6	SP-2	0
	7	DD-2	
7	SALE AND CONSUMPTION OF LIQUOR		
	1	CL 4	3
	2	CL 6A	9
	3	CL 7	58
	4	CL 16	1
	5	CL 17	1
	6	CL 18	2
	7	Wine Tavern (Only Wine)	1
	8	RVB (Only Beer)	15
TOTAL			103

for Excise Commissioner

ಕರ್ನಾಟಕ ವಿಧಾನ ಸಭೆ

13ನೇ ವಿಧಾನಸಭೆ

3ನೇ ಅಧಿವೇಶನ

589 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯದ ರಸ್ತೆ ಅಭಿವೃದ್ಧಿ ನಿಗಮ (ಕೆಶಿಪ್) ದಿಂದ ಅಭಿವೃದ್ಧಿಗೆ ಆಯ್ಕೆ ಮಾಡಿದ ರಸ್ತೆಗಳು ಯಾವುವು; ಈಗ ಅವು ಯಾವ ಹಂತದಲ್ಲಿ ಇವೆ;

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2ರಲ್ಲಿ ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿ 191.30 ಕಿ.ಮೀ ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ರಸ್ತೆಯ ವಿವರ	ಜಿಲ್ಲೆಯಲ್ಲಿ ಹಾದು ಹೋಗುವ ರಸ್ತೆಯ ಉದ್ದ ಕಿ.ಮೀಗಳಲ್ಲಿ
1.	ಮುಧೋಳ-ಮಹಾಲಿಂಗಪೂರ-ಕಬ್ಬೂರು	25.10
2.	ರಾಮದುರ್ಗ-ಬಾದಾಮಿ-ಪಟ್ಟದಕಲ್ಲು-ಕಮ್ಮಟ್ಟಗಿ-ಕೂಡಲಸಂಗಮ	117.70
3.	ಹುನಗುಂದ-ಮುದ್ದೇಬಿಹಾಳ್	17.90
4.	ಜಮಖಂಡಿ-ಅಸಂಗಿ-ತೇರದಾಳ್	30.60
	ಒಟ್ಟು	191.30

ಮುಧೋಳ-ಮಹಾಲಿಂಗಪೂರ-ಕಬ್ಬೂರು ರಸ್ತೆ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್ ನೆರವಿನ ಯೋಜನೆಯ ಮೊದಲ ಹಂತದಲ್ಲಿ ಕೈಗೊಳ್ಳಲು ಯೋಜಿಸಲಾಗಿದ್ದು, ಗುತ್ತಿಗೆಗಳ ದಸ್ತಾವೇಜುಗಳನ್ನು ಸಿದ್ಧಪಡಿಸಲಾಗುತ್ತಿದ್ದು, ವಿಶ್ವಬ್ಯಾಂಕ್ ಅನುಮೋದನೆ ದೊರೆತ ನಂತರ ಬಿಡ್‌ಗಳನ್ನು ಆಹ್ವಾನಿಸಲಾಗುವುದು.

ಆ) ಸದರೀ ಯೋಜನೆಯಲ್ಲಿ ಅಭಿವೃದ್ಧಿಪಡಿಸಲಿಚ್ಚಿಸಿರುವ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಆ ರಸ್ತೆಗಳನ್ನು ದುರಸ್ತಿ ಮಾಡಲಾಗುವುದೇ; ಎಂದಿನಿಂದ ದುರಸ್ತಿ ಮಾಡಲಾಗುವುದು?

1. ಮುಧೋಳ-ಮಹಾಲಿಂಗಪೂರ-ಕಬ್ಬೂರು ರಸ್ತೆ ರಾಜ್ಯ ಹೆದ್ದಾರಿ 18ರ ಭಾಗವಾಗಿದ್ದು ಈ ಹೆದ್ದಾರಿಯನ್ನು ಕಳೆದ 3 ವರ್ಷಗಳಿಂದ ಕರ್ನಾಟಕ ರಸ್ತೆ

ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಳ್ಳಲಾಗಿದ್ದು ಅತ್ಯಂತ ಹಾಳಾದ ಭಾಗವನ್ನು 3054 ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಯೋಜನೆ ಅಡಿಯಲ್ಲಿ 2008-09ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ.

2. ರಾಮದುರ್ಗ -ಬಾದಾಮಿ - ಪಟ್ಟದಕಲ್ಲು- ಕಮ್ಮಟ್ಟಗಿ- ಕೂಡಲಸಂಗಮ ಸದರಿ ರಸ್ತೆಯು ಪಟ್ಟದಕಲ್ಲುವರೆಗೆ ರಾ.ಹೆ-14ರ ಭಾಗವಾಗಿದ್ದು, ಸದರಿ ರಸ್ತೆಯನ್ನು ಕಳೆದ 3 ವರ್ಷ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಳ್ಳಲಾಗಿದೆ. ಪಟ್ಟದಕಲ್ಲಿನಿಂದ ಕಮ್ಮಟ್ಟಗಿಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಸದರಿ ರಸ್ತೆಯನ್ನು 2008-09ನೇ ಸಾಲಿನ 3054-12ನೇ ಹಣಕಾಸಿನ ಅಡಿ ನಿರ್ವಹಣೆ ಕೈಗೊಳ್ಳಲಾಗಿದೆ. ಕಮ್ಮಟ್ಟಗಿಯಿಂದ ಕೂಡಲಸಂಗಮ ರಸ್ತೆಯು ರಾ.ಹೆ-44ರ ಭಾಗವಾಗಿದ್ದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಂಡು ಪೂರ್ತಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

3. ಹುನಗುಂದ ಮುದ್ದೆಬಿಹಾಳ ರಸ್ತೆ - ಸದರಿ ರಸ್ತೆಯು ಈ ಹಿಂದೆ ಕೃಷ್ಣ ಬಾಗ್ಯ ಜಲ ನಿಗಮ ನಿಯಮಿತ ಇಲಾಖೆಯ ವಶದಲ್ಲಿದ್ದು, ಜೂನ್-2009ರಲ್ಲಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ್ದು, ಸದರಿ ರಸ್ತೆಯು ಬಹಳ ದುಸ್ಥಿತಿಯಲ್ಲಿದ್ದು ಈ ರಸ್ತೆಯ ಅಭಿವೃದ್ಧಿಗೆ 600.00 ಲಕ್ಷ ರೂ.ಗಳಿಗೆ ಈಗಾಗಲೇ ಟೆಂಡರ್ ಕರೆದಿದ್ದು ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದೆ.

4. ಜಮಖಂಡಿ-ಅಸಂಗಿ-ತೇರದಾಳ್ ರಸ್ತೆ ರಾ.ಹೆ-53ರ ಭಾಗವಾಗಿದ್ದು ಈ ರಸ್ತೆಯ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗಿದೆ ಹಾಗೂ 2008-09ನೇ ಸಾಲಿನ 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ವಹಣೆ ಕೈಗೊಂಡು ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

ಸಂಖ್ಯೆ.ಲೋಇ/99/ಎಲ್ಎಕ್ಯೂ/ಇಎಪಿ/2009

<u>ಕರ್ನಾಟಕ ವಿಧಾನ ಸಭೆ</u>

590 ಶ್ರೀ ಸಿದ್ದು ಸವದಿ (ತೇರದಾಳ್)

ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ದಿನಾಂಕ:1-04-2006 ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕು ಮೀನುಗಾರರಿಗೆ ಒದಗಿಸಿದ ಸೌಲಭ್ಯಗಳಾವುವು;

ದಿನಾಂಕ:1-4-2006 ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕು ಮೀನುಗಾರರಿಗೆ ಒದಗಿಸಿದ ಸೌಲಭ್ಯಗಳ ವಿವರ **ಅನುಬಂಧ-1** ರಲ್ಲಿ ನೀಡಲಾಗಿದೆ.

ಆ) 1-04-2006 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಮೀನುಗಾರರಿಗೆ ಒದಗಿಸಿದ ಮತ್ಸ್ಯಾಶ್ರಯಗಳೆಷ್ಟು (ಕ್ಷೇತ್ರವಾರು ಮಾಹಿತಿ ನೀಡುವುದು);

1-4-2006 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಒಟ್ಟು 6000 ಮನೆಗಳನ್ನು ಒದಗಿಸಲಾಗಿದೆ (ಮತ್ಸ್ಯಾಶ್ರಯ ಯೋಜನೆಯಡಿ 5000 ಮತ್ತು ರಾಷ್ಟ್ರೀಯ ಮೀನುಗಾರರ ಕಲ್ಯಾಣ ಯೋಜನೆಯಡಿ 1000) ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಜಮಖಂಡಿ ತಾಲ್ಲೂಕಿಗೆ ಮಂಜೂರಾದ ಇಲಾಖಾ ಆಶ್ರಯ ಮನೆಗಳನ್ನು ಇನ್ನೂ ಏಕೆ ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು.

ಅ. 2006-07ನೇ ಸಾಲಿನಲ್ಲಿ ಮಂಜೂರಾದ ಎಲ್ಲಾ 15 ಮನೆಗಳ ನಿರ್ಮಾಣ ಸಂಪೂರ್ಣಗೊಂಡಿದ್ದು, ಮೀನುಗಾರರು ವಾಸ ಮಾಡುತ್ತಿದ್ದಾರೆ.

ಬ. 2007-08ನೇ ಸಾಲಿನಲ್ಲಿ ಮಂಜೂರಾದ 25 ಮನೆಗಳಲ್ಲಿ 18 ಪೂರ್ಣಗೊಂಡಿದ್ದು 7 ಮನೆಗಳು ಮುಕ್ತಾಯ ಹಂತದಲ್ಲಿವೆ.

ಕ. 2008-09ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಮಂಜೂರಾದ 4 ಮನೆಗಳ ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿರುವುದರಿಂದ ಇನ್ನೂ ಪ್ರಾರಂಭಿಸಬೇಕಾಗಿರುತ್ತದೆ.

ಈ) 2009-10ರಲ್ಲಿ ಮೀನುಗಾರಿಕೆ ಮತ್ತು ಮೀನುಗಾರರ ಅಭಿವೃದ್ಧಿಗಾಗಿ ಗುರಿಯಾಗಿಟ್ಟುಕೊಂಡಿರುವ ಯೋಜನೆಗಳಾವುವು?

2009-10 ರಲ್ಲಿ ಮೀನುಗಾರಿಕೆ ಮತ್ತು ಮೀನುಗಾರರ ಅಭಿವೃದ್ಧಿಗಾಗಿ ಜಮಖಂಡಿ ತಾಲ್ಲೂಕಿನಲ್ಲಿ ಗುರಿಯಾಗಿಟ್ಟುಕೊಂಡಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ:-

1. ವಿಶೇಷ ಘಟಕ ಯೋಜನೆಯಡಿ 8 ಜನರಿಗೆ ಸೈಕಲ್ ಮತ್ತು ಮೀನಿನ ಬಲೆ ವಿತರಿಸುವುದು.

2. ಗಿರಿಜನ ಉಪಯೋಜನೆಯಡಿ 4 ಜನರಿಗೆ ಸೈಕಲ್ ಮತ್ತು ಮೀನಿನ ಬಲೆ ವಿತರಿಸುವುದು.

3. 3.00 ಲಕ್ಷ ಮೀನುಮರಿಗಳನ್ನು ರೂ 1.00 ಲಕ್ಷ ವೆಚ್ಚದಲ್ಲಿ ಖರೀದಿಸಿ ಕೆರೆಗಳಲ್ಲಿ ಬಿತ್ತನೆ ಮಾಡುವುದು.

4. ಆಲಮಟ್ಟಿ ಜಲಾಶಯದಲ್ಲಿ 200 ಮೀನುಗಾರರಿಗೆ ಮೀನು ಹಿಡಿಯಲು ಪರವಾನಿಗೆ.

5. ಮೀನುಗಾರಿಕೆ ಸಲಕರಣೆಗಳ ಖರೀದಿಗೆ 15 ಮೀನುಗಾರರಿಗೆ ರೂ.30,000 ಸಹಾಯಧನ ನೀಡುವುದು.

6. ಬಾವಿ ಮತ್ತು ಹೊಂಡಗಳಲ್ಲಿ ಪಾಲನೆ ಮಾಡಲು ಮೀನುಮರಿ ವಿತರಣೆ.

7. ಹುಲ್ಲುಗೆಂಡೆ ಮೀನುಮರಿಗಳನ್ನು ಪ್ರತಿಶತ 50ರಂತೆ ಸಹಾಯಧನದಲ್ಲಿ ಒದಗಿಸುವುದು.

8. ಮೀನು ಮಾರಾಟಕ್ಕೆ ಪ್ರತಿಶತ 50ರಂತೆ 11 ಜನರಿಗೆ ರೂ.55,000 ಸಹಾಯಧನ ನೀಡುವುದು.

9. 2 ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ರೂ.20000 ಅನುದಾನ ಒದಗಿಸಲಾಗಿರುತ್ತದೆ.

ಸಂಖ್ಯೆ:ಪಸಂಮೀ 139 ಮೀಇಯೋ 2009

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ (ತೆರದಾಳ್)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:590ರ

ಅನುಬಂಧ-1

ಜಮಖಂಡಿ ತಾಲ್ಲೂಕು ಮೀನುಗಾರರಿಗೆ ನೀಡಲಾದ ವಿವಿಧ ಸೌಲಭ್ಯಗಳು

(ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆ	2006-07		2007-08		2008-09	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1.	ಒಳನಾಡು ಮೀನುಗಾರಿಕೆ ಯೋಜನೆಯಡಿ ಮೀನು ಬೆಲೆ ಖರೀದಿಸಲು ಶೇ.33ರ ಸಹಾಯಧನ	10	10,000	40	40,000	22	22,000
2.	ಮತ್ಸ್ಯ ಮಹಿಳಾ ಸ್ವಾವಲಂಬನೆ ಯೋಜನೆ	4 ಗುಂಪು	40,000	-	-	-	-
3.	ಮೀನು ಮಾರಾಟಕ್ಕಾಗಿ ಮತ್ಸ್ಯವಾಹಿನಿಯಡಿ ಶೇ. 50ರ ಸಹಾಯಧನ (ಸೈಕಲ್, ತಕ್ಕಡಿ ಮತ್ತು ಕ್ರೇಟ್ಸ್)	11	13,750	-	-	30	37,500
4.	ಮತ್ಸ್ಯಾಶ್ರಮ	15	6,00,0	25	10,00,0	4	1,60,0

	ಯೋಜನೆ		00		00		00
5.	ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ (ಶೇ.50)	–	–	13	16,250	–	–
6.	ವಿಶೇಷ ಘಟಕ ಯೋಜನೆಯಡಿ ರೂ.5,000/- ಮೌಲ್ಯದ ಸೈಕಲ್ ಮತ್ತು ಮೀನಿನ ಬಲೆ ಸೌಲಭ್ಯ	–	–	16	80,000	12	60,000
7.	ಗಿರಿಜನ ಉಪಯೋಜನೆ ಯಡಿ ರೂ.5,000/- ಮೌಲ್ಯದ ಒಂದು ಸೈಕಲ್ ಮತ್ತು ಮೀನಿನ ಬಲೆ ಸೌಲಭ್ಯ	–	–	6	30,000	4	20,000
8.	ಮತ್ಸ್ಯವಾಹಿನಿ ಯೋಜನೆ ತ್ರಿಚಕ್ರ ವಾಹನ ಖರೀದಿ ಶೇ.25ರ ಸಹಾಯಧನ	–	–	–	–	1	19,250

ಸಂಖ್ಯೆ:ಪಸಂಮೀ 139 ಮೀಇಯೋ 2009

(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ (ತೇರದಾಳ್)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:590ರ

ಅನುಬಂಧ-2

01-04-2006 ರಿಂದ ರಾಜ್ಯದಲ್ಲಿ ಮೀನುಗಾರರಿಗೆ ಒದಗಿಸಿದ ಮತ್ಸ್ಯಾಶ್ರಯ ಮನೆಗಳ ಕ್ಷೇತ್ರವಾರು ಮಾಹಿತಿ

ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ
1	ಬಾದಾಮಿ	29	34	ತಿಕೋಟ	5	67	ಭಾಲ್ಕಿ	24
2	ಹುನಗುಂದ	22	35	ದೇವರಹಿಪ್ಪರಗಿ	2	68	ಔರದ್	14
3	ಬಾಗಲಕೋಟೆ	24	36	ಬಬಲೇಶ್ವರ	2	69	ಹಲಸೂರ್	20
4	ಬಿಳಗಿ	24	37	ನಗಥಾನ್	4	70	ಹುಮ್ನಾಬಾದ್	14
5	ಜಮಖಂಡಿ	44	38	ಧಾರವಾಡ ಗ್ರಾಮೀಣ	5	71	ಜೇವರ್ಗಿ	24
6	ಮುಧೋಳ್	24	39	ಹುಬ್ಬಳ್ಳಿ ಗ್ರಾಮೀಣ	20	72	ಅಫ್ಜಲಪುರ	24
7	ಗುಳೇದಗುಡ್ಡ	10	40	ಕಲಘಟಗಿ	24	73	ಶಹಪುರ	19
8	ತೇರದಾಳ್	4	41	ಕುಂದಗೋಳ	9	74	ಗುರುಮಿಟ್ಕಲ್	24
9	ಬೈಲಹೊಂಗಲ್	24	42	ಶಿರಹಟ್ಟಿ	19	75	ಅಳಂದ	24
10	ಸದಲಗ	10	43	ಮುಂಡರಗಿ	15	76	ಕಮಲಾಪುರ	20
11	ಸೌದತ್ತಿ	24	44	ಗದಗ	14	77	ಶಾಬಾದ್	20
12	ಚಿಕ್ಕೋಡಿ	24	45	ರೋಣ	24	78	ಚಿಂಚೋಳಿ	12
13	ಹುಕ್ಕೇರಿ	24	46	ನರಗುಂದ	14	79	ಗುಲ್ಬರ್ಗ	10
14	ರಾಮದುರ್ಗ	24	47	ನವಲಗುಂದ	4	80	ಶೋರಾಪುರ	4
15	ಕಿತ್ತೂರು	26	48	ರಾಣೆಬೆನ್ನೂರು	29	81	ಯಾದ್ಗೀರ್	4

16	ಬಾಗೇವಾಡಿ	20	49	ಹಾವೇರಿ	34	82	ಚಿತ್ತಾಪುರ	4
17	ಗೋಕಾಕ್	19	50	ಹಾನಗಲ್	39	83	ಸೇಡಂ	4
18	ಕಾಗವಾಡ	20	51	ಶಿಗ್ಗಾವ್–ಸವಣೂರು	42	84	ಗಂಗಾವತಿ	24
19	ಅಥಣಿ	24	52	ಹಿರೇಕೆರೂರು	24	85	ಕೊಪ್ಪಳ	19
20	ರಾಯಭಾಗ	9	53	ಬ್ಯಾಡಗಿ	29	86	ಕನಕಗಿರಿ	24
21	ಸಂಕೇಶ್ವರ	5	54	ಶಿರಗುಪ್ಪ	29	87	ಯಲಬುರ್ಗ	19
22	ನಿಪ್ಪಾಣಿ	5	55	ಹೊಸಪೇಟೆ	10	88	ಕುಷ್ಟಗಿ	24
23	ಅರಭಾವಿ	10	56	ಹಡಗಲಿ	29	89	ದೇವದುರ್ಗ	24
24	ಕುಡಚಿ	5	57	ಕೂಡ್ಲಿಗಿ	25	90	ರಾಯಚೂರು	20
25	ಯಮಕನಮರಡಿ	2	58	ಕೊಟ್ಟೂರು	15	91	ಕಲ್ಮಲ	20
26	ಖಾನಾಪುರ	2	59	ಸಂಡೂರು	24	92	ಲಿಂಗಸುಗೂರು	24
27	ಸಿಂಧಗಿ	24	60	ಕುರುಗೋಡು	15	93	ಮಾನ್ವಿ	4
28	ಮುದ್ದೇಬಿಹಾಳ್	17	61	ಬಳ್ಳಾರಿ	2	94	ಮಾಸ್ಕಿ	4
29	ಬಿಜಾಪುರ	20	62	ಹಗರಿಬೊಮ್ಮನಹಳ್ಳಿ	4	95	ಸಿಂಧನೂರು	4
30	ಇಂಡಿ	24	63	ವಿಜಯನಗರ	15	96	ಆನೇಕಲ್	35
31	ಬಿ.ಬಾಗೇವಾಡಿ	24	64	ಕಂಪ್ಲಿ	4	97	ಬೆಂಗಳೂರು(ಉತ್ತರ)	30
32	ಹೂವಿನಹಿಪ್ಪರಗಿ	20	65	ಬಸವಕಲ್ಯಾಣ	24	98	ಬೆಂಗಳೂರು(ದಕ್ಷಿಣ)	35
33	ಬಳ್ಳೊಳ್ಳಿ	20	66	ಬೀದರ್	20	99	ಯಲಹಂಕ	4

ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ
100	ಕೃಷ್ಣರಾಜಪುರ	4	**134**	ಮಧುಗಿರಿ	14	**168**	ಬನ್ನೂರು	30
101	ದೊಡ್ಡಬಳ್ಳಾಪುರ	20	**135**	ಹುಲಿಯೂರುದುರ್ಗ	10	**169**	ಚಾಮುಂಡೇಶ್ವರಿ	24
102	ನೆಲಮಂಗಲ	24	**136**	ತುಮಕೂರು(ಗ್ರಾ)	4	**170**	ಕೃಷ್ಣರಾಜ	4
103	ಹೊಸಕೋಟೆ	20	**137**	ಗುಂಡ್ಲುಪೇಟೆ	44	**171**	ಚಾಮರಾಜ	4
104	ದೇವನಹಳ್ಳಿ	10	**138**	ಯಳಂದೂರು	10	**172**	ನರಸಿಂಹರಾಜ	4
105	ಚನ್ನಪಟ್ಟಣ	24	**139**	ಚಾಮರಾಜನಗರ	24	**173**	ವರಣು	4
106	ಕನಕಪುರ	24	**140**	ಸಂತೆಮರಳ್ಳಿ	20	**174**	ವಿರಾಜಪೇಟೆ	9
107	ಸಾತನೂರು	20	**141**	ಕೊಳ್ಳೇಗಾಲ	24	**175**	ಮಡಿಕೇರಿ	9
108	ಮಾಗಡಿ	24	**142**	ಹನೂರು	34	**176**	ಸೋಮವಾರಪೇಟೆ	5
109	ರಾಮನಗರ	34	**143**	ಅರಸೀಕೆರೆ	24	**177**	ಕಡೂರು	24
110	ಮುಳಬಾಗಿಲು	24	**144**	ಹಾಸನ	24	**178**	ಬೀರೂರು	20
111	ಬೇತಮಂಗಲ	25	**145**	ಚನ್ನರಾಯಪಟ್ಟಣ	20	**179**	ತರೀಕೆರೆ	24
112	ಕೋಲಾರ	24	**146**	ಅರಕಲಗೂಡು	24	**180**	ಶೃಂಗೇರಿ	19
113	ಮಾಲೂರು	24	**147**	ಬೇಲೂರು	24	**181**	ಮೂಡಿಗೆರೆ	19
114	ಶ್ರೀನಿವಾಸಪುರ	14	**148**	ಹೊಳೆನರಸೀಪುರ	24	**182**	ಚಿಕ್ಕಮಗಳೂರು	24
115	ಕೆ.ಜಿ.ಎಫ್.	9	**149**	ಗಂಡಸಿ	20	**183**	ಚಿತ್ರದುರ್ಗ	24
116	ವೇಮಗಲ್	10	**150**	ಶ್ರವಣಬೆಳಗೊಳ	24	**184**	ಹೊಸದುರ್ಗ	14
117	ಬಂಗಾರಪೇಟೆ	4	**151**	ಸಕಲೇಶಪುರ	24	**185**	ಹಿರಿಯೂರು	24

118	ಗೌರಿಬಿದನೂರು	19	**152**	ಮಂಡ್ಯ	24	**186**	ಬರಮಸಾಗರ	20
119	ಶಿಡ್ಲಘಟ್ಟ	29	**153**	ಮದ್ದೂರು	24	**187**	ಹೊಳಲಕೆರೆ	14
120	ಬಾಗೇಪಲ್ಲಿ	14	**154**	ಕಿರುಗಾವಲು	25	**188**	ಚಳ್ಳಕೆರೆ	4
121	ಚಿಕ್ಕಬಳ್ಳಾಪುರ	24	**155**	ಕೆ.ಆರ್.ಪೇಟೆ	29	**189**	ಮೊಳಕಾಲ್ಮೂರು	4
122	ಚಿಂತಾಮಣಿ	14	**156**	ಮಳವಳ್ಳಿ	29	**190**	ಚನ್ನಗಿರಿ	44
123	ಕುಣಿಗಲ್	24	**157**	ಕೆರೆಗೋಡು	25	**191**	ಹೊನ್ನಾಳಿ	54
124	ತಿಪಟೂರು	24	**158**	ಶ್ರೀರಂಗಪಟ್ಟಣ	29	**192**	ಹರಿಹರ	38
125	ಕೊರಟಗೆರೆ	19	**159**	ನಾಗಮಂಗಲ	29	**193**	ಜಗಳೂರು	34
126	ತುರುವೇಕೆರೆ	24	**160**	ಪಾಂಡವಪುರ	25	**194**	ಹರಪನಹಳ್ಳಿ	19
127	ಗುಬ್ಬಿ	24	**161**	ಮೇಲುಕೋಟೆ	4	**195**	ದಾವಣಗೆರೆ	20
128	ಸಿರಾ	19	**162**	ಹುಣಸೂರು	24	**196**	ಮಾಯಕೊಂಡ	34
129	ಚಿಕ್ಕನಾಯಕನಹಳ್ಳಿ	19	**163**	ಟಿ.ನರಸೀಪುರ	24	**197**	ದಾವಣಗೆರೆ(ಉ)	4
130	ಕಳ್ಳಂಬೆಳ್ಳ	20	**164**	ನಂಜನಗೂಡು	34	**198**	ದಾವಣಗೆರೆ(ದ)	4
131	ಬೆಳ್ಳಾವಿ	20	**165**	ಪಿರಿಯಾಪಟ್ಟಣ	24	**199**	ಶಿವಮೊಗ್ಗ	29
132	ತುಮಕೂರು	20	**166**	ಹೆಚ್.ಡಿ.ಕೋಟೆ	24	**200**	ಶಿವಮೊಗ್ಗ(ಗ್ರಾ)	4
133	ಪಾವಗಡ	14	**167**	ಕೆ.ಆರ್.ನಗರ	24	**201**	ಸಾಗರ	24

-3-

ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ	ಕ್ರಮ ಸಂಖ್ಯೆ	ವಿಧಾನ ಸಭಾ ಮತಕ್ಷೇತ್ರ	ಸಂಖ್ಯೆ
202	ಸೊರಬ	24	**212**	ಬೈಂದೂರು	110	**222**	ವಿಟ್ಲ	35

203	ಶಿಕಾರಿಪುರ	144	**213**	ಕಾರ್ಕಳ	39	**223**	ಬೆಳ್ತಂಗಡಿ	39
204	ಭದ್ರಾವತಿ	24	**214**	ಉಳ್ಳಾಲ	45	**224**	ಕಾರವಾರ	220
205	ಹೊಳೆಹೊನ್ನೂರು	20	**215**	ಮಂಗಳೂರು	60	**225**	ಅಂಕೋಲ	105
206	ತೀರ್ಥಹಳ್ಳಿ	44	**216**	ಮಂಗಳೂರು ನಗರ(ದ)	5	**226**	ಕುಮಟ	100
207	ಹೊಸನಗರ	20	**217**	ಸೂರತ್ಕಲ್	55	**227**	ಭಟ್ಕಳ	160
208	ಕಾಪು	190	**218**	ಮುಲ್ಕಿ–ಮೂಡಿಬಿದರಿ	39	**228**	ಹಳೀಯಾಳ	35
209	ಉಡುಪಿ	140	**219**	ಬಂಟ್ವಾಳ	50	**229**	ಸಿರ್ಸಿ	45
210	ಬ್ರಹ್ಮಾವಾರ	90	**220**	ಸೂಳ್ಯ	30	**230**	ಯಲ್ಲಾಪುರ	10
211	ಕುಂದಾಪುರ	220	**221**	ಪುತ್ತೂರು	35		**ಒಟ್ಟು**	**6000**

(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

591 ಶ್ರೀ ಸಿದ್ದು ಸವದಿ

ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು

ಅ) ಎ.ಡಿ.ಬಿ ಯಿಂದ ಸಾಲ ಪಡೆದು ಕರ್ನಾಟಕದ ಸಣ್ಣ ನಗರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಪಡಿಸಲು ಆಯ್ಕೆಯಾದ ಪಟ್ಟಣಗಳೆಷ್ಟು; ಅವು ಯಾವುವು;

ಎ.ಡಿ.ಬಿ.ನೆರವಿನೊಂದಿಗೆ ಒಟ್ಟು 41 ಪಟ್ಟಣಗಳನ್ನು ಅಭಿವೃದ್ಧಿ ಪಡಿಸಲು ಆಯ್ಕೆಗೊಂಡಿರುತ್ತವೆ. ವಿವರಗಳು ಈ ಕೆಳಕಂಡಂತಿದೆ.

1) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ (ಕೆಯುಐಡಿಪಿ)ಅಡಿಯಲ್ಲಿ ತುಮಕೂರು, ಚನ್ನಪಟ್ಟಣ, ರಾಮನಗರ, ಮಂಡ್ಯ, ಮದ್ದೂರು ಮತ್ತು ಮೈಸೂರು ಪಟ್ಟಣಗಳು

2) ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ಕಾರ್ಯನಿರ್ವಹಣಾ ಯೋಜನೆಯ (ಕುಡ್ಸೆಂಪ್) ಅಡಿಯಲ್ಲಿ ಮಂಗಳೂರು, ಉಲ್ಲಾಳ ಮತ್ತು ಪುತ್ತೂರು, ಉಡುಪಿ ಮತ್ತು ಕುಂದಾಪುರ, ಅಂಕೋಲಾ, ಭಟ್ಕಳ, ದಾಂಡೇಲಿ, ಕಾರವಾರ ಮತ್ತು ಸಿರ್ಸಿ ಪಟ್ಟಣಗಳು

3) ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಯೋಜನೆ (ಎನ್‌ಕೆಯುಎಸ್‌ಐಪಿ) ಅಡಿಯಲ್ಲಿ ಬಾದಾಮಿ, ಬೀದರ್, ಬಳ್ಳಾರಿ, ಬೆಳಗಾಂ, ಬಿಜಾಪುರ, ದಾವಣಗೆರೆ, ಗದಗ್-ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ-ಧಾರವಾಡ, ಜಮಖಂಡಿ, ಕೊಪ್ಪಳ, ರಬಕವಿ-ಬನಹಟ್ಟಿ, ರಾಯಚೂರು, ರಾಣಿಬೆನ್ನೂರು, ಯಾದಗಿರ್, ಬಸವಕಲ್ಯಾಣ, ಸಿಂಧನೂರು, ಶಹಬಾದ್, ನಿಪ್ಪಾಣಿ ಇಳ್‌ಕಲ್ ಮತ್ತು ಚಾಮರಾಜನಗರ ಪಟ್ಟಣಗಳು.

ಆ) ಈ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ: ಎಷ್ಟು ನಗರಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ: ಎಷ್ಟು ಅನುದಾನ ಖರ್ಚಾಗಿದೆ. (ಪ್ರತ್ಯೇಕವಾಗಿ ಮಾಹಿತಿ ನೀಡುವುದು);

1) **ಕೆಯುಐಡಿ** ಯೋಜನೆಯು 1996ರಿಂದ ಜಾರಿಗೆ ಬಂದಿದ್ದು. ಎಲ್ಲಾ ಪಟ್ಟಣಗಳನ್ನು ರೂ.415ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

2) **ಕುಡ್ಸೆಂಪ್** ಯೋಜನೆಯು 2000ರಿಂದ ಜಾರಿಗೆ ಬಂದಿದ್ದು, ಎಲ್ಲಾ ಪಟ್ಟಣಗಳ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು ಶೇ.90% ಪ್ರಗತಿಯಾಗಿದ್ದು. ರೂ.889ಕೋಟಿಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದೆ.

3) **ಎನ್‌ಕೆಯುಎಸ್‌ಐಪಿ** ಗೆ ಯೋಜನೆಯು 25 ನೇ ಏಪ್ರಿಲ್ 2008 ರಿಂದ ಚಾಲ್ತಿಗೆ ಬಂದಿರುತ್ತದೆ. ಇಲ್ಲಿಯವರೆಗೆ ಒಟ್ಟಾರೆ ಸುಮಾರು ರೂ.12 ಕೋಟಿಗಳು ಖರ್ಚಾಗಿರುತ್ತವೆ.

ಇ) ಸದರಿ ಯೋಜನೆಯಲ್ಲಿ ಆಯ್ಕೆಯಾದ ನಗರಗಳಲ್ಲಿ ಎಂದಿನಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;

1) **ಕೆಯುಐಡಿಪಿ** ಯೋಜನೆ ಈಗಾಗಲೇ ಮುಕ್ತಾಯವಾಗಿದೆ.

2) **ಕುಡ್ಸೆಂಪ್** ಯೋಜನೆ ಕಾಮಗಾರಿಗಳು ಶೇ.90 ರಷ್ಟು ಮುಗಿದಿದ್ದು ಮುಕ್ತಾಯ ಹಂತದಲ್ಲಿದೆ. ಈ ಯೋಜನೆಯನ್ನು ದಿ: 30-09-2009 ರ ವರೆಗೆ ವಿಸ್ತರಿಸಲಾಗಿದೆ.

3) **ಎನ್‌ಕೆಯುಎಸ್‌ಐಪಿ** ಯೋಜನೆಗೆ ಸಂಬಂಧಿಸಿದಂತೆ ಮೊದಲನೇ ಟ್ರ್ಯಾಂಚ್‌ನಲ್ಲಿರುವ ಪಟ್ಟಣಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಎರಡನೇ ಟ್ರ್ಯಾಂಚ್‌ನಲ್ಲಿ 21 ಪಟ್ಟಣಗಳನ್ನು ಆಯ್ಕೆಮಾಡಲಾಗಿದ್ದು, ಎ.ಡಿ.ಬಿ. ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ) ಆಯ್ಕೆಯಾಗಿ ನಾಲ್ಕಾರು ವರ್ಷಗಳಾದರೂ ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣಗಳೇನು;

ಕೆಯುಐಡಿಪಿ ಮತ್ತು **ಕುಡ್ಸೆಂಪ್** ಗೆ ಅನ್ವಯಿಸುವುದಿಲ್ಲ.

ಎನ್‌ಕೆಯುಎಸ್‌ಐಪಿಗೆ ಸಂಬಂಧಿಸಿದಂತೆ ಎ.ಡಿ.ಬಿ.ಯೊಂದಿಗೆ ಮೊದಲನೇ ಟ್ರ್ಯಾಂಚ್ ಕರಾರು ಪತ್ರಕ್ಕೆ 23 ಜನವರಿ 2008 ರಂದು ಸಹಿ ಮಾಡಲಾಗಿದೆ. ಸಾಲದ ಒಪ್ಪಂದವು 25 ನೇ ಏಪ್ರಿಲ್ 2008 ರಿಂದ ಚಾಲ್ತಿಗೆ ಬಂದಿರುತ್ತದೆ.

ಪ್ಯಾಕೇಜ್‌ಗಳಿಗೆ ಕಾರ್ಯಕ್ರಮ ಸಮಾಲೋಚಕರನ್ನು ನೇಮಕಮಾಡಲಾಗಿದೆ. ಕಾರ್ಯಕ್ರಮ ಸಮಾಲೋಚಕರು ಯೋಜನಾ ಪಟ್ಟಣಗಳಲ್ಲಿ ಸರ್ವೆ ಅಧ್ಯಯನಗಳನ್ನು ನಡೆಸಿ ವಿವಿಧ ವರದಿಗಳನ್ನು ತಯಾರಿಸಿರುತ್ತಾರೆ.

ಮೊದಲನೇ ಟ್ರ್ಯಾಂಚ್‌ನಲ್ಲಿರುವ ಪಟ್ಟಣಗಳಿಗೆ ಟೆಂಡರ್ ಕರೆಯಲಾಗಿದೆ.

592 ಶ್ರೀ ಮಹದೇವ ಪ್ರಸಾದ ಹೆಚ್.ಎಸ್.

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಶ್ರೀ ಮಲೈಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ;

ಹೌದು

ಆ) 2007-08 ಮತ್ತು 2008-09 ಹಾಗೂ 2009-10ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಎಷ್ಟು; ಖರ್ಚಾದ ಹಣ ಎಷ್ಟು;

1. 2007-08ನೇ ಸಾಲಿನಲ್ಲಿ ಜಾನಪದ ಅಧ್ಯಯನ ಕೇಂದ್ರದ ಕಾರ್ಯಕ್ರಮಕ್ಕೆ ಸ್ಥಳಾವಕಾಶ ಮತ್ತು ಕೇಂದ್ರದ ಕಾರ್ಯಕ್ರಮಕ್ಕೆ ಸ್ಥಳಾವಕಾಶ ಮತ್ತು ಕೇಂದ್ರದ ಧ್ಯೇಯೋದ್ದೇಶಗಳ ರಚನೆ, ಸಮಿತಿ ರಚನೆ ಆಗಬೇಕಾದ ಹಿನ್ನೆಲೆಯಲ್ಲಿ ಹಣವನ್ನು ಮಂಜೂರು ಮಾಡಿರುವುದಿಲ್ಲ.

2. 2008-09ನೆಯ ಸಾಲಿನಲ್ಲಿ ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿರುವುದಿಲ್ಲ.

3. 2009-10ನೇ ಸಾಲಿನಲ್ಲಿ ಉದ್ದೇಶಿತ ಯೋಜನೆಗಾಗಿ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ರೂ. 1.75 ಕೋಟಿಗಳಿಗೆ ಅವಕಾಶ ಕಲ್ಪಿಸಿಕೊಳ್ಳಲಾಗಿದ್ದು, ಈ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಇ) ಈ ಅಧ್ಯಯನ ಕೇಂದ್ರ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸರ್ಕಾರ ರೂಪಿಸುತ್ತಿರುವ ಕಾರ್ಯಕ್ರಮಗಳೇನು?

1. ಜಾನಪದ ಅಧ್ಯಯನ ಕೇಂದ್ರ ವ್ಯಾಪ್ತಿ, ರೂಪರೇಷೆ, ರೀತಿ ನೀತಿಗಳನ್ನು ನಿರ್ಧರಿಸಲು ಜಾನಪದ ಅಧ್ಯಯನ ಸಲಹಾ ಸಮಿತಿಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ನಶಿಸಿ ಹೋಗುತ್ತಿರುವ

ಜಾನಪದ ಕಲೆಗಳ ಸಂರಕ್ಷಣೆ ಹಾಗೂ ಅಧ್ಯಯನ ದೃಷ್ಟಿಯಿಂದ ಜಾನಪದ ಕಲೆಗಳನ್ನು ಕುರಿತಂತೆ ಯುವಕ-ಯುವತಿಯರಿಗೆ ತರಬೇತಿ ನೀಡುವುದು ಇಂದಿನ ಸಂದರ್ಭದಲ್ಲಿ ಅವಶ್ಯವೆಂದು ಸಮಗ್ರ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಕಂಸಾಳೆ, ಪೂಜಾಕುಣಿತ, ಗೊರವರ ಕುಣಿತ, ಕಣಿವಾದನ, ಅಲಾಯಿ ಹೆಜ್ಜೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ ಮುಂತಾದ ಜಾನಪದ ಕಲೆಗಳ ಸಂಪನ್ಮೂಲ ವ್ಯಕ್ತಿಗಳ ಹಾಗೂ ಇತ್ಯಾದಿ ವೆಚ್ಚಗಳಿಗಾಗಿ ಒಟ್ಟಾರೆ ರೂ. 10,42,500/-ಗಳಿಗೆ ಯೋಜನೆ ರೂಪಿಸಲಾಗಿದೆ.

2. ಮಲೈ ಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು 2.75 ಎಕರೆ ಜಮೀನನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಪರ್ದಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲಿಗೆ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು ಕಟ್ಟಡ ಕಾಮಗಾರಿಗಾಗಿ ನೀಲಿ ನಕಾಶೆ ಹಾಗೂ ಅಂದಾಜು ವೆಚ್ಚ ನೀಡುವಂತೆ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

593 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಗುಂಡ್ಲುಪೇಟೆ ತಾಲ್ಲೂಕಿನ ಅರಣ್ಯ ಪ್ರದೇಶದ ಬಳಿ ಕಾಡು ಪ್ರಾಣಿಗಳು ಜಮೀನುಗಳಿಗೆ ನುಗ್ಗಿ ಬೆಳೆ ನಾಶಪಡಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:

ಹೌದು,

ಆ) ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಅರಣ್ಯದಂಚಿನ ಪ್ರದೇಶದಲ್ಲಿ "ಆನೆ ತಡೆ ಕಂದಕ" ನಿರ್ಮಾಣ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು:

ಕಾಡು ಪ್ರಾಣಿಗಳು ಹಾವಳಿ ತಪ್ಪಿಸಲು ವನ್ಯಜೀವಿ ವಿಭಾಗ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಬರುವ ಗುಂಡ್ಲುಪೇಟೆ ತಾಲ್ಲೂಕಿನ ಮೋಯಾರು, ಬಂಡೀಪುರ, ಜಿ.ಎಸ್. ಬೆಟ್ಟ, ಮದ್ದೂರು, ಓಂಕಾರ ವಲಯಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಸುಮಾರು 112 ಕಿಮೀ. ಅರಣ್ಯ ಗಡಿಯು ರೈತರ ಜಮೀನಿನ ಅಂಚಿನಲ್ಲಿ ಬರುತ್ತಿದ್ದು, ಈ ಪೈಕಿ ಸುಮಾರು 100 ಕಿ.ಮೀ. ಉದ್ದದಷ್ಟು ಆನೆ ಕಂದಕ ಕಾಮಗಾರಿ ಮಾಡಲಾಗಿದೆ. ಬಾಕಿ 12 ಕಿ.ಮೀ. ನ್ನು 2009-10ನೇ ಸಾಲಿನಲ್ಲಿ ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಕೊಳ್ಳೇಗಾಲ ವಿಭಾಗದ ವ್ಯಾಪ್ತಿಯ ಕೊಳ್ಳೇಗಾಲ, ಹನೂರು, ರಾಮಾಪುರ, ಮತ್ತು ಗುಂಡ್ಲುಪೇಟೆ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ಒಟ್ಟು 303.06 ಕಿ.ಮೀ ನಷ್ಟು ಆನೆ ಕಂದಕ ಕಾಮಗಾರಿ ಮಾಡಬೇಕಾಗಿದ್ದು, ಈ ಪೈಕಿ 59.13 ಕಿ.ಮೀ ಕಾಮಗಾರಿ ಮಾಡಲಾಗಿದೆ. ಬಾಕಿ 243.93 ಕಿ.ಮೀ ಕಾಮಗಾರಿ ಆದ್ಯತೆ ಮೇಲೆ ಕೈಗೊಳ್ಳಲಾಗುವುದು

ಇ) ಒಟ್ಟು ಎಷ್ಟು ಕಿ.ಮೀ ಆನೆ ತಡೆ ಕಂದಕ ನಿರ್ಮಿಸಬೇಕಾಗಿದೆ; ಈವರೆವಿಗೆ ಎಷ್ಟು ಕಿ.ಮೀ. ಆನೆ ತಡೆ ಕಂದಕ ನಿರ್ಮಿಸಲಾಗಿದೆ; ಉಳಿದ ಕಡೆ ಎಂದಿನಿಂದ ನಿರ್ಮಿಸಲಾಗುವುದು;

ಮೇಲಿನಂತೆ

ಈ) ಈಗಾಗಲೇ ಆನೆ ತಡೆ ಕಂದಕ ನಿರ್ಮಿಸಿ, ಹೂಳು ತುಂಬಿರುವ ಕಂದಕದಲ್ಲಿ ಕಂದಕದ ಪುನರ್ ನಿರ್ಮಾಣಕ್ಕೆ ಕೈಗೊಂಡಿರುವ ಕ್ರಮಗಳೇನು?

ಳು ತುಂಬಿರುವ ಆನೆ ತಡೆ ಕಂದಕಗಳನ್ನು ಸುಸ್ಥಿತಿಯಲ್ಲಿಡಲು ಹೂಳನ್ನು ಎತ್ತು ಮುಗಾರಿ ಕೈಗೊಳ್ಳಲಾಗುತ್ತಿದೆ. 2009-10ನೇ ಸಾಲಿನಲ್ಲಿ ಸುಮಾರು 50.00 ಕಿ.ಮೀ. ನಷ್ಟು ಆನೆ ಕಂದಕವನ್ನು ದುರಸ್ಥಿ ಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

594 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
14-07-2009 ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಅರಣ್ಯದಂಚಿನ ಪ್ರದೇಶದ ರೈತರು ಕಂದಾಯ ಭೂಮಿಯಲ್ಲಿ ಬೆಳೆದ ಬೆಳೆಗಳನ್ನು ಕಾಡು ಪ್ರಾಣಿಗಳು ನಾಶ ಮಾಡಿದಾಗ ನೀಡಲಾಗುತ್ತಿರುವ ಪರಿಹಾರ ಮೊತ್ತ ಎಷ್ಟು (ಪ್ರತ್ಯೇಕವಾಗಿ ಪ್ರಮುಖ ಬೆಳೆಗಳಿಗೆ ನಿಗಧಿಪಡಿಸಿರುವ ಮೊತ್ತ);

ಕಾಡು ಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಮುಖ ಬೆಳೆಗಳಿಗೆ ಪ್ರತ್ಯೇಕವಾಗಿ ಬೆಲೆ ನಿಗಧಿಪಡಿಸಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. (ಅನುಬಂಧ-1)

ಆ) ನೀಡಲಾಗುತ್ತಿರುವ ಪರಿಹಾರ ಮೊತ್ತ ಬಹಳ ಕಡಿಮೆ ಇದ್ದು, ಇತ್ತೀಚಿನ ವೈಜ್ಞಾನಿಕ ದರದ ಆಧಾರದ ಮೇಲೆ ಪರಿಹಾರ ಮೊತ್ತ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ;

ಇ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಇತ್ತೀಚೆಗಷ್ಟೆ ಬೆಳೆ ಪರಿಹಾರದ ಮೊತ್ತವನ್ನು ಪರಿಷ್ಕರಿಸಿ ಆದೇಶ ಸಂಖ್ಯೆ ಅಪಜೀ 162 ಎಫ್‌ಡಿಬ್ಲ್ಯುಎಲ್ 2008 ದಿನಾಂಕ: 05-06-2009ನ್ನು ಹೊರಡಿಸಿದೆ. (ಅನುಬಂಧ-2)

<u>**ಅನುಬಂಧ-1**</u>

<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05-06-2009.

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
<u>ಬೆಂಗಳೂರು.</u>

ಇವರಿಗೆ,
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ),
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೆ,

ವಿಷಯ: ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆನಾಶಗಳಿಗೆ ನೀಡಲಾಗುತ್ತಿರುವ ದಯಾತ್ಮಕ ಧನವನ್ನು ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಸಿ2/ಸಿಡಬ್ಲ್ಯುಎಲ್/ಸಿಆರ್-39/2007-08, ದಿನಾಂಕ: 05-08-2008.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ವನ್ಯಪ್ರಾಣಿಗಳಿಂದ ಉಂಟಾದ ಬೆಳೆ ನಾಶಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಬೆಳೆಗಳಿಗೆ ಅವುಗಳ ಮುಂದೆ ಸೂಚಿಸಿದಂತೆ ಪ್ರತಿ ಬೆಳೆಗೆ ದರ ಪರಿಷ್ಕರಿಸಿ ನಿಗಧಿಪಡಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತಳಾಗಿದ್ದೇನೆ:-

ಕ್ರ ಸಂ.	ಪದಾರ್ಥದ ಹೆಸರು	ಬೆಲೆ/ಕ್ವಿಂಟಾಲ್ (ರೂ.ಗಳಲ್ಲಿ)
1.	ಭತ್ತ	660/-
2.	ಜೋಳ	620/-
3.	ಮೆಕ್ಕೆ ಜೋಳ	620/-
4.	ಸಜ್ಜೆ	600/-
5.	ರಾಗಿ	600/-
6.	ತೊಗರಿ	1550/-
7.	ಹೆಸರು	1700/-
8.	ಉದ್ದು	1700/-
9.	ಕಬ್ಬು	81.18
10.	ಹತ್ತಿ	1985/-
11.	ಶೇಂಗಾ(ನೆಲಗಡಲೆ)	1550/-
12.	ಸೂರ್ಯಕಾಂತಿ	1510/-
13.	ಸೋಯಾ	980/-
14.	ಎಳ್ಳು	1580/-
15.	ಹುಚ್ಚೆಳ್ಳು	1240/-
16.	ಕಂಬು	600/-
17.	ಬಟಾಣಿ	2300/-
18.	ಹಲಸಂದೆ	1200/-
19.	ಅವರೆ	1121/-

20.	ಹಾಗಲಕಾಯಿ	900/-
21.	ಬದನೆಕಾಯಿ	400/-
22.	ನುಗ್ಗೆಕಾಯಿ	1600/-
23.	ಗೆಡ್ಡೆಕೋಸು	500/-
24.	ಬೆಂಡೆಕಾಯಿ	600/-
25.	ಮೂಲಂಗಿ	350/-
26.	ಹೀರೆಕಾಯಿ	500/-
27.	ಪಡವಲಕಾಯಿ	500/-
28.	ತೊಂಡೆಕಾಯಿ	600/-
29.	ಹೂಕೋಸು	400/-
30.	ಬೀಟ್‌ರೂಟ್	819/-
31.	ಈರುಳ್ಳಿ	654/-
32.	ಟಮೊಟೋ	294/-
33.	ಆಲೂಗೆಡ್ಡೆ	1067/-
34.	ಕ್ಯಾರೆಟ್	1114/-
35.	ಬೀನ್ಸ್	1195/-
36.	ಅರಿಶಿನ	2100/-
37.	ಕರಿಬೂಜ(ಕಲ್ಲಂಗಡಿ)	700/-
38.	ಹಸಿಮೆಣಸಿನಕಾಯಿ	977/-
39.	ದಪ್ಪ ಮೆಣಸಿನಕಾಯಿ	1000/-
40.	ಶುಂಠಿ	1935/-
41.	ನವಣೆ	1050/-
42.	ಎಲೆಕೋಸು	348/-
43.	ಕೊತ್ತಂಬರಿ	1780/-
44.	ಕಾಫಿ	100/- ಒಂದು ಗಿಡಕ್ಕೆ
45.	ಏಲಕ್ಕಿ	400/- ಕೆ.ಜಿ.ಗೆ
46.	ಮೆಣಸು	90/- ಕೆ.ಜಿ.ಗೆ
47.	ಕಿತ್ತಲೆ	
	i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ	100/- ಒಂದು ಗಿಡಕ್ಕೆ
	ii) 5 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ	160/- ಒಂದು ಗಿಡಕ್ಕೆ
48.	ಅಡಿಕೆ/ತೆಂಗು	

	i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ ii) ವರ್ಷ 7ರಿಂದ 9 ವರ್ಷ ವಯಸ್ಸಿನ ಮರ ಗಿಡಗಳಿಗೆ iii) 10 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ	200/- ಒಂದು ಗಿಡಕ್ಕೆ 400/- ಒಂದು ಗಿಡಕ್ಕೆ 1000/- ಒಂದು ಗಿಡಕ್ಕೆ
49.	ಬಾಳೆ	80/- ಒಂದು ಗಿಡಕ್ಕೆ
50.	ಹರಳು	2302/- ಒಂದು ಕ್ವಿಂಟಾಲ್‌ಗೆ
51.	ಮೆಂತ್ಯ ಸೊಪ್ಪು	2/- ಒಂದು ಕಟ್ಟಿಗೆ
52.	ನಿಂಬೆ	5/- ಪ್ರತಿ ಗಿಡಕ್ಕೆ
53.	ಗಜ ನಿಂಬೆ	12/- ಪ್ರತಿ ಗಿಡಕ್ಕೆ
54.	ಚೆಂಡು ಮಲ್ಲಿಗೆ (ದಪ್ಪದು)	100/- ಕೆ.ಜಿ.ಗೆ
55.	ಕಾಕಡ ಹೂವು	40/- ಕೆ.ಜಿ.ಗೆ
56.	ಕನಕಾಂಬರ	80-120 ಕೆ.ಜಿ.ಗೆ
57.	ಸೇವಂತೆ	10-12 ಪ್ರತಿ ಮಾರು

ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ-5/09, ದಿನಾಂಕ: 23-03-2009ರಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆಯಲಾಗಿದೆ.

ತಮ್ಮ ನಂಬುಗೆಯ,

ಅನುಬಂಧ-2

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05-06-2009.

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯುಎಲ್ 2006. ದಿನಾಂಕ: 17-01-2007ರ ಕ್ರಮ ಸಂಖ್ಯೆ: Iರಲ್ಲಿ ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದ ಪ್ರಕರಣಗಳಿಗೆ ಮಂಜೂರು ಮಾಡಬಹುದಾದ ಪರಿಹಾರ ಧನವನ್ನು ಈ ಕೆಳಗಿನಂತೆ ಪರಿಷ್ಕರಿಸಿ ತಿದ್ದುಪಡಿ ಮಾಡಲಾಗಿದೆ.

ಕ್ರ.ಸಂ.	ವಿವರಗಳು	ವಿತರಿಸಲಾಗುವ ಕನಿಷ್ಠ ಎಕ್ಸ್‌ಗ್ರೇಶಿಯಾ	ವಿತರಿಸಲಾಗುವ ಗರಿಷ್ಠ ಎಕ್ಸ್‌ಗ್ರೇಶಿಯಾ
1.	ರೂ. 5,800/- ವರೆಗಿನ ಮೊತ್ತದ ಬೆಳೆನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಮಾತಕಧನ (ಎಕ್ಸ್‌ಗ್ರೇಶಿಯಾ)	ಬೆಳೆ ನಾಶದ ಪೂರ್ಣ ಮೊತ್ತ	ಬೆಳೆ ನಾಶದ ಪೂರ್ಣ ಮೊತ್ತ
2.	ರೂ.5,801/- ರಿಂದ ರೂ.29,000/- ವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಮಾತಕಧನ (ಎಕ್ಸ್‌ಗ್ರೇಶಿಯಾ)	ರೂ.5,820/- (ರೂ. ಐದು ಸಾವಿರದ ಎಂಟುನೂರ ಇಪ್ಪತ್ತು ಮಾತ್ರ) ರೂ.5,820/-ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ.50 ರಷ್ಟು	ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.17,500/- (ರೂ. ಹದಿನೇಳು ಸಾವಿರದ ಐದುನೂರು ಮಾತ್ರ)
3.	ರೂ.29,000/-ಮತ್ತು ಅದಕ್ಕೂ ಮೇಲ್ಪಟ್ಟ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಮಾತಕಧನ (ಎಕ್ಸ್‌ಗ್ರೇಶಿಯಾ)	ರೂ.17,500/- (ರೂ. ಹದಿನೇಳು ಸಾವಿರದ ಐದುನೂರು ಮಾತ್ರ) ರೂ.29,000/-ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ.30 ರಷ್ಟು	ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.45,000/- (ರೂ. ನಲ್ವತ್ತೈದು ಸಾವಿರದ ಐದುನೂರು ಮಾತ್ರ)

ಮುಂದುವರೆದು ಆದೇಶ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯುಎಲ್ 96. ದಿನಾಂಕ: 12-02-2002ರಲ್ಲಿ ಬೆಳೆ ನಾಶ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಕ್ಸ್‌ಗ್ರೇಶಿಯಾ ಮೊತ್ತಗಳನ್ನು ನಿಗಧಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರವನ್ನು ಈ ತಿದ್ದುಪಡಿಯ ಮೂಲಕ ಪರಿಷ್ಕರಿಸಿದ್ದು, ರೂ.25,000/-ಕ್ಕಿಂತ ಮೇಲ್ಪಟ್ಟು ರೂ.1,00,000/-ಗಳ ವರೆಗೆ ಪರಿಹಾರ ಧನವನ್ನು ನಿಗಧಿಪಡಿಸಿ, ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.1,00,000/-ಗಳಿಗಿಂತ ಹೆಚ್ಚು ನಾಶವಾದ ಬೆಳೆಗಳ ಮೌಲ್ಯಮಾಪನ ಮಾಡಿ ಪರಿಹಾರಧನ ನಿಗಧಿಪಡಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಸದರಿ ಅಧಿಕಾರಿಗಳು ಘಟನೆ ನಡೆದ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ಮಹಜರ್ ನಡೆಸಿ ಪರಿಹಾರ ಧನವನ್ನು ನಿಗಧಿಪಡಿಸಿ ಪಾವತಿ ಮಾಡತಕ್ಕದ್ದು.

ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ-5/2009, ದಿನಾಂಕ: 23-03-2009ರ ಪ್ರಕಾರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ವಿಧಾನಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

595 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
ಡಾ. ಎಸ್. ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಬೆಂಗಳೂರು ಗ್ರಾಮದ ಹೊರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಹೌದು.

ಆ) ಎಷ್ಟು ವರ್ಷಗಳಿಂದ ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ?

2009ನೇ ಸಾಲಿನಲ್ಲಿ ಡಿಜಿ & ಐಜಿಪಿ ರವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಇದು ಸೇರಿರುತ್ತದೆ.

ಇ) ಸದರಿ ಪೊಲೀಸ್ ಠಾಣೆಯನ್ನು ಶೀಘ್ರ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

ಕರ್ನಾಟಕ ವಿಧಾನಸಭೆ

596 ಶ್ರೀ ಶ್ರೀನಿವಾಸ (ವಾಸು) ಎಸ್.ಆರ್.(ಗುಬ್ಬಿ)
ಎಸ್. ಸುರೇಶ್ ಕುಮಾರ್ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಪಟ್ಟಣಕ್ಕೆ ಯು.ಜಿ.ಡಿ. ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶೀಲನೆಯಲ್ಲಿದೆ.

ಆ) ಹಾಗಿದ್ದಲ್ಲಿ ಯು.ಜಿ.ಡಿ. ಸರ್ವೆ ಕಾರ್ಯವು ಮುಗಿದಿದೆಯೇ;

ಸರ್ವೆ ಕಾರ್ಯ ಮುಗಿದಿದೆ.

ಇ) ಯು.ಜಿ.ಡಿ. ನಿರ್ಮಾಣಕ್ಕೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿರುವುದಿಲ್ಲ

ಈ) ಯು.ಜಿ.ಡಿ. ನಿರ್ಮಾಣ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ವಿನ್ಯಾಸ ಹಾಗೂ ವಿವರವಾದ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸಿದ್ಧಪಡಿಸುತ್ತಿದೆ. ಈ ಹಂತದಲ್ಲಿ ಕಾಮಗಾರಿ ಪ್ರಾರಂಭಿಸುವ ದಿನಾಂಕ ನಿಗದಿ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಯು.ಜಿ.ಡಿ. ನಿರ್ಮಾಣದ ಕಾಮಗಾರಿಗೆ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)?

ಪ್ರಸ್ತುತ ಸಾಲಿನಲ್ಲಿ ಯುಜಿಡಿ ಯೋಜನೆಗೆ ಅನುದಾನ – ಬಿಡುಗಡೆ ಹಾಗೂ ವೆಚ್ಚ ಆಗಿರುವುದಿಲ್ಲ

ಕರ್ನಾಟಕ ವಿಧಾನಸಭೆ

597 ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್.

ಆರ್ ಅಶೋಕ್ ಮಾನ್ಯ ಸಾರಿಗೆ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಪಟ್ಟಣದಲ್ಲಿ ಕ.ರಾ.ರ.ಸಾ.ಸಂಸ್ಥೆಯ ಬಸ್ ಘಟಕವನ್ನು (ಡಿಪೋ) ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಸದ್ಯಕ್ಕೆ ಗುಬ್ಬಿಯಲ್ಲಿ ಬಸ್ ಘಟಕ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ:

ಆ) ಹಾಗಿದ್ದಲ್ಲಿ, ಬಸ್ ಘಟಕವನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆಯೇ;

ಉದ್ಭವಿಸುವುದಿಲ್ಲ.

ಇ) ಹಾಗಿದ್ದಲ್ಲಿ, ಬಸ್ ಘಟಕವನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉದ್ಭವಿಸುವುದಿಲ್ಲ.

ಈ) ಗುಬ್ಬಿ ಪಟ್ಟಣದಲ್ಲಿ ಬಸ್ ಘಟಕವನ್ನು ನಿರ್ಮಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು ಮತ್ತು ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನಸಭೆ

598 ಶ್ರೀ ಶ್ರೀನಿವಾಸ್ .ಎಸ್.ಆರ್.

ಸಿ.ಎಂ ಉದಾಸಿ ಲೋಕೋಪಯೋಗಿ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಕ್ಷೇತ್ರದ ಶಿರಾ-ನೆಲ್ಲಿಗೆರೆ ರಸ್ತೆ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಶಿರಾ-ನೆಲ್ಲಿಗೆರೆ ರಸ್ತೆ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಶಿರಾ-ನೆಲ್ಲಿಗೆರೆ ರಸ್ತೆ ದುರಸ್ತಿಗಾಗಿ ಸರ್ಕಾರ ಅನುದಾನ ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಉ) ಶಿರಾ-ನೆಲ್ಲಿಗೆರೆ ರಸ್ತೆಯ ದುರಸ್ತಿ ಕಾಮಗಾರಿಯನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಸಿರಾ-ನೆಲ್ಲಿಗೆರೆ ರಸ್ತೆಯ ಗುಬ್ಬಿ ತಾಲ್ಲೂಕಿನಲ್ಲಿ ಸರಪಳಿ ಕಿ.ಮೀ 9.00ರಿಂದ 59.80ರವರೆಗೆ ಹಾದು ಹೋಗುತ್ತಿದ್ದು, ಕೆಲವು ಭಾಗಗಳು ಶಿಥಿಲಗೊಂಡಿದ್ದು, ಇದರಲ್ಲಿ ಕಿ.ಮೀ 36.00ರಿಂದ 59.80 ರವರೆಗಿನ ಒಟ್ಟಾರೆ 23.80 ಕಿ.ಮೀ ಸಿರಾ-ನಂಜನಗೂಡು ರಾಜ್ಯ ಹೆದ್ದಾರಿ-84ರ ಭಾಗವಾಗಿರುತ್ತದೆ. ಈ ರಸ್ತೆಯ ಅಭಿವೃದ್ಧಿ/ದುರಸ್ತಿಗಾಗಿ ಪ್ರಸಕ್ತ 2009-10ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ:-

1) ಸಿರಾ-ನಂಜನಗೂಡು ರಾಜ್ಯ ಹೆದ್ದಾರಿ-84ರ 4.00 ಕಿ.ಮೀ ಅಭಿವೃದ್ಧಿಗಾಗಿ ಕೇಂದ್ರ ರಸ್ತೆ ನಿಧಿ ಯೋಜನೆ ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲಿಯೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.
2) ರಾಜ್ಯ ಹೆದ್ದಾರಿ ದುರಸ್ತಿಯನ್ನು ಪೂರ್ವ ಮುಂಗಾರು ನಿರ್ವಹಣೆ ಕಾಮಗಾರಿ ಯೋಜನೆ ಅಡಿಯಲ್ಲಿ ರೂ.10.27 ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.
3) ಜಿಲ್ಲಾ ಮುಖ್ಯ ರಸ್ತೆಗಳ ತುರ್ತು ದುರಸ್ತಿಯನ್ನು ಪೂರ್ವ ಮುಂಗಾರು ನಿರ್ವಹಣಾ ಕಾಮಗಾರಿ ಯೋಜನೆ ಅಡಿಯಲ್ಲಿ ರೂ.2.70 ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಕರ್ನಾಟಕ ವಿಧಾನಸಭೆ

600 ಶ್ರೀ ಬಚ್ಚೇಗೌಡ ಕೆ.ಪಿ.

ಆರ್ ಅಶೋಕ್ ಮಾನ್ಯ ಸಾರಿಗೆ ಸಚಿವರು.

ಅ) ಚಿಕ್ಕಬಳ್ಳಾಪುರ ನಗರದಲ್ಲಿ ನೂತನ ಹೈ-ಟೆಕ್ ಬಸ್ ನಿಲ್ದಾಣವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ನೂತನ ಹೈ-ಟೆಕ್ ಬಸ್ ನಿಲ್ದಾಣಕ್ಕಾಗಿ ಸ್ಥಳ ನಿಗದಿಪಡಿಸಿ ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ;

ಇಲ್ಲ

ಇ) ಹಾಗಿದ್ದಲ್ಲಿ, ನೂತನ ಹೈ-ಟೆಕ್ ಬಸ್ ನಿಲ್ದಾಣದ ಕಾಮಗಾರಿಗಾಗಿ ಸರ್ಕಾರ ನಿಗದಿ ಪಡಿಸಿರುವ ಅಂದಾಜು ಅನುದಾನದ ಮೊತ್ತ ಎಷ್ಟು;

ನಿವೇಶನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇಲಾಖೆಯ ವಶಕ್ಕೆ ಬಂದ ನಂತರ ಕ್ರಮ ಜರುಗಿಸಲಾಗುವುದು

ಈ) ನೂತನ ಹೈ-ಟೆಕ್ ಬಸ್‌ನಿಲ್ದಾಣದ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದೇ;

ಈ ಹಂತದಲ್ಲಿ ಉದ್ಭವಿಸುವುದಿಲ್ಲ

ಉ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಉದ್ಭವಿಸುವುದಿಲ್ಲ.

ಊ) ಚಿಕ್ಕಬಳ್ಳಾಪುರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ 7ರಲ್ಲಿ ಸಂಚರಿಸುವ ಸರ್ಕಾರಿ ರಾಜಹಂಸ, ಐರಾವತ ಬಸ್‌ಗಳನ್ನು ಚಿಕ್ಕಬಳ್ಳಾಪುರದಲ್ಲಿ ನಿಲುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ (ಬೆಂಗಳೂರು-ಹೈದ್ರಾಬಾದ್-ಬೆಂಗಳೂರು ಮಾರ್ಗ);

ಚಿಕ್ಕಬಳ್ಳಾಪುರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ-7ರಲ್ಲಿ ಸಂಚರಿಸುವ ಎಲ್ಲಾ ಸರ್ಕಾರಿ ರಾಜಹಂಸ ಹಾಗೂ ಐರಾವತ ಸಾರಿಗೆಗಳಿಗೆ 'ಚಿಕ್ಕಬಳ್ಳಾಪುರ' ದ ಮುನ್ಸಿಪಲ್ ಬಸ್ ನಿಲ್ದಾಣದಲ್ಲಿ ನಿಲುಗಡೆ ನೀಡಲಾಗುವುದು.

ಋ) ಹಾಗಿದ್ದಲ್ಲಿ, ಈ ನಿಲುಗಡೆಯನ್ನು ಎಂದಿನಿಂದ ಜಾರಿಗೆ ತರಲಾಗುವುದು?

ದಿನಾಂಕ: 15.7.2009.

(B) 25233

ಮುದ್ರಕರು: ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು.